ಕನ್ನಡ ಪ್ರಥಮ ಮತ್ತು ದ್ವಿತೀಯ ಭಾಷೆ

# ಕುಮಾರಭಾರತಿ

## ಹತ್ತನೆಯ ಇಯತ್ತೆ



# ಭಾರತದ ಸಂವಿಧಾನ

## ಭಾಗ 4 ಕ

## ನಾಗರಿಕರ ಮೂಲಭೂತ ಕರ್ತವ್ಯಗಳು

**ಅನುಚ್ಛೇದ 51 ಕ**

**ಮೂಲಭೂತ ಕರ್ತವ್ಯಗಳು- ಪ್ರತಿಯೊಬ್ಬ ಭಾರತೀಯ ನಾಗರಿಕನ ಈ ಕರ್ತವ್ಯಗಳು ಇರುತ್ತವೆಯೆಂದರೆ ಅವನು-**

(ಕ) ಪ್ರತಿಯೊಬ್ಬ ನಾಗರಿಕನು ಸಂವಿಧಾನವನ್ನು ಪಾಲಿಸಬೇಕು. ಸಂವಿಧಾನದಲ್ಲಿಯ ಆದರ್ಶಗಳು ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಗಳನ್ನು ಗೌರವಿಸಬೇಕು.

(ಖ) ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟಕ್ಕೆ ಸ್ಫೂರ್ತಿ ನೀಡಿದ ಆದರ್ಶಗಳನ್ನು ಪಾಲಿಸಬೇಕು.

(ಗ) ದೇಶದ ಸಾರ್ವಭೌಮತ್ವ, ಐಕ್ಯತೆ ಮತ್ತು ಸಮಗ್ರತೆಯನ್ನು ಸುರಕ್ಷಿತವಾಗಿಡುವ ಸಲುವಾಗಿ ಪ್ರಯತ್ನಶೀಲರಾಗಿರಬೇಕು.

(ಘ) ನಮ್ಮ ದೇಶದ ರಕ್ಷಣೆ ಮಾಡಬೇಕು. ದೇಶದ ಸೇವೆ ಮಾಡಬೇಕು.

(ಙ) ಎಲ್ಲ ಪ್ರಕಾರದ ಭೇದಭಾವಗಳನ್ನು ಮರೆತು ಒಗ್ಗಟ್ಟನ್ನು ಬೆಳೆಸಬೇಕು ಹಾಗೂ ಸಹೋದರ ಭಾವನೆಯನ್ನು ಉತ್ತೇಜಿಸಬೇಕು. ಸ್ತ್ರೀಯರ ಗೌರವಕ್ಕೆ ಚ್ಯುತಿ ತರುವಂತಹ ರೂಢಿಗಳನ್ನು ತ್ಯಜಿಸಬೇಕು.

(ಚ) ನಮ್ಮ ಸಮ್ಮಿಶ್ರ ಸಂಸ್ಕೃತಿಯ ಪರಂಪರೆಯನ್ನು ಕಾಪಾಡಬೇಕು.

(ಛ) ನೈಸರ್ಗಿಕ ಪರಿಸರವನ್ನು ಸಂರಕ್ಷಿಸಬೇಕು. ಸಜೀವ ಪ್ರಾಣಿಗಳ ಮೇಲೆ ದಯೆ ತೋರಿಸಿರಿ.

(ಜ) ವೈಜ್ಞಾನಿಕ ಮನೋಭಾವನೆ, ಮಾನವೀಯತೆ ಮತ್ತು ಜಿಜ್ಞಾಸು ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು.

(ಝ) ಸಾರ್ವಜನಿಕ ಆಸ್ತಿ-ಪಾಸ್ತಿಗಳನ್ನು ರಕ್ಷಿಸಬೇಕು. ಹಿಂಸಾಚಾರವನ್ನು ತ್ಯಜಿಸಬೇಕು.

(ಞ) ರಾಷ್ಟ್ರದ ಉತ್ತರೋತ್ತರ ಪ್ರಗತಿಯನ್ನು ಸಾಧಿಸಲು ವೈಯಕ್ತಿಕ ಹಾಗೂ ಸಾಮೂಹಿಕ ಚಟುವಟಿಕೆಗಳಲ್ಲಿ ಭಾಗವಹಿಸಬೇಕು.

(ಟ) 6 ರಿಂದ 14 ವರ್ಷ ವಯೋಮಾನದಲ್ಲಿಯ ತಮ್ಮ ಮಕ್ಕಳಿಗೆ ಪೋಷಕರು ಶಿಕ್ಷಣದ ಅವಕಾಶಗಳನ್ನು ಕಲ್ಪಿಸಿಕೊಡಬೇಕು.

## ಕನ್ನಡ ಪ್ರಥಮ ಮತ್ತು ದ್ವಿತೀಯ ಭಾಷೆ

ಸರಕಾರ ನಿರ್ಣಯ ಕ್ರಮಾಂಕ: ಅಭ್ಯಾಸ – 2116/(ಪ್ರ.ಕ. 43/16) ಎಸ್‌ಡಿ–4 ದಿನಾಂಕ 25.4.2016 ಅನ್ವಯ ಸ್ಥಾಪಿಸಲಾದ ಸಮನ್ವಯ ಸಮಿತಿಯು ದಿ. 29.12.2017ರಂದು ನಡೆದ ಸಭೆಯಲ್ಲಿ ಈ ಪಠ್ಯಪುಸ್ತಕವನ್ನು ಕ್ರಿ.ಶ. 2018–19 ಈ ಶೈಕ್ಷಣಿಕ ವರ್ಷದಿಂದ ನಿರ್ಧರಿಸಲು ಮಾನ್ಯತೆ ಕೊಡಲಾಗಿದೆ.

# ಕುಮಾರಭಾರತಿ

## ಹತ್ತನೆಯ ಇಯತ್ತೆ



ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ – 4.

FV4GP4

ತಮ್ಮ ಸ್ಮಾರ್ಟಫೋನದ DIKSHA App ಮೂಲಕ ಪಠ್ಯಪುಸ್ತಕದ ಮೊದಲನೆಯ ಪುಟದ ಮೇಲಿರುವ Q.R. Codeದ ಮೂಲಕ ಡಿಜಿಟಲ್ ಪಠ್ಯಪುಸ್ತಕ ಮತ್ತು ಪ್ರತಿಯೊಂದು ಪಾಠದಲ್ಲಿರುವ Q.R. Codeದ ಮೂಲಕ ಆ ಪಾಠಕ್ಕೆ ಸಂಬಂಧಿಸಿದಂತೆ ಅಧ್ಯಯನ-ಅಧ್ಯಾಪನದ ಸಲುವಾಗಿ ಉಪಯುಕ್ತ ದೃಕ್-ಶ್ರಾವ್ಯ ಸಾಹಿತ್ಯ ಉಪಲಬ್ಧವಾಗುವುದು.

**ಪ್ರಥಮಾವೃತ್ತಿ: 2018**
**ದ್ವಿತೀಯ ಪುನರ್ಮುದ್ರಣ: 2022**

© ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ - 4

ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳವು ಈ ಪುಸ್ತಕದ ಎಲ್ಲ ಹಕ್ಕುಗಳನ್ನು ಕಾಯ್ದಿರಿಸಿದೆ. ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳದ ಸಂಚಾಲಕರ ಲಿಖಿತ ಅನುಮತಿ ಇಲ್ಲದೆ ಈ ಪುಸ್ತಕದ ಯಾವುದೇ ಭಾಗವನ್ನು ಉದ್ಧೃತಗೊಳಿಸಬಾರದು.

**ಮುಖ್ಯ ಸಮನ್ವಯಕ**
ಶ್ರೀಮತಿ. ಪ್ರಾಚಿ ರವೀಂದ್ರ ಸಾಠೆ

**ಕನ್ನಡ ಭಾಷಾ ಸಮಿತಿ :**
ಡಾ. ಕೆ. ಕೆ. ಪತ್ತಾರ, ಅಧ್ಯಕ್ಷ
ಶ್ರೀ. ಶಿವಬಾಳ ಕೆ. ಗೋಲಿ, ಸದಸ್ಯ
ಶ್ರೀ. ಹಣಮಂತ ಎಮ್. ಕುಂಬಾರ, ಸದಸ್ಯ
ಶ್ರೀಮತಿ. ಜಯದೇವಿ ಆಯ್. ಉಕ್ಕಲಿ, ಸದಸ್ಯೆ
ಶ್ರೀ. ಜಿ. ಸಿ. ಮಠ (ನಿಮಂತ್ರಿತ)
ಡಾ. ಸದಾನಂದ ಎಂ. ಬಿಳ್ಳೂರ, ಸದಸ್ಯ - ಸಚಿವ

**ಕನ್ನಡ ಅಭ್ಯಾಸಗಟ ಸದಸ್ಯರು:**
ಶ್ರೀ. ಶ್ರೀಶೈಲ ಜಿ. ಅವಟಿ
ಶ್ರಿ. ಜಿ. ಡಿ. ಮೋರೆ

**ಸಂಯೋಜನ ಪ್ರಮುಖರು:**
ಡಾ. ಸದಾನಂದ ಎಂ ಬಿಳ್ಳೂರ,
ವಿಶೇಷಾಧಿಕಾರಿ ಕನ್ನಡ
ಶ್ರೀ. ಆರ್. ಎಮ್. ಗಣಾಚಾರಿ, ವಿಷಯ ಸಹಾಯಕ ಕನ್ನಡ

**ಮುಖಪುಟ** : ಶ್ರಿ. ವಿವೇಕಾನಂದ ಪಾಟೀಲ

**ಚಿತ್ರಕಾರ** : ಶ್ರಿ. ರಾಜೇಂದ್ರ ಗಿರಧಾರಿ

**ಅಕ್ಷರ ಜೋಡಣೆ** : ಕೇಸನ್ ಲ್ಯಾಂಗ್ವೇಜ್ ಬ್ಯೂರೋ

**ನಿರ್ಮಿತಿ** : ಶ್ರೀ. ಸಚ್ಚಿತಾನಂದ ಆಫಳೆ.
ಮುಖ್ಯ ನಿರ್ಮಿತಿ ಅಧಿಕಾರಿ
ಶ್ರೀ. ರಾಜೇಂದ್ರ ಚಿಂದರಕರ,
ನಿರ್ಮಿತಿ ಅಧಿಕಾರಿ
ಶ್ರೀ. ರಾಜೆಂದ್ರ ಪಾಂಡಲೋಸಕರ
ಸಹಾಯಕ ನಿರ್ಮಿತಿ ಅಧಿಕಾರಿ

**ಕಾಗದ** : 70 ಜಿ. ಎಸ್. ಎಮ್. ಕ್ರೀಮ್‌ವೋವ್ಹ್

**ಮುದ್ರಣಾದೇಶ** :

**ಮುದ್ರಕ** :

**ಪ್ರಕಾಶಕ** : ಶ್ರೀ. ವಿವೇಕ ಗೋಸಾವಿ, ನಿಯಂತ್ರಕ,
ಪಾಠ್ಯಪುಸ್ತಕ ನಿರ್ಮಿತಿ ಮಂಡಳ,
ಪ್ರಭಾದೇವಿ, ಮುಂಬಯಿ - 25.

# ಪ್ರಸ್ತಾವನೆ

ಪ್ರಿಯ ವಿದ್ಯಾರ್ಥಿ ಮಿತ್ರರೆ,

ನಿಮಗೆಲ್ಲರಿಗೂ ಹತ್ತನೆಯ ಇಯತ್ತೆಯ ತರಗತಿಯಲ್ಲಿ ಸ್ವಾಗತವಿದೆ. ಕನ್ನಡ 'ಕುಮಾರಭಾರತಿ' ನಿಮಗೆ ಇಷ್ಟವಾದ ಭಾಷೆಯ ಪುಸ್ತಕ. ಹತ್ತನೆಯ ಇಯತ್ತೆಯ ಕನ್ನಡ 'ಕುಮಾರಭಾರತಿ' ಈ ಪಠ್ಯಪುಸ್ತಕವನ್ನು ನಿಮ್ಮ ಕೈಯಲ್ಲಿಡಲು ಆನಂದವಾಗುತ್ತಿದೆ.

ಮಿತ್ರರೆ, ನಾವು ಪರಸ್ಪರ ಸಂವಾದ ಮಾಡುವ ಸಲುವಾಗಿ ಕನ್ನಡ ಭಾಷೆಯ ಉಪಯೋಗ ಮಾಡುತ್ತೇವೆ. ಕನ್ನಡ ಇದು ನಮ್ಮ ಮಾತೃಭಾಷೆಯಾಗಿದೆ. ನಮ್ಮ ವಿಚಾರ, ಅಭಿಪ್ರಾಯ, ಕಲ್ಪನೆ, ಭಾವ-ಭಾವನೆಗಳು ಮುಂದಿನ ವ್ಯಕ್ತಿಯ ಎದುರಿಗೆ ಯೋಗ್ಯ ಪ್ರಕಾರ ಮತ್ತು ಪ್ರಭಾವಿಯಾಗಿ ಮಂಡಿಸುವದಿದ್ದರೆ ಭಾಷೆಯ ಮೇಲೆ ಪ್ರಭುತ್ವವಿರಬೇಕು. ಈ ಪುಸ್ತಕದ ಅಭ್ಯಾಸ ಮಾಡುವದರಿಂದ ನಿಮ್ಮ ಭಾಷೆಯ ಮೇಲೆ ಪ್ರಭುತ್ವ ಬೆಳೆಯಬೇಕು, ಭಾಷೆಯ ವಿವಿಧ ಪ್ರಕಾರಗಳನ್ನು ಉಪಯೋಗಿಸಿ ನಿಮಗೆ ಸಹಜವಾಗಿ ಬಳಸಲು ಬರಬೇಕೆಂದು ನಮಗೆನಿಸುತ್ತದೆ.

ಪಠ್ಯಪುಸ್ತಕದ ಆರಂಭದಲ್ಲಿ ಕ್ಷಮತೆಗಳ ಯಾದಿ ಕೊಡಲಾಗಿದೆ. ಅದರ ಮೇಲಿಂದ ಯಾವ ಭಾಷಿಕ ಕೌಶಲ್ಯಗಳನ್ನು ಮೈಗೂಡಿಸಿಕೊಳ್ಳುವದಿದೆ. ಅದು ನಿಮ್ಮ ಕಲ್ಪನೆಗೆ ಬರಬಹುದು.

ಈ ಪಠ್ಯಪುಸ್ತಕದ ಅಂತರಂಗ ನೋಡಿದಾಗ ನಿಮ್ಮ ಗಮನಕ್ಕೆ ಬರಬಹುದು, ಅದರಲ್ಲಿ ವಿವಿಧ ಸಾಹಿತ್ಯ ಪ್ರಕಾರದ ಸಮಾವೇಶ ಮಾಡಲಾಗಿದೆಯೆಂದು. ಈ ಎಲ್ಲ ಸಾಹಿತ್ಯ ಪ್ರಕಾರದಲ್ಲಿ ಆಶಯ ಮತ್ತು ಭಾಷೆ ಇವುಗಳಲ್ಲಿಯ ವೈವಿಧ್ಯತೆ ನಿಮಗೆ ನಿಜಕ್ಕೂ ಹಿಡಿಸಬಹುದು. ಈ ಅಭ್ಯಾಸದಿಂದ ನಿಮಗೆ ಕನ್ನಡಭಾಷೆಯ ಶಬ್ದವೈಭವ ವಿವಿಧಾಂಗಿಯಾಗಿದೆಯೆಂಬುದು ಲಕ್ಷ್ಯಕ್ಕೆ ಬರಬಹುದು.

ಈ ಪಠ್ಯಪುಸ್ತಕದ ಎಲ್ಲಕ್ಕಿಂತ ಮಹತ್ವದ ವೈಶಿಷ್ಟ್ಯವೆಂದರೆ ಪ್ರತಿಯೊಂದು ಪಾಠದ ಕೆಳಗಿನ ಅಭ್ಯಾಸ (ಸ್ವಾಧ್ಯಾಯ)ದ ಸ್ವರೂಪ ಮತ್ತು ರಚನಾ ವೈವಿಧ್ಯ, ಈ ಅಭ್ಯಾಸವು ನಿಮಗೆ ಪಾಠದ ಅಂತರಂಗ ತಿಳಿದುಕೊಳ್ಳಲು ಸಹಾಯಕವಾಗುವುದು. ನಿಮ್ಮ ಆಕಲನ ಶಕ್ತಿ, ವಿಚಾರಶಕ್ತಿ, ಕಲ್ಪನಾಶಕ್ತಿ ಮತ್ತು ಸೃಜನಶೀಲತೆ ವಿಕಸಿತ ಮಾಡುವ ಉದ್ದೇಶದಿಂದಲೇ ಅಭ್ಯಾಸದಲ್ಲಿಯ ಕೃತಿಗಳ ರಚನೆಯನ್ನು ತಿಳಿದುಕೊಳ್ಳಲು ಕೊಡಲಾಗಿದೆ. ಶಿಕ್ಷಕರ ಮಾರ್ಗದರ್ಶನ ಮತ್ತು ನಿಮ್ಮ ಸ್ವಯಂ - ಅಧ್ಯಯನ ಇವುಗಳಿಂದ ಭಾಷೆಕಲಿಯುವಾಗ ನಿಮಗೆ ಅಭ್ಯಾಸದ ಭಾರವೆನಿಸುವದಿಲ್ಲ. ಪಾಠಾಂತರದ ಭಯವೂ ಅನಿಸುವದಿಲ್ಲ.

ದೈನಂದಿನ ವ್ಯವಹಾರದಲ್ಲಿ ನಮಗೆ ಹೆಜ್ಜೆ ಹೆಜ್ಜೆಗೆ ಕನ್ನಡ ಭಾಷೆಯ ಉಪಯೋಗ ಮಾಡಬೇಕಾಗುತ್ತದೆ. ಆ ದೃಷ್ಟಿಯಿಂದ ನಿಮ್ಮ ಉತ್ತಮ ತಯಾರಿಯಾಗುವ ಸಲುವಾಗಿ ಈ ಪಠ್ಯಪುಸ್ತಕದಲ್ಲಿ ಉಪಯೋಜಿತ ಲೇಖನದ ರೂಢಿ ಉಪಯುಕ್ತವೆನಿಸುವದು. ಅದರ ಜೊತೆ ಜೊತೆಗೆ ದಿನನಿತ್ಯದ ವ್ಯವಹಾರದಲ್ಲಿ ನೀವು ತಂತ್ರಜ್ಞಾನದ ಉಪಯೋಗ ಮಾಡುವದಿದೆ. ಅದಕ್ಕಾಗಿ ಪಾಠ್ಯ ಘಟಕಗಳ ಸಂಬಂಧಿತ ಅಧಿಕ ಮಾಹಿತಿ ದೊರೆಯುವ ಸಲುವಾಗಿ ಸಂಕೇತಸ್ಥಳದ ಯಾದಿ ಕೊಡಲಾಗಿದೆ. ಪ್ರತಿಯೊಂದು ಪಾಠಸಂಬಂಧಿ ಹೆಚ್ಚಿನ ಮಾಹಿತಿ ದೊರೆಯುವ ಸಲುವಾಗಿ ಆ್ಯಪದ ಮಾಧ್ಯಮದಿಂದ ಕ್ಯೂಆರ್ ಕೋಡ ಮೂಲಕ ದೃಕ್‌ಶ್ರಾವ್ಯ ಸಾಹಿತ್ಯ ನಮಗೆ ಉಪಲಬ್ಧವಾಗುತ್ತದೆ. ಅದು ನಿಮಗೆ ಅಭ್ಯಾಸದ ಸಲುವಾಗಿ ನಿಶ್ಚಿತವಾಗಿ ಉಪಯೋಗವಾಗುವುದು.

ಭಾಷಿಕ ವಿಕಾಸದೊಂದಿಗೆ ವೈಚಾರಿಕ ಕ್ಷಮತೆ, ಅಭಿವ್ಯಕ್ತಿ ಕೌಶಲ್ಯ ಮತ್ತು ಸೃಜನಶೀಲತೆ ಇವುಗಳ ವಿಕಾಸಕ್ಕಾಗಿ ಉಪಯುಕ್ತವೆನಿಸುವ ಈ ಪಠ್ಯಪುಸ್ತಕ ನಿಮಗೆ ಹಿಡಿಸಬಹುದು ಎಂಬ ವಿಶ್ವಾಸವಿದೆ.

(ಡಾ. ಸುನಿಲ ಮಗರ)
ಸಂಚಾಲಕ
ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ
ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ

ಪುಣೆ
ದಿನಾಂಕ: 18 ಮಾರ್ಚ, 2018 ಯುಗಾದಿ
ಭಾರತೀಯ ಸೌರ ದಿನಾಂಕ : 27 ಫಾಲ್ಗುಣ 1939

# ಭಾರತದ ಸಂವಿಧಾನ

## ಪೀಠಿಕೆ

**ಭಾರತದ ಪ್ರಜೆಗಳಾದ ನಾವು, ಭಾರತವನ್ನು ಒಂದು ಸಾರ್ವಭೌಮ**
**ಸಮಾಜವಾದಿ ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ** ನಿರ್ಮಿಸಲು
ಹಾಗೂ ಅದರ ಸಮಸ್ತ ನಾಗರಿಕರಿಗೆ :

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ;**
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಶ್ರದ್ಧೆ
ಮತ್ತು ಉಪಾಸನಾ **ಸ್ವಾತಂತ್ರ್ಯ;**
ಸ್ಥಾನಮಾನ ಹಾಗೂ ಅವಕಾಶ **ಸಮಾನತೆಯು;**

ನಿಶ್ಚಿತವಾಗಿ ದೊರೆಯುವಂತೆ ಮಾಡಲು
ಮತ್ತು ವ್ಯಕ್ತಿಗೌರವವನ್ನು

ಹಾಗೂ ರಾಷ್ಟ್ರದ ಐಕ್ಯತೆ ಮತ್ತು ಏಕಾತ್ಮತೆಯನ್ನು
ಆಶ್ವಾಸನೆ ನೀಡುವ **ಬಂಧುತ್ವವನ್ನು**
ವೃದ್ಧಿಗೊಳಿಸಲು ದೃಢಸಂಕಲ್ಪದ ನಿರ್ಧಾರ ಮಾಡಿ ;

**ನಮ್ಮ ಸಂವಿಧಾನ ಸಭೆಯಲ್ಲಿ**
ಇಂದು ದಿನಾಂಕ ಇಪ್ಪತ್ತಾರನೆಯ ನವ್ಹೆಂಬರ, ೧೯೪೯ ನೆಯ ಇಸವಿ
**ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ ಮತ್ತು ಅಧಿನಿಯಮಿತ**
**ಗೊಳಿಸಿ ಸ್ವತ: ಅರ್ಪಿಸಿಕೊಂಡಿದ್ದೇವೆ.**

## ರಾಷ್ಟ್ರಗೀತೆ

ಜನಗಣಮನ-ಅಧಿನಾಯಕ ಜಯ ಹೇ
ಭಾರತ-ಭಾಗ್ಯವಿಧಾತಾ ।

ಪಂಜಾಬ, ಸಿಂಧು, ಗುಜರಾತ, ಮರಾಠಾ,
ದ್ರಾವಿಡ, ಉತ್ಕಲ, ಬಂಗ,

ವಿಂಧ್ಯ, ಹಿಮಾಚಲ, ಯಮುನಾ, ಗಂಗಾ,
ಉಚ್ಛಲ ಜಲಧಿತರಂಗ,

ತವ ಶುಭ ನಾಮೇ ಜಾಗೇ, ತವ ಶುಭ ಆಶಿಸ ಮಾಗೇ,
ಗಾಹೇ ತವ ಜಯಗಾಥಾ,

ಜನಗಣ ಮಂಗಲದಾಯಕ ಜಯ ಹೇ,
ಭಾರತ-ಭಾಗ್ಯವಿಧಾತಾ ।

ಜಯ ಹೇ, ಜಯ ಹೇ, ಜಯ ಹೇ,
ಜಯ ಜಯ ಜಯ, ಜಯ ಹೇ ॥

## ಪ್ರತಿಜ್ಞೆ

ಭಾರತ ನನ್ನ ದೇಶ. ಭಾರತೀಯರೆಲ್ಲರೂ ನನ್ನ ಬಂಧು-ಭಗಿನಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ನನಗೆ ನನ್ನ ದೇಶದ ಸಮೃದ್ಧವಾದ ಹಾಗೂ ಬಹುವಿಧವಾದ ಪರಂಪರೆಯ ಬಗ್ಗೆ ಅಭಿಮಾನವಿದೆ. ಈ ಪರಂಪರೆಗೆ ತಕ್ಕವನಾಗಿರಲು ನಾನು ಯಾವಾಗಲೂ ಪ್ರಯತ್ನಿಸುತ್ತೇನೆ.

ನಾನು ನನ್ನ ತಾಯಿ-ತಂದೆ, ಗುರು-ಹಿರಿಯರನ್ನು ಆದರಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ನಡೆದುಕೊಳ್ಳುತ್ತೇನೆ.

ನಾನು ನನ್ನ ದೇಶ ಹಾಗೂ ನನ್ನ ದೇಶ ಬಾಂಧವರಲ್ಲಿ ನಿಷ್ಠೆ ಇಡುವೆನೆಂದು ಪ್ರತಿಜ್ಞೆ ಮಾಡುತ್ತೇನೆ. ಅವರ ಕಲ್ಯಾಣ ಹಾಗೂ ಉತ್ಕರ್ಷ ಇವುಗಳಲ್ಲಿಯೇ ನನ್ನ ಸುಖವುಂಟು.

| | ಕನ್ನಡ ಕುಮಾರಭಾರತಿ ಹತ್ತನೆಯ ಇಯತ್ತೆ |
|---|---|
| **ಕ್ಷೇತ್ರಗಳು** | **ಕ್ಷಮತೆಗಳು** |
| ಶ್ರವಣ | 1. ಪ್ರಕಟವಾಚನವನ್ನು ಏಕಾಗ್ರತೆಯಿಂದ ಆಲಿಸುವುದು.<br>2. ಆಕಾಶವಾಣಿ, ದೂರದರ್ಶನದಲ್ಲಿ ಪ್ರಸಾರಗೊಳ್ಳುವ ವಾರ್ತೆ ಹಾಗೂ ಶೈಕ್ಷಣಿಕ ಕಾರ್ಯಕ್ರಮಗಳನ್ನು ಲಕ್ಷ್ಯಪೂರ್ವಕವಾಗಿ ಕೇಳುವುದು.<br>3. ಶಾಲೆ ಹಾಗೂ ಶಾಲೆಯ ಬಾಹ್ಯ ಪರಿಸರದಲ್ಲಿ ಏರ್ಪಡಿಸಿದ ಭಾಷಣಗಳನ್ನು ತಾಳ್ಮೆ ಹಾಗೂ ಏಕಾಗ್ರತೆಯಿಂದ ಆಲಿಸುವುದು.<br>4. ಆಗಾಗ ದೊರೆಯುವ ಸಾಂದರ್ಭಿಕ ಸೂಚನೆ, ಸಲಹೆಗಳನ್ನು ಲಕ್ಷ್ಯ ಗೊಟ್ಟು ಆಲಿಸುವುದು.<br>5. ಔಪಚಾರಿಕ ಹಾಗೂ ಅನೌಪಚಾರಿಕ ಚರ್ಚೆ, ಹರಟೆಗಳಲ್ಲಿ ಭಾಗವಹಿಸುವುದು. |
| ಭಾಷಣ/ ಸಂಭಾಷಣ | 1. ಆಲಿಸಿದ ವಿವರಗಳನ್ನು ಸ್ಪಷ್ಟವಾಗಿ ಅಭಿವ್ಯಕ್ತಿಗೊಳಿಸಲು ಬರುವುದು.<br>2. ವಿಶೇಷ ಸಂವಾದ, ಚರ್ಚೆ, ಸಂದರ್ಶನ, ರಸಪ್ರಶ್ನೆ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಪ್ರಭಾವಿಯಾಗಿ ಮಾತನಾಡುವುದು.<br>3. ಏಕಪಾತ್ರಾಭಿನಯ, ನಾಟ್ಯಪ್ರಸಂಗಗಳಲ್ಲಿ ಉತ್ತಮ ಮಾತುಗಾರಿಕೆಯನ್ನು ಅಭಿವ್ಯಕ್ತಿಗೊಳಿಸುವುದು.<br>4. ಸಂದರ್ಭಕ್ಕನುಸಾರವಾಗಿ ಮಾತುಗಳಲ್ಲಿ ನಯ, ವಿನಯ, ಮಧುರತೆ, ವಿನೋದ ಅಳವಡಿಸುವುದು. ಉಚ್ಚಾರ ಸ್ಪಷ್ಟತೆ, ಧ್ವನಿಯ ಏರಿಳಿತದೊಂದಿಗೆ ಮಾತನಾಡುವುದು. |
| ವಾಚನ | 1. ವಿಶಿಷ್ಟ ವಿವರಗಳ ಪ್ರಕಟವಾಚನ ಮಾಡುವುದು, ಪ್ರಕಟವಾಚನ ಮಾಡುವಾಗ ಧ್ವನಿಯ ಏರಿಳಿತ, ಯೋಗ್ಯ ತಡೆ, ವಿರಾಮ ಚಿಹ್ನೆಗಳಿಗನುಸಾರ ಉಚ್ಚಾರ ಸ್ಪಷ್ಟತೆಗಳನ್ನು ಅಳವಡಿಸುವುದು.<br>2. ವಿವರಗಳಿಗೆ ಸ್ಪಂದಿಸುವ ಮುಖದ ಭಾವನೆ ವ್ಯಕ್ತಪಡಿಸುವುದು.<br>3. ಗತಿವಾಚನ, ಅರ್ಥಪೂರ್ಣ ಗತಿವಾಚನ ರೂಢಿಸುವುದು.<br>4. ಮೌನವಾಚನ ಕಲೆಯನ್ನು ಅಳವಡಿಸಿಕೊಳ್ಳುವುದು.<br>5. ಶಾಲಾ ಬಾಹ್ಯ ಪರಿಸರದಲ್ಲಿ ಕಾಣುವ ಫಲಕಗಳು, ದರಪತ್ರಕಗಳು, ವೇಳಾಪತ್ರಿಕೆಗಳು, ಭಿತ್ತಿಪತ್ರ ಜಾಹೀರಾತು ಪ್ರಕಟನೆಗಳನ್ನು ಅರ್ಥೈಸಿಕೊಂಡು ಓದುವುದು.<br>6. ಹಸ್ತಾಕ್ಷರ ವಿವರಗಳನ್ನು ತಿಳಿದುಕೊಂಡು ಓದುವುದು. ಪಠ್ಯೇತರ ವಾಚನ ಅಭಿರುಚಿಯನ್ನು ಬೆಳೆಸಿಕೊಳ್ಳಲು ವೃತ್ತಪತ್ರ, ಮಾಸಿಕಗಳು, ಬಾಲಸಾಹಿತ್ಯ, ಕಥೆ, ಕವಿತೆಗಳನ್ನು ಓದುವುದು. |
| ಲೇಖನ | 1. ನಿರ್ದೋಷ 'ಅನುಲೇಖನ' ಕಲೆಯನ್ನು ಅಳವಡಿಸಿಕೊಳ್ಳುವುದು.<br>2. ವಿಶಿಷ್ಟ ವಿವರಗಳ 'ಶ್ರುತಲೇಖನ' ಮಾಡಲು ಬರುವುದು.<br>3. ವಿಶಿಷ್ಟ ವಿವರಗಳ ದೋಷರಹಿತ 'ಗತಿಲೇಖನ' ಕಲೆಯನ್ನು ಮೈಗೂಡಿಸಿಕೊಳ್ಳುವುದು.<br>4. ಸ್ವಯಂ ಲೇಖನದ ಮಾದರಿಗಳಾದ ನಿಬಂಧಲೇಖನ, ಸಾರಾಂಶ ಲೇಖನ, ಪತ್ರಲೇಖನ, ಕಲ್ಪನಾವಿಸ್ತಾರ, ಕಥಾಲೇಖನ ಕಲೆಯನ್ನು ಬೆಳೆಸಿಕೊಳ್ಳುವುದು. |

| | |
|---|---|
| | 5. ವಿಶಿಷ್ಟಲೇಖನಗಳಾದ ನಿರೂಪಣೆ, ವರ್ಣನೆ, ವರದಿ ಮುಂತಾದವುಗಳನ್ನು ರೂಢಿಸಿಕೊಳ್ಳುವುದು.<br>6. ಸುಂದರ ಹಾಗೂ ಶುದ್ಧ ಲೇಖನ ಕಲೆಯನ್ನು ಅಂಗೀಕರಿಸಿಕೊಳ್ಳುವುದು. |

| | |
|---|---|
| ಅಧ್ಯಯನ ಕೌಶಲಗಳು | 1. ಶಬ್ದ ಸಂಪತ್ತನ್ನು ಬೆಳೆಸಿಕೊಳ್ಳಲು ಪದಬಂಧ, ಅಂತ್ಯಾಕ್ಷರಿ ಆಟ, ರಸಪ್ರಶ್ನೆ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು.<br>2. ವ್ಯಾವಹಾರಿಕ ಜೀವನದಲ್ಲಿ ಭಾಷೆಯನ್ನು ಪ್ರಭಾವಿಯಾಗಿ ಬಳಸಲು ಬರುವುದು.<br>3. ಶಾಲೆಯ ಬಾಹ್ಯ ಪರಿಸರದಲ್ಲಿ ಭಾಷಾಕೌಶಲಗಳ ವಿಕಾಸ ಪ್ರಕ್ರಿಯೆಯನ್ನು ಗುರುತಿಸಿ, ಅವುಗಳನ್ನು ಬೆಳೆಸಿಕೊಳ್ಳಲು ಪ್ರಯತ್ನಿಸುವುದು. ಉದಾ : ಸಾರ್ವಜನಿಕ ಸಭೆ, ಸಾರ್ವಜನಿಕ ವಾಚನಾಲಯ, ಸಂಘ ಸಂಸ್ಥೆಗಳ ಮುಖಾಂತರ ಏರ್ಪಡಿಸಲಾಗುವ ಭಾಷಣ ಸ್ಪರ್ಧೆ, ಲೇಖನಸ್ಪರ್ಧೆ, ನಾಟ್ಯೀಕರಣ ಇತ್ಯಾದಿ.<br>4. ಶೈಕ್ಷಣಿಕ ತಂತ್ರಜ್ಞಾನ ಸಾಧನಗಳನ್ನು ಬಳಸಿ ಭಾಷಾಕೌಶಲಗಳನ್ನು ಅಭಿವೃದ್ಧಿಗೊಳಿಸುವುದು. ಉದಾ : ಮೊಬೈಲ್, ಸಂಗಣಕ, ಲಾಪ್‌ಟಾಪ್ ಮುಂತಾದವುಗಳ ಯೋಗ್ಯ ಬಳಕೆ.<br>5. ಭಾಷೆಯನ್ನು ಹಿತಮಿತವಾಗಿ ಬಳಸಲು ಪ್ರಯತ್ನಿಸುವುದು.<br>6. ಶಾಲೆಯ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸಹಭಾಗಿಯಾಗಿ ಭಾಷಾಕೌಶಲಗಳನ್ನು ಬೆಳೆಸಿಕೊಳ್ಳುವುದು.<br>7. ಆಡುಭಾಷೆಯ ವಿವರಗಳನ್ನು ಶಿಷ್ಟಭಾಷೆಯಲ್ಲಿ ಪರಿವರ್ತಿಸಲು ಬರುವುದು.<br>8. ಸಂಗಣಕದ ಸಹಾಯದಿಂದ graphics, word art, graps, pictographs ಇತ್ಯಾದಿಗಳನ್ನು ತಯಾರಿಸಲು ಬರುವುದು.<br>9. ಸಂಗಣಕದ ಸಹಾಯದಿಂದ ಸಾದರೀಕರಣ ಮಾಡಲು ಬರುವುದು.<br>10. ಸಂಗಣಕೀಯ ಶಿಷ್ಟಾಚಾರವನ್ನು ತಿಳಿದುಕೊಳ್ಳುವುದು. ಉದಾ : ಬೇರೆಯವರ ಪಾಸವರ್ಡಗಳನ್ನು ನೋಡಬಾರದು.<br>11. ಪ್ರಸಾರ ಮಾಧ್ಯಮಗಳು/ಸಂಗಣಕ ಮುಂತಾದವುಗಳ ಮೇಲಿಂದ ಉಪಲಬ್ಧವಿರುವ ಕಲಾಕೃತಿಗಳ ಆಸ್ವಾದ ಮಾಡಲು ಬರುವುದು.<br>12. ಸಂಗಣಕ / ಇಂಟರ್‌ನೆಟ್‌ದ ಸಹಾಯದಿಂದ ಭಾಷಾಂತರ/ಲಿಪ್ಯಂತರ ಮಾಡಲು ಬರುವುದು. |

# ಪರಿವಿಡಿ (ಪ್ರಥಮ ಭಾಷೆ)

## ಪದ್ಯ ವಿಭಾಗ


| ಅ.ನಂ | ಪದ್ಯಗಳು | ಕವಿಗಳು | ಪುಟ ಸಂಖ್ಯೆ |
|---|---|---|---|
| 1. | ಯಾತಕವ್ವ ಹುಬ್ಬಳ್ಳಿ ಧಾರ್‍ವಾಡ | ಬೆಟಗೇರಿ ಕೃಷ್ಣಶರ್ಮ | 1 |
| 2. | ಯೋಧ ಮತ್ತು ಹೆಂಗಸು | ಸು. ರಂ. ಎಕ್ಕುಂಡಿ | 4 |
| 3. | ಸಿದ್ಧಾರ್ಥನ ರಾಜ್ಯ ಪರಿತ್ಯಾಗ | ವಿ. ಸೀ. | 6 |
| 4. | ವಚನಗಳು | ಅಕ್ಕಮಹಾದೇವಿ, ಮುಕ್ತಾಯಕ್ಕ | 9 |
| 5. | ಮಂಕು ತಿಮ್ಮನ ಕಗ್ಗ | ಡಿ. ವ್ಹಿ. ಜಿ. | 13 |
| 6. | ಸರ್ವಜ್ಞನ ವಚನಗಳು | ಸರ್ವಜ್ಞ | 16 |
| 7. | ದೇವರ ದೇವನಾರು? | ಸರ್ಪಭೂಷಣ ಶಿವಯೋಗಿ | 18 |
| 8. | ಕಪ್ಪಡಿ ಸಂಗಮನ ಸಾನಿಧ್ಯದಲ್ಲಿ | ಹರಿಹರ | 20 |
| 9. | ಎತ್ತಣ ತುರಂಗಮಿದು | – ಲಕ್ಷ್ಮೀಶ | 23 |


## ಗದ್ಯ ವಿಭಾಗ


| ಅ.ನಂ | ಗದ್ಯಗಳು | ಲೇಖಕರು | ಪುಟ ಸಂಖ್ಯೆ |
|---|---|---|---|
| 1. | ಬನ್ನಿ ಕೇರಳ ನಾಡಿಗೆ | ಕೆ.ಬಿ. ಪ್ರಭು ಪ್ರಸಾದ್ | 27 |
| 2. | ವಿಫಲ ಸಂಧಾನ | ಎ.ಆರ್. ಕೃಷ್ಣಶಾಸ್ತ್ರಿ | 35 |
| 3. | ಕಾಂಪ್ಲಿಮೆಂಟರಿ | ಬೀಚಿ | 42 |
| 4. | ಬೇಲೂರು – ಹಳೇಬೀಡುಗಳ ಶಿಲ್ಪಕಲಾ ವೈಭವ | – | 47 |
| 5. | ಒಲಿಂಪಿಕ್ ಕ್ರೀಡೋತ್ಸವ | – | 53 |
| 6. | ನಿರ್ನಾಳ ಗ್ರಂಥಿಗಳು | – | 58 |
| 7. | ಡಾ. ಡಾಮೋದರಂ | ನಾ. ಕಸ್ತೂರಿ | 63 |
| 8. | ಭೂಮಿಯು ಇನ್ನು ಬಡವಾಯಿತು | ಸಿ.ಕೆ. ವೆಂಕಟರಾಮಯ್ಯ | 68 |
| 9. | ಪಂಜರ ಪರೀಕ್ಷೆ | ಕೆಂಪು ನಾರಾಯಣ | 73 |
| 10. | ಸೀತಾ ಶೋಧ | ಮುದ್ದಣ್ಣ | 80 |


## ಸ್ಥೂಲ ಅಭ್ಯಾಸ

### ಅನುಕ್ರಮಣಿಕೆ


| ಅ.ನಂ | ಪಾಠಗಳು | ಲೇಖಕರು | ಪುಟ ಸಂ |
|---|---|---|---|
| 1. | ಡಾ. ವಿಶ್ವೇಶ್ವರಯ್ಯ ವ್ಯಕ್ತಿ ಮತ್ತು ಐತಿಹ್ಯ | ಎ. ಎನ್. ಮೂರ್ತಿರಾವ | 86 |
| 2. | ದೇವರ ನಗು | ಜಿ.ಪಿ. ರಾಜರತ್ನಂ | 92 |
| 3. | ಅಮರ ಗಂಗಾನದಿ | – | 97 |


## ವ್ಯಾಕರಣ ವಿಭಾಗ


| ಅ.ನಂ | ಪಾಠಗಳು | ಪುಟ |
|---|---|---|
| 1. | ವಿಭಕ್ತಿ ಪ್ರತ್ಯಯಗಳು | 104 |
| 2. | ವಾಕ್ಯ ಪ್ರಕಾರಗಳು | 104 |
| 3. | ವಾಕ್ಯ ಪ್ರಯೋಗಗಳು | 105 |
| 4. | ತತ್ಸಮ – ತದ್ಭವ / ಉಪಸರ್ಗ | 106 |
| 5. | ಪಡೆನುಡಿಗಳು | 107 |
| 6. | ಸಮಾಸಗಳು | 108 |
| 7. | ಅಲಂಕಾರಗಳು | 109 |
| 8. | ಛಂದಸ್ಸು – ಮಾತ್ರಾಗಣ, ಅಕ್ಷರಗಣ, ಅಂಶಗಣ | 112 |


## ಲೇಖನ ಕೌಶಲ್ಯ


| ಅ.ನಂ | ಪಾಠಗಳು | ಪುಟ |
|---|---|---|
| 1. | ಪತ್ರ ಲೇಖನ | 126 |
| 2. | ಕಥಾ ಲೇಖನ | 128 |
| 3. | ಸಾರಾಂಶ ಲೇಖನ | 129 |
| 4. | ಜಾಹಿರಾತು ಲೇಖನ | 130 |
| 5. | ಸಂವಾದ ಲೇಖನ | 131 |
| 6. | ವರದಿ ಲೇಖನ | 132 |
| 7. | ಗಾದೆಮಾತಿನ ವಿಸ್ತರಣೆ | 133 |
| 8. | ಮಾದರಿ ಆಮಂತ್ರಣ ಪತ್ರಿಕೆ | 134 |
| 9. | ನಿಬಂಧ ಲೇಖನ | 135 |
| 10. | ಗದ್ಯ ಆಕಲನ | 136 |

# ಪರಿವಿಡಿ (ದ್ವಿತೀಯ ಭಾಷೆ)

## ಪದ್ಯ ವಿಭಾಗ


| ಅ.ನಂ | ಪದ್ಯಗಳು | ಕವಿಗಳು | ಪುಟ ಸಂಖ್ಯೆ |
|---|---|---|---|
| 1. | ಯಾತಕವ್ವ ಹುಬ್ಬಳ್ಳಿ ಧಾರ್‍ವಾಡ | ಬೆಟಗೇರಿ ಕೃಷ್ಣಶರ್ಮ | 1 |
| 2. | ಯೋಧ ಮತ್ತು ಹೆಂಗಸು | ಸು. ರಂ. ಎಕ್ಕುಂಡಿ | 4 |
| 4. | ವಚನಗಳು | ಅಕ್ಕಮಹಾದೇವಿ, ಮುಕ್ತಾಯಕ್ಕ | 9 |
| 6. | ಸರ್ವಜ್ಞನ ವಚನಗಳು | ಸರ್ವಜ್ಞ | 16 |
| 7. | ದೇವರ ದೇವನಾರು? | ಸರ್ಪಭೂಷಣ ಶಿವಯೋಗಿ | 18 |


## ಗದ್ಯ ವಿಭಾಗ


| ಅ.ನಂ | ಗದ್ಯಗಳು | ಲೇಖಕರು | ಪುಟ ಸಂಖ್ಯೆ |
|---|---|---|---|
| 1. | ಬನ್ನಿ ಕೇರಳ ನಾಡಿಗೆ | ಕೆ.ಬಿ. ಪ್ರಭು ಪ್ರಸಾದ್ | 27 |
| 2. | ವಿಫಲ ಸಂಧಾನ | ಎ.ಆರ್. ಕೃಷ್ಣಶಾಸ್ತ್ರಿ | 35 |
| 3. | ಕಾಂಪ್ಲಿಮೆಂಟರಿ | ಬೀಚಿ | 42 |
| 4. | ಬೇಲೂರು – ಹಳೇಬೀಡುಗಳ ಶಿಲ್ಪಕಲಾ ವೈಭವ | – | 47 |
| 5. | ಒಲಿಂಪಿಕ್ ಕ್ರೀಡೋತ್ಸವ | – | 53 |
| 7. | ಡಾ. ಡಾಮೋದರಂ | ನಾ. ಕಸ್ತೂರಿ | 63 |
| 8. | ಭೂಮಿಯು ಇನ್ನು ಬಡವಾಯಿತು | ಸಿ.ಕೆ. ವೆಂಕಟರಾಮಯ್ಯ | 68 |


## ಸ್ಥೂಲ ಅಭ್ಯಾಸ

### ಅನುಕ್ರಮಣಿಕೆ


| ಅ.ನಂ | ಪಾಠಗಳು | ಲೇಖಕರು | ಪುಟ ಸಂಖ್ಯೆ |
|---|---|---|---|
| 1. | ಡಾ. ವಿಶ್ವೇಶ್ವರಯ್ಯ ವ್ಯಕ್ತಿ ಮತ್ತು ಐತಿಹ್ಯ | ಎ. ಎನ್. ಮೂರ್ತಿರಾವ | 86 |
| 2. | ದೇವರ ನಗು | ಜಿ.ಪಿ. ರಾಜರತ್ನಂ | 92 |
| 3. | ಅಮರ ಗಂಗಾನದಿ | – | 97 |


## ವ್ಯಾಕರಣ ವಿಭಾಗ


| ಅ.ನಂ | ಪಾಠಗಳು | ಪುಟ ಸಂಖ್ಯೆ |
|---|---|---|
| 1. | ವಿಭಕ್ತಿ ಪ್ರತ್ಯಯಗಳು | 104 |
| 2. | ವಾಕ್ಯ ಪ್ರಕಾರಗಳು | 104 |
| 3. | ವಾಕ್ಯ ಪ್ರಯೋಗಗಳು | 105 |
| 4. | ತತ್ಸಮ – ತದ್ಭವ / ಉಪಸರ್ಗ | 106 |
| 5. | ಪಡೆನುಡಿಗಳು | 107 |
| 6. | ಸಮಾಸಗಳು | 108 |
| 7. | ಅಲಂಕಾರಗಳು | 109 |


## ಲೇಖನ ಕೌಶಲ್ಯ


| ಅ.ನಂ | ಪಾಠಗಳು | ಪುಟ ಸಂಖ್ಯೆ |
|---|---|---|
| 1. | ಪತ್ರ ಲೇಖನ | 126 |
| 2. | ಕಥಾ ಲೇಖನ | 128 |
| 4. | ಜಾಹಿರಾತು ಲೇಖನ | 130 |
| 5. | ಸಂವಾದ ಲೇಖನ | 131 |
| 6. | ವರದಿ ಲೇಖನ | 132 |
| 7. | ಗಾದೆಮಾತಿನ ವಿಸ್ತರಣೆ | 133 |
| 9. | ನಿಬಂಧ ಲೇಖನ | 135 |
| 10. | ಗದ್ಯ ಆಕಲನ | 136 |

ಪದ್ಯ ವಿಭಾಗ

# 1. ಯಾತಕವ್ವಾ ಹುಬ್ಬಳ್ಳಿ ಧಾರ್ವಾಡ

– ಬೆಟಗೇರಿ ಕೃಷ್ಣ ಶರ್ಮ

**ಕವಿ ಪರಿಚಯ : ಬೆಟಗೇರಿ ಕೃಷ್ಣ ಶರ್ಮ** – ಆನಂದ ಕಂದ' ಎಂಬುದು ಇವರ ಕಾವ್ಯನಾಮ. ಇವರು ಕತೆ, ಕವಿತೆ, ಕಾದಂಬರಿ, ನಾಟಕ, ಸಂಶೋಧನೆ, ವಿಮರ್ಶೆ ಮುಂತಾದ ವಾಙ್ಮಯ ಕ್ಷೇತ್ರಗಳಲ್ಲಿ ಕೃಷಿಗೈದು ಸಾಫಲ್ಯ ಪಡೆದಿದ್ದಾರೆ. 'ಜಯಂತಿ' ಎಂಬ ಸದಭಿರುಚಿಯ ಮಾಸ ಪತ್ರಿಕೆಯನ್ನು 25 ವರ್ಷಗಳ ಕಾಲ ನಡೆಸಿಕೊಂಡು ಬಂದ ಇವರ ಹೆಚ್ಚಿನ ಬರಹಗಳಲ್ಲಿ ಬಯಲು ನಾಡಿನ ಜನಜೀವನದ ಚಿತ್ರಣವು ಬಳಕೆಯ ಭಾಷೆಯ ತನಿಯಿಂದ, ಹೃದಯ ಸ್ಪರ್ಶಿಯಾಗಿದೆ. ಜನಪದ ಸಾಹಿತ್ಯ ಇವರ ಇನ್ನೊಂದು ಒಲವು. ವಿರಹಿಣಿ, ಒಡನಾಡಿ, ಮಾತನಾಡುವ ಕಲ್ಲು, ರಾಜಯೋಗಿ ಮಲ್ಲಿಕಾರ್ಜುನ, ಕರ್ನಾಟಕ, ಜನಜೀವನ, 'ಕನ್ನಡ ಜನಪದ ಸಾಹಿತ್ಯ' ಮುಂತಾದ ಕೃತಿಗಳನ್ನು ರಚಿಸಿದ್ದಾರೆ.

ಪ್ರಸ್ತುತ ಈ ಕವಿತೆಯಲ್ಲಿ 'ಗ್ರಾಮೀಣ ಜೀವನ ಹಾಗೂ ನಗರ ಜೀವನದ ನಡುವಿನ ವ್ಯತ್ಯಾಸ, ಯಾವ ಕಾಲಕ್ಕೂ ಹಳ್ಳಿಯೇ ಶ್ರೇಷ್ಠ ಎಂಬುದನ್ನು ತಿಳಿಯ ಪಡಿಸಿದ್ದಾರೆ.

ನಮ್ಮ ಹಳ್ಳಿಯೂರಽ ನಮಗ ಪಾಡಽ
ಯಾತಕವ್ವಾ ಹುಬ್ಬಳ್ಳಿ – ಧಾರ್ವಾಡಽ || 1 ||

ಊರಮುಂದ ತಿಳಿನೀರಿನ ಹಳ್ಳಽ
ಬೇವು ಮಾವು ಹುಲಗಲ ಮರಚೆಳ್ಳಽ
ದಂಡಿಗುಂಟ ನೋಡು ನೆಳ್ಳಽ ನೆಳ್ಳಽ
ನೀರು ತರುವಾಗ ಗೆಣತ್ಯಾರ ಜೋಡಽ
ಯಾತಕವ್ವಾ ಹುಬ್ಬಳ್ಳಿ – ಧಾರ್ವಾಡಽ || 2 ||

ನಮ್ಮ ಹಳ್ಳ ಕಾಶಿಯ ಹಿರಿಹೊಳಿಯ
ಒಮ್ಮ್ಯಾದರು ಬತ್ತಿಲ್ಲದು ತಿಳಿಯ
ಬದಿಯ ತ್ವಾಟಗಳ ಬೆಳಸಿಗೆ ಕಳಿಯ
ಹ್ಯಾಂಗ ಕೊಡತೈತಿ ಬಂದೊಮ್ಮೆ ನೋಡಽ
ಯಾತಕವ್ವಾ ಹುಬ್ಬಳ್ಳಿ – ಧಾರ್ವಾಡಽ || 3 ||

ಪಡಿವಿಯ ತುಂಬಾ ಕಾಳಿನ ಚೀಲಾ
ನಡುಮನಿಯೊಳಗಽ ಗಳಿಗಿಯ ಸಾಲಾ
ತುಂಬಿ ಸೂಸತಾವ ಗಡಗಿಯಡಕಲಾ
ಖಾಲೀ ಇಲ್ಲವ್ವ ಒಂದೂ ಮನಿ – ಮಾಡಽ
ಯಾತಕವ್ವಾ ಹುಬ್ಬಳ್ಳಿ – ಧಾರ್ವಾಡಽ || 4 ||

ಹೈನದೆಮ್ಮಿ ನೋಡ ಹಾಲ ಸಮುದರಾ
ಎಷ್ಟು ತಿನ್ನಾಕೀ ಕೆನಿಕೆನಿ ಮಸರಾ
ಮಜ್ಜಿಗಿ ಒಯ್ತಾರ ಊರಂತೂರಾ
ಸೂಲಕ್ಕೊಂದು ಬಂಗಾರ್ ಬಳಿ ಜೋಡಽ
ಯಾತಕವ್ವಾ ಹುಬ್ಬಳ್ಳಿ – ಧಾರ್ವಾಡಽ || 5 ||




ಹೂಡುವೆತ್ತು ಹಕ್ಕಿಗೆ ಸಿಂಗಾರಾ
ತಿಂದ ರಿಣಾ ತೀರಸತಾವ ಪೂರಾ
ಎತ್ತು ಅಲ್ಲ ನಮ್ಮನಿ ದೇವ್ರಾ
ಬಸವಣ್ಣೆರದಂಥ ಮನಿಯದು ಕಾಡಽ
ಯಾತಕವ್ವಾ ಹುಬ್ಬಳ್ಳಿ – ಧಾರ್ವಾಡಽ || 6 ||

ಗರಡಿಯ ಹುಡುಗರ ಹುರುಪು ಅದೇನಽ
ಕರಡಿ – ಹಲಗಿಮಜಲಿನ ಮೋಜೇನಽ
ಬಯಲಾಟದ ಸುಖಕಿಲ್ಲ ಸಮಾನ
ಕೇಳಿಲ್ಲೇನ ಲಾವಣಿ ಗೀಗೀಹಾಡಽ
ಯಾತಕವ್ವಾ ಹುಬ್ಬಳ್ಳಿ – ಧಾರ್ವಾಡಽ || 7 ||

ರಾಯ ಅರಸು ನಾನಾತಗ ರಾಣಿ
ನಮ್ಮ ಪ್ರೀತಿಯೊಳು ಸ್ವಲ್ಪೂ ಕಾಣೆ
ಬಂದೆ ಇಲ್ಲ ನೋಡ ನನ್ನ ತವರಾಣಿ
ನಮ್ಮ ಸಂಸಾರ ಜೇನಿನ ಗೂಡಽ
ಯಾತಕವ್ವಾ ಹುಬ್ಬಳ್ಳಿ – ಧಾರ್ವಾಡಽ || 8 ||

ಊರಕಾವಲಿಗೆ ಸೀಮಿಯ ಭರಮಾ
ಪಾರೆ ಮಾಡತಾನ ಶ್ರೀಬಲಭೀಮಾ
ಮೀರಿದ ದೇವತಿ ಗುಡಿಯೆಲ್ಲಮ್ಮಾ
ಇವರಽ ಕರುಣಾ ತಪ್ಪಿದರೆಲ್ಲಾ ಕೇಡಽ
ಯಾತಕವ್ವಾ ಹುಬ್ಬಳ್ಳಿ – ಧಾರ್ವಾಡಽ || 9 ||

ನಮ್ಮ ಹಳ್ಳಿ ನಮಗ ಬಲೆ ಪಾಡಽ
ಯಾತಕವ್ವಾ ಹುಬ್ಬಳ್ಳಿ – ಧಾರ್ವಾಡಽ




## ಶಬ್ದಗಳ ಅರ್ಥ:

ತ್ವಾಟ – ತೋಟ; ಪಡಿವಿ – ಪಡಸಾಲೆ; ಸಮದರಾ – ಸಮುದ್ರ; ಸೂಲ – ಎಮ್ಮೆ, ಆಕಳು, ಕರು ಹಾಕುವುದಕ್ಕೆ; ಗರಡಿ – ಕುಸ್ತಿ ಮೈದಾನ;

**ಕೃತಿ. 1) ಪದ್ಯವನ್ನು ಓದಿಕೊಂಡು ಅದರ ಆಧಾರಗಳಿಂದ ಕೆಳಗೆ ಕೊಟ್ಟ ಸೂಚನೆಗನುಗುಣವಾಗಿ ಜಾಲಾಕೃತಿ ಬಿಡಿಸಿರಿ.**

**I) ಕೆಳಗಿನ ಜಾಲಾಕೃತಿಯನ್ನು ಪೂರ್ಣ ಮಾಡಿರಿ.**



II) ಹಳ್ಳಿಯ ಮನೆಯಲ್ಲಿರುವ ವಸ್ತುಗಳು

| | | |
|---|---|---|
| ಪಡಸಾಲೆಯಲ್ಲಿ | → | |
| ನಡುಮನೆಯಲ್ಲಿ | → | |

**ಕೃತಿ. 2)** I) ನಿಮ್ಮೂರಿನ ನದಿಯ ತೀರಕ್ಕೆ ಹೋದಾಗ ನೀವು ಕಂಡು ಕೊಂಡ ನಿಸರ್ಗ ವರ್ಣನೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

II) ''ರೈತ ಎಂದರೆ ಅನ್ನದಾತ'' ಈ ಹೇಳಿಕೆಯೊಂದನ್ನು ಐದಾರು ವಾಕ್ಯಗಳಲ್ಲಿ ಬರೆಯಿರಿ.

III) 'ಹಳ್ಳಿಯ ಜನರ ದೃಷ್ಟಿಯಲ್ಲಿ ಎತ್ತುಗಳ ಬಗ್ಗೆ ಇರುವ ಅಭಿಪ್ರಾಯ ಬರೆಯಿರಿ.

**ಕೃತಿ. 3)** I) ನಿಮಗೆ ಗೊತ್ತಿರುವ ಹಳ್ಳಿಯ ಹಾಡುಗಳ ಪ್ರಕಾರಗಳನ್ನು ಜಾಲದಲ್ಲಿ ತುಂಬಿರಿ.

ಉದಾ :

| | | | | |
|---|---|---|---|---|
| ಲಾವಣಿ | | | | |
| | | | | |

II) ನೀವು ಗ್ರಾಮ ಪಂಚಾಯತಿಯ ಅಧಿಕಾರ ಪಡೆದರೆ ನೀವು ಮಾಡುವ ಗ್ರಾಮಾಭಿವೃದ್ಧಿ ಕಾರ್ಯಗಳನ್ನು ಏಳೆಂಟು ವಾಕ್ಯಗಳಲ್ಲಿ ಬರೆಯಿರಿ.

**ಕೃತಿ. 4)** I) ಪದ್ಯದಲ್ಲಿ ಬಂದಿರುವ ಗ್ರಾಮ್ಯ ಶಬ್ದಗಳನ್ನು ಗ್ರಾಂಥಿಕ ರೂಪದಲ್ಲಿ ಬರೆಯಿರಿ.
ನೆಳ್ಳ, ಗೆಣತ್ಯಾರ, ಧಾರ್‍ವಾಡ, ತ್ವಾಟ, ಸಮುದರಾ, ರಿಣಾ, ತೀರಸತಾವ, ಯಾತಕವ್ವಾ

II) ಒಂದಕ್ಕೊಂದು ಹೊಂದಿಕೆಯಾಗುವ ಶಬ್ದಗಳನ್ನು ಬರೆಯಿರಿ.

| | | | |
|---|---|---|---|
| ಹಳ್ಳ | ಚೀಲಾ | ಸಿಂಗಾರಾ | ಬರಮಾ |
| | | | |


III) ಹಳ್ಳಿ ಮತ್ತು ಪಟ್ಟಣಗಳಲ್ಲಿರುವ ವ್ಯತ್ಯಾಸವನ್ನು ನಿಮ್ಮ ಮಾತಿನಲ್ಲಿ 8-10 ಸಾಲುಗಳಲ್ಲಿ ಬರೆಯಿರಿ.

# 2. ಯೋಧ ಮತ್ತು ಹೆಂಗಸು

- ಸು. ರಂ. ಎಕ್ಕುಂಡಿ

**ಕವಿ ಪರಿಚಯ : ಸು. ರಂ. ಎಕ್ಕುಂಡಿ –** ಭಾಗವತ ಸಂಪ್ರದಾಯದ ವಸ್ತು, ಸನ್ನಿವೇಶ, ಕಥೆಗಳನ್ನು ತಾತ್ವಿಕ ಸೂತ್ರದಲ್ಲಿ ಪುನರುತ್ಥಾನಗೊಳಿಸಿ ರಮ್ಯ ಕಲಾಕೃತಿಯನ್ನು ಕೊಡುವಲ್ಲಿ ಎಕ್ಕುಂಡಿಯವರು ಕುಶಲ ಹಸ್ತರು. ವರ್ಣನೆ, ಕಲ್ಪನೆ, ಪದಲಾಲಿತ್ಯಗಳು ಇವರು ಕಾವ್ಯ ಶೈಲಿಯಲ್ಲಿ ಏಕಜೀವವಾಗಿರುತ್ತವೆ. ಸಮಾಜ ಪ್ರಕೃತಿ ಮುಂತಾದವುಗಳನ್ನು ಕುರಿತು ಇವರು ಸುಂದರ ಭಾವಗೀತೆಗಳನ್ನು ರಚಿಸಿದ್ದಾರೆ; ಕವಿತೆಗಳಲ್ಲದೆ, ಕಥೆ, ಕಾದಂಬರಿ, ಪ್ರಬಂಧ, ವಿಮರ್ಶೆಗಳ ರಂಗದಲ್ಲಿಯೂ ಕೃಷಿಮಾಡಿದ್ದುಂಟು, 'ಸಂತಾನ', 'ಮತ್ಸಗಂಧಿ' 'ಹಾವಾಡಿಗರ ಹುಡುಗ', ಪ್ರತಿಬಿಂಬಗಳು', 'ಎರಡು ರಶಿಯನ್ ಕಾದಂಬರಿಗಳು', ಮುಂತಾದವು ಇವರ ಕೃತಿಗಳು.

ಕವಿ ಹಾಗೂ ಯೋಧನಾಗಿರುವ ಪಂಪ ಒಮ್ಮೆ ಬೇಸಿಗೆಯ ದಿವಸ ಯುದ್ಧ ಮಾಡಿ ದಣಿದು ನೀರಡಿಸಿ ಬಂದಾಗ ಹೆಂಗಸು ಆತನಿಗೆ ನೀಡಿದ ಆತಿಥ್ಯವನ್ನು ಕುರಿತು ಇಲ್ಲಿ ವಿವರಿಸಲಾಗಿದೆ.



ಉರಿಬಿಸಿಲು ಕೆಂಪುಹುಡಿ ಮೈತುಂಬ ಧೂಳಿಡಿಗಿ
ಕುದುರೆಯಿಳಿದನು ಯೋಧ ಜನರ ಕಂಡು
''ನೀರು ಹಣಿಸುವಿರ ತುಸು'' ಅಂದಿರಲು ಹೆಂಗಸು
ಬೇಗ ಬಂದಳು ಮಡಕೆ ತುಂಬಿಕೊಂಡು

''ಬಳಲಿದಿರಿ, ಪಾಪ ಬನ್ನಿರಿ ಒಳಗೆ ವಿಶ್ರಮಿಸಿ.''
ಚಾಪೆಯನು ಹಾಸಿದಳು ಕೂತುಕೊಳಲು
''ಇರಲಿ ಬಿಡಿ ಈ ಮರದ ನೆರಳಲ್ಲೆ ಕೂಡುವೆನು
ತಂಪಾಗಿ ತಬ್ಬಿರುವವಿದರ ಹೆಳಲು''

''ಬಟ್ಟಲಿನ ತುಂಬ ಇದೆ ಜೇನು ಈ ಚೊಂಬಿನಲಿ
ತಣ್ಣಗಿನ ನೀರು ಇದೆ, ತೆಗೆದುಕೊಳ್ಳಿ
ಇಲ್ಲಿಹುದು ಬೀಸಣಿಕೆ, ಬಹಳ ಸೆಕೆ ಅಲ್ಲವೆ?
ಇದರಿಂದ ಗಾಳಿಯನು ಬೀಸಿಕೊಳ್ಳಿ

ಆಗ ಒಮ್ಮೆಲೆ ಬೀಸಿ ಬಂತು ತೆಂಕಣ
ಗಾಳಿ ದೂರವೆಲ್ಲೋ ಕೇಳಿಬಂತು ಹಾಡು
ಮಾವಿನೆಳೆಚಿಗುರಿನಲಿ ಚಿಮ್ಮಿ, ಪಯಣಿಗನೆಂದ
''ಇದಕೆ ಜೋಳದ ಪಾಳಿಯಿಲ್ಲ ನೋಡು''

ಜೇನು ಸವಿದನು ನೀರು ಕುಡಿದು ಮೈಯೊಡ್ಡಿದನು
ತುಸು ಹೊತ್ತು ತಂಬೆಲರ ನೆರಳಿಗೆಂದು
ಎದ್ದು ಕುದುರೆಗೆ ಥಡಿಯ ಹಾಕಿ ಅಣಿಗೊಳಿಸಿದನು
ಮತ್ತೆ ದೂರದ ತನ್ನ ಪಯಣಕೆಂದು

''ಹೋಗಿ ಬರುವೆನು ತಾಯಿ'' ಎಂದು ಕವಚವ ತೊಟ್ಟು
ಖಡ್ಗವನು ಬಿಗಿದಿಟ್ಟ ಟೊಂಕದಲ್ಲಿ
ಹೆಂಗಸೆಂದಳು, ''ಆಯ್ತು ಹೋಗಿ ಬನ್ನಿರಿ ಮತ್ತೆ
ಬಂದಾಗ ಬರಬೇಕು ನೀವು ಇಲ್ಲಿ''

''ಮರೆತುಬಿಟ್ಟೆನು ನಿಮ್ಮ ಹೆಸರು ಕೇಳಲು, ನೀವು
ನಡೆವ ದಾರಿಗೆ ಇರಲಿ ಶುಭದ ನೆರಳು
ಬಿರಿದ ಮಲ್ಲಿಗೆ ಕಂಡು, ಕೋಗಿಲೆಯ ದನಿ ಕೇಳಿ
ತುಂಬಿಬಂದಿತ್ತೇಕೆ ಕಣ್ಣು, ಕೊರಳು?''

ಯೋಧ ನುಡಿದನು ''ತಾಯಿ ಮತ್ತೆ ನೆನಪಿಗೆ ಬಂತು
ನನ್ನೂರು ಬನವಾಸಿ ನನಗೆ ಇಂದು
ಯೋಧ ನಡೆಯುವ ದಾರಿ ಕವಿಯ ದಾರಿಯು ಕೂಡ
ನನ್ನನ್ನು ಕರೆಯುವರು ಪಂಪನೆಂದು''

---

**ಶಬ್ದಗಳ ಅರ್ಥ:**

ಯೋಧ – ವೀರ; ಹೆಳಲು – ನೆರಳು; ಚೊಂಬು – ತಂಬಿಗೆ; ಬಿರಿದ – ಅರಳಿದ; ತೆಂಕಣ – ದಕ್ಷಿಣ

**ಕೃತಿ. 1) I)** **ಉದಾಹರಣೆಯಲ್ಲಿ ತೋರಿಸಿದಂತೆ ಈ ಪದ್ಯದಲ್ಲಿ ಕಂಡು ಬರುವ ಚಿಕ್ಕ ಸಾಲುಗಳ ಅಂತ್ಯಪ್ರಾಸಗಳನ್ನು ಬರೆಯಿರಿ.**
**ಉದಾ – ಕಂಡು ಕೊಂಡು ........................**

**II)** **ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.**

1) ಯೋಧ ಜನರನ್ನು ಕಂಡು ಏನು ಕೇಳಿದನು?
2) ಹೊರಡಲು ಅಣಿಯಾದ ಯೋಧ ಹೋಗಿಬರುವೆನು ತಾಯಿ ಎಂದಾಗ ಆಕೆ ಏನು ಹೇಳಿದಳು?
3) ಪಂಪ ತನ್ನ ಪರಿಚಯವನ್ನು ಹೇಗೆ ಹೇಳಿಕೊಂಡನು?

**ಕೃತಿ. 2) 'ಅ' ಗುಂಪಿನಲ್ಲಿರುವ ಶಬ್ದಗಳಿಗೆ 'ಬ' ಗುಂಪಿನ ಪದಗಳೊಂದಿಗೆ ಸರಿ ಹೊಂದಿಸಿ ಬರೆಯಿರಿ.**

| 'ಅ' | 'ಬ' |
|---|---|
| 1) ಬಟ್ಟಲಿನ ತುಂಬ | ಅ) ಬನವಾಸಿ |
| 2) ಚೊಂಬಿನಲಿ | ಬ) ಜೇನು |
| 3) ಖಡ್ಗ | ಕ) ನೀರು |
| 4) ಪಂಪ | ಡ) ಕವಚ |

**ಕೃತಿ. 3) ಮಹಾಕವಿ ಪಂಪನ ಬಗ್ಗೆ ನಿಮ್ಮ ಶಿಕ್ಷಕರಿಂದ ಮಾಹಿತಿ ಪಡೆದು 8-10 ಸಾಲುಗಳಲ್ಲಿ ಬರೆಯಿರಿ.**

**ಕೃತಿ. 4) ಕೆಳಗಿನ ಪದಗಳ ಸಮಾಸ ವಿಗ್ರಹಿಸಿ ಹೆಸರಿಸಿರಿ.**

ಉರಿಬಿಸಿಲು, ಕೆಂಪು ಹುಡಿ, ಕುದುರೆಯಿಳಿದು, ಸಿಹಿಜೇನು

**ಕೃತಿ. 5) ಯೋಧ ಮತ್ತು ಹೆಂಗಸಿನ ಮಧ್ಯೆ ನಡೆದ ಸಂವಾದವನ್ನು ಸಂಭಾಷಣೆಯ ರೂಪದಲ್ಲಿ ಬರೆಯಿರಿ.**

**ಕೃತಿ. 6) ಅಚ್ಚ ಕನ್ನಡದ ದಿಕ್ಕುಗಳನ್ನು ನಿಮ್ಮ ಶಿಕ್ಷಕರಿಂದ ಕೇಳಿ ಬರೆಯಿರಿ.**

**ಕೃತಿ. 7) I)** **ಈ ಪದ್ಯದ ಮೊದಲಿನ ಎರಡು ಪದ್ಯಗಳ ಭಾವಾನುವಾದವನ್ನು ಬರೆಯಿರಿ.**

**II)** **ಈ ಪದ್ಯದ ಭಾವಾರ್ಥವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.**

FVNBSE

# 3. ಸಿದ್ಧಾರ್ಥನ ರಾಜ್ಯ ಪರಿತ್ಯಾಗ

– ವಿ. ಸೀ.

**ಕವಿ ಪರಿಚಯ :** **‘ ಸಿದ್ಧಾರ್ಥನ ರಾಜ್ಯ ಪರಿತ್ಯಾಗ’** ಈ ಕವನವನ್ನು ವೀ. ಸೀತಾರಾಮಯ್ಯನವರು ರಚಿಸಿದ ‘ಗೀತೆಗಳು’ ಎಂಬ ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

ವೀ. ಸೀ. ಯವರು ಅರ್ಥ ಶಾಸ್ತ್ರಪ್ರವೀಣರು, ವೃತ್ತಿಯಿಂದ ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಾಪಕರಾಗಿದ್ದರು. ಉತ್ತಮ ಕವಿಗಳಾಗಿರುವಂತೆ ಒಳ್ಳೆಯ ಗದ್ಯಗಳನ್ನು ಇವರು ರಚಿಸಿದ್ದಾರೆ. ಅಂತತೆ,ಗೀತೆಗಳು, ದೀಪಗಳು, ನೆಳಲು ಬೆಳಕು, ದ್ರಾಕ್ಷಿ ದಾಳಿಂಬೆ, ಹೆಜ್ಜೆ ಪಾಡು, ಇತ್ಯಾದಿ ಕವನ ಸಂಕಲನಗಳನ್ನು, ಕರ್ನಾಟಕ ಕಾದಂಬರಿ, ಅಶ್ವತ್ಥಾಮನ್, ಕಾರಂತರು, ಅಭಿಜ್ಞಾನ ಶಾಕುಂತಲ, ಮಹಾಕವಿ ಪಂಪ ಮೊದಲಾದ ವಿಮರ್ಶಾ ಕೃತಿಗಳನ್ನು ಹಣ ಪ್ರಪಂಚ, ಭಾರತ ರಾಜ್ಯಾಂಗ ರಚನೆ, ವ್ಯವಹಾರ ಇತ್ಯಾದಿ ಶಾಸ್ತ್ರ ಗ್ರಂಥಗಳನ್ನು ರಚಿಸಿದ ಇವರಿಗೆ ಕೇಂದ್ರ ಸರ್ಕಾರದ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರಕಿದೆ.

[ಸೌಜನ್ಯ, ಸಜ್ಜನಿಕೆಗಳು ಮಾನವನನ್ನು ಯೋಗ್ಯನನ್ನಾಗಿ ಮಾಡಿದರೆ ತ್ಯಾಗ, ಬಲಿದಾನಗಳು ಅವನನ್ನು ದೇವತ್ವಕ್ಕೆ ಏರಿಸುತ್ತವೆ. ಅದರಲ್ಲಿಯೂ ಭೋಗ, ಭಾಗ್ಯಗಳ ಸರಸಿಯಲ್ಲಿ ಮುಳುಗಿ ತೇಲುತ್ತಿರುವವನು ಲೋಕೋದ್ಧಾರದ ಹೆಗ್ಗುರಿಯಿಂದ ಗೃಹತ್ಯಾಗ ಮಾಡುವುದೆಂದರೆ ಅದು ತ್ಯಾಗದ ಪರಮಾವಧಿಯೇ ಸರಿ. ‘ಸಿದ್ಧಾರ್ಥನ ರಾಜ್ಯ ಪರಿತ್ಯಾಗ’ವು ಇದಕ್ಕೊಂದು ಉತ್ತಮ ಉದಾಹರಣೆಯಾಗಿದೆ.]



ನಡೆ ಹಯವೆ ನಡೆ ಮುಂದಕೀಗ !
ಸಾರವಿಲ್ಲದ ಸುತ ಸತೀ ವ್ಯಾಮೋಹದಿಂ ದೂರ
ಸಾರಿ ಹೋಗುವ ನಾವು ಮುಂದಕೀಗ – ||

ನಡುರಾತ್ರಿ ಮೀರಿಹುದು ಜಗ ನಿದ್ರಿಸುತ್ತಿಹುದು
ಗಡಿನಾಡುಗಳ ದಾಟಿ ದೂರ ಸಾಗುವೆವು
ತಡೆಯುವಿನ್ನೆನ್ನನೀ ರಾಜ್ಯ ಸುಖದಾಸೆಗಳು
ನಿಡು ಕಾಡುದಾರಿಗಳ ಹಿಡಿದು ನಡೆ ಹೋಗು.

ತಿರುತಿರುಗಿ ನನ್ನ ಮೊಗ ನೋಡದಿರು ಬೇಡದಿರು
ಕೊರಗದಿರು ಮರುಗದಿರು ನನ್ನ ಸಲುವಾಗಿ
ಅರಿವಿನಾ ಮಾರ್ಗವಿದು ಪರದ ಸನ್ಮಾರ್ಗವಿದು
ಧರೆಯ ದುಃಖದ ಭಾರವಿಳಿಪ ಮಾರ್ಗವಿದು.

ಜನರು ಸುಳಿಯದಗಮ್ಯ ಕಾನನವ ಸೇರುತ್ತೆ
ವನದ ಏಕಾಂತದಲಿ ಶಾಂತಿಯಾರ್ಜಿಸುವ,
ಮನವನೊಮ್ಮನೆಯಲ್ಲಿ ನಿಲಿಸಿ ಜಾನಿಸುತಲ್ಲಿ
ಗಹನ ತತ್ತ್ವರಹಸ್ಯವರಿಯುತಾನಂದಿಸುವ.

ವಿಶ್ವಹೃದಯವನಿರಿದ ವಿಷಬಾಣವೀ ವಿಧಿಯ –
ಸಹ್ಯ ಹಿಂಸೆಯನಿತ್ತು ಪೀಡಿಸುತ್ತಿಹುದು;
ಸ್ವಸ್ಥಚಿತ್ತದೊಳಿನ್ನು ಎಂತು ತಾಳುವುದಿದನು
ಅಶ್ವವರ ತಡವೇಕೆ ದೃಢವ ಕಂಡಿರುವೆ.


ಆರಿದ ಬಳಕೀಯೆನ್ನ ಧರೆಗೆ ಹಿಂದಿರುಗುತ್ತೆ
ನರರ್ಗೆ ಬಳಲಿದವರ್ಗೆ ದಾರಿ ತೋರುವೆನು;
ಉರಿಯುತಿದೆ ಈ ಒಡಲು ನೆನೆನೆನೆದು ಹಿಂಸೆಗಳ
ದಯೆಽಯ ಹಿಂಸೆಯ ಧರ್ಮವಿವರ ಹೇಳುವೆನು.

---

**ಕೃತಿ. 1)** **ಪದ್ಯವನ್ನು ಓದಿಕೊಂಡು ಕೆಳಗೆ ಕೊಟ್ಟಿರುವ ಕೃತಿಗಳನ್ನು ಸೂಚನೆಗೆನುಗುಣವಾಗಿ ಪೂರ್ಣ ಮಾಡಿರಿ.**

**I)** **ಕೆಳಗಿನ ಜಾಲವನ್ನು ಪೂರ್ಣಗೊಳಿಸಿರಿ.**


**'ಹಯ' ಶಬ್ದಕ್ಕೆ ಅರ್ಥಕೊಡುವ ಎರಡು ಶಬ್ದಗಳನ್ನು ಬರೆಯಿರಿ.**




**II)** **ಕೆಳಗಿನ ಜಾಲವನ್ನು ತುಂಬಿರಿ**

**ಉದಾಹರಣೆಯಲ್ಲಿ ತೋರಿಸಿದಂತೆ ಪದ್ಯದಲ್ಲಿ ಬಂದಿರುವ ನಾಲ್ಕು ಶಬ್ದಗಳನ್ನು ಬರೆಯಿರಿ.**

**ಉದಾಹರಣೆ - ಮರೆಯದಿರು**



**III)** **ಸಿದ್ಧಾರ್ಥನ ಇನ್ನೆರಡು ಹೆಸರುಗಳು ಬರೆಯಿರಿ.**



**ಕೃತಿ. 2)**

**I)** **ಸಿದ್ಧಾರ್ಥನ ರಾಜ್ಯ ಪರಿತ್ಯಾಗವನ್ನು ಪದ್ಯದ ಸಾರಾಂಶದ ಜೊತೆ ನಿಮ್ಮ ಅಭಿಪ್ರಾಯಗಳನ್ನು ಸೇರಿಸಿ ಬರೆಯಿರಿ.**

**II)** **''ತ್ಯಾಗ''ದ ಬಗ್ಗೆ ನಿಮ್ಮ ಅನಿಸಿಕೆಯನ್ನು ಏಳೆಂಟು ವಾಕ್ಯಗಳಲ್ಲಿ ಬರೆಯಿರಿ.**

**III)** **ಸಿದ್ಧಾರ್ಥನನ್ನು ತೊಂದರೆ ಪಡಿಸುತ್ತಿದ್ದುದು ಯಾವುದು ?**
**ಅದಕ್ಕಾಗಿ ಅವನು ತಳೆದ ನಿರ್ಧಾರ ಯಾವುದು ?**

**ಕೃತಿ. 3)** **ಕೆಳಗಿನ ಶಬ್ದಗಳಿಗೆ ತತ್ಸಮ - ತದ್ಭವ ಬರೆಯಿರಿ.**

**I)** **ಮೊಗ ..........** **ವಿಧಿ ..........** **ಸುಖ ..........** **ವಿಷ ..........**

II) ಕೆಳಗಿನ ಶಬ್ದ ಚಂಡಿನಿಂದ ಆಯ್ದು ಎರಡಕ್ಷರಗಳಿಂದ ಕೂಡಿ ನಾಲ್ಕು ಅರ್ಥಪೂರ್ಣ ಶಬ್ದ ತಯಾರಿಸಿರಿ.

ಸ, ವಿ
ಜ ಡಿ ಗ ಭಾ
ಡು, ಶ್ವ, ರ
ಕಾ, ದಾ, ಅ
ರ, ಮ

**ಕೃತಿ. 4)**

ಅ) ಕೆಳಗಿನ ಸುಳಿವುಗಳಿಗೆ ಹೊಂದುವ ಸರಿಯಾದ ಅಕ್ಷರಗಳನ್ನು ಖಾಲಿ ಚೌಕೋನಗಳಲ್ಲಿ ತುಂಬಿರಿ.

I) ಅರ್ಧರಾತ್ರಿ

| | | | |
|---|---|---|---|
| | | | ತ್ರಿ |

II) ಟಾಂಗಾ ನಡೆಸಲು ಬಳಸುವ ಪ್ರಾಣಿ

| | | |
|---|---|---|
| | ದು | |

III) ಪ್ರಪಂಚಕ್ಕೆ ಹೀಗೂ ಕರೆಯುವರು

| | |
|---|---|
| | ಶ್ವ |

IV) ಅರಣ್ಯದ ಇನ್ನೊಂದು ಹೆಸರು

| | | |
|---|---|---|
| ಕಾ | | |

ಬ) 'ಶಾಂತಿ' ಮಾನವನ ಬದುಕಿನಲ್ಲಿ ಅವಶ್ಯಕ ಅದನ್ನು ಪಡೆಯಲು ನೀವು ಅನುಸರಿಸುವ ವಿಚಾರಗಳನ್ನು 6ರಿಂದ 8 ಸಾಲುಗಳಲ್ಲಿ ಬರೆಯಿರಿ.

FVH4U2

# 4. ವಚನಗಳು

**– ಅಕ್ಕಮಹಾದೇವಿ – ಮುಕ್ತಾಯಕ್ಕ**

**ಕವಿ ಪರಿಚಯ : ಅಕ್ಕಮಹಾದೇವಿ –** ಶಿಕಾರಿಪುರ ತಾಲೂಕು ಉಡುತಡಿ ಈಕೆಯ ಜನ್ಮ ಸ್ಥಳ. ಪ್ರಸಿದ್ಧ ವಚನಕಾರ್ತಿ ಹಾಗೂ ಕವಯಿತ್ರಿ. ಅಕ್ಕಮಹಾದೇವಿಯ ಅಂಕಿತ ಮತ್ತು ಆರಾಧ್ಯದೈವ **ಚೆನ್ನ ಮಲ್ಲಿಕಾರ್ಜುನ. ಯೋಗಾಂಗ, ವಿಧಿ, ಸೃಷ್ಟಿವಚನ ಮತ್ತು ಮಂತ್ರ, ಗೋಪ್ಯ** – ಲಘುಕೃತಿಗಳನ್ನು ರಚಿಸಿರುವ ಈಕೆಯ 354 ವಚನಗಳು ಲಭ್ಯವಿವೆ. ಅಕ್ಕನ ವಚನಗಳು ಭಾವಗೀತಾತ್ಮಕವಾಗಿದ್ದು, ಅನುಭಾವದ ಸಂಗಮವೆನಿಸಿವೆ. ಶರಣಸತಿ–ಲಿಂಗಪತಿ ಭಾವ, ಅನುಭಾವ ತೀವ್ರತೆಯ ಉತ್ಕರ್ಷದಿಂದಾಗಿ ಆಕೆಯ ವ್ಯಕ್ತಿತ್ವದ ಭಾಷ್ಯದಂತೆ ವಚನಗಳು ರೂಪಿತವಾಗಿವೆ.

**ಮುಕ್ತಾಯಕ್ಕ :** (ಕ್ರಿ.ಶ. ಸುಮಾರು 1160) ಅನುಭಾವಿ ಶಿವಶರಣೆ ಮುಕ್ತಾಯಕ್ಕನ ಜನ್ಮಸ್ಥಳ ಲಕ್ಕುಂಡಿ. ಅಜಗಣ್ಣ ಅಂಕಿತವಿರುವ ಈಕೆಯ 37 ವಚನಗಳು ದೊರೆತಿವೆ. ಆಧ್ಯಾತ್ಮ ಸಾಧನೆಯ ಗುಪ್ತಭಕ್ತ ಅಜಗಣ್ಣನು ಈಕೆಯ ಸಹೋದರ ಮತ್ತು ಗುರು. ಇವರಿಬ್ಬರ ಅನುಭಾವಿ ನಿಲುವಿಗೆ ಸಂಬಂಧಿಸಿದಂತೆ ಸೂಕ್ಷ್ಮ ಪದರಗಳನ್ನು ಬಿಡಿಸಿ ತೋರುವ ವಚನಗಳಿವು.

ಪ್ರಕೃತಿಯಲ್ಲಿ ಸಹಜವಾಗಿ ವೈವಿಧ್ಯತೆ ಇರುವುದಾದರೂ ಒಂದಾಗಿ ತೋರುವಂತೆ ತನ್ನೊಳಡಗಿದ ಅಂಶಗಳಿಂದ ಭೇದವೆನಿಸದ ಭಾವಸಂಗಮವಿದೆ. ಪರಿ ಬೇರೆಯಾದರೂ ಅನುಭಾವ–ಯೋಗ ಒಂದೇ ಎಂಬ ತತ್ವ ಪ್ರಕೃತ ವಚನಗಳಲ್ಲಿ ಸುವ್ಯಕ್ತವಾಗಿದೆ.

ಹನ್ನೆರಡನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ಭಕ್ತಿ ಪಂಥವು ಸ್ಫುಟವಾಗಿ ಪ್ರಾಜ್ವಲ್ಯವಾಯಿತು. ಇಂಥ ಭಕ್ತರಿಗೆ ಸಾಮಾನ್ಯವಾಗಿ ಶಿವಶರಣರೆಂದು ಹೆಸರು. ಇವರಿಗೆ ಅನುಭಾವಿಗಳೆಂದೂ ಹೆಸರು, ಏಕೆಂದರೆ ಮನಕ್ಕೆ ಮನಃಸಾಕ್ಷಿಯಾಗಿ ನಡೆದ ಈ ಜನ ಅನುಭಾವಕ್ಕೆ ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಟ್ಟರು. ಇವರು ತಮ್ಮ ಅನುಭಾವದಲ್ಲಿ ನುಡಿದ ಮಾತುಗಳೇ 'ವಚನ'ಗಳೆಂದು ಹೆಸರಾದವು.

---

ಅಯ್ಯಾ ನೀ ಕೇಳಿದರೆ ಕೇಳು, ಕೇಳದಿರ್ದೊಡೆ
ಮಾಣು. ನಾ ನಿನ್ನ ಹಾಡಿದಲ್ಲದೆ ಸೈರಿಸಲಾರೆನಯ್ಯಾ !
ಅಯ್ಯಾ ನೀ ಒಲಿದರೆ ಒಲಿ, ಒಲಿಯದಿರ್ದೊಡೆ ಮಾಣು.
ನಾನಿನ್ನ ಪೂಜಿಸಿದಲ್ಲದೆ ಸೈರಿಸಲಾರೆನಯ್ಯಾ ! ಅಯ್ಯಾ,
ನೀ ಮೆಚ್ಚಿದರೆ ಮೆಚ್ಚು ಮೆಚ್ಚದಿರ್ದೊಡೆ ಮಾಣು.
ನಾ ನಿನ್ನನಪ್ಪಿದಲ್ಲದೆ ಸೈರಿಸಲಾರೆನಯ್ಯಾ ! ಅಯ್ಯ ನೀನು
ನೋಡಿದೊಡೆ ನೋಡು, ನೋಡದಿರ್ದೊಡೆ ಮಾಣು. ನಾನಿನ್ನ
ನೋಡಿ ಹಿಗ್ಗಿ ಹಾರೈಸಿದಲ್ಲದೆ ಸೈರಿಸಲಾರೆನಯ್ಯಾ !
ಚೆನ್ನ ಮಲ್ಲಿಕಾರ್ಜುನಯ್ಯಾ ನಾ ನಿಮ್ಮ ಪೂಜಿಸಿ
ಹರುಷದೊಳೋಲಾಡುವೆನಯ್ಯಾ.



ಈಳೆ ನಿಂಬೆ ಮಾವು ಮಾದಲಕ್ಕೆ
ಹುಳಿನೀರನೆರೆದವರಾರಯ್ಯಾ ?
ಕಬ್ಬು ಬಾಳೆ ಹಲಸು ನಾರಿವಾಳಕ್ಕೆ
ಸಿಹಿನೀರನೆರೆದವರಾರಯ್ಯಾ ?
ಕಳವೆ ರಾಜಾನ್ನ ಶಾಲ್ಯನ್ನಕ್ಕೆ
ಓಗರದ ಉದಕವನೆರೆದವರಾರಯ್ಯಾ ?

ಮರುಗ ಮಲ್ಲಿಗೆ ಪಚ್ಚೆ ಮುಡಿವಾಳಕ್ಕೆ
ಪರಿಮಳದುದಕವನೆರೆದವರಾರಯ್ಯಾ?
ಇಂತೀ ಜಲವು ಒಂದೆ, ನೆಲನು ಒಂದೆ, ಆಕಾಶವೂ ಒಂದೆ.
ಜಲವು ಹಲವು ದ್ರವ್ಯಂಗಳ ಕೂಡಿ
ತನ್ನ ಪರಿಬೇರಾಗಿಹ ಹಾಗೆ,
ಎನ್ನದೇವ ಚನ್ನಮಲ್ಲಿಕಾರ್ಜುನಯ್ಯನು
ಹಲವು ಜಗಂಗಳ ಕೂಡಿಕೊಂಡಿರ್ದಡೇನು?
ತನ್ನ ಪರಿ ಬೇರೆ

– ಅಕ್ಕಮಹಾದೇವಿ

ಅಲರೊಳಡಗಿದ ಪರಿಮಳದಂತೆ,
ಪತಂಗದೊಳಡಗಿದ ಅನಲನಂತೆ,
ಶಶಿಯೊಳಡಗಿದ ಷೋಡಶಕಳೆಯಂತೆ,
ಉಲುಹಡಗಿದ ವಾಯುವಿನಂತೆ,
ಸಿಡಿಲೊಳಡಗಿದ ಗಾತ್ರದ ತೇಜದಂತೆ,
ಇರಬೇಕಯ್ಯಾ ಯೋಗ, ಎನ್ನ ಅಜಗಣ್ಣ ತಂದೆಯಂತೆ
ನುಡಿಯಲು ಬಾರದು ಕೆಟ್ಟನುಡಿಗಳ.
ನಡೆಯಲು ಬಾರದು ಕೆಟ್ಟನಡೆಗಳ.
ನುಡಿದಡೇನು ನುಡಿಯದಿರ್ದಡೇನು?
ಹಿಡಿದವ್ರತ ಬಿಡದಿರಲು, ಅದೇ ಮಹಾಜ್ಞಾನದಾಚರಣೆ
ಎಂಬೆನು ಅಜಗಣ್ಣ ತಂದೆ.

– ಮುಕ್ತಾಯಕ್ಕ

## ಶಬ್ದಗಳ ಅರ್ಥ:

ಈಳೆ – ಕಿತ್ತಳೆ ; ನಾರಿವಾಳ – (ನಾರಿಕೇಳ) ತೆಂಗಿನಕಾಯಿ ; ಕಳವೆ – ಭತ್ತ, ನೆಲ್ಲು ; ಓಗರ – ಪರಿಮಳ ; ಉದಕ – ನೀರು ; ಮರುಗ – ಸುವಾಸನಾಯುಕ್ತ ಎಲೆಯುಳ್ಳ ಸಸ್ಯ ; ಪಚ್ಚೆ – ಸುವಾಸನಾಭರಿತ ಕದಿರನ್ನು ಹೊಂದಿರುವ ಸಸ್ಯ, ಪಚ್ಚೆಕದಿರು ಎಂಬ ಹೆಸರೂ ಇದೆ ; ಮುಡಿವಾಳ – ಲಾವಂಚ, ಸುಗಂಧಭರಿತ ಬೇರುಳ್ಳ ಸಸ್ಯ ; ದ್ರವ್ಯ – ಸಂಪತ್ತು ; ಪರಿ – ಬಗೆ, ರೀತಿ ; ಜಗ – ಜಗತ್ತು, ವಿಶ್ವ ; ಅಲರ್ – ಹೂವು ; ಅಡಗು – ಅವಿತುಕೊಳ್ಳು ; ಪತಂಗ – ಸೂರ್ಯ ; ಅನಲ – ಬೆಂಕಿ ; ಶಶಿ – ಚಂದ್ರ ; ಷೋಡಶ – ಹದಿನಾರು ; ಕಳೆ – ಕಾಂತಿ ; ಉಲುಹು – ಧ್ವನಿ ; ವಾಯು – ಗಾಳಿ ; ತೇಜ – ಕಾಂತಿ ; ಯೋಗ – ಧ್ಯಾನ ; ವ್ರತ – ನಿಯಮ ; ಆಚರಣೆ – ಬಳಕೆ


## ವಿಶೇಷ ವಿಚಾರ

**ರಾಜಾನ್ನ :** ಅನ್ನ ಮಾಡಲು ಉಪಯೋಗಿಸುವ ನಾನಾ ಜಾತಿಯ ಅಕ್ಕಿಗಳಲ್ಲಿ 'ರಾಜಾನ್ನ' ಎಂಬುದೂ ಒಂದು. ಈ ಅಕ್ಕಿಯ ಅನ್ನ ಸುಗಂಧಭರಿತವಾಗಿರುತ್ತದೆ. ಕೆಲವು ಕಡೆ ಇದನ್ನು 'ಗಂಧ ಸಾಲೆ' ಎಂತಲೂ ಕೆಲವು ಕಡೆ ಸಣ್ಣಕ್ಕಿ' ಎಂತಲೂ ಕರೆಯುತ್ತಾರೆ.

**ಶಾಲ್ಯನ್ನ :** ಶಾಲಿ – ಭತ್ತ ; 'ಶಾಲಿ' ಎಂಬ ಭತ್ತದ ಅಕ್ಕಿಯಿಂದ ಮಾಡಿದ ಅನ್ನ. ಇದು ಕೂಡಾ ಪರಿಮಳ ಯುಕ್ತವಾದ ಅಕ್ಕಿ. ಹಾಲಿನಲ್ಲಿ ಅಕ್ಕಿಯನ್ನು ಬೇಯಿಸಿ ಮಾಡಿದ ಭಕ್ಷ್ಯಕ್ಕೂ 'ಶಾಲ್ಯನ್ನ' ಎಂದು ಕೆಲವು ಕಡೆ ಹೇಳುತ್ತಾರೆ.

**ಮುಡಿವಾಳ :** ಲಾವಂಚ/ಲಾವಂಚ ಎಂಬ ಹೆಸರಿನಿಂದ ಕರೆಯಲ್ಪಡುವ ಸಪೂರವಾದ ಹಾಗೂ ದಟ್ಟವಾದ, ಪರಿಮಳ ಯುಕ್ತ ಬೇರುಳ್ಳ ಸಸ್ಯ. ಇದರ ಬೇರಿನಿಂದ ಬೀಸಣಿಕೆ ಮಾಡುತ್ತಾರೆ. ಮಣ್ಣಿನ ಗಡಿಗೆಯಲ್ಲಿ ನೀರು ತುಂಬಿಸಿ ಅದರಲ್ಲಿ ಈ ಬೇರನ್ನು ಮುಳುಗಿಸಿಟ್ಟರೆ ಆ ನೀರು ತಂಪಾಗಿಯೂ ಪರಿಮಳಯುಕ್ತವಾಗಿಯೂ ಇರುತ್ತದೆ. ಬೇಸಿಗೆಯ ಧಗೆಯನ್ನು ನಿವಾರಿಸಲು ಅತ್ಯಂತ ಉಪಕಾರಿ..

**ಕೃತಿ. 1) ಕೆಳಗಿನ ಪದಬಂಧವನ್ನು ಪೂರ್ಣಗೊಳಿಸಿರಿ.**




**ಅ) ಮೇಲಿಂದ ಕೆಳಗೆ**

1) ಕನ್ನಡದ ಪ್ರಸಿದ್ಧ ವಚನಕಾರ್ತಿ

**ಬ) ಎಡದಿಂದ ಬಲಕ್ಕೆ**

2) ಮುಕ್ತಾಯಕ್ಕನ ಅಂಕಿತವಿದು

3) ಲಕ್ಕುಂಡಿಯಲ್ಲಿ ಜನಿಸಿದ ವಚನಕಾರ್ತಿ

4) ಅಕ್ಕನ ವಚನದ ಚನ್ನ ..... ಇದರ ಮುಂದಿನ ಅಂಕಿತನಾಮ ಪೂರ್ಣಗೊಳಿಸಿರಿ.

**ಕೃತಿ. 2) ಅ) ಕೆಳಗಿನ ಶಬ್ದ ಸಮೂಹಕ್ಕೆ ಒಂದು ಶಬ್ದ ಬರೆಯಿರಿ.**

1) ವಚನಗಳನ್ನು ರಚಿಸುವವನು – ಶಬ್ದ = ................................


2) ಹಗಲಿನಲ್ಲಿ ಜಗತ್ತಿಗೆ ಬೆಳಕನ್ನು ನೀಡುವವನು – ಶಬ್ದ = ................................

**ಬ) ಪಠ್ಯಾಧಾರಿತ ಪದ್ಯವನ್ನು ಓದಿಕೊಂಡು ಕೆಳಗಿನ ಕೃತಿಗಳನ್ನು ಬಿಡಿಸಿರಿ.**

**II) ದೇವರನ್ನು ಪೂಜಿಸಿಯೇ ತೀರುವೆನೆಂಬ ಅಕ್ಕಮಹಾದೇವಿಯ ನಿರ್ಧಾರವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.**

III) ನೀವು ದೇವರ ಪೂಜೆಯನ್ನು ಯಾವ ರೀತಿಯಾಗಿ ಮಾಡುವಿರಿ ಎಂಬುದನ್ನು 8ರಿಂದ 10 ವಾಕ್ಯಗಳಲ್ಲಿ ನಿಮ್ಮ ಮಾತುಗಳಲ್ಲಿ ಬರೆಯಿರಿ.

**ಕೃತಿ. 3)** I) ವಚನದಲ್ಲಿ ಬಂದಿರುವ ಮರಗಳನ್ನು ಜಾಲಾಕೃತಿಯಲ್ಲಿ ತುಂಬಿರಿ.



II) ನಿಮಗೆ ಗೊತ್ತಿರುವ ಯಾವುದಾದರೊಂದು ಮರದ ಉಪಯೋಗಗಳನ್ನು ಬರೆಯಿರಿ ಬೇಕಾದ ನಾಲ್ಕು ಅಂಶಗಳು

1 )

2 )


3 )

4 )

**ಕೃತಿ. 4)** I) ಮುಕ್ತಾಯಕ್ಕನ ವಚನದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

II) ನಿಮಗೆ ಗೊತ್ತಿರುವ ಯಾವುದಾದರೊಬ್ಬ ವಚನಕಾರರ ವಚನವನ್ನು ಬರೆಯಿರಿ.


III) ನಿಮ್ಮ ಸುತ್ತ-ಮುತ್ತಲಿನ ಪರಿಸರದಲ್ಲಿ ಕಂಡು ಬಂದಿರುವ ಹೂವುಗಳ ಪಟ್ಟಿ ತಯಾರಿಸಿರಿ ಬೇಕಾದ 10 ಹೂವುಗಳು



**ಕೃತಿ. 4)** I) ಕೆಳಗಿನ ಶಬ್ದಗಳ ವಿರುದ್ಧ ಪದಗಳನ್ನು ಬರೆಯಿರಿ.

| | | | |
|---|---|---|---|
| ಸಿಹಿ x | ಸುಖ x | ಮೇಲೆ x | ಹಿಗ್ಗು x |

II) ಕೊಟ್ಟ ಜಾಲಾಕೃತಿಯನ್ನು ಪೂರ್ಣಗೊಳಿಸಿರಿ.





III) ವಾಕ್ಯ ಪ್ರಯೋಗ ಬದಲಿಸು - ಅಕ್ಕಮಹಾದೇವಿಯಿಂದ ವಚನಗಳು ರಚಿಸಲ್ಪಟ್ಟವು.

# 5. ಮಂಕುತಿಮ್ಮನ ಕಗ್ಗ

– ಡಿ. ವಿ. ಜಿ.

**ಕವಿ ಪರಿಚಯ : ಡಿ.ವಿ.ಜಿ.** ‘ಡಿ.ವಿ.ಜಿ.’ – ಇದು ಡಿ.ವಿ. ಗುಂಡಪ್ಪನವರ ಸಂಕ್ಷಿಪ್ತ ನಾಮ. ಇವರು ನವೋದಯ ಪರಂಪರೆಯ ಕವಿಗಳಲ್ಲಿ ಅಗ್ರಗಣ್ಯರು. ಆಲೋಚಕ ಸಾಹಿತ್ಯ ಇವರ ಇನ್ನೊಂದು ಮುಖ. ಸಾಹಿತ್ಯ ಮೀಮಾಂಸೆ, ರಾಜ್ಯ ಶಾಸ್ತ್ರ, ಪತ್ರಿಕೋದ್ಯಮ ಮುಂತಾದ ವಿವಿಧ ರಂಗಗಳಲ್ಲಿ ಇವರ ವಿಚಾರ ಪ್ರೌಢಿಮೆ ಹಾಸು ಹೊಕ್ಕಾಗಿದೆ. ‘ವಸಂತ ಕುಸುಮಾಂಜಲಿ’, ‘ನಿವೇದನ’, ‘ಉಮರನ ಒಸಗೆ’, ‘ಅಂತಃಪುರಗೀತೆ’ – ಇವು ಕೆಲವು ಇವರ ಕಾವ್ಯಕೃತಿಗಳು; ‘ಮಂಕುತಿಮ್ಮನ ಕಗ್ಗ’ ಬಹುಮಹತ್ವದ ಕೃತಿ. ‘ಜೀವನ ಸೌಂದರ್ಯ’, ಮತ್ತು ‘ಸಾಹಿತ್ಯ ಶಕ್ತಿ’ ಮುಂತಾದವು ಸಾಹಿತ್ಯ ಮೀಮಾಂಸೆಗೆ ಸಂಬಂಧಿಸಿವೆ. ಗೋಪಾಲ ಕೃಷ್ಣ ಗೋಖಲೆ’ ಚರಿತ್ರ ಗ್ರಂಥ; ‘ಶ್ರೀಮದ್ ಭಗವದ್ಗೀತಾ ತಾತ್ಪರ್ಯ’ ಪ್ರೌಢ ವೈಚಾರಿಕ ಗ್ರಂಥಗಳಾಗಿವೆ.

ಈ ಪದ್ಯ ಭಾಗವನ್ನು ‘‘ಮಂಕುತಿಮ್ಮನ ಕಗ್ಗ’’ ಎಂಬ ಕೃತಿಯಿಂದ ಆಯ್ದು ಕೊಳ್ಳಲಾಗಿದೆ.



ಒಂದೆ ಗಗನವ ಕಾಣುತೊಂದೆ ನೆಲವನು ತುಳಿಯು ।
ತೊಂದೆ ಧಾನ್ಯವನುಣ್ಣುತೊಂದೆ ನೀರ್ಗುಡಿದು ॥
ಒಂದೆ ಗಾಳಿಯನುಸಿರ್ವ ನರಜಾತಿಯೊಳಗೆಂತು ।
ಬಂದುದೀ ವೈಷಮ್ಯ ? – ಮಂಕುತಿಮ್ಮ ॥

ಪುಸ್ತಕದಿ ದೊರೆತರಿವು ಮಸ್ತಕದಿ ತಳೆದ ಮಣಿ ।
ಚಿತ್ತದೊಳು ಬೆಳದರಿವು ತರು ತಳೆದ ಪುಷ್ಪ ॥
ವಸ್ತು ಸಾಕ್ಷಾತ್ಕಾರವಂತರೀಕ್ಷಣೆಯಿಂದ ।
ಶಾಸ್ತ್ರಿತನದಿಂದಲ್ಲ – ಮಂಕುತಿಮ್ಮ ॥

ನಾಟಕವ ನೋಡು ಬ್ರಹ್ಮಾಂಡರಂಗಸ್ಥಲದಿ ।
ಕೋಟಿ ನಟರಾಂತಿಹರು ಚಿತ್ರಪಾತ್ರಗಳ ॥
ಆಟಕ್ಕೆ ಕಥೆಯಿಲ್ಲ ಮೊದಲಿಲ್ಲ ಕಡೆಯಿಲ್ಲ ।
ನೋಟಕರು ಮಾಟಕರೆ – ಮಂಕುತಿಮ್ಮ ॥

ಬಿದ್ದುದನು ನಿಲ್ಲಿಪುದೆ ನರನ ಮೃತ್ಯುಂಜಯತೆ ।
ಶುದ್ಧಿಸದೆ ನಭ ಧರೆಯ ಮರಮರಳಿ ಮಳೆಯಿಂ? ॥
ಗದ್ದೆಕೊಯ್ಲಾಗೆ ಮಗುಳ್ದದು ಬೆಳೆಯ ಕುಡದಿಹುದೆ? ।
ಬಿದ್ದ ಮನೆಯನು ಕಟ್ಟೊ – ಮಂಕುತಿಮ್ಮ ॥

ಇಳೆಯಿಂದ ಮೊಳಕೆಯೊಗೆವಂದು ತಮಟೆಗಳಿಲ್ಲ ।
ಫಲ ಮಾಗುವಂದು ತುತ್ತೂರಿ ದನಿಯಿಲ್ಲ ॥
ಬೆಳಕೀವ ಸೂರ್ಯಚಂದ್ರರದೊಂದು ಸದ್ದಿಲ್ಲ ।
ಹೊಲಿ ನಿನ್ನ ತುಟಿಗಳನು – ಮಂಕುತಿಮ್ಮ ॥

ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು ।
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ ॥
ಬೆಲ್ಲ ಸಕ್ಕರೆಯಾಗು ದೀನದುರ್ಬಲರಿಂಗೆ ।
ಎಲ್ಲ ರೊಳಗೊಂದಾಗು – ಮಂಕುತಿಮ್ಮ ॥

---

**ಕೃತಿ. 1) I) ಪದ್ಯದಲ್ಲಿ ಬಂದಿರುವ ಎರಡು ಆದಿ ಪ್ರಾಸದ ಮತ್ತು ಎರಡು ಅಂತ್ಯ ಪ್ರಾಸದ ಶಬ್ದಗಳನ್ನು ಆಯ್ದು ಬರೆಯಿರಿ.**

| | |
|---|---|
| | |
| | |

**II) ''ಅ'' ಗುಂಪಿನಲ್ಲಿರುವ ಶಬ್ದಗಳಿಗೆ ಸರಿಯಾದ ಅರ್ಥ ಹೊಂದುವ ''ಬ'' ಗುಂಪಿನ ಪದಗಳೊಂದಿಗೆ ಹೊಂದಿಸಿ ಬರೆಯಿರಿ.**

| 'ಅ' ಗುಂಪು | 'ಬ' ಗುಂಪು |
|---|---|
| 1) ವೈಷಮ್ಯ | ಅ) ಆಕಾಶ |
| 2) ಸಾಕ್ಷಾತ್ಕಾರ | ಬ) ಚಿಗುರು |
| 3) ನಭ | ಕ) ದ್ವೇಷ |
| 4) ಮೊಳಕೆ | ಡ) ಪ್ರತ್ಯಕ್ಷತೆ |

**ಕೃತಿ. 2) I) ಪದ್ಯವನ್ನು ಓದಿಕೊಂಡು ಕೊಟ್ಟ ಕೃತಿಗಳನ್ನು ಬಿಡಿಸಿರಿ.**

1) ನಾಟಕವನ್ನು ಎಲ್ಲಿ ನೋಡು ಎನ್ನುವರು ? ............................
2) ಎಂಥ ಮನೆಯನ್ನು ಕಟ್ಟು ಎಂದು ಹೇಳುವರು ? ..................
3) ಬೆಟ್ಟ ಮತ್ತು ಮನೆಗೆ ಏನಾಗಲು ತಿಳಿಸುವರು ..............
4) ಪ್ರಸ್ತುತ ಪದ್ಯದ ರಚನಾಕಾರರು ಯಾರು ? ........................

**IIಬ) ಕೆಳಗಿನ ಸಾಲುಗಳ ತಾತ್ಪರ್ಯವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.**

**ಹಳೆಯ ಭಕ್ತಿಶ್ರದ್ಧೆಯಳಿಸಿ ಹೋಗಿವೆ ಮಾಸಿ**

**ಬೆಲ್ಲ ಸಕ್ಕರೆಯಾಗು ದೀನದುರ್ಬಲರಂಗೆ**

**ಕೃತಿ. 3) I) ಪ್ರಸ್ತುತ ಪದ್ಯದ ಭಾವಾರ್ಥವನ್ನು 8-10 ವಾಕ್ಯಗಳಲ್ಲಿ ಬರೆಯಿರಿ.**

**II) ಕೆಳಗಿನ ಸುಳಿವುಗಳಿಗೆ ಹೊಂದುವ ಸರಿಯಾದ ಅಕ್ಷರಗಳನ್ನು ಖಾಲಿ ಚೌಕೋನಗಳಲ್ಲಿ ತುಂಬಿರಿ.**

| ಸುಳಿವು | | | |
|---|---|---|---|
| 1) ಆಕಾಶದ ಸಮಾನಾರ್ಥಕ ಶಬ್ದ | | ಗ | |
| 2) ಪ್ರತ್ಯಕ್ಷತೆಗೆ ಇನ್ನೊಂದು ಅರ್ಥ | | ರ್ಶ | |

3) ಗುಡಿಯಲ್ಲಿ ಭಾರಿಸುವ ಒಂದು ಪ್ರಕಾರದ ವಾದ್ಯ

4) ಮನೆಯಲ್ಲಿ ಈ ಹೂವಿನಂತಾಗು

| | | |
|---|---|---|
| ತ | | |
| | ಲ್ಲಿ | |

**III) ''ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ'' ಈ ಶಬ್ದಗಳಿಂದ ಒಂದೇ ಅಕ್ಷರ ಆಯ್ದು ಚೌಕೋನಗಳಲ್ಲಿ ತುಂಬು ಎರಡು ಅಕ್ಷರಗಳ ಅರ್ಥಪೂರ್ಣ ಶಬ್ದ ತಯಾರಿಸಿರಿ.**

i) ಕ

ii) ಗ

iii) ಮ

iv) ಸು

**ಕೃತಿ. 4) ಈ ಪದ್ಯದಿಂದ ನೀವು ತಿಳಿದುಕೊಂಡಿರುವ ಮೌಲ್ಯಗಳನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.**

FHEVXC

# 6. ಸರ್ವಜ್ಞನ ವಚನಗಳು

**- ಸರ್ವಜ್ಞ**

**ಕವಿ ಪರಿಚಯ :** ಸರ್ವಜ್ಞ ಕವಿಯು ಕರ್ನಾಟಕದಲ್ಲಿ ಪಂಡಿತ ಪಾಮರರಿಗೆಲ್ಲ ಸುಪರಿಚಿತನು. ವೇದಾಂತ - ವ್ಯವಹಾರಗಳಲ್ಲಿ ಅತ್ಯಂತ ಪ್ರವೀಣನಾದ ಈ ಕವಿಯು ''ಸರ್ವರೊಳೊಂದೊಂದು ನುಡಿ ಕಲಿತು ವಿದ್ಯೆಯ ಪರ್ವತವೆ ಆದನು'', ಇವನ ತಂದೆ ಮಾಸೂರಿನ ಬಸವರಸ ಸರ್ವಜ್ಞ ಕವಿಯು ಖಂಡಿತವಾದಿ. ಅಸತ್ಯ, ಅನ್ಯಾಯ, ಅಧರ್ಮ, ಅನೀತಿಗಳನ್ನು ವಿರೋಧಿಸಿ ಹೇಳುವ ಸರ್ವಜ್ಞನ ನುಡಿಗಳು ಕಿಡಿಗಳಂತಿವೆ. ಸರ್ವಜ್ಞ ಕವಿಯ ವಚನ ಸಂಗ್ರಹದಿಂದ ಆಯ್ದ ನುಡಿಮುತ್ತುಗಳನ್ನು ಕೆಳಗೆ ಕೊಡಲಾಗಿದೆ.

ಭೃಂಗ ಕೇಳಲು ಚಂದ, ಹಂಗ ನೋಡಲು ಚಂದ
ಭಂಗ ವಿಲ್ಲದಾ ನುಡಿ ಚಂದ ಸಜ್ಜನರ ।
ಸಂಗವೇ ಚಂದ ಸರ್ವಜ್ಞ ।। 1


ಕ್ಷಣ ಮಾತ್ರವಾದರೂ ಗುಣಿಗಳೊಡನಾಡುವುದು ।
ಗುಣ ಹೀನರುಗಳ ಒಡನಾಡೆ ದುಃಖ ತತ್ ।
ಕ್ಷಣದಲ್ಲಿ ಬಹುದು ಸರ್ವಜ್ಞ ।। 2

ಸತ್ಯರಾ ಒಡನಾಟ ಮತ್ತೆ ಸಕ್ಕರೆ ತುಪ್ಪ ।
ಸತ್ಯವಿಲ್ಲದರ ಒಡನಾಟ ಬೇಲಿಯಾ ।
ಓತಿಯಂತಿಹುದು ಸರ್ವಜ್ಞ ।। 3

ನಿಂದೆಯನು ನುಡಿದರೂ ಸಂದ ಸಜ್ಜನ ಲೇಸು ।
ಹೊಂದಿ ಸಾಸಿರವ ಕೊಡುತಿರ್ಪ ದುರ್ಜನರ ।
ದಂದುಗವೆ ಬೇಡ ಸರ್ವಜ್ಞ ।। 4

ಹಂದಿ ಹದ್ದಾದವರು ಇಂದು ಧರಣಿಗೆ ಬಂದು
ಮಂದ ಮತಿಯಿಂದ ಜರೆದರೂ ಸುಜನರ್ಗೆ
ಕುಂದು ಬಂದಪುದೆ ಸರ್ವಜ್ಞ ।। 5

ತ್ರೈಕರಣ ಶುದ್ಧ ರೊಳು ಪ್ರಕೃತಿ ವಿರಹಿತರೊಳು
ಮುಕುತಿಗೆಳೆಯಿಸುವ ಜನರೊಳು ಆವಗಂ ।
ಸಖತನವೆ ಲೇಸು ಸರ್ವಜ್ಞ ।। 6



**ಶಬ್ದಗಳ ಅರ್ಥ:**

ಭೃಂಗ - ದುಂಬಿ ; ಭಂಗ - ಸುಳ್ಳು , ಸಂದ - ಮಡಿದ, ಹೊಂದಿ - ಜೊತೆಗಿದ್ದು, ದಂದುಗ - ತಂಟೆ, ಸಹವಾಸ, ತೊಂದರೆ ಜರೆ - ನಿಂದಿಸು, ತ್ರೈಕರಣ - ತ್ರಿಕರಣ

**ಕೃತಿ. 1) ಅನುಕ್ರಮವಾಗಿ ಬರೆಯಿರಿ.**

1) ನಿಂದೆಯನು ನುಡಿದರೂ ಸಂದ ಸಜ್ಜನ ಲೇಸು

2) ಗುಣ ಹೀನರುಗಳ ಒಡನಾಡೆ ದುಃಖ

3) ಭೃಂಗ ಕೇಳಲು ಚಂದ, ಹಂಗ ನೋಡಲು ಚಂದ

4) ಸತ್ಯರಾ ಒಡನಾಟ ಮತ್ತೆ ಸಕ್ಕರೆ ತುಪ್ಪ

**ಕೃತಿ. 2) ಯೋಗ್ಯ ಪರ್ಯಾಯವನ್ನು ಆರಿಸಿ ಬಿಟ್ಟಸ್ಥಳ ತುಂಬಿರಿ.**

(ಸತ್ಯ, ದುರ್ಜನರ, ಮತಿ, ನೀತಿ, ರೀತಿ, ಸಜ್ಜನರ)


1) ಭಂಗ ವಿಲ್ಲದಾ ನುಡಿ ಚಂದ ........... ಸಂಗವೇ ಚಂದ

2) ................ ವಿಲ್ಲದರ ಒಡನಾಟ ಬೇಲಿಯಾ ಓತಿಯಂತಿಹುದು.

3) ಸಾಸಿರುವ ಕೊಡು ತಿರ್ಪ .............. ದಂದುಗವೆ ಬೇಡ.

4) ಮಂದ ...................... ಯಿಂದ ಜರೆದರೂ ಸುಜನರ್ಗೆ ಕುಂದು ಬಂದಪುದೆ.

**ಕೃತಿ. 3) ಪ್ರಾಸ ಪದಗಳನ್ನು ಬರೆಯಿರಿ.**




**ಕೃತಿ. 4) ಸರ್ವಜ್ಞನ ವಚನಗಳಲ್ಲಿಯ ತಿರುಳು ನಿಮ್ಮ ಮಾತಿನಲ್ಲಿ ವಿವರಿಸಿರಿ.**

**ಕೃತಿ. 5) ವಿರುದ್ಧಾರ್ಥಕ ಪದ ಬರೆಯಿರಿ.**

1) ಸಜ್ಜನ x ....................

2) ನಿಂದೆ x ....................

3) ದುಃಖ x ...................

4) ಸುಗುಣ x .................

**ಕೃತಿ. 6) ಸರ್ವಜ್ಞನ ಯಾವುದಾದರೂ ಒಂದೆರಡು ತ್ರಿಪದಿಗಳಿಗೆ ಪ್ರಸ್ತಾರ ಹಾಕಿ ಗಣ ವಿಂಗಡಿಸಿರಿ.**

# 7. ದೇವರ ದೇವನಾರು?

**– ಸರ್ಪಭೂಷಣ ಶಿವಯೋಗಿ**

**ಕವಿ ಪರಿಚಯ :** ಸರ್ಪಭೂಷಣ ಶಿವಯೋಗಿಗಳ ''ಕೈವಲ್ಯ ಕಲ್ಪವಲ್ಲರಿ'' ಎಂಬ ಭಕ್ತಿಗೀತ ಸಂಕಲನ ಗ್ರಂಥದಿಂದ ಈ ಗೀತವನ್ನು ತೆಗೆದುಕೊಳ್ಳಲಾಗಿದೆ. ಗೀತಗಳ ಕೊನೆಯಲ್ಲಿ ''ಶ್ರೀಗುರುಸಿದ್ಧ'' ಎಂದು ಕವಿಯ ಅಂಕಿತನಾಮ ಇರುವುದು. ಇವರು ಕಳೆದ ಶತಮಾನದಲ್ಲಿ ಬದುಕಿ ಇದ್ದವರು.

ಮಾನವನು ದೇವರು ಹೇಗಾಗಬಲ್ಲನೆಂಬುದನ್ನು ಕವಿಗಳು ಈ ಗೀತದಲ್ಲಿ ಚೆನ್ನಾಗಿ ವಿವರಿಸಿ ಹೇಳಿದ್ದಾರೆ. ಇವರ ಗೀತೆಗಳು ಅರ್ಥಪೂರ್ಣ, ಭಾವಭರಿತ, ಹಾಗೂ ಪರಿಶುದ್ಧವಾಗಿರುವುದು.



ಮರವೆಯಂಶವನೆಲ್ಲ ತೊರೆದು ಬಿಟ್ಟಿರುವನೆ । ದೇವರ ದೇವ ।
ಪರಮಾರ್ಥದರಿವಿನಾಚರಣೆಯ ಮೆರೆವನೆ ।। ದೇವರ ದೇವ ।। ಪಲ್ಲ ।।

ಪರನಿಂದೆಗಳನಾಡಿ ಆಲಿಸದಿರುವನೆ ।। ದೇವರ ।।
ಪರಸತಿಯರ ಮಾತೆಯೆಂದು ಭಾವಿಸುವನೆ ।। ದೇವರ ।।
ಪರರಾರನಾದರು ತನ್ನಂತೆ ನೋಳ್ಪನೆ ।। ದೇವರ ।।
ಪರರ ಸುಗುಣವ ಪರ್ವತದಂತೆ ಬೆಳೆಪನೆ ।। ದೇವರ ।। ।। 1 ।।

ಇತರರರ್ಥಕೆ ನೇತ್ರ – ಕರ – ಮನವಿಡದನೆ ।। ದೇವರ ।।
ಹಿತವನೆ ಸರ್ವಪ್ರಾಣಿಗಳಿಗೆ ಬಯಪನೆ ।। ದೇವರ ।।
ಸ್ತುತಿ–ನಿಂದೆಗಳಿಗೆ ಹಿಗ್ಗದೆ ತಗ್ಗದಿರುವನೆ ।। ದೇವರ ।।
ಶ್ರುತಿಯೊಳಘದ ವಾರ್ತೆಗೇಳಲಳುಕುವನೆ ।। ದೇವರ ।। ।। 2 ।।

ಸಿರಿಯಿಂದೆ ತರುವಿನಂತನ್ಯರ ತಣಿಪನೆ ।। ದೇವರ ।।
ಸಿರಿ–ದಾರಿದ್ರ್ಯಗಳನು ಸಮವಾಗಿ ಕಾಣ್ಬನೆ ।। ದೇವರ ।।
ಮರಣಾಂತವಾದರನೃತವಾಡದಿರುವನೆ ।। ದೇವರ ।।
ಮೊರೆಹೊಕ್ಕವರ ತನುವಿತ್ತಾದೊಡುಳಿಪನೆ ।। ದೇವರ ।। ।। 3 ।।

ತನು–ಮನೋವಚನಗಳೊಂದಾಗಿ ನಡೆವನೆ ।। ದೇವರ ।।
ಕನಕವ ಕಲ್–ಮಣ್ಣಿಗೆಣೆಯಾಗಿ ಕಾಣ್ಬನೆ ।। ದೇವರ ।।
ತನಗಪಕರಿಸಿದರ್ಗುಪಕಾರವೆಣಿಪನೆ ।। ದೇವರ ।।
ಧನದಂತೆ ಗುರುದೇವತೆಯೊಳಾಸ್ಥೆಯುಳ್ಳನೆ ।। ದೇವರ ।। ।। 4 ।।

ಬರಿಯ ಸಂಸಾರರಂಜನೆಗೆ ಮೋಹಿಸದನೆ ।। ದೇವರ ।।
ಮೆರೆವನುಭವಶಾಸ್ತ್ರಸುಖಗೋಷ್ಠಿ ಗೊಲಿವನೆ ।। ದೇವರ ।।
ಪರಮಾತ್ಮನಿರವನು ತಾನೆಂದು ತಿಳಿವನೆ ।। ದೇವರ ।।
ಗುರುಸಿದ್ಧನಿಂದೆ ಸುಸ್ಥಿರಮುಕ್ತಿಪಡೆವನೆ ।। ದೇವರ ।। ।। 5 ।।

## ಶಬ್ದಗಳ ಅರ್ಥ:

ತೊರೆ – ಬಿಡು; ಪರಮಾರ್ಥ – ಅತ್ಯಂತ ಶ್ರೇಷ್ಠವಾದ ಸತ್ಯ; ನೋಳ್ಪನೆ – ನೋಡುವನೆ; ನೇತ್ರ – ಕಣ್ಣು; ಮುಕ್ತಿ – ಮೋಕ್ಷ

**ಪಠ್ಯಾಧಾರಿತ ಪದ್ಯವನ್ನು ಓದಿಕೊಂಡು ಕೊಟ್ಟ ಕೃತಿಗಳನ್ನು ಬಿಡಿಸು.**

**ಕೃತಿ. 1) I) ಕೆಳಗಿನ ಜಾಲವನ್ನು ಪೂರ್ಣಗೊಳಿಸಿರಿ.**

''ದೇವರ ದೇವನಾರು'' ಎನ್ನುವದಕ್ಕೆ ಪದ್ಯದ ಆಧಾರದಿಂದ ನಾಲ್ಕು ಅಂಶಗಳನ್ನು ಬರೆಯಿರಿ.

**II) ಮಾನವನು ದೇವರು ಹೇಗಾಗಬಲ್ಲನೆಂಬುದನ್ನು ಕವಿಗಳು ಈ ಪದ್ಯದಲ್ಲಿ ಹೇಗೆ ವಿವರಿಸಿದ್ದಾರೆ?**

**ಕೃತಿ. 2) ನೀವು ಒಳ್ಳೆಯವರಾಗಲು ನಿಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವ ಗುಣಗಳನ್ನು 8ರಿಂದ 10 ಸಾಲುಗಳಲ್ಲಿ ಬರೆಯಿರಿ.**

**ಕೃತಿ. 3) I) ಕೆಳಗಿನ ಶಬ್ದಗಳಿಗೆ ಸಮಾನಾರ್ಥಕ ಶಬ್ದಗಳನ್ನು ಬರೆಯಿರಿ.**

ಕನಕ

ನೇತ್ರ

**II) ಕೆಳಗಿನ ಶಬ್ದಗಳ ಸಮಾಸ ವಿಗ್ರಹಿಸಿ ಹೆಸರಿಸಿರಿ.**

ಸ್ತುತಿ ನಿಂದೆ, ಮುಕ್ತಿಪಡೆ, ಪಂಚೇಂದ್ರಿಯ.

**III) ಪತ್ರ ಲೇಖನ**

ಪ್ರತಿಯೊಂದು ಕೃತಿಗೆ 100ರಿಂದ 120 ಶಬ್ದಗಳಲ್ಲಿ ಬೇಕಾದ ಒಂದು ವಿಷಯದ ಬಗ್ಗೆ ಪತ್ರ ಬರೆಯಿರಿ.

**ಧ್ವನಿವರ್ಧಕದ ಹಾವಳಿ**

- ಊರಲ್ಲಿ ಹೆಚ್ಚುತ್ತಿರುವ ಕರ್ಕಶಧ್ವನಿ
- ಪ್ರತಿಯೊಬ್ಬರ ಸಹಕಾರ
- ಧ್ವನಿ ಪ್ರಮಾಣ ಕಡಿಮೆ ಮಾಡುವಿಕೆ
- ಶಬ್ದ ಮಾಲಿನ್ಯತೆ
- ಆರೋಗ್ಯದ ಮೇಲೆ ಪರಿಣಾಮ
- ಧ್ವನಿವರ್ಧಕ ಹಾವಳಿಗೆ ಉಪಕ್ರಮಗಳು

ನಿಮ್ಮ ಊರಲ್ಲಿ ಹೆಚ್ಚುತ್ತಿರುವ ಧ್ವನಿವರ್ಧಕ ಹಾವಳಿಯ ಬಗ್ಗೆ ಜಾಗ್ರತಗೊಳಿಸುತ್ತಾ ಸಹೋದರನಿಗೆ ಪತ್ರ ಬರೆಯಿರಿ.

ನಿಮ್ಮ ಊರಲ್ಲಿ ಹೆಚ್ಚುತ್ತಿರುವ ಧ್ವನಿವರ್ಧಕದ ಹಾವಳಿ ಕಡಿಮೆಗೊಳಿಸುವಂತೆ ಸಂಬಂಧಿಸಿದ ಅಧಿಕಾರಿಗೆ ಅರ್ಜಿ ಬರೆಯಿರಿ.


# 8. ಕಪ್ಪಡಿ ಸಂಗಮನ ಸಾನಿಧ್ಯದಲ್ಲಿ

**– ಹರಿಹರ**

**ಕವಿ ಪರಿಚಯ :** ಮಹಾಕವಿ ಹರಿಹರ ಕ್ರಾಂತಿ ಕವಿಯಾದ ಈತನು ಪ್ರಾರಂಭದಲ್ಲಿ ಹೊಯ್ಸಳ ಚಕ್ರವರ್ತಿ ನರಸಿಂಹ ಬಲ್ಲಾಳನಲ್ಲಿ ಕರಣಿಕನಾಗಿದ್ದನೆಂದು ತಿಳಿದು ಬರುತ್ತದೆ. ಮುಂದೆ ಹಂಪೆಗೆ ಬಂದು ಪಂಪಾವಿರುಪಾಕ್ಷನ ಸಾನಿಧ್ಯದಲ್ಲಿಯೇ ತನ್ನ ಜೀವನವನ್ನು ಸವೆಸಿದನು, 'ಗಿರಿಜಾ ಕಲ್ಯಾಣ, ಪಂಪಾಶತಕ, ಮುಡಿಗೆಯಷ್ಟಕ, ಹರಿಹರ ಮಹತ್ವ ಹಾಗೂ ಅರವತ್ತ ಮೂರು ಪುರಾತನರ ರಗಳೆಗಳು ಎಂಬ ಕಾವ್ಯಗಳನ್ನು ರಚಿಸಿದ್ದಾನೆ.

ಕನ್ನಡ ಸಾಹಿತ್ಯಕ್ಕೆ ಹೊಸ ಹಾದಿಯನ್ನು ಹಾಕಿಕೊಟ್ಟ ಈ ಕವಿ 'ರಗಳೆ' ಎಂಬ ಪದ್ಯ ಪ್ರಕಾರವನ್ನು ಪರಿಚಯಿಸಿದನು. ಅಲ್ಲದೆ ಎಲ್ಲ ರಗಳೆಗಳಲ್ಲಿ ಅತಿ ಹೆಚ್ಚು ಕಾವ್ಯಗಳನ್ನು ರಚಿಸಿದ್ದರಿಂದ ಈತನನ್ನು ರಗಳೆಯ ಕವಿ ಎಂದು ಕರೆಯುತ್ತಾರೆ.

ಪ್ರಸ್ತುತ ಈ ರಗಳೆಯಲ್ಲಿ ಕೂಡಲ ಸಂಗಮದಲ್ಲಿದ್ದ ಬಸವಣ್ಣನವರು ಸಂಗಮನಾಥನನ್ನು ಅನುದಿನವೂ ಭಕ್ತಿಯಿಂದ ಪೂಜಿಸುವ ರೀತಿ. ಸೂರ್ಯೋದಯಕ್ಕಿಂತ ಮುಂಚಿತವಾಗಿ ಎದ್ದು ವಿಭೂತಿ ಧಾರಣ ಮಾಡಿ ಸಂಗಮನಾಥನಿಗೆ ನಮಸ್ಕರಿಸಿ ಪೂಜೆಗೆ ಬಳಸುವ ಪವಿತ್ರ ಜಲ ಹಾಗೂ ಹೂಗಳನ್ನು ತರುವುದಕ್ಕಾಗಿ ಕೋಲನ್ನು ಹೆಗಲ ಮೇಲೆ ಹೊತ್ತು ಒಂದು ತುದಿಗೆ ಹೂ ಬುಟ್ಟಿ ಇನ್ನೊಂದಕ್ಕೆ ನೀರಿನ ಬಿಂದಿಗೆಯನ್ನು ಕಟ್ಟಿಕೊಂಡು ಹೂದೋಟಕ್ಕೆ ಹೋಗಿ ಗಾಳಿಗೆ ಅಳುಗಾಡದ, ದುಂಬಿ ಮುಟ್ಟದ, ಸೂರ್ಯನ ಕಿರಣಗಳು ಸ್ಪರ್ಶಿಸದ, ಅತ್ಯಂತ ಪವಿತ್ರ ಹೂ ವೈವಿಧ್ಯಮಯವಾದ ಹೂಗಳನ್ನು ತಂದು ಪೂಜಿಸುತ್ತಿದ್ದ ರೀತಿಯನ್ನು ಇಲ್ಲಿ ಬಣ್ಣಿಸಲಾಗಿದೆ.



ಇಂತು ಕಪ್ಪಡಿಸಂಗಮದೊಳಿರ್ದು ರಾಗದಿಂ
ಸಂತತಂ ಶಶಿಧರನನರ್ಚಿಪುದ್ಯೋಗದಿಂ ।
ಬಸವಂ ಪ್ರಭಾತ ಸಮಯಕ್ಕೆ ಮುನ್ನವೆ ಎದ್ದು
ಒಸೆದು ಭಸಿತೋದ್ಧೂಳನಂ ಮಾಡುತಂ ಬಾಳ್ದು ।
ಸಂಗಂಗೆ ಸಾಷ್ಟಾಂಗದಿಂದಲ್ಲಿ ಪೊಡಮಟ್ಟು
ಲಿಂಗದೀಶಂಗೆ ಭಯಭಕ್ತಿಯಂ ಮುಂದಿಟ್ಟು ।
ತಳ್ಕೈಸಿ ಮುಂಡಾಡಿ ಪುಳಕಿಸುತೆ ಕಂಪಿಸುತೆ
ಬೀಳ್ಕೊಂಡನಕ್ಕರಿಂ ಲಾಲಿಸುತ್ತಾಲಿಸುತೆ ।
ಬಂದಗ್ಘವಣಿಯ ಕಂಬಿಗೆ ನಲಿದು ಮೈಯಿಕ್ಕಿ
ನಿಂದೆತ್ತಿ ಸಂಗ ಶರಣೆನುತೆ ಹೆಗಲೊಳಗಿಕ್ಕಿ । ॥ 1 ॥

ತುದಿಕಂಬಿಯೊಳು ಕರಂಡಗೆಯನೊಲಿದಳವಡಿಸಿ
ಸದಮಳಂ ನಡೆದನಭವನನೊಳಗೊಡಂಬಡಿಸಿ ।
ನಡೆತರುತೆ ದೂರದೊಳು ಪೂದೋಟಮಂ ಕಂಡು
ಪೊಡಮಟ್ಟ ಕುಣಿಕುಣಿದು ಸಂತಸಮನೆಡೆಗೊಂಡು ।
ಪರಿಮಳಂ ತೀಡದಡೆ ಕಡೆಗೆ ಸಂಗಂಗೆನುತೆ
ಚರಿತದಿಂ ಮುಖವಾಸಮಂ ಸುತ್ತಿ ರಂಜಿಸುತೆ ।
ತೋಂಟಮಂ ಪೊಕ್ಕು ಕಂಬಿಯನೊಳ್ಪಿತದೊಳಿರಿಸಿ
ಎಂಟುಮಡಿ ಹಿಗ್ಗಿ ಹೊರೆಯೇರುತಂ ಸಡಗರಿಸಿ ।
ಅಳಿಯೆರಗದನಿಲನಲುಗದ ರವಿಕರಂ ಪುಗದ
ಸುಳಿಗೊಂಡು ದಳವೇರಿ ಹಸುರಳಿದು ಬೆಳುಪುಳಿದ । ॥ 2 ॥

ಸುರಚಿರಮೆನಿಪ್ಪ ಮೀಸಲ ಮೊಗ್ಗೆಯಂ ಕೊಂಡು
ಇರವಂತಿಯೊಳ್ ಮೆರೆವ ಬಿರಿಮುಗುಳ್ಗಳಂ ಕೊಂಡು ।
ಸೊಂಪಿನಿಂ ಕಂಪಿಡುವ ಸಂಪಗೆಗಳಂ ಕೊಂಡು ।
ಹೊಂಪೆಸೆವ ಹೊಂಗೇದಗೆಯ ಹೂಗಳಂ ಕೊಂಡು ।
ಅದೆ ಮಲ್ಲಿಕಾಕುಟ್ಮಲಂ ಸಂಗಗೆಂದೆನುತೆ
ಅದೆ ಮಾಲತೀವಿತತಿ ಸಂಪಗೆಯು ನಿಮಗೆನುತೆ ।
ಜಾದಿಯರಳಂ ಕೊಂಡು ಮಲ್ಲಿಗೆಗಳಂ ಕೊಂಡು
ಸೋದಿಸಿದ ಪರಿಮಳದ ಪಡ್ಡಳಿಗಳಂ ಕೊಂಡು ।
ಮರುಗದೆಲೆಯಂ ಕೊಂಡು ಸುರಹೊನ್ನೆಯಂ ಕೊಂಡು
ಸುರಸಿರುಹಮಂ ಕೊಂಡು ಸೇವಂತಿಯಂ ಕೊಂಡು । ॥ 3 ॥

ಬದುಕಿದೆಂ ಬದುಕಿದೆನೆನುತ್ತೆ ನದಿಗೈತಂದು
ಸದಮಳಶಿವೈಕ್ಯಚಿತ್ತಂ ಹರುಷದಿಂ ನಿಂದು ।
ಸೋದಿಸಿದ ಶೀತೋದಕಂಗಳಂ ತೀವುತಂ
ಆದರಂ ಮಿಗೆ ಸಪುರದಿಂದ ಬಾಸಣಿಸುತಂ ।
ಸಹಜಸುಮ್ಮಾನಿ ಸುಖದಿಂದಂ ಬರುತ್ತಿರ್ದ
ಇಹಪರದ ಪುಣ್ಯಪುರುಷಂ ನಡೆದು ಬರುತಿರ್ದ ।
ಅತ್ತಿತ್ತ ಚಲಿಸದಚಲಂ ನಡೆದು ಬರುತಿರ್ದ
ಉತ್ತಮೋತ್ತಮ ಭಕ್ತಿಯುಕ್ತನೆಳ್ತರುತಿರ್ದ. ॥ 4 ॥

## ಶಬ್ದಗಳ ಅರ್ಥ:

ರಾಗ – ಭಕ್ತಿ, ಭಸಿತೋದ್ಧೂಳನ – ವಿಭೂತಿ ಧಾರಣ, ಪಿಂಗದೀಶ – ಶಿವ, ಅಗ್ಘವಣಿ – ಪವಿತ್ರ ಜಲ, ಕರಂಡಗೆ – ಹೂಬುಟ್ಟಿ, ಪೊಡಮೊಟ್ಟು – ನಮಸ್ಕರಿಸಿ, ಅಳಿ – ದುಂಬಿ, ಪಡ್ಡಳಿ – ಕಣಗಿಲೆ, ಸರಸಿರುಹ – ಕಮಲ, ಸದಮಲ – ಪರಿಶುದ್ಧ, ನಿರ್ಮಲ

**ಕೃತಿ. 1) ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1) ಬಸವಣ್ಣನವರು ಸಂಗಮನಾಥನಿಗೆ ಹೇಗೆ ನಮಸ್ಕರಿಸಿದರು?
2) ಕರಂಡಗೆಯನ್ನು ಎಲ್ಲಿ ಕಟ್ಟಿದರು?
3) ಮೀಸಲ ಮೊಗ್ಗೆ ಎಂದರೆ ಯಾವವು?
4) ಬಸವಣ್ಣನವರನ್ನು ಯಾವ ಪುರುಷನಿಗೆ ಹೋಲಿಸಲಾಗಿದೆ?

**ಕೃತಿ. 2) I) ಈ ಪದ್ಯದಲ್ಲಿ ಬಂದಿರುವ ಆರು ಅಂತ್ಯ ಪ್ರಾಸಯುಕ್ತ ಪದಗಳನ್ನು ಬರೆಯಿರಿ.**


**II) ಈ ಪದ್ಯದಲ್ಲಿಯ ಯಾವುದಾದರು ಎರಡು ಸಾಲುಗಳಿಗೆ ಪ್ರಸ್ತಾರ ಹಾಕಿ ಗಣ ವಿಂಗಡಿಸಿ ಛಂದಸ್ಸನ್ನು ಗುರುತಿಸಿರಿ.**

**ಕೃತಿ. 3) ಕೆಳಗಿನ ಸಾಲುಗಳಲ್ಲಿಯ ಅಲಂಕಾರಗಳನ್ನು ಗುರುತಿಸಿರಿ.**

1) ಇಹಪರದ ಪುಣ್ಯ ಪುರುಷಂ ನಡೆದು ಬರುತಿರ್ದ

2) ಉತ್ತಮೋತ್ತಮ ಭಕ್ತಿಯುಕ್ತ ನೆಳ್ತರುತಿರ್ದ

**ಕೃತಿ. 4) ಈ ಪದ್ಯದಲ್ಲಿ ಬರುವ ಹೂಗಳನ್ನು ಹೆಸರಿಸಿರಿ.**




**ಕೃತಿ. 5) ಕೆಳಗಿನ ಶಬ್ದಗಳ ಸಮಾಸ ವಿಗ್ರಹಿಸಿ ಹೆಸರಿಸಿರಿ.**

ಶಶಿಧರ, ಭಯ ಭಕ್ತಿ, ತುದಿಕಂಬಿ.

**ಕೃತಿ. 6) ಲಲಿತರಗಳೆಯ ಪದ್ಯದ ಸಾಲುಗಳನ್ನು ಬರೆದು ಪ್ರಸ್ತಾರ ಹಾಕಿರಿ.**

# 9. ಎತ್ತಣ ತುರಂಗಮಿದು ?

– ಲಕ್ಷ್ಮೀಶ

**ಕವಿ ಪರಿಚಯ :** ಲಕ್ಷ್ಮೀಶ – ಚಿಕ್ಕಮಗಳೂರು ಜಿಲ್ಲೆಯ ದೇವಪುರ ಅಥವಾ ದೇವನೂರು ಎಂಬ ಗ್ರಾಮದಲ್ಲಿ 16ನೆಯ ಶತಮಾನದಲ್ಲಿ ಜೀವಿಸಿದ್ದನು. ಈತನ ತಂದೆ ಭಾರದ್ವಾಜ ಗೋತ್ರದಲ್ಲಿ ಜನಿಸಿದ 'ಅಣ್ಣಮಾಂಕ' ಎಂಬುವವನು. 'ಜೈಮಿನಿಯೆಂಬ' ಕವಿ ಮೂಲ ಸಂಸ್ಕೃತ ಭಾಷೆಯಲ್ಲಿ ಮಹಾಭಾರತ ಕೃತಿ ಬರೆದಿದ್ದರಿಂದ ಇದಕ್ಕೆ ಜೈಮಿನಿ ಭಾರತ ಎಂದು ಕರೆಯಲಾಗುತ್ತದೆ. ಇದೇ ಕೃತಿಯನ್ನು ಲಕ್ಷ್ಮೀಶನು ಕನ್ನಡ ಭಾಷೆಯಲ್ಲಿ ಬರೆದನು. ಈತನಿಗೆ 'ಕರ್ನಾಟಕ ಕವಿಚೂತನವನ ಚೈತ್ರ'' ಎಂಬ ಬಿರುದು ಇತ್ತು ಈತನನ್ನು 'ನಾದಲೋಲ' ಎಂದೂ ಕರೆಯುತ್ತಾರೆ.

ಪ್ರಸ್ತುತ ಈ ಭಾಗವನ್ನು 'ಜೈಮಿನಿ ಭಾರತ'ದ 20ನೆಯ ಸಂಧಿಯಿಂದ ಆರಿಸಲಾಗಿದೆ. ಶ್ರೀರಾಮ ಚಂದ್ರನ ಅಶ್ವಮೇಧದ ಕುದುರೆ ವಾಲ್ಮೀಕಿಯ ಉಪವನವನ್ನು ಹೊಕ್ಕಿದ್ದು ಲವ ಅದನ್ನು ಕಟ್ಟಿ ಹಾಕಿದ್ದು. ಅದನ್ನು ಬಿಡಿಸಿಕೊಂಡು ಹೋಗಲು ಬಂದ ಭಟರ ಮೇಲೆ ಬಾಣಗಳ ಮಳೆ ಸುರಿಸಿದ್ದನ್ನು ಇಲ್ಲಿ ಹೇಳಲಾಗಿದೆ.

ಬಲ್ಗಯ್ಯ ನೃಪರಂಜಿ ತಡೆಯದೆ ರಘೂದ್ವಹನ ।
ಸೊಲ್ಗೇಳಿ ನಮಿಸಲಿಳೆಯೊಳ್ ಚರಿಸುತಧ್ವರದ ।
ನಲ್ಗುದುರೆ ಬಂದು ವಾಲ್ಮೀಕಿಯ ನಿಜಾಶ್ರಮದ ವಿನಿಯೋಗದುಪವನದೊಳು ।।
ಪುಲ್ಗಳ ಪಸುರ್ಗಳಸಿ ಪೊಕ್ಕೊಡಾ ತೋಟಗಾ ।
ವಲ್ಗೆ ತನ್ನೊಡನಾಡಿಗಳ ಕೂಡಿ ಲೀಲೆ ಮಿಗೆ ।
ಬಿಲ್ಗೊಂಡು ನಡೆತಂದವಂ ಕಂಡನರ್ಚಿತ ಸುವಾಜಿಯಂ ವೀರ ಲವನು ।। 1 ।।



ಎತ್ತಣ ತುರಂಗಮಿದು ಪೊಕ್ಕು ಪೂದೋಟಮಂ ।
ತೊತ್ತಳದುಳಿದುದು ವಾಲ್ಮೀಕಿ ಮುನಿನಾಥನೇ ।
ಪೊತ್ತುಮಾರ್ಪೈವುದೆಂದೆನಗೆ ನೇಮಿಸಿ ಪೋದನಬ್ಧಿಪಂ ಕರೆಸಲಾಗಿ ॥
ಮತ್ತೆ ವರುಣನ ಲೋಕದಿಂ ಬಂದು ಮುಳಿದಪನೆ ।
ನುತ್ತ ಹಯದೆಡೆಗೆ ನಡೆತಂದು ನೋಡಲ್ಕದರ ।
ನೆತ್ತಿಯೊಳ್ ಮೆರೆವ ಪಟ್ಟದ ಲಿಖಿತಮಂ ಕಂಡು ಲವನೋದಿಕೊಳುತಿರ್ದನು ॥ 2 ॥

ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮು ।
ನೋರ್ವನೇ ವೀರನಾತನ ಯಜ್ಞ ತುರಗಮಿದು ।
ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನವನೋಡಿ ॥
ಗರ್ವಮಂ ಬಿಡಿಸದಿರ್ದೊಡೆ ತನ್ನ ಮಾತೆಯಂ ।
ಸರ್ವಜನಮುಂ ಬಂಜೆಯೆನ್ನದಿರ್ದಪುದೆ ತನ ।
ಗುರ್ವ ತೋಳ್ಗಳಿವೇತಕೆಂದು ಸಲೆ ವಾಸಿಯಂ ತೊಟ್ಟು ಲವನುರಿದೆದ್ದನು ॥ 3 ॥

ತೆಗೆದುತ್ತರೀಯಮಂ ಮುರಿದು ಕುದುರೆಯ ಗಳಕೆ ।
ಬಿಗಿದು ಕದಳೀದ್ರುಮಕೆ ಕಟ್ಟಲ್ಕೆ ಮುನಿಸುತರ್ ।
ಮಿಗೆ ನಡುಗಿ ಬೇಡಬೇಡರಸುಗಳ ವಾಜಿಯಂ ಬಿಡು ಬಡಿವರಮ್ಮನೆನಲು ॥
ನಗುತೆ ಪಾರ್ವರ ಮಕ್ಕಳಂಜಿದೊಡೆ ಜಾನಕಿಯ ।
ಮಗನಿದಕೆ ಬೆದರುವನೆ ಪೋಗಿ ನೀವೆಂದು ಲವ – ।
ನಗಡುತನದಿಂದೆ ಬಿಲ್ದಿರುವನೇರಿಸಿ ತೀಡಿ ಜೇಗೈದು ನಿಂದಿರ್ದನು ॥ 4 ॥

ಕುದುರೆಗಾವಲ ಸುಭಟನಿತರೊಳೊದಗಿ ಬಂದು ।
ಕದಳೀದ್ರುಮಕೆ ಕಟ್ಟಿದ ತುರಂಗಮಂ ಕಂಡು ।
ಸದಮಲಬ್ರಹ್ಮಚಾರಿಗಳನಾರ್ಭಟಿಸಿ ವಾಜಿಯನೇಕೆ ಬಿಗಿದಿರೆನಲು ॥
ಬೆದರಿ ನಾವಲ್ಲಿವಂ ಬೇಡ ಬೇಡೆನೆ ಬಂಧಿ – ।
ಸಿದನೆಂದು ಲವನಂ ಕರಾಗ್ರದಿಂ ತೋರಿಸಿದ – ।
ರದಟರೀತಂ ತರಳನರಿಯದೆಸಗಿದನೆಂದು ಬಿಡಹೇಳಿ ಗರ್ಜಿಸಿದರು ॥ 5 ॥

ವಿಕ್ರಮವಿದೇಕೆ ಬಿಡೆನಶ್ವಮಂ ಮೇಣ್ಬಿಡಲು – ।
ಪಕ್ರಮಿಸಿದವರ್ಗಳ ಕರಮನರಿವೆನೆನಲವರ
ತಿಕ್ರಮಿಸಿ ವಾಜಿಯಂ ಬಿಡುವೊಡೈತರಲವರ ಕೈಗಳಂ ಕೋಪದಿಂ ॥
ವಕ್ರಮಿಲ್ಲದೆ ಕೋಲ್ಗಳಿಂದೆಚ್ಚು ಕಡಿದೊಡನೆ ।
ಶಕ್ರನದ್ರಿಯ ಮೇಲೆ ಮಳೆಗರೆವೊಲಾ ಸೈನ್ಯ ।
ಚಕ್ರಮಂ ಮುಸುಗಿದಂ ವೀರ ಲವನಾಕ್ಷಣದೊಳೇನೆಂಬೆನದ್ಭುತವನು ॥ 6 ॥

## ಶಬ್ದಗಳ ಅರ್ಥ :

ಬಲ್ಗಯ್ಯ - ಶೂರ, ಪರಾಕ್ರಮಿ, ಸೊಲ್ಲು - ಮಾತು, ವಾಜಿ - ಕುದುರೆ ಆರೈದು - ರಕ್ಷಿಸು, ಅಬ್ಧಿಪ - ವರುಣ ದೇವ, ವಾಸಿ - ಹಟ, ಉತ್ತರೀಯ - ಹೆಗಲ ಮೇಲೆ ಹಾಕಿಕೊಳ್ಳು ಬಟ್ಟೆ, ಶೆಲ್ಲೆ , ಹಾರ್ವ - ಬ್ರಹ್ಮಣ, ಸದಮಲ - ಪರಿಶುದ್ಧ, ಶಕ್ರ - ಇಂದ್ರ, ಉರ್ವಿ - ಭೂಮಿ ಅಧ್ವರ - ಯಜ್ಞ

**ಕೃತಿ 1) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1) ಯಾರು ಅಶ್ವಮೇಧದ ಕುದುರೆಯನ್ನು ಬಿಟ್ಟಿದ್ದರು ?
2) ಕುದುರೆ ಯಾರ ಉಪವನನ್ನು ಹೊಕ್ಕಿತ್ತು ?
3) ಲವನು ಏನು ಮಾಡಿದನು ?
4) ವಾಲ್ಮೀಕಿಯು ಯಾವ ಲೋಕಕ್ಕೆ ಹೋಗಿದ್ದನು ?

**ಕೃತಿ 2) ಕೆಳಗೆ ಕೊಟ್ಟ ಸಾಲುಗಳ ಹೊಸಗನ್ನಡ ರೂಪವನ್ನು ಪರ್ಯಾಯಗಳಿಂದ ಗುರುತಿಸಿ ಬರೆಯಿರಿ.**

**I) ಎತ್ತಣ ತುರಂಗಮಿದು ಪೊಕ್ಕು ಪೂದೋಟಮಂ**
i) ಯಾವ ಹೂದೋಟ, ಯಾವ ಕುದುರೆ
ii) ಎಲ್ಲಿಯ ಕುದುರೆಯಿದು ಹೂದೋಟದಲ್ಲಿ ಹೊಕ್ಕಿದೆ
iii) ಕುದುರೆ ಕಾಯುವವರು ಯಾರಿಲ್ಲವೆ?


**II) ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ**
1) ಭೂಮಂಡಲದಲ್ಲಿ ಕೌಸಲ್ಯೆಯ ಪುತ್ರ ರಾಮ
2) ರಾಮ ಭೂಮಂಡಲದ ರಾಜ
3) ಕುದುರೆಯ ಒಡೆಯ ರಾಮ

**III) ಕುದುರೆಗಾವಲ ಸುಭಟರನಿತರೊಳೊದಗಿ ಬಂದು**
i) ಕುದುರೆ ಕಾವಲಿನವರು ಇರಲಿಲ್ಲ.
ii) ಕುದುರೆಯನ್ನು ಒಯ್ಯಲು ಯಾರೂ ಬರಲಿಲ್ಲ
iii) ಅಷ್ಟರಲ್ಲಿ ಕುದುರೆಯ ಕಾವಲಿನ ಯೋಧರು ಬಂದರು

**ಕೃತಿ 3) ಕೆಳಗಿನ ಸಾಲುಗಳನ್ನು ಹೊಸಗನ್ನಡಕ್ಕೆ ರೂಪಾಂತರಿಸಿರಿ.**

1) ಮತ್ತೆ ವರುಣ ಲೋಕದಿಂದ ಬಂದು ಮುಳಿದಪನೆ
2) ರಾಮನೋರ್ವನೇ ವೀರನಾತನ ಯಜ್ಞ ತುರಗಮಿದು
3) ಬಿಗಿದು ಕದಳೀದ್ರುಮಕೆ ಕಟ್ಟಲ್ಕೆ
4) ಬೆದರಿ ನಾವಲ್ಲಿವಂ ಬೇಡ ಬೇಡೆನೆ ಬಂಧಿಸಿದ

**ಕೃತಿ 4) ಕುದುರೆಯೆಂಬ ಪದಕ್ಕೆ ಬಳಸಿದ ಪರ್ಯಾಯ ಪದವನ್ನು ಹುಡುಕಿ ಬರೆಯಿರಿ.**




**ಕೃತಿ 5) ಈ ಪದ್ಯದಲ್ಲಿಯ ಯಾವುದಾದರೂ 6 ಸಾಲುಗಳಿಗೆ ಪ್ರಸ್ತಾರ ಹಾಕಿ ಗಣ ವಿಂಗಡಿಸಿ ಛಂದಸ್ಸಿನ ಹೆಸರು ಹೇಳಿರಿ.**

# ಗದ್ಯ ವಿಭಾಗ



# 1. ‘ಬನ್ನಿ ಕೇರಳ ನಾಡಿಗೆ’

- ಕೆ.ಬಿ. ಪ್ರಭುಪ್ರಸಾದ್

**ಲೇಖಕರ ಪರಿಚಯ :** ‘ಬನ್ನಿ ಕೇರಳ ನಾಡಿಗೆ’ ಈ ಗದ್ಯ ಲೇಖನವನ್ನು ಕೆ.ಬಿ. ಪ್ರಭುಪ್ರಸಾದ್ ಅವರು ಬರೆದ ‘ದೇಗುಲಗಳ ದಾರಿಯಲ್ಲಿ’ ಎಂಬ ಪ್ರವಾಸ ಕಥನ ಗ್ರಂಥದಿಂದ ಆಯ್ದು ಕೊಳ್ಳಲಾಗಿದೆ. ಇವರು ತುಮಕೂರಿನ ಪ್ರಥಮ ದರ್ಜೆಯ ಸರಕಾರಿ ಕಾಲೇಜಿನಲ್ಲಿ ಇಂಗ್ಲೀಷ ಅಧ್ಯಾಪಕರಾಗಿದ್ದಾರೆ. ಇವರ ಹಲವು ಭಾವಗೀತೆಗಳು, ದೃಶ್ಯಗಳು, ಪ್ರಬಂಧಗಳು ಕನ್ನಡ ಮಾಸ ಪತ್ರಿಕೆಯಲ್ಲಿ ಪ್ರಕಟ ಗೊಂಡಿವೆ. ‘ಹಾಡೋಣ ಬಾ’ ಕವನ ಸಂಕಲನ ‘ದೇಗುಲಗಳ ದಾರಿಯಲ್ಲಿ’ ಎಂಬ ಕೃತಿಗಳನ್ನು ರಚಿಸಿದ್ದಾರೆ.

[ಪ್ರವಾಸವು ಬದುಕಿನ ಅನುಭವದ ಆಳವನ್ನು, ಹರಹನ್ನು ಹೆಚ್ಚಿಸುತ್ತದೆ. ಆದರೆ ಅನುಭವವು ಸ್ವತಃ ಊರೂರು ಅಲೆದಾಗಲೇ ಉಂಟಾಗುತ್ತದೆಂದು ಹೇಳಲು ಬರುವುದಿಲ್ಲ. ಪ್ರತ್ಯಕ್ಷವಾಗಿ ಪ್ರವಾಸ ಕೈಕೊಂಡವರ ಅನುಭವವನ್ನು ಕೇಳಿ ತಿಳಿದುಕೊಂಡಾಗಲೂ ಅಥವಾ ಓದಿ ಮನನ ಮಾಡಿಕೊಂಡಾಗಲೂ ಆಗುತ್ತದೆ. ಅಂಥವರ ಅನುಭವವನ್ನು ತಮ್ಮದನ್ನಾಗಿ ಮಾಡಿಕೊಳ್ಳಬೇಕೆಂಬ ಹಂಬಲವನ್ನು ಹುಟ್ಟಿಸುವ ಮತ್ತು ಆಮಂತ್ರಣವನ್ನು ನೀಡುವಂತಹದ್ದು ‘ಬನ್ನಿ ಕೇರಳ ನಾಡಿಗೆ’ ಎಂಬ ಪ್ರವಾಸ ಕಥನ.]

ಕನ್ಯಾಕುಮಾರಿಯ ಸೂರ್ಯೋದಯದ ಕನಸು ಕಣ್ಣಲ್ಲಿತ್ತು. ಅದಕ್ಕಾಗಿ ಉತ್ಸಾಹದಿಂದ ಬೇಗ ಎದ್ದೆವು. ಹಿಂದಿನ ದಿನ ನಿರಾಶದಾಯಕವಾಗಿ ಮುಳುಗಿದ್ದ ದಿನಕರ ಉದಯ ಕಾಲದಲ್ಲೂ ಅಂತಹ ಉತ್ತಮವಾದ ಪ್ರದರ್ಶನವನ್ನೇನೂ ತೋರಲಿಲ್ಲ. ಅಸ್ತಮಾನದ ವರ್ಣ ವೈಭವಗಳನ್ನು ತೋರಿಸಲು ಮೋಡಗಳೇ ಇರಲಿಲ್ಲ ಆಗ. ಈಗಲಾದರೊ ಅರುಣೋದಯದ ರಾಜವೈಭವದ ಸೊಬಗನ್ನೆಲ್ಲ ಅಡ್ಡ ನಿಂತಿದ್ದ ಮೋಡಗಳೇ ಮರೆಮಾಡಿ ಬಿಟ್ಟಿದ್ದವು. ಈ ಮೋಡಗಳಿದ್ದರೂ ಕಷ್ಟ. ಇಲ್ಲದಿದ್ದರೂ ಕಷ್ಟ. ಹೀಗಾಗಿ ನಾವು ನೋಡಿದುದು ಅರುಣೋದಯವನ್ನಲ್ಲ, ಸೂರ್ಯೋದಯವನ್ನು. ಕಣ್ಣು ಕುಕ್ಕುವಂತಹ ಪ್ರಕಾಶ ಕಡಲಗಳ ಮೇಲೆ ಥಳಥಳಿಸಿತು. ಮೀನು ಹಿಡಿಯಲು ಹೊರಟ ಬೆಸ್ತರ ದೋಣಿಗಳು ಕ್ರಮೇಣ ಸಣ್ಣವಾಗುತ್ತಾ ಆಗುತ್ತಾ ಬಿಂದುಗಳಂತೆ ದೂರದೂರಕ್ಕೆ ಚಲಿಸತೊಡಗಿದವು.



ನಮ್ಮಲ್ಲಿ ಕೆಲವರು ಸಮುದ್ರಸ್ನಾನ ಮಾಡಿದರು. ಇಲ್ಲಿಯೂ ಸಂಗಮಸ್ನಾನ ಬಹು ಶ್ರೇಷ್ಠವಾದುದು ಎನ್ನುತ್ತಾರೆ. ಕನ್ಯಾಕುಮಾರಿ ದೇವಿಯ ಪ್ರಾತಃಕಾಲದ ಪೂಜೆಗೆ ಸಡಗರದಿಂದ ಹೋದೆವು. ದೇವಿಯನ್ನು ಆಗ ಅಲಂಕರಿಸಿದ್ದ ರೀತಿ ಇನ್ನೂ ಸೊಗಸಾಗಿತ್ತು. ಅಲ್ಲದೆ ಈ ದೇವಾಲಯದಲ್ಲಿರುವ ಪವಿತ್ರ ವಾತಾವರಣದೊಂದಿಗೆ ಏನೊ ಒಂದು ಬಗೆಯ ಆತ್ಮೀಯತೆಯೂ ಬೆರೆತುಕೊಂಡಿದೆ. ಆದ್ದರಿಂದಲೇ ದೇಗುಲಕ್ಕೆ ಹೋದರೆ ಅಲ್ಲೇ ಇದ್ದು ಬಿಡಲು ಬಹಳ ಇಷ್ಟವಾಗುತ್ತದೆ. ದೇವಿಯ ಸುಂದರ ವಿಗ್ರಹವನ್ನು ಮತ್ತೊಮ್ಮೆ ಕಣ್ತುಂಬ ನೋಡಿ, ಮತ್ತೆ ಮತ್ತೆ ನಮಿಸಿ ಹೊರಕ್ಕೆ ಬರುತ್ತ ದೀಪದ ಮಲ್ಲಿಯರನ್ನೆಲ್ಲ ಮೌನವಾಗಿ ಮಾತಾಡಿಸಿ ಬೀಳ್ಕೊಂಡು ಗಾಂಧೀ ಸ್ಮಾರಕ ಮಂದಿರಕ್ಕೆ ಹೊರಟೆವು. ಸುತ್ತಲ ಪ್ರಶಾಂತತೆಗೆ ತನ್ನದೇ ಆದ ಪವಿತ್ರತೆಯ ಪರಿಮಳವನ್ನು ಬೆರೆಸುತ್ತಿದ್ದ ಬಾಪೂಜಿಯ ಸಮಾಧಿಯ ಮುಂದೆ ಮಣಿದು ಶ್ರದ್ಧಾಂಜಲಿಯನ್ನು ಅರ್ಪಿಸಿದೆವು. ಅಲ್ಲಿನ ಮಹಡಿಯ ಬಾಲ್ಕನಿಗಳಲ್ಲಿ ನಿಂತು ನೋಡಿದರೆ ಭಾರತಾಂಬೆಯ ದಿವ್ಯ ಪಾದಗಳಿಗೆ ಮೂರೂಕಡೆ ಸಾಗರ ಕನ್ಯೆಯರು ಬಾಗಿ ನಮಸ್ಕರಿಸುವಂತೆ ಕಾಣುತ್ತದೆ. ಗಾಂಧೀಜಿ ಜನ್ಮವೆತ್ತಿದ ಪುಣ್ಯದಿನ ಬಿಸಿಲ ಕಿರಣವೊಂದು ತೂರಿಬಂದು. ಬಾಪೂಜಿಯ ಸಮಾಧಿಯ ಮೇಲಕ್ಕೆ ಸರಿಯಾಗಿ ಬೀಳುವಂತೆ ಛಾವಣಿಯಲ್ಲಿ ಕಿರು ಗವಾಕ್ಷವೊಂದನ್ನು ರಚಿಸಿದ್ದಾರಂತೆ. ಆ ದಿನ ನೋಡಬೇಕು ಅದ್ಭುತವಾದ ಆ ದೃಶ್ಯವನ್ನು.

ಈಶಾನ್ಯ ದಿಕ್ಕಿನಲ್ಲಿ ಸ್ವಲ್ಪ ದೂರದಲ್ಲಿ ಹೆಬ್ಬಂಡೆಯ ನಡುಗಡ್ಡೆಯೊಂದು ಕಾಣುತ್ತದೆ. ವಿವೇಕಾನಂದ ಸ್ವಾಮಿಯವರು ಇಲ್ಲಿ ಭೋರ್ಗರೆಯುವ ಕಡಲಿಗೆ ಧೀರವಾಗಿ ಧುಮುಕಿ. ಈಜುತ್ತಾ ಆ ಬಂಡೆಯ ಬಳಿ ಹೋಗಿ, ಅದನ್ನೇರಿ ಕುಳಿತು ಧ್ಯಾನಪರವಶರಾದಂತೆ. ಅಂದಿನಿಂದ ಅದಕ್ಕೆ ಸ್ವಾಮೀಜಿಯ ಹೆಸರನ್ನೇ ಇಟ್ಟಿದ್ದಾರೆ. ದೇವಿಯ ಗುಡಿಯ ಎದುರಿಗಿರುವ ಪೂರ್ವ ದಿಕ್ಕಿನ ಮಂಟಪದಿಂದ ನೇರವಾಗಿ ಆ ಬಂಡೆಗೆ ಈಜಿ ಹೋಗಬಹುದು. ಆದರೆ ಈಜುವುದು ಸಾಮಾನ್ಯ ಸಾಹಸವಲ್ಲ. ಕಡೆಗೋಲಿಟ್ಟು ಕಡೆಯುತ್ತಿರುವಂತೆ ಭೋರ್ಗರೆಯುತ್ತದೆ ಕಡಲು.



ಗಾಂಧೀಮಂದಿರದ ಎದುರೇ ಶಂಖ. ಮಣಿಸರ ಮುಂತಾದ ಕಡಲ ಕಾಣಿಕೆಗಳ ಅಂಗಡಿಗಳಿವೆ. ಅಲ್ಲಿ ವ್ಯಾಪಾರವಾಯಿತು. ಅನಂತರ ಕಾಫಿ ತಿಂಡಿ ಮುಗಿಸಿ ಮುಂದಿನೂರಿಗೆ ಹೊರಡುವ ಸರ್ಕಸ್ ಕಂಪೆನಿಯಂತೆ ನಮ್ಮ ಯಾತ್ರಾವಾಹನ ಸಿದ್ಧವಾಯಿತು.

ತಿರುವನಂತಪುರಕ್ಕೆ ಸೊಗಸಾದ ರಾಜಮಾರ್ಗವಿದೆ. ರಾಷ್ಟ್ರೀಯ ಮಹಾರಸ್ತೆ. ಉದ್ದಕ್ಕೂ ಕಣ್ತಣಿಸುವ ಕೇರಳ ವನಶ್ರೀಯನ್ನು ನೋಡಬಹುದೆಂದು ಕೇಳಿದ್ದೆವು. ಎಂಟು ಮೈಲು ಕಳೆಯುವುದಕ್ಕಿಲ್ಲ ದಾರಿಯ ಬದಿಯ ಊರು ಶುಚೀಂದ್ರಮ್ ಮತ್ತು ಅಲ್ಲಿನ ದೇಗುಲದ ಚೆಲುವು ಅರಳಿದಂತೆ ನಿಂತ ಗೋಪುರಗಳೆ ಸಾಕ್ಷಿ ಈ ದೇಗುಲದ ಅಸದೃಶ ಆಕರ್ಷಣೆಗೆ. ಗುಡಿಯೊಳಗೂ ಅಷ್ಟೆ, ದೇಗುಲದ ಹಿರಿಮೆಯ ಕತೆಗಳಷ್ಟೆ ಸ್ವಾರಸ್ಯವಾದ ಶಿಲ್ಪಕಲಾ ವಿಶೇಷಗಳೂ ಇವೆ. ಪ್ರದೇಶದ ಗೋಪುರವನ್ನು ನೋಡುತ್ತ ಒಳಗೆ ಹೋದರೆ ದೇಗುಲದ ಬಹು ದೊಡ್ಡ ರಥ ಗಮನವನ್ನು ಸೆಳೆಯುತ್ತದೆ. ಅದರ ಚಕ್ರಗಳೇ ಎಂಟು ಹತ್ತು ಅಡಿ ಎತ್ತರ ಇರಬಹುದು. ಅಡಿಯಿಂದ ಮುಡಿಯವರೆಗೆ ಎಲ್ಲ ಮರದ ಕೆತ್ತನೆ. ಒಳ್ಳೆ ಚೆಲುವಾದ, ಮಾಟವಾದ ತೇರು. ಅಲ್ಲಿಂದ ಮುಂದೆ ಇನ್ನೊಂದು ಗೋಪುರದ ದ್ವಾರವನ್ನು ದಾಟಬೇಕು. ಅದಕ್ಕೆ ಮುಂಚೆ ಪಾದರಕ್ಷೆಗಳನ್ನು ಕಳಚಿ ಇಟ್ಟು, ಅಂಗಿ ಬನಿಯನ್‌ಗಳನ್ನು ತೆಗೆದು ಕೈಲಿಟ್ಟುಕೊಂಡು ಒಳಗೆ ಹೋಗಬೇಕು.

ಗುಡಿಯ ಒಳಗಡೆ ನೋಡುವಂತಹದು ಬೇಕಾದಷ್ಟಿದೆ. ಸವಿಸ್ತಾರವಾಗಿ ನೋಡಲು ಒಂದೆರಡು ಗಂಟೆಗಳ ಕಾಲವಾದರೂ ಬೇಕು. ಮೊದಲು ದತ್ತಾತ್ರೇಯನ ದರ್ಶನವಾಯಿತು. ಅದೊಂದು ಪುರಾತನ ವೃಕ್ಷ. ಅದರಲ್ಲಿ ಮೂರು ಬಗೆಯ ವೃಕ್ಷಗಳು ಸೇರಿಕೊಂಡಿವೆ. ಮೂಲ ಮಾತ್ರ ಒಂದೇ ! ಅಲ್ಲಿಂದ ಮುಂದೆ ಹೋದರೆ ತ್ರಿಮೂರ್ತಿಗಳ ಮಂದಿರಗಳಿವೆ. ಪ್ರವೇಶಿಸುವ ಮುನ್ನ ಅರ್ಚಕರು ಒಂದು ದೊಡ್ಡ ಗಂಟೆಯನ್ನು ಬಾರಿಸಿ ಒಳಗೆ ಹೋಗುತ್ತಾರೆ. ಇದು ಪ್ರಮಾಣವಚನದ ಒಂದು ರೀತಿಯ ಸಂಕೇತವಂತೆ. ಹೀಗೆ ಮಾಡಿದರೆ ಒಳಗಿನ ರಹಸ್ಯವನ್ನು ಹೊರಗೆ ಯಾರ ಬಳಿಯೂ ಹೇಳುವುದಿಲ್ಲ ಎಂದು ಪ್ರಮಾಣ ಮಾಡಿದಂತೆ. ಒಳಗೆ ಅಂತಹ ರಹಸ್ಯವೇನು ನಡೆಯುತ್ತದೆ ಎಂದರೆ ಅದಕ್ಕೊಂದು ಸ್ವಾರಸ್ಯವಾದ ಪುರಾಣ ಕಥೆ ಇದೆ. ಶುಚೀಂದ್ರ ಎಂಬ ಹೆಸರು ಬರುವುದಕ್ಕೂ ಅದೇ ಕಾರಣ. ಒಟ್ಟಿನಲ್ಲಿ ದೇಗುಲದ ಮತ್ತು ಸ್ಥಳದ ಮಹಿಮೆಯನ್ನು ಹೇಳುವಂತಹ ಕಥೆ.

ಸತಿ ಅಹಲ್ಯೆಯನ್ನು ವಂಚಿಸಿ ಇಂದ್ರನು ಶಾಪಗ್ರಸ್ತನಾದ ಕಥೆ ಗೊತ್ತಿಲ್ಲ. ಶಾಪದಿಂದ ತೊಳಲುತ್ತ ಇಂದ್ರನು ಪಶ್ಚಾತ್ತಾಪದಿಂದಲೂ. ತನಗಂಟಿಕೊಂಡ ಪಾಪವನ್ನು ಕಳೆದುಕೊಳ್ಳುವುದು ಹೇಗೆ ಎಂಬ ಚಿಂತೆಯಿಂದಲೂ ಬೇಯತೊಡಗಿದನು. ಅವನ ದುಃಖವನ್ನು ನೋಡಲಾರದೆ ಕನಿಕರದಿಂದ ದೇವರುಗಳಾದ ಬೃಹಸ್ಪತ್ಯಾಚಾರ್ಯರು ತ್ರಿಮೂರ್ತಿಗಳ ವಿಗ್ರಹಗಳನ್ನು ಒಂದೆಡೆ ಪ್ರತಿಷ್ಠಾಪಿಸಿ ಭಕ್ತಿಯಿಂದ ವಿದ್ಯುಕ್ತವಾಗಿ ಪೂಜಿಸಿದರೆ ಪಾಪ ನಿವಾರಣೆಯಾಗುವುದೆಂದು ದೇವರಾಜನಿಗೆ ಸಲಹೆ ಕೊಟ್ಟರು. ದತ್ತಾತ್ರೇಯನು ವೃಕ್ಷ ರೂಪದಲ್ಲಿ ಆಗಲೇ ಒಡಮೂಡಿದ್ದ ಈ ಪುಣ್ಯಕ್ಷೇತ್ರವೇ ತ್ರಿಮೂರ್ತಿಗಳ ಪ್ರತಿಷ್ಠಾಪನೆಗೆ ಪ್ರಶಸ್ತವಾದ ಸ್ಥಳವೆಂದು ಇಂದ್ರನು ಗುರುಗಳ ಸಲಹೆಯನ್ನು ಚಾಚೂ ತಪ್ಪದೆ ಕಾರ್ಯಗತ ಮಾಡಿದನು. ವ್ರತನಿಷ್ಠನಾಗಿ ಇಂತಿಷ್ಟು ದಿವಸ ನಿತ್ಯವೂ ಬಂದು ತ್ರಿಮೂರ್ತಿಗಳನ್ನು ಶ್ರದ್ಧೆ. ಭಕ್ತಿಗಳಿಂದ ಅರ್ಚಿಸಿ ಸೇವಿಸಿದ ಮೇಲೆ ಇಂದ್ರನು ಶಾಪವಿಮುಕ್ತನಾಗಿ ಶುದ್ಧನಾದನು. ಅಂದಿನಿಂದ ಈ ಊರಿಗೆ ಶುಚೀಂದ್ರ ಎಂಬ ಹೆಸರು ಬಂದಿತು. ವಿಶೇಷವೇನೆಂದರೆ ಈಗಲೂ ಇಂದ್ರನು ಅಲ್ಲಿಗೆ ಆಗಾಗ ಬಂದು ತಾನೆ ಕೈಯಾರೆ ಪೂಜೆಮಾಡಿ ಹೋಗುತ್ತಾನೆಂಬ ಪ್ರತೀತಿಯಿದೆ. ಯಾವಾಗ ಬಂದು ಪೂಜೆಮಾಡಿ ಹೋಗುವನೆಂಬುದು ಮಾತ್ರ ಯಾರಿಗೂ ಗೊತ್ತಾಗುವುದಿಲ್ಲ. ಆದರೆ ಪೂಜೆ ಮಾಡಿರುವುದು ಅನಂತರ ತಿಳಿಯುತ್ತದೆ. ಮುದ್ರೆಯೂ ಹಾಗೇ ಇರುತ್ತದೆ. ಆದರೆ ಬೆಳಗಾಗ ಬೀಗಮುದ್ರೆಯೊಡೆದು ಬಾಗಿಲು ತೆರೆದು ಒಳಗಡೆ ಹೋಗುವ ಅರ್ಚಕರನ್ನು ಅಪೂರ್ವವಾದ ಪರಿಮಳ ಸ್ವಾಗತಿಸುತ್ತದೆ. ಆಗ ಸ್ವಲ್ಪ ಹೊತ್ತಿನ ಕೆಳಗೆ ಯಾರೋ ಬಂದು ಅರ್ಚನೆ ಮಾಡಿ ಹೋಗಿದ್ದಾರೆ ಎಂದು ಸಾಕ್ಷಿ ಹೇಳುವ ಹಾಗೆ ದೇವರ ಮೇಲೆ ಇನ್ನೂ ಬಾಡದಿರುವ ಹೂಗಳಿರುತ್ತದೆ. ಇದನ್ನು ನೋಡಿದ ಉಪಾಸಕರು ಆಶ್ಚರ್ಯಸ್ತಂಭರಾಗಿ ನಿಲ್ಲಲಿ. ಗದ್ಗದಕಂಠರಾಗಿ ಅಶ್ರುಜಲ ನಯನರಾಗಿ ಕೈಮುಗಿದು ನಿಲ್ಲಲಿ. ಅದಕ್ಕೆ ಆಕ್ಷೇಪಣೆಯೇನೂ ಇಲ್ಲ. ಆದರೆ ಆ ಹಿಂದಿನ ರಾತ್ರಿ ಇಂದ್ರನು ಬಂದು ಪೂಜೆಮಾಡಿ ಹೋಗಿದ್ದಾನೆಂದು ಹೊರಗಡೆ ಓಡಿಹೋಗಿ ಡಂಗುರ ಹೊಡೆಯಬಾರದು. ರಹಸ್ಯವಾಗಿಯೂ ಹೇಳಬಾರದು. ಅದೇ ಒಡೆಯಬಾರದ ರಹಸ್ಯ. ಅದನ್ನು ಪರಿಪಾಲಿಸುವುದಾಗಿ ಕೊಡುವ ವಚನದ ಸಂಕೇತವೇ ಗಂಟೆ ಬಾರಿಸುವುದು. ಇದೆಲ್ಲ ನಂಬಿಕೆಯ ಮಾತು. ಪರೀಕ್ಷೆ ಮಾಡಿರುವವರು ಯಾರು?

ಅಂತೂ ಒಳಗೆ ಹೋಗುವ ನಾವೂ ಇಂತಹ ವಚನವನ್ನು ಸ್ವೀಕಾರ ಮಾಡಬೇಕು. ನಾವು ಪೂಜೆ ಮಾಡಿಸಿದುದು ಮಾತ್ರ ರಹಸ್ಯವೇನಲ್ಲ.

ದೇಗುಲದ ಒಂದು ಭಾಗದಲ್ಲಿರುವ ಸುವಿಶಾಲವಾದ ಸಭಾಂಗಣ ಮಾತ್ರ ತುಂಬ ಸೊಗಸಾಗಿದೆ. ಸುಂದರವಾಗಿ ಕೆತ್ತಿ ಒಳ್ಳೆ ಕುಸುರಿ ಕೆಲಸಮಾಡಿ ಬಿಡಿಸಿರುವ ಚಿತ್ರಖಚಿತವಾದ ಛಾವಣಿ ಮತ್ತು ಕಂಬಗಳು. ನಡುವೆ ನೃತ್ಯ ವೇದಿಕೆ. ನಾಲ್ಕೂ ಮೂಲೆಗಳಲ್ಲಿ ನಾಲ್ಕು ಸ್ತಂಭಗಳಿವೆ. ಒಂದೊಂದು ಸ್ತಂಭದಲ್ಲೂ ಎಂಟೆಂಟು ಸಣ್ಣ ಸಣ್ಣ ನೀಳವಾದ ಕಂಬಗಳಿವೆ. ಇವೇ ಸಂಗೀತ ಸ್ತಂಭಗಳು. ಒಂದೊಂದು ಸ್ತಂಭವನ್ನೂ ಮರದ ತುಂಡಿನಿಂದ ಬಡಿದರೆ ಒಂದೊಂದು ವಾದ್ಯದ ನಾದ ಹೊರಡುತ್ತದೆ. ವೀಣೆನುಡಿಸಿದಹಾಗೆಒಂದುಸ್ತಂಭದಲ್ಲಿನಾದಬಂದರೆ. ಇನ್ನೊಂದರಲ್ಲಿಕೊಳಲಿನಿಂಚರ. ಮತ್ತೊಂದರಲ್ಲಿ ಮೃದಂಗಧ್ವನಿ. ಮಂಜುಳವಾಗಿ ಹೊಗುತ್ತವೆ. ಒಂದೊಂದು ಸ್ತಂಭದಲ್ಲೂ ಇರುವ ಎಂಟೆಂಟು ನೀಳ ಸರಳ ಕಂಬಗಳು ಸಂಗೀತದಸಪ್ತಸ್ವರಗಳನ್ನು ನುಡಿಯುತ್ತವೆ. ಇದುಕಲ್ಪನೆಯಲ್ಲ. ಉತ್ಪ್ರೇಕ್ಷೆಯಲ್ಲ. ಮಧುರೆಯಸಂಗೀತಸ್ತಂಭ. ಬೇಲೂರಿನ ಸಂಗೀತ ಸ್ವರಗಳ ವಿಗ್ರಹ. ಹಂಪೆಯ ವಿಠ್ಠಲರಾಯನ ಗುಡಿಯ ಸಪ್ತಸ್ವರಗಂಬಗಳು – ಇವನ್ನೆಲ್ಲ ಪರೀಕ್ಷಿಸಿ ನೋಡಿದ್ದೇನೆ. ಅಲ್ಲಿ ಹೊಮ್ಮುವ ಸಂಗೀತಸ್ವರಗಳನ್ನು ಸ್ವಲ್ಪಮಟ್ಟಿಗೆ ಊಹಿಸಿ ಹೊಂದಿಸಿಕೊಳ್ಳಬೇಕಾಗುತ್ತದೆ. ದಿಟ ಒಂದು ಪಾಲಾದರೆ ಕಲ್ಪನೆ ಹತ್ತು ಪಾಲು ಕೆಲಸ ಮಾಡುತ್ತದೆ. ಆದರೆ ಶುಚೀಂದ್ರನಲ್ಲಿ ಕಿವಿ ಮೋಸ ಹೋಗುವುದಿಲ್ಲ. ಅಷ್ಟು ಸ್ಪಷ್ಟವಾಗಿ ವೀಣಾವೇಣು ಮೃದಂಗ ನಾದಗಳು ಹೊಮ್ಮುತ್ತವೆ. ಮಧುರವಾದ ಈ ನಾದಗಳನ್ನು ಕೇಳಿದ ನಮ್ಮ ಕಲ್ಪನೆ ರೆಕ್ಕೆಬಿಚ್ಚಿ ಹಾರುತ್ತ ಇತಿಹಾಸದ ಗತಕಾಲವನ್ನು ಪ್ರವೇಶಿಸುತ್ತದೆ. ನೃತ್ಯದ ಈ ಪದ್ಮ ವೇದಿಕೆಯ ಮೇಲೆ ಲಾವಣ್ಯವತಿಯರಾದ ಕಲಾವಿದೆಯರು ನೃತ್ಯಸೇವೆ ಸಲ್ಲಿಸುತ್ತಿರುವಾಗ ಈ ನಾಲ್ಕು ಕಂಬಗಳನ್ನೇ ವಾದ್ಯಗಳನ್ನಾಗಿ ಮಾಡಿಕೊಂಡು ಪರಿಣತರು ನುಡಿಸುತ್ತಿದ್ದ ಆ ಅಪೂರ್ವವಾದ ನೋಟವನ್ನು ಚಿತ್ರಿಸುತ್ತದೆ.

ಈ ನಿತ್ಯನೂತನ ಮಂಟಪವಲ್ಲದೆ. ಕಲ್ಲಿನ ಸರಪಳಿ. ಶಿಲಾಶಾರ್ದೂಲಗಳ ಬಾಯಲ್ಲಿ ಹಲ್ಲುಗಳ ಮಧ್ಯೆ ಅಲುಗಾಡುವ ಕಲ್ಲಿನ ಗುಂಡುಗಳು ಮುಂತಾದ ಶಿಲ್ಪ ಚಮತ್ಕಾರಗಳೂ ಇಲ್ಲಿವೆ.

ಶುಚೀಂದ್ರ ದೇಗುಲವೂ ಸೇರಿ ನಮ್ಮ ನೆನಪಿನ ಭಂಡಾರ ಇನ್ನೂ ಶ್ರೀಮಂತವಾಯಿತು.

ಅನಂತರ ತಿರುವನಂತಪುರದವರೆಗೂ ನಡುವೆ ಯಾವ ಮಾನುಷ ನಿರ್ಮಿತ ವಸ್ತುವೂ ನಮ್ಮನ್ನು ಆಕರ್ಷಿಸುವಂತಹದಾಗಿರಲಿಲ್ಲ. ಕೇರಳದ ನೈಸರ್ಗಿಕ ಚೆಲುವಿನ ಸಂಪತ್ತೆಲ್ಲ ಸೂರೆಯಾಗಿತ್ತು ಮಾತ್ರ. ಹಸುರು ತುಂಬಿದ ಮನೋಹರವಾದ ಗದ್ದೆ, ತೋಟ, ಕಾನನಗಳ ನಡುವೆ ಅಂಕುಡೊಂಕಾಗಿ ತಿರುಗಿಕೊಂಡು ಹೋಗುವ ರಸ್ತೆ. ಕ್ಷಣಕ್ಷಣಕ್ಕೂ ನಮ್ಮ ಕುತೂಹಲವನ್ನು ಹೆಚ್ಚಿಸುತ್ತಿತ್ತು. ಅಲ್ಲಲ್ಲಿ ಸಿಕ್ಕುವ ಹಳ್ಳಿ, ಊರುಗಳು ತೀರ ಸರಳವಾದಂತಹವು. ಜನ ವಿದ್ಯಾವಂತರು, ನಾಗರಿಕರು ಆದರೆ ಎಂತಹ ಕಡು ಬಡತನ ! ಫಲಸಮೃದ್ಧವಾದ ಈ ನಾಡಿನಲ್ಲಿ ಬಡತನ ಇರುವುದು ಆಶ್ಚರ್ಯ. ಕೆಲವು ಕಡೆ ಒಂದೊ ಎರಡೊ ಮನೆಗಳು. ಅವೂ ಪರ್ಣಕುಟಿಗಳ ಮಾದರಿ. ಋಷ್ಯಾಶ್ರಮಗಳ ನೆನಪು ತರುವಂತಿದೆ. ಉದ್ದಕ್ಕೂ ಮೈಸೂರು ಮಲೆನಾಡಿನ ನೆನಪೇ ಆಗುತ್ತದೆ ಇಲ್ಲಿನ ನಿಸರ್ಗ ಸಂಪದವನ್ನು ನೋಡಿದರೆ. ಜನಮಾತ್ರ ಬೇರೆ.

ತಿರುವನಂತಪುರವನ್ನು ಮಧ್ಯಾಹ್ನ ಹನ್ನೆರಡು ಗಂಟೆಗೆ ಸೇರಿದೆವು. ನೇರವಾಗಿ ಉಡುಪಿ ಹೋಟಲೊಂದನ್ನು ಹುಡುಕಿಕೊಂಡು ಹೋಗಿ ಊಟಮಾಡಿ. ಅನಂತಪದ್ಮನಾಭ ದೇವಸ್ಥಾನಕ್ಕೆ ಹೋದೆವು. ಬಾಗಿಲು ಮುಚ್ಚಿಬಿಟ್ಟಿದ್ದರು. ಇನ್ನು ಸಂಜೆ ಐದು ಗಂಟೆಗೇ ಬಾಗಿಲು ತೆರೆಯುವುದೆಂದು ತಿಳಿಯಿತು. ಅಲ್ಲಿಯ ತನಕ ಕಾಯುವುದೇಕೆಂದು ಅಷ್ಟರಲ್ಲಿ ಮೃಗಾಲಯವನ್ನು ನೋಡಿಬರಲು ಹೋದೆವು. ತಿರುವನಂತಪುರಂ ಕೇರಳದ ರಾಜಧಾನಿ. ಮೈಸೂರಿನ ಹಾಗೆಯೇ ಸುಂದರವಾಗಿದೆ. ಕೆಲವು ರಸ್ತೆಗಳನ್ನೂ ಕೆಂಪುಬಣ್ಣದ ಕಟ್ಟಡಗಳನ್ನೂ, ಉಧ್ಯಾನವನಗಳನ್ನೂ ನೋಡಿದರೆ ಬೆಂಗಳೂರು ಎನ್ನುವ ಹಾಗಾಗುತ್ತದೆ.

ಜೂ ಚಿಕ್ಕದಾಗಿದೆ. ಉಪವನವನ್ನು ಚೆನ್ನಾಗಿ ಇಟ್ಟುಕೊಂಡಿದ್ದಾರೆ. ಪ್ರಾಣಿಗಳ ಸಂಗ್ರಹವಾದರೂ ವಿಶೇಷವಾಗಿಲ್ಲ. ಪಕ್ಷಿಗಳ ವಿಭಾಗ ಮಾತ್ರ ಮೈಸೂರಿನದಕ್ಕಿಂತ ಉತ್ತಮ. ಒಂದು ಬಗೆಯ ಕೋಳಿ ಜಾತಿಯ ಹಕ್ಕಿಯನ್ನು ನೋಡಿದಾಗ. ಕೆಲವು ಕೋತಿಗಳು ಕುಳಿತುಕೊಳ್ಳುವ, ಓಡಾಡುವ ಶೈಲಿಯನ್ನು ನೋಡಿದಾಗ. ಮನುಷ್ಯ ಗುಣ–ಲಕ್ಷಣಗಳೇ ಕಂಡಂತಾಗಿ ವಿನೋದ ಪ್ರಸಂಗಗಳಿಗೆ ಎಡೆಕೊಟ್ಟಿತು.

ಅಲ್ಲಿಯೇ ಸಮೀಪದಲ್ಲಿ ಚಿತ್ರಸಂಗ್ರಹ ಶಾಲೆಯಿದೆ. ಕಟ್ಟಡ ನೋಡಿದರೆ ತುಂಬ ಚಿಕ್ಕದಾಗಿದ್ದರೂ ಒಳಗೆ ಚಿತ್ರಗಳು ವಿಫುಲವಾಗಿವೆ. ಇವುಗಳನ್ನು ಇಟ್ಟಿರುವ ಓರಣವಾದ ರೀತಿ, ಜೋಡಣೆ, ವಿಂಗಡಣೆ, ಎಲ್ಲ ಚೆನ್ನಾಗಿವೆ. ಜೆ. ಎಚ್. ಕಸಿನ್ಸ್ ಅವರು ಆಯ್ದು ಓರಣಗೊಳಿಸಿದ ಚಿತ್ರಶಾಲೆಯಿದು ಎಂದು ಮೂರ್ತಿ ಹೇಳಿದರು. ತುಂಬ ಅಪೂರ್ವವಾದ ವಿಶೇಷವಾದ ಚಿತ್ರಗಳನ್ನು ಸಂಗ್ರಹಿಸಿದ್ದಾರೆ. ಬಂಗಾಳಿ ಚಿತ್ರಕಲೆಯ ಮಾದರಿಗಳು ಬಹು ಚೆನ್ನಾಗಿವೆ. ರಾಜಾ ರವಿವರ್ಮರ ಚಿತ್ರಗಳದೇ ಒಂದು ಪ್ರತ್ಯೇಕ ಮಂದಿರವಿದೆ. ಜೀವ ಪೂರ್ಣವಾದ, ಸುಂದರವಾದ, ಆ ಚಿತ್ರಗಳನ್ನು ನೋಡಿ ಮುಗ್ಧರಾಗಿ ನಿಂತೆವು.

ಅನಂತರ ಪಕ್ಕದಲ್ಲೇ ಇದ್ದ ಮ್ಯೂಸಿಯಂಗೆ ಹೋಗಬಹುದಾಗಿತ್ತು. ನಮಗೆಲ್ಲ ತುಂಬ ಬಳಲಿಕೆಯೂ ದಾಹವೂ ಆಗಿದ್ದುದರಿಂದ ವಸ್ತು ಸಂಗ್ರಹಾಲಯದಲ್ಲಿ ಸುತ್ತುವ ಉತ್ಸಾಹ ವಿರಲಿಲ್ಲ; ದಾಹ ಪರಿಹಾರಕ್ಕೆಂದು ಇಂಡಿಯನ್ ಕಾಫಿ ಹೌಸಿಗೆ ಹೋಗಿ ಸೊಗಸಾದ ಕಾಫಿಯನ್ನು ಕುಡಿದು ನೇರವಾಗಿ ದೇವಸ್ಥಾನಕ್ಕೆ ಹೋದೆವು.

ಅನಂತಪದ್ಮನಾಭ ದೇಗುಲ ವಿಶೇಷ ಬಗೆಯದು. ಈ ಮಾದರಿ ನಮಗೆ ಹೊಸದು. ಚಚ್ಚೌಕನೆಯ ಕೈಸಾಲೆ. ಒಳಾಂಗಣ ಆಕಾಶಕ್ಕೆ ತೆರೆದ ಹಾಗೆ ಇದೆ. ಅಲ್ಲೆಲ್ಲ ಮರಳು ನೆಲ. ಮಧ್ಯೆ ದೇವ ಮಂದಿರಗಳು. ಕೈಶಾಲೆಗಳು, ವಿಶಾಲವಾಗಿ, ದೀರ್ಘವಾಗಿ ಪ್ರಶಸ್ತವಾಗಿ ಇವೆ. ಎರಡೂ ಕಡೆ ಕಂಬಗಳ ಸಾಲು. ಕಂಬಕಂಬಕ್ಕೂ ದೀಪದ ಮಲ್ಲಿಯರು ಹಣತೆ ಹಿಡಿದು ನಿಂತಿದ್ದಾರೆ. ಅವರ ವಿವಿಧ ಬಗೆಯ ಉಡುಪು ಕೇಶಾಲಂಕಾರಗಳು ಆಕರ್ಷಣೀಯವಾಗಿವೆ. ದೇಗುಲಕ್ಕೆ, ಪೂರ್ವಕ್ಕೊಂದು ಪಶ್ಚಿಮಕ್ಕೊಂದು, ಎರಡನೇ ಪ್ರವೇಶದ್ವಾರಗಳು. ದಕ್ಷಿಣ ಭಾರತದ ಉಳಿದ ದೇವಾಲಯಗಳ ಹಾಗೆ ಇದು ಆಕೃತಿಯಲ್ಲಿ ದೊಡ್ಡದಲ್ಲ. ಇಲ್ಲಿನ ಗೋಪುರ ಭವ್ಯವಾಗಿಲ್ಲ. ಅಲ್ಲದೆ ಇದು ಪೂರ್ತಿ ಶಿಲೆಯ ಗುಡಿಯಲ್ಲ. ಇದರ ಛಾವಣಿ ಮರದ್ದು. ಒಟ್ಟಿನಲ್ಲಿ ಚಿಕ್ಕದಾದರೂ ಚೊಕ್ಕವಾಗಿದೆ, ವಿಶಾಲವಾಗಿದೆ, ಅಚ್ಚುಕಟ್ಟು, ಸ್ವಚ್ಛತೆ ಎರಡೂ ಇವೆ. ಇಲ್ಲಿನ ವಿಶೇಷವೆಂದರೆ ಲಕ್ಷಾಂತರ ದೀಪಗಳನ್ನು ಗೋಡೆಗಳಲ್ಲಿ ಶಾಶ್ವತವಾದ ಏರ್ಪಾಟಿನ ಹಾಗೆ ಮಾಡಿ ಇಟ್ಟಿರುವುದು. ವರ್ಷದಲ್ಲಿ ಕೆಲವು ವಿಶೇಷ ಹಬ್ಬಗಳಲ್ಲಿ ದೀಪೋತ್ಸವ ಮಾಡುತ್ತಾರಂತೆ. ಇಷ್ಟು ದೀಪಗಳೂ ಬೆಳಗುತ್ತಿದ್ದರೆ ಇಡೀ ದೇಗುಲವೇ ದೀಪಗಳ ಗುಡಿಯಾಗಿ, ದಸರಾ ಕಾಲದ ಮೈಸೂರು ಅರಮನೆಯಂತೆ ಕಂಗೊಳಿಸುತ್ತದೆ.

ಪದ್ಮನಾಭನ ಮಂದಿರದ ಪಕ್ಕದಲ್ಲೇ ಪೂರ್ಣವಾಗಿ ಒಂದೇ ಕಲ್ಲಿನಲ್ಲಿ ಕೊರೆದು ಕಡೆದಿಟ್ಟ ಮಂಟಪವೊಂದಿದೆ. ಕೌತುಕಪೂರ್ಣವಾದ ಈ ವಿಶೇಷ ಕೃತಿಯನ್ನು ನೋಡುವುದೇ ಒಂದು ರಸಾನುಭವ.

ಅಷ್ಟು ಹೊತ್ತಿಗೆ ಮುಖ್ಯ ಮಂದಿರದ ಬಾಗಿಲು ತೆರೆಯಿತು. ಗಂಟೆಗಳ ಇನಿದನಿ ಕರೆಯಿತು. ಪದ್ಮನಾಭಸ್ವಾಮಿ ಅನಂತಶಯನನಾಗಿ ಆನಂದಪೂರ್ಣವಾದ ಮಂದಹಾಸ ವದನನಾಗಿ ಮಲಗಿದ್ದಾನೆ. ಶ್ರೀದೇವಿ ಕಾಲೊತ್ತುತ್ತ ಕುಳಿತಿದ್ದಾಳೆ. ದೀರ್ಘಾಯುತಕಾಯನಾದ ಪದ್ಮನಾಭನ ದರ್ಶನ ಒಂದೇ ಬಾಗಿಲಲ್ಲಿ ಆಗುವುದಿಲ್ಲ. ಸಾಲಾಗಿ ಮೂರು ಬಾಗಿಲುಗಳಿವೆ. ಗರ್ಭಗುಡಿಗೆ ಮೊದಲನೆಯದರಲ್ಲಿ ಸ್ವಾಮಿಯ ಮುಖದರ್ಶನವಾದರೆ, ಎರಡನೆಯದರಲ್ಲಿ ಪದ್ಮನಾಭಿ, ಮೂರನೆಯದರಲ್ಲಿ ಪದ್ಮಚರಣ ಕಾಣುತ್ತವೆ. ಜಗನ್ನಾಥನ ಆರತಿ ಮುಗಿಸಿಕೊಂಡು ಶ್ರೀ ರಾಮಕೃಷ್ಣಾಶ್ರಮಕ್ಕೆ ಹೊರಟೆವು.

ಊರಿಗೆ ಐದಾರು ಮೈಲಿ ದೂರದಲ್ಲಿ ರಮ್ಯವಾದ ಪ್ರಶಾಂತವಾದ ಸನ್ನಿವೇಶದಲ್ಲಿರುವ ಶ್ರೀ ರಾಮಕೃಷ್ಣಾಶ್ರಮಕ್ಕೆ ಹೋಗಲು ಸಮಯವಿರಲಿಲ್ಲ. ಆದ್ದರಿಂದ ಊರಿನ ಬಡಾವಣೆಯಲ್ಲಿದ್ದ ರಾಮಕೃಷ್ಣ ಕೇಂದ್ರದ ಆಸ್ಪತ್ರೆ, ಪ್ರಾರ್ಥನಾ ಮಂದಿರಗಳನ್ನು ನೋಡಿದೆವು. ಆಗಲೆ ಸಂಜೆ ಆರು ಗಂಟೆ. ಅಲ್ಲಿಂದ ಹೊರಟು ಕ್ವಿಲಾನ್ ಊರನ್ನು ಸೇರುವ ಹೊತ್ತಿಗೆ ರಾತ್ರಿ ಎಂಟು ಗಂಟೆಯಾಯಿತು. 'ಪೂರ್ಣಪ್ರಕಾಶ್' ಎಂಬ ಸೊಗಸಾದ, ಆಧುನಿಕ ಸೌಕರ್ಯಗಳೆಲ್ಲ ಇರುವ ಹೋಟೆಲಲ್ಲಿ ಇಳಿದುಕೊಂಡೆವು. ಕನ್ನಡ ಸಾಹಸಿಗರು ಅಲ್ಲಿಯೂ ಕನ್ನಡದ ಪತಾಕೆ ಹಾರಿಸುತ್ತಿದ್ದಾರೆ.


ಇದು ವರ್ಷದ ಕಡೆಯ ರಾತ್ರಿ; ಅತ್ಯಂತ ದೀರ್ಘರಾತ್ರಿ. ಈ ರಾತ್ರಿ ಮಲಗಿದವರು ಬೆಳಿಗ್ಗೆ ಏಳುವಾಗ ಮರು ವರ್ಷವೇ ಆಗಿರುವುದು.

## ಶಬ್ದಗಳ ಅರ್ಥ:


ದೀಪದ ಮಲ್ಲಿಯರು - ಕೈಯಲ್ಲಿ ದೀಪವನ್ನು ಹಿಡಿದುಕೊಂಡು ನಿಂತಿರುವ ಲೋಹದ ಹೆಣ್ಣು ಗೊಂಬೆಗಳು, ತಣಿಸು - ತೃಪ್ತಿಗೊಳಿಸು; ಸ್ಮಾರಕ - ನೆನಪು ಕೊಡುವ ಸ್ಥಳ, ಗವಾಕ್ಷ - ಬೆಳಕಿಂಡಿ, ಕಿಟಿಕಿ, ಭೋರ್ಗರೆಯುವ - ಆರ್ಭಟಿಸುವ, ಕಡಲು - ಸಮುದ್ರ, ಸಾಗರ, ವಿದ್ಯುಕ್ತ - ವಿಧಿಪೂರ್ವಕ, ಪ್ರತೀತ - ಪ್ರಸಿದ್ಧಿ, ಸ್ತಂಭ (ತ್ಸ) ಕಂಬ (ದ್ಭ), ದಿಟ - ಸತ್ಯ.

**ಕೃತಿ 1)** ಪಾಠವನ್ನು ಓದಿಕೊಂಡು ಕೆಳಗೆ ಕೊಟ್ಟಿರುವ ಕೃತಿಗಳನ್ನು ಸೂಚನೆಗೆನುಗುಣವಾಗಿ ಪೂರ್ಣ ಮಾಡಿರಿ.


**i)** ಕೆಳಗಿನ ಜಾಲವನ್ನು ಪೂರ್ಣಗೊಳಿಸಿರಿ.





**ii)** ಕನ್ಯಾಕುಮಾರಿಯಲ್ಲಿ ಸಂಗಮವಾದ ಸಮುದ್ರಗಳು




**iii)** ಗಾಂಧೀ ಮಂದಿರದ ಎದುರು ಇರುವ ಅಂಗಡಿಗಳು




**ಕೃತಿ 2)** **I)** ಶಿಲಾ ಕಂಬಗಳಿಂದ ಸಂಗೀತ ಸ್ವರ ಬರುವ ಊರುಗಳು




**III)** ಚಿತ್ರ ಸಂಗ್ರಹ ಶಾಲೆಯಲ್ಲಿ ಕಂಡು ಬರುವ ಚಿತ್ರಗಳು



**ಕೃತಿ 3)** **I)** ಕೆಳಗಿನ ಜಾಲಾಕೃತಿಗಳನ್ನು ಬಿಡಿಸಿರಿ.



**II)**




**ಕೃತಿ 4) I)** ಶುಚೀಂದ್ರ ಎಂಬ ಹೆಸರು ಬರಲು ಕಾರಣವೇನು? ಎಂಬುದರ ವಿವರಣೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**II)** ನೀವು ನೋಡಿದ ಯಾವುದಾದರೊಂದು ಪ್ರವಾಸ ಸ್ಥಳದ ವರ್ಣನೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**ಕೃತಿ 5) I)** ಅನಂತಪದ್ಮನಾಭನ ದೇವಸ್ಥಾನದ ವರ್ಣನೆಯನ್ನು ವಿವರಿಸಿರಿ.

**II)** ಚಿತ್ರಶಾಲೆಗೆ ಭೇಟಿಕೊಟ್ಟಾಗ ಆದ ಅನುಭವಗಳನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**III)** ಕೆಳಗೆ ಕೊಟ್ಟ ಅಕ್ಷರಗಳಲ್ಲಿ ಕೆಲವು ತೀರ್ಥಸ್ಥಳಗಳ ಹೆಸರುಗಳು ಅಡಗಿವೆ. ಅವುಗಳನ್ನು ಹುಡುಕಿ ಬರೆಯಿರಿ.

ಲ
ಶೈ ಗ
ಶ್ರೀ ಓ ಂ
ರಾ ಮೇ ಶ್ವ ರ
ಟ ಜ ಭೀ ದಾ ಥ
ಕಾ ಶೀ ಮಾ ಕೇ ನಾ ತಿ
ಚ ಡ ಶಂ ಣ ರಿ ರು ರ್ಣ
ಘು ಕ ಮ ದ ಪ ಕ
ರ ಧಿ ಬ ತಿ ಗೋ
ಹೃ ಷಿ ಕೇ ಶ
ಯ ಋ ದ್ವಾ
ಬ ಠ
ಹ

**ಕೃತಿ 6) I)** ಇತಿಹಾಸದ ಗತಕಾಲವನ್ನು ನೆನಪಿಸಿಕೊಡುವ ಸಭಾಂಗಣ ಯಾವುದು ? ಅದರ ವೈಶಿಷ್ಟ್ಯವೇನು?

**II)** ನಿಮಗೆ ಗೊತ್ತಿರುವ ಸಂಗೀತ ಸಾಧನಗಳ ಪಟ್ಟಿ ತಯಾರಿಸಿರಿ.

ಉದಾ : ತಬಲಾ ______ ______ ______
______ ______ ______

**ಕೃತಿ 7) I)** **ಕೆಳಗಿನ ಪದಗಳನ್ನು ವಿಗ್ರಹಿಸಿ ಸಮಾಸ ಬಿಡಿಸಿರಿ.**
**ನಡುಗಡ್ಡೆ, ಸೂರ್ಯಚಂದ್ರ, ತ್ರಿಮೂರ್ತಿ, ಬಾಗಿಲುತೆರೆ**

**II)** **ಉದಾಹರಣೆಯಲ್ಲಿ ತೋರಿಸಿದಂತೆ ನಾಲ್ಕು ಶಬ್ದಗಳನ್ನು ಬರೆಯಿರಿ.**

ಉದಾ : ಸಿರಿ - ಸಿರಿತನ

1) 3)

2) 4)

**III)** **ಈ ಪಾಠದಲ್ಲಿ ಬಂದಿರುವ ದ್ವಿರುಕ್ತಿ ಪದಗಳನ್ನು ಬರೆಯಿರಿ. ಉದಾ - ಸರಸರ**

1) 3)

2) 4)


**IV)** **ಕೆಳಗಿನ ಪದಗಳ ತತ್ಸಮ - ತದ್ಭವಗಳನ್ನು ಬರೆಯಿರಿ.**

1 ಆಶ್ಚರ್ಯ 3) ಭಕ್ತ

2) ವರ್ಷ 4) ರೂಪ

**V)** **ನಿಮ್ಮ ಶಾಲೆಯಲ್ಲಿ ಕೈಕೊಂಡ ಶೈಕ್ಷಣಿಕ ಪ್ರವಾಸದ ಕುರಿತು ನಿಮ್ಮ ಸ್ನೇಹಿತನಿಗೆ ಒಂದು ಪತ್ರ ಬರೆಯಿರಿ.**

**ಕೃತಿ 8) ಸಂಭಾಷಣೆ**




ನಿಮ್ಮ ಶಾಲೆಯಲ್ಲಿ ಕೈಕೊಂಡ ಶೈಕ್ಷಣಿಕ ಪ್ರವಾಸದ ಕುರಿತು ನಿಮ್ಮ ವರ್ಗದ ಶಿಕ್ಷಕರೊಂದಿಗೆ ಮೇಲಿನ ಅಂಶಗಳ ಸಹಾಯದಿಂದ ಸ್ವ-ಅಭಿಪ್ರಾಯ ಸೇರಿಸಿ ಸಂಭಾಷಣೆ ಬರೆ.

ಅಥವಾ

ಶೈಕ್ಷಣಿಕ ಪ್ರವಾಸದ ವರ್ಣನೆ ತಿಳಿಸುತ್ತಾ ನಿಮ್ಮ ಗೆಳೆಯ/ಗೆಳತಿಯರೊಂದಿಗೆ ಮೇಲಿನ ಅಂಶಗಳ ಸಹಾಯದಿಂದ ಸಂಭಾಷಣೆ ಬರೆ.

FX0B6K


# 2. ವಿಫಲ ಸಂಧಾನ

- ಎ. ಆರ್. ಕೃಷ್ಣಶಾಸ್ತ್ರೀ

**ಲೇಖಕರ ಪರಿಚಯ :** ಈ ಗದ್ಯ ಭಾಗವನ್ನು ಕನ್ನಡ ನಾಡಿನ ಶ್ರೇಷ್ಠ ವಿದ್ವಾಂಸರ ಪಂಕ್ತಿಯಲ್ಲಿಗಣ್ಯ ರೆನಿಸಿದ್ದ ದಿ|| ಎ. ಆರ್. ಕೃಷ್ಣಶಾಸ್ತ್ರೀ, ಅವರು ರಚಿಸಿದ 'ವಚನ ಭಾರತ' ಎಂಬ ಗ್ರಂಥದ ಮೂಲ ಸಂಸ್ಕೃತ ಭಾರತದ ಕಥಾಸಂವಿಧಾನವನ್ನನುಸರಿಸಿ ಸುಂದರವಾದ ಸರಳ ಶೈಲಿಯಲ್ಲಿ ಬರೆದಿದ್ದಾರೆ. ಇವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಪ್ರೊಫೆಸರ್ ಆಗಿ ನಿವೃತ್ತರಾಗಿದ್ದರು. ಇವರು ಕಥಾಮೃತ, ಭಾಸಕವಿ, ಸಂಸ್ಕೃತ ನಾಟಕಗಳು, ಭಾಷಣಗಳು ಮತ್ತು ಲೇಖನಗಳು - ಎಂಬ ಗ್ರಂಥ ರಚನೆ ಮಾಡಿ ಸಾಹಿತ್ಯ ಪ್ರಪಂಚಕ್ಕೆ ಅರ್ಪಿಸಿ ಕೀರ್ತಿಶೇಷರಾಗಿದ್ದಾರೆ.


**ಕಥಾ ಸಂದರ್ಭ :** ಶ್ರೀಕೃಷ್ಣನು ಪಾಂಡವರ ಪಕ್ಷವಹಿಸಿ ಸಂಧಾನಕ್ಕೋಸ್ಕರ ಹಸ್ತಿನಾವತಿ ನಗರಕ್ಕೆ ಬಂದನು. ದುರ್ಯೋಧನನಿಗೆ ಅನೇಕ ಬುದ್ಧಿವಾದ ಹೇಳಿ ಪಾಂಡವರೊಡನೆ ಸಂಧಾನ ಮಾಡಿಕೊಳ್ಳಲು ತಿಳಿಸಿದನು. ದುರ್ಯೋಧನನು ಸಂಧಾನಕ್ಕೆ ಒಪ್ಪಲಿಲ್ಲ. ಸಂಧಾನ ಮುರಿದು ಬಿತ್ತು. ಆ ಸಂದರ್ಭದಲ್ಲಿ ದುರ್ಯೋಧನನು ತನ್ನ ಆಪ್ತರೊಡನೆ ಎಲ್ಲ ಹಿರಿಯರ ಬುದ್ಧಿವಾದಗಳನ್ನೂ ಗಮನಿಸದೆ ಶ್ರೀ ಕೃಷ್ಣನನ್ನು ಬಂಧಿಸಲು ಪ್ರಯತ್ನಿಸುವನು. ಮುಂದಿನ ಕಥಾಭಾಗವನ್ನು ಓದಿ ತಿಳಿಯಿರಿ.

ಧೃತರಾಷ್ಟ್ರನು ವಿದುರನಿಗೆ ಹೇಳಿ ದುರ್ಯೋಧನನನ್ನು ಕರೆಸಿ ''ಅಯ್ಯೋ ! ಕ್ರೂರ ! ಪಾಪಿ ! ನೀಚರಾದ ಸ್ನೇಹಿತರೊಡನೆ ಸೇರಿಕೊಂಡು ಅಶಕ್ಯವೂ ಅಕೀರ್ತಿಕರವೂ ಆದ ಕೆಲಸ ಮಾಡಬೇಕೆಂದಿದ್ದೀಯಾ ? ನಿನ್ನಂಥ ಮೂಢನೂ ಕುಲಗೇಡಿಯೂ ಇನ್ನಿರಲಾರನು. ಏನು, ಕೃಷ್ಣನನ್ನು ಕಟ್ಟಿಹಾಕಬೇಕೆಂದಿದ್ದೀಯಂತಲ್ಲಾ ? ಅವನನ್ನು ಇಂದ್ರಾದಿ ದೇವತೆಗಳೂ ಕಟ್ಟಿ ಹಾಕಲಾರರು; ಅದು ಗಾಳಿಯನ್ನು ಹಿಡಿಯಲ್ಲಿ ಹಿಡಿದುಕೊಳ್ಳುವ, ಚಂದ್ರನನ್ನು ಕೈಯಿಂದ ಮುಟ್ಟುವ, ಭೂಮಿಯನ್ನು ತಲೆಯಿಂದ ಹೊರುವ ಕೆಲಸದ ಹಾಗೆ !'' ಎಂದನು. ಅವನನ್ನು ಅನುಮೋದಿಸಿ ವಿದುರನು



ಮಾತನಾಡಿ ಕೃಷ್ಣನು ಅದುವರೆಗೆ ಮಾಡಿದ್ದ ಸಾಹಸ ಕಾರ್ಯಗಳನ್ನೆಲ್ಲಾ ಹೇಳಿದನು. ಆಗ ಕೃಷ್ಣನು ದುರ್ಯೋಧನನನ್ನು ಕುರಿತು, ''ನಾನು ಒಬ್ಬಂಟಿಗನಾಗಿದ್ದೇನೆಂದು ಭಾವಿಸಿ ನನ್ನನ್ನು ಕಟ್ಟೋಣವೆಂದು ಯೋಚಿಸಿದೆಯಾ ಸುಯೋಧನ? ಪಾಂಡವರು ಅಂಧಕ ವೃಷ್ಣಿಗಳೂ, ಆದಿತ್ಯರೂ, ರುದ್ರರೂ, ವಸುಗಳೂ, ಎಲ್ಲರೂ ಇಲ್ಲಿಯೇ ಇದ್ದಾರೆ!'' ಎಂದು ಒಂದು ಸಾರಿ ಗಟ್ಟಿಯಾಗಿ ನಕ್ಕನು. ಕೃತವರ್ಮ ಸಾತ್ಯಕಿಗಳೊಡನೆ ಹೊರಕ್ಕೆ ಹೊರಟನು. ಅವನು ರಥದಲ್ಲಿ ಕುಳಿತುಕೊಳ್ಳಲು ಧೃತರಾಷ್ಟ್ರನು ಅಲ್ಲಿಗೆ ಬಂದು ''ಜನಾರ್ಧನ ! ನನ್ನ ಮಕ್ಕಳ ಮೇಲೆ ನನ್ನ ಅಧಿಕಾರ ಎಷ್ಟರ ಮಟ್ಟಿಗೆ ನಡೆಯುತ್ತದೆ ಎಂಬುದನ್ನು ನೀನು ನೋಡಿದೆ ! ಪಾಂಡವರ ಸಂಬಂಧವಾಗಿ ನನಗೆ ಯಾವ ದುರುದ್ದೇಶವೂ ಇಲ್ಲ. ನಾನು ಪಾಂಡವರೊಡನೆ ಸಂಧಿಗಾಗಿ ಸರ್ವಪ್ರಯತ್ನವನ್ನೂ ಮಾಡುತ್ತಿದ್ದೇನೆಂದು ಕೌರವರೂ ಈ ರಾಜರೂ ಎಲ್ಲರೂ ಬಲ್ಲರೂ !'' ಎಂದು ಸಮಾಧಾನ ಹೇಳಿದನು. ಕೃಷ್ಣನು ಧೃತರಾಷ್ಟ್ರನನ್ನೂ ಭೀಷ್ಮಾದಿಗಳನ್ನೂ ಕುರಿತು, ''ಕೌರವ ಸಭೆಯಲ್ಲಿ ಇದುವರೆಗೆ ಏನು ನಡೆಯಿತೆಂಬುದನ್ನು ನೀವೆಲ್ಲರೂ ಕಣ್ಣಾರೆ ಕಂಡಿರಿ. ಆ ಅವಿವೇಕಿ ಮರ್ಯಾದೆ ಮೀರಿ ರೋಷದಿಂದ ಎಷ್ಟು ಸಲ ಸಭೆಬಿಟ್ಟು ಎದ್ದೆದ್ದು ಹೋದನೆಂಬುದನ್ನು ನೋಡಿದಿರಿ; ಈ ಧೃತರಾಷ್ಟ್ರನಾದರೆ ತನ್ನ ಕೈ ಏನೂ ನಡೆಯುವುದಿಲ್ಲವೆಂದು ಹೇಳುತ್ತಿದ್ದಾನೆ ! '' ಎಂದು ಅವರೆಲ್ಲರ ಅಪ್ಪಣೆ ಪಡೆದು ಎಲ್ಲರೂ ಪಿಳಪಿಳನೆ ನೋಡುತ್ತಿರಲು ಕುಂತಿಯ ಮನೆಗೆ ಹೊರಟು ಹೋದನು.

ಅಲ್ಲಿ ಕುಂತಿಗೆ ನಮಸ್ಕಾರ ಮಾಡಿ, ಸಭೆಯಲ್ಲಿ ನಡೆದದ್ದನ್ನೆಲ್ಲಾ ತಿಳಿಸಿ ''ನಾನು ಹೋಗಿ ಬರುತ್ತೇನೆ ಅತ್ತೆ ! ಬೇಗ ಹೋಗಿ ಪಾಂಡವರನ್ನು ಕಾಣಬೇಕು. ಅವರಿಗೆ ಏನು ಹೇಳಲಿ ? ಎಂದು ಕೇಳಿದನು. ಕುಂತಿಯು ''ಕೇಶವ ! ಧರ್ಮರಾಜನಿಗೆ 'ಕ್ಷತ್ರಿಯ ಧರ್ಮವನ್ನು ಹಿಡಿ; ಈಗ ನೀನು ಹೋಗುತ್ತಿರುವ ದಾರಿ ನಿನ್ನ ತಂದೆ ತಾತಂದಿರೇ ಮುಂತಾದ ರಾಜರ್ಷಿಗಳು ಹೋಗುತ್ತಿದ್ದ ದಾರಿಯಲ್ಲ. ರಾಜಧರ್ಮಾನುಸಾರವಾಗಿ ಯುದ್ಧ ಮಾಡು. ನಿನ್ನ ಪಿತೃಗಳನ್ನು ಅಧೋಗತಿಗೆ ತಳ್ಳಿ ನೀನೂ ನಿನ್ನ ತಮ್ಮಂದಿರೂ ಕ್ಷೀಣಪುಣ್ಯರಾಗಿ ದುರ್ಗತಿಯನ್ನು ಪಡೆಯಬೇಡಿ.



ನಿನ್ನನ್ನು ಹೆತ್ತ ತಾಯಿ ಅನ್ಯರ ಅನ್ನಕ್ಕೆ ಕಾಯಬೇಕಾಗಿದೆ. ಕೈ ಹಿಡಿದ ಹೆಂಡತಿ ಅವಮಾನದಲ್ಲಿ ಕೊರಗಿ ನವೆಯುತ್ತಿದ್ದಾಳೆ ಎಂಬುದು ಜ್ಞಾಪಕದಲ್ಲಿರಲಿ !' ಎಂದು ಹೇಳು. ಶತ್ರುವಿಗೆ ಸೋತು ಬಂದು ಮಲಗಿಬಿಟ್ಟಿದ್ದ ತನ್ನ ಮಗ ಸಂಜಯನನ್ನು ವಿದುಲೆಯು ಹುರಿಗೊಳಿಸಿ ಯುದ್ಧ ಮಾಡಿಸಿದ ಉಪಾಖ್ಯಾನವನ್ನು ತಿಳಿಸು. ನಾನು ಕ್ಷೇಮವಾಗಿದ್ದೇನೆಂದು ಹೇಳು. ಹುಡುಗರನ್ನು ಕಾಪಾಡಿಕೊ. ನಿನ್ನ ಪ್ರಯಾಣ ಸುಖವಾಗಲಿ !'' ಎಂದಳು.

ಅನಂತರ ಕೃಷ್ಣನು ಕುಂತಿಗೆ ನಮಸ್ಕಾರ ಮಾಡಿ ಸಿಂಹದ ನಡಿಗೆಯಿಂದ ನಡೆದು ಬರುತ್ತ ತನ್ನನ್ನು ಕಳುಹಿಸಿ ಕೊಡುವುದಕ್ಕೆ ಬಂದಿದ್ದ ಭೀಷ್ಮಾದಿ ಕೌರವ ಪ್ರಮುಖರನ್ನೆಲ್ಲಾ ಬೀಳ್ಕೊಟ್ಟು, ಕರ್ಣನೊಬ್ಬನನ್ನು ಮಾತ್ರ ತನ್ನ ರಥದಲ್ಲಿ ಕೂರಿಸಿಕೊಂಡು ಹೊರಟನು. ಊರಿಂದ ಹೊರಕ್ಕೆ ಹೋದ ಮೇಲೆ ಅವನನ್ನು ಕುರಿತು ''ಕರ್ಣ ! ನೀನು ವೇದಪಾರಂಗತರಾದ ಬ್ರಾಹ್ಮಣರನ್ನು ಸೇವಿಸಿ ಅವರಿಂದ ತತ್ತ್ವಾರ್ಥವನ್ನು ಕೇಳಿ ತಿಳಿದುಕೊಂಡವನು, ಧರ್ಮಸೂಕ್ಷ್ಮಗಳನ್ನೆಲ್ಲಾ ಬಲ್ಲವನು. ನೀನು ಕಾನೀನನಾಗಿ ಹುಟ್ಟಿ, ಧರ್ಮದಲ್ಲಿ ಪಾಂಡುವಿನ ಮಗನಾಗಿದ್ದೀಯೆ. ಪಾಂಡವನಿಗೆ ಹಿರಿಯನಾಗಿದ್ದೀಯೆ. ಆದ್ದರಿಂದ ರಾಜ್ಯಾಧಿಕಾರವು ನಿನಗೇ ಬರಬೇಕು. ತಂದೆಯ ಸಂಬಂಧದಿಂದ ಪಾಂಡವರೂ, ತಾಯಿಯ ಸಂಬಂಧದಿಂದ ವೃಷ್ಣಿಗಳೂ ನಿನ್ನವರಾದರು. ಆದ್ದರಿಂದ ಈಗ ನನ್ನ ಜೊತೆಯಲ್ಲಿ ಬಂದುಬಿಡು. ಪಾಂಡವರು ನಿನಗೆ ನಮಸ್ಕರಿಸಿ ನಿನ್ನನ್ನು ಅಣ್ಣನೆಂದು ಗೌರವಿಸುತ್ತಾರೆ. ದ್ರೌಪದಿಯ ಮತ್ತು ಸುಭದ್ರೆಯ ಮಕ್ಕಳೂ ಪಾಂಡವರ ಕಡೆಯ ರಾಜರೂ ನಿನ್ನನ್ನು ಸೇವಿಸುತ್ತಾರೆ. ನಾನು ನಿನಗೆ ರಾಜನನ್ನಾಗಿ ಪಟ್ಟಾಭಿಷೇಕ ಮಾಡುತ್ತೇನೆ. ಯುಧಿಷ್ಠಿರನು ಯುವರಾಜನಾಗುತ್ತಾನೆ. ಪಾಂಡವರೂ, ಪಾಂಚಾಲರೂ, ವೃಷ್ಣಿಗಳೂ, ನಾನೂ ನಿನ್ನ ಅನುಯಾಯಿಗಳಾಗುತ್ತೇವೆ. ನಕ್ಷತ್ರ ಮಧ್ಯದ ಚಂದ್ರನಂತೆ ನೀನು ಪಾಂಡವರ ಮಧ್ಯೆ ರಾಜ್ಯವಾಳಿಕೊಂಡಿರು; ಅದರಿಂದ ನಿನ್ನ ತಾಯಿಗೂ, ಇಷ್ಟಮಿತ್ರರಿಗೂ ಸಂತೋಷವಾಗುತ್ತದೆ !'' ಎಂದು ಹೇಳಿದನು.

ಈ ಮೊದಲೇ ಒಂದು ದಿನ ಸೂರ್ಯನು ಕರ್ಣನನ್ನು ಕಂಡು ಅವನು ತನ್ನ ಮಗನೆಂದೂ, ಕುಂತಿಯಲ್ಲಿ ಹುಟ್ಟಿದವನೆಂದೂ, ಅರ್ಜುನನ ಮೇಲಣ ಅಭಿಮಾನದಿಂದ ಇಂದ್ರನು ಬಂದು ಕರ್ಣನ ಕವಚ ಕುಂಡಲಗಳನ್ನು ಕೇಳುವನೆಂದೂ ಎಚ್ಚರಿಸಿದ್ದನು. ಹೀಗೆ ತನ್ನ ನಿಜವಾದ ತಂದೆ ತಾಯಿಗಳಾರು ಎಂಬುದು ಆಗಲೇ ಅವನಿಗೆ ಗೊತ್ತಾಗಿದ್ದುದರಿಂದ ಅವನು ''ಹೌದು ! ನಾನಾರು ಎಂಬುದನ್ನು ಬಲ್ಲೆ !'' ಎಂದು ಉತ್ತರ ಕೊಟ್ಟು, ಮತ್ತೆ ''ಕುಂತಿಯು ನನಗೆ ಅಪಾಯವಾಗುವ ರೀತಿಯಲ್ಲಿ ನನ್ನನ್ನು ತೊರೆದುಬಿಟ್ಟಳು. ಸೂತನಾದ ಅಧಿರಥನು ನನ್ನನ್ನು ಕಂಡು ಪ್ರೀತಿಯಿಂದ ಮನೆಗೆ ಎತ್ತಿಕೊಂಡು ಬಂದು ರಾಧೆಗೆ ಕೊಟ್ಟನು. ನನ್ನನ್ನು ಎತ್ತಿಕೊಂಡ ಕೂಡಲೇ ಅವಳಿಗೆ ವಾತ್ಸಲ್ಯದಿಂದ ಎದೆಯಲ್ಲಿ ಹಾಲು ಚಿಮ್ಮಿತು. ಅವಳು ನನ್ನ ಮಲಮೂತ್ರಗಳನ್ನು ಬಾಚಿದಳು. ಧರ್ಮವನ್ನು ತಿಳಿದವನಾಗಿ ಯಾವಾಗಲೂ ಧರ್ಮಶಾಸ್ತ್ರಗಳನ್ನು ಕೇಳುತ್ತಿರುವ ನನ್ನಂಥವನು ಅವಳಿಗೆ ಪಿಂಡ ಹಾಕಬೇಡವೆ? ಅಧಿರಥನು ನನ್ನನ್ನು ಮಗನಂತೆಯೇ ಕಂಡುಕೊಂಡಿದ್ದಾನೆ. ನಾನು ಅವನ ಪ್ರೇಮವನ್ನು ನೋಡಿ ತಂದೆಯಂದೇ ಭಾವಿಸಿಕೊಂಡಿದ್ದೇನೆ. ಆ ಪುತ್ರಪ್ರೇಮವೆನ್ನುವುದು ಎಷ್ಟು ದೂರ ಹೋಯಿತೆಂದರೆ, ಅವನು ನನಗೆ ಬ್ರಾಹ್ಮಣರಿಂದ ಶಾಸ್ತ್ರೋಕ್ತವಾಗಿ ಜಾತಕರ್ಮ ಮಾಡಿಸಿ ವಸುಷೇಣನೆಂದು ನಾಮಕರಣ ಮಾಡಿಸಿದನು; ಯೌವನ ಬಂದ ಮೇಲೆ ಮದುವೆ ಮಾಡಿದನು; ಆ ಹೆಂಡಿರಲ್ಲಿ ನನಗೆ ಮಕ್ಕಳು ಮೊಮ್ಮಕ್ಕಳಾಗಿವೆ; ಅವರಲ್ಲಿ ಮಮತೆಯುಂಟಾಗಿದೆ. ಹೊನ್ನಿನ ರಾಶಿಯನ್ನು ಸುರಿದರೂ, ಸಮಸ್ತ ಭೂಮಂಡಲವನ್ನೇ ಕೊಟ್ಟರೂ ಸಂತೋಷದಿಂದಾಗಲೀ, ಭೀತಿಯಿಂದಾಗಲೀ, ನನಗೆ ಸುಳ್ಳು ಹೇಳುವುದಕ್ಕೆ ಮನಸ್ಸು ಬಾರದು. ಗೋವಿಂದ ! ದುರ್ಯೋಧನನ ಆಶ್ರಯ ಪಡೆದು ಈ ಹದಿಮೂರು ವರ್ಷ ನಿಷ್ಕಂಟಕವಾದ ರಾಜ್ಯಸುಖವನ್ನು ಅನುಭವಿಸಿದೆ. ಸೂತರಲ್ಲಿಯೇ ಕೊಟ್ಟು ತಂದು ಸಂಬಂಧ ಬೆಳೆದು ಹೋಗಿದೆ. ನನ್ನನ್ನು ನಂಬಿಕೊಂಡೇ ದುರ್ಯೋಧನನು ಪಾಂಡವರ ಮೇಲೆ ಯುದ್ಧ ಹೂಡಿರುವುದು. ದ್ವಂದ್ವ ಯುದ್ಧದಲ್ಲಿ ನಾನು ಅರ್ಜುನನನ್ನು ಎದುರಿಸಿ ನಿಲ್ಲಬೇಕು ನಾನು ಹಾಗೆ ಮಾಡದಿದ್ದರೆ ನನಗೂ ಅರ್ಜುನನಿಗೂ ಇಬ್ಬರಿಗೂ ಕೆಟ್ಟ ಹೆಸರು ಬರುತ್ತದೆ. ನೀನೇನೋ ನನ್ನ ಹಿತಕ್ಕಾಗಿಯೇ ಹೇಳುತ್ತಿದ್ದೀಯೆ. ಪಾಂಡವರು ನಿನಗೆ ವಿಧೇಯರಾಗಿ ನೀನು ಹೇಳಿದಂತೆ

ನಿನಗೆ ವಿಧೇಯತೆಯಿಂದ ನಡೆದುಕೊಳ್ಳುತ್ತಾರೆ. ನಾನು ಕುಂತಿಯ ಹಿರಿಯ ಮಗನೆಂದು ತಿಳಿದರೆ ಧರ್ಮರಾಜನು ರಾಜ್ಯವನ್ನು ಒಪ್ಪಿಕೊಳ್ಳುವುದಿಲ್ಲ; ನನಗೆ ಕೊಟ್ಟರೆ ನಾನು ಅದನ್ನು ದುರ್ಯೋಧನನಿಗೆ ಕೊಟ್ಟುಬಿಡುತ್ತೇನೆ. ಆದ್ದರಿಂದ ಧರ್ಮಾತ್ಮನಾದ ಯುಧಿಷ್ಠಿರನೇ ಸ್ಥಿರವಾಗಿ ದೊರೆಯಾಗಿರಲಿ; ಹಾಗಾದರೆ ಅವನಿಗೆ ನಿನ್ನ ನೇತೃತ್ವ ದೊರೆಯುತ್ತದೆ; ಅರ್ಜುನ ಭೀಮಾದಿಗಳು ಜೊತೆಗೆ ನಿಂತು ಯುದ್ಧಮಾಡುತ್ತಾರೆ. ಮುಂದೆ ದೊಡ್ಡ ಶಸ್ತ್ರಯಜ್ಞ ನಡೆಯುವುದಿದೆ. ಅದನ್ನು ನೀನು ಬಲ್ಲೆ. ದುರ್ಯೋಧನನನ್ನು ಭೀಮಸೇನನು ಕೊಂದಾಗ ಅದು ಮುಗಿಯುತ್ತದೆ. ಧೃತರಾಷ್ಟ್ರನ ಸಂಸಾರಕ್ಕೆ ಸೇರಿದ ಹೆಣ್ಣು ಮಕ್ಕಳೂ ಗಾಂಧಾರಿಯೂ ಕಣ್ಣೀರು ಸುರಿಸಿದರೆ ಅದರಿಂದ ಅವಭೃಥಸ್ನಾನವಾಗುತ್ತದೆ. ಆದರೆ ಅದರಲ್ಲಿ ಜ್ಞಾನವೃದ್ಧರೂ ವಯೋವೃದ್ಧರೂ ಆದ ಕ್ಷತ್ರಿಯರು ವ್ಯರ್ಥವಾಗಿ ಸಾಯದಿರಲಿ; ಸಮೃದ್ಧವಾಗಿ ಬಳೆದು ನಿಂತಿರುವ ಕ್ಷತ್ರಿಯ ಕುಲವು ಪವಿತ್ರವಾದ ಕುರುಕ್ಷೇತ್ರದಲ್ಲಿ ಆಯುಧಗಳಿಂದ ಕಡಿವಡೆದು ಸ್ವರ್ಗವನ್ನು ಸೇರಲಿ; ಅದನ್ನು ನಿನ್ನ ಇಷ್ಟವಿದ್ದಂತೆ ನಡೆಸು; ಯುದ್ಧದಲ್ಲಿ ಅರ್ಜುನನನ್ನು ನನ್ನ ಮುಂದೆ ಬರಿಸು; ಇವೆಲ್ಲವೂ ಗೋಪ್ಯವಾಗಿರಲಿ !'' ಎಂದನು.

ಕೃಷ್ಣನು ಈ ಮಾತನ್ನು ಕೇಳಿ ಮುಗುಳುನಗುತ್ತ ''ಹಾಗಾದರೆ ನಿನಗೆ ರಾಜ್ಯದ ಮೇಲೆ ಆಸೆ ಇಲ್ಲವೇ ಕರ್ಣ? ನಾನು ಕೊಡಿಸುವ ಭೂಮಿಯನ್ನು ಆಳಲಿಷ್ಟವಿಲ್ಲವೇ? ಹೋಗಲಿ, ಬಿಡು; ಪಾಂಡವರಿಗೆ ಜಯವಾಗುವುದರಲ್ಲಿ ಸಂಶಯವಿಲ್ಲ; ನೀನು ಬೇಗ ಅರ್ಜುನನನ್ನು ಎದುರಿಸಿ ಯುದ್ಧಮಾಡುವೆ ನೀನು ಇಲ್ಲಿಂದ ಹಿಂತಿರುಗಿ ಹೋಗಿ ದ್ರೋಣ, ಭೀಷ್ಮ ಕೃಪರಿಗೆ 'ಈ ತಿಂಗಳು ಸೌಮ್ಯವಾಗಿದೆ; ಕಾಳುಕಡ್ಡಿ ಸುಲಭವಾಗಿ ಒದಗುತ್ತದೆ; ಗಿಡಮರಗಳು ಹಣ್ಣಿನಿಂದ ತುಂಬಿವೆ; ಕೆಸರಿಲ್ಲ, ನೀರು ಚೆನ್ನಾಗಿದೆ; ಶೀತ ಸೆಕೆಗಳು ಅತಿಯಾಗಿಲ್ಲ. ನೊಣಗಳು ಹೆಚ್ಚಾಗಿಲ್ಲ; ಇಂದಿಗೆ ಏಳನೆಯ ದಿವಸ ಅಮಾವಾಸ್ಯೆಯಾಗುತ್ತದೆ. ಅಂದು ಯುದ್ಧವನ್ನು ಆರಂಭಿಸಬಹುದು' ಎಂದು ಹೇಳು ದುರ್ಯೋಧನನ ವಶವರ್ತಿಗಳಾದ ರಾಜರೂ, ರಾಜಪುತ್ರರೂ ಶಸ್ತ್ರಮರಣವನ್ನು ಪಡೆದು ಸದ್ಗತಿಯನ್ನು ಹೊಂದುತ್ತಾರೆ !'' ಎಂದನು. ಕರ್ಣನು ''ಇದನ್ನು ನಾನು ಬಲ್ಲೇ ಕೃಷ್ಣ ! ದುರ್ಯೋಧನನಿಗೆ ವಿರುದ್ಧವಾಗಿ ಬೇಕಾದಷ್ಟು ದುಶ್ಶಕುನಗಳೂ ದುಸ್ಸ್ವಪ್ನಗಳೂ ಆಗುತ್ತಿವೆ. ವೀರವಿನಾಶಕವಾದ ಈ ಮಹಾಯುದ್ಧವನ್ನು ಕಳೆದುಳಿದು ನಾವು ಒಬ್ಬರನ್ನೊಬ್ಬರು ಮತ್ತೆ ನೋಡುತ್ತೇವೆಯೋ ಇಲ್ಲವೊ; ಸ್ವರ್ಗದಲ್ಲಂತೂ ನೋಡುತ್ತೇವೆಯಲ್ಲ;'' ಎಂದು ಕೃಷ್ಣನನ್ನು ಆಲಿಂಗಿಸಿಕೊಂಡು ರಥದಿಂದ ಇಳಿದು ತನ್ನ ರಥವನ್ನು ಹತ್ತಿ ಕುಗ್ಗಿದ ಮನಸ್ಸಿನಿಂದ ಊರಿಗೆ ಹಿಂತಿರುಗಿದನು. ಇತ್ತ ಕೃಷ್ಣನೂ ಸಾತ್ಯಕಿಯೂ ವೇಗವಾಗಿ ಹೊರಟರು; ಮತ್ತೆ ಮತ್ತೆ ''ಬಿಡು ! ಬೇಗ ನಡೆ ! ಬೇಗ ನಡೆ !'' ಎಂದು ಸಾರಥಿಯನ್ನು ಒತ್ತಾಯಪಡಿಸುತ್ತಿದ್ದನು.

ಕೃಷ್ಣನು ಸಂಧಿ ಮಾಡಿಸಲಾರದೆ ಹೊರಟುಹೋದ ಮೇಲೆ ಕುಂತಿಯು ಚಿಂತಿಸುತ್ತ ''ಅಯ್ಯೋ ! ಹಾಳು ಯುದ್ಧವೇ! ಜ್ಞಾತಿಗಳು ಅನ್ಯಾಯವಾಗಿ ಪರಸ್ಪರ ಹೊಡೆದಾಡಿ ಸಾಯುತ್ತಾರಲ್ಲ ! ಜ್ಞಾತಿಗಳನ್ನು ಕೊಂದು ಪಡೆದ ಜಯ ಏನು ಜಯ? ನನಗೆ ಭೀಷ್ಮ, ದ್ರೋಣ, ಕರ್ಣ ಮುಖ್ಯವಾಗಿ ಈ ಮೂವರಿಂದ ಭಯ. ಭೀಷ್ಮನಿಗೆ ಪಾಂಡವರ ಮೇಲೆ ಪ್ರೀತಿ. ದ್ರೋಣನಿಗೂ ಅವರ ಮೇಲೆ ಶಿಷ್ಯರೆಂದು ಪ್ರೀತಿ; ಅವನು ಅವರ ಮೇಲೆ ಕೈಮಾಡಲಾರ. ಸುಮ್ಮನೆ ಕಣ್ಣುಮುಚ್ಚಿಕೊಂಡು ದುರ್ಯೋಧನನ ಬಾಲ ಹಿಡಿದು ಹೋಗುತ್ತ ಪಾಂಡವರನ್ನು ಸದಾ ದ್ವೇಷಿಸುತ್ತಿರುವ ಈ ಕರ್ಣನೊಬ್ಬನೇ ನನ್ನ ಎದೆಗಿಚ್ಚಾಗಿದ್ದಾನೆ. ಅವನನ್ನು ಕಂಡು ಹೇಗಾದರೂ ಪಾಂಡವರ ಕಡೆಗೆ ಒಲಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಿನೋಡುತ್ತೇನೆ '' – ಎಂದುಕೊಂಡು ಗಂಗಾತೀರಕ್ಕೆ ಬಂದಳು. ಅಲ್ಲಿ ಕರ್ಣನು ಪೂರ್ವಾಭಿಮುಖವಾಗಿ ತೋಳೆತ್ತಿ ನಿಂತುಕೊಂಡು ಜಪಮಾಡುತ್ತಿದ್ದನು. ಕಾರ್ಯವಾಸಿಯಾಗಿ ಬಂದಿದ್ದ ಕುಂತಿಯು ಬಿಸಿಲಿನ ತಾಪವನ್ನು ತಡೆಯಲಾರದೆ ಮುಸುಕು ಹಾಕಿಕೊಂಡು ಬಾಡಿದ ಪದ್ಮಮಾಲೆಯಂತೆ, ಜಪ ಮುಗಿಯುವುದನ್ನೇ ಎದುರು ನೋಡುತ್ತ ಅವನ ಹಿಂದೆ ಕಾದು ನಿಂತಿದ್ದಳು. ಅಪರಾಹ್ನ ಬಂದು ಜಪ ಪೂರೈಸಿದ ಮೇಲೆ ಕರ್ಣನು ಹಿಂದಿರುಗಿ ನೋಡಿ ಕುಂತಿಗೆ ಕೈಮುಗಿದು ''ಇಗೋ ರಾಧೆಯ ಮತ್ತು ಅಧಿರಥನ ಮಗನಾದ ಕರ್ಣನು ನಮಸ್ಕರಿಸುತ್ತಿದ್ದಾನೆ. ಏಕೆ ಬಂದಿದ್ದೀಯೆ ತಾಯೆ? ನನ್ನಿಂದೇನಾಗಬೇಕು?'' ಎಂದು ಕೇಳಿದನು.

ಕುಂತಿ – ''ಕರ್ಣ! ನೀನು ಕೌಂತೇಯ; ರಾಧೇಯನಲ್ಲ; ಅಧಿರಥ ನಿನ್ನ ತಂದೆಯಲ್ಲ, ನೀನು ನನ್ನ ಹೊಟ್ಟೆಯಲ್ಲಿ ಕಾನೀನನಾಗಿ ಹುಟ್ಟಿದವನು. ಮಗು ! ಈ ಸೂರ್ಯ ದೇವನು ನಿನ್ನ ತಂದೆ; ನೀನು ನಿನ್ನ ಒಡಹುಟ್ಟಿದವರನ್ನು ಅರಿಯದೆ ಅಜ್ಞಾನದಿಂದ ಕೌರವರನ್ನು ಸೇವಿಸುತ್ತಿದ್ದೀಯೆ. ಅರ್ಜುನನು ಸಂಪಾದಿಸಿ ಈಗ ಕೌರವರು ಅಪಹರಿಸಿದ ರಾಜ್ಯ ಸಂಪತ್ತನ್ನು ಅನುಭವಿಸು ! ಕರ್ಣಾರ್ಜುನರು ಸೇರಿ ಸ್ನೇಹದಿಂದಿರುವುದನ್ನು ಕೌರವರು ಕಾಣಲಿ ! ನೀವಿಬ್ಬರೂ ಸೇರಿದರೆ ಲೋಕದಲ್ಲಿ ನಿಮಗೆ ಅಸಾಧ್ಯವಾದದ್ದು ಯಾವುದು ಇದ್ದೀತು? ತಾಯಿ ತಂದೆಗಳನ್ನು ಸಂತೋಷಪಡಿಸುವುದು ಮಕ್ಕಳಿಗೆ ಧರ್ಮ !''

ಕರ್ಣ – ಅಮ್ಮ ! ನೀನು ಕ್ಷತ್ರಿಯೆ; ಆದ್ದರಿಂದ ನಿನ್ನ ಮಾತನ್ನು ನಂಬದಿರಲಾರೆ. ನಿನ್ನ ಅಪೇಕ್ಷೆಯಂತೆ ನಡೆಯುವುದು ಧರ್ಮವೇ ಆಗಬಹುದು; ನೀನು ನನ್ನನ್ನು ಅನ್ಯಾಯವಾಗಿ ತೊರೆದುಬಿಟ್ಟಿದ್ದರಿಂದ ಕೆಟ್ಟ ಹೆಸರು ಬರುವಂತಾಯಿತು; ಕ್ಷತ್ರಿಯನಾಗಿ ಹುಟ್ಟಿಯೂ ನನಗೆ ಕ್ಷತ್ರಿಯ ಸಂಸ್ಕಾರ ಲಭಿಸಲಿಲ್ಲ; ಇದಕ್ಕಿಂತ ಹೆಚ್ಚಿನ ಅನ್ಯಾಯವನ್ನು ನನ್ನ ಯಾವ ಶತ್ರು ತಾನೇ ಮಾಡಿಯಾನು? ಅಂತಃಕರಣ ತೋರಿಸಬೇಕಾದ ಕಾಲದಲ್ಲಿ ತೋರಿಸದೆ, ತಾಯಿಯಂತೆ ನಡೆದುಕೊಳ್ಳದೆ, ಈಗ ಸ್ವಾರ್ಥದಿಂದ ಬಂದು ತಾಯಿಯೆಂದು ಹೇಳಿಕೊಳ್ಳುತ್ತೀಯೆ ! ಈಗ ನಾನು ಪಾಂಡವರೊಡನೆ ಸೇರಿದರೆ ಅವರಿಗೆ ಹೆದರಿ ಅವರೊಡನೆ ಹೋಗಿ ಸೇರಿಕೊಂಡನೆಂದು ಎಲ್ಲರೂ ಅನ್ನುತ್ತಾರೆ; ಹಿಂದೆ ಅಣ್ಣ ತಮ್ಮಂದಿರ ಸೊಲ್ಲನ್ನೇ ಎತ್ತದಿದ್ದವನು ಯುದ್ಧ ಕಾಲದಲ್ಲಿ ಆ ಸಂಬಂಧ ಹೇಳಿದರೆ ಕ್ಷತ್ರಿಯರು ಏನೆಂದಾರು? ಕೌರವರು ನನ್ನ ಇಷ್ಟಾರ್ಥಗಳನ್ನೆಲ್ಲಾ ಸಲ್ಲಿಸಿ, ಗೌರವಿಸಿ, ಐಶ್ವರ್ಯದಲ್ಲಿ ಪಾಲುಕೊಟ್ಟು ನನ್ನನ್ನು ನೋಡಿಕೊಳ್ಳುತ್ತಿರುವಾಗ ನಾನು ಅದನ್ನೆಲ್ಲಾ ನಿಷ್ಫಲಗೊಳಿಸಲೇ? ತನ್ನ ಪ್ರಾಣದಿಂದಲಾದರೂ ಶತ್ರುಗಳನ್ನು ಗೆದ್ದು ಕೊಡುತ್ತಾನೆಂದು ಅವರು ಆಶೆಪಟ್ಟು ಕೊಂಡಿರುವಾಗ ಅವರ ಆಶೆಯನ್ನು ನಿರಾಶೆಗೊಳಿಸಲೇ ? ದುರ್ಯೋಧನನ ಆಶ್ರಿತರಿಗೆ ಈಗ ಹಿಂದೆ ಮುಂದೆ ನೋಡದೆ ಪ್ರಾಣ ಒಪ್ಪಿಸುವ ಕಾಲ. ಅನ್ನವಿಟ್ಟ ಯಜಮಾನನ್ನು ಯುದ್ಧ ಸಮಯದಲ್ಲಿ ಕೈಬಿಡುವ ಪಾಪಿಗಳಿಗೆ ಇಹಪರಗಳೆರಡೂ ಇಲ್ಲ. ಆದ್ದರಿಂದ ನಾನು ದುರ್ಯೋಧನನಿಗೋಸ್ಕರವಾಗಿ ನಿನ್ನ ಮಕ್ಕಳ ಮೇಲೆ ನನ್ನ ಶಕ್ತಿಯನ್ನೆಲ್ಲಾ ಪ್ರಯೋಗಿಸಿ ಯುದ್ಧ ಮಾಡಿಯೇ ಮಾಡುತ್ತೇನೆ. ಆದರೆ ನೀನು ಬಂದ ಕೆಲಸ ವ್ಯರ್ಥವಾಗಬಾರದು; ಆದ್ದರಿಂದ ನಿನ್ನ ಮಕ್ಕಳೆಲ್ಲರೂ ವಧ್ಯರೇ ಆದರೂ, ಯುಧಿಷ್ಠಿರ, ಭೀಮ, ನಕುಲ, ಸಹದೇವರನ್ನು ನಾನು ಕೊಲ್ಲುವುದಿಲ್ಲ. ಅರ್ಜುನನೊಡನೆ ನನಗೆ ಯುದ್ಧ ಬಿದ್ದೇ ಬೀಳುತ್ತದೆ; ಆಗ ನಾನು ಅವನನ್ನು ಕೊಂದರೆ ನನ್ನ ಉದ್ದೇಶ ನೆರವೇರಿತು; ಅವನೇ ನನ್ನನ್ನು ಕೊಂದರೆ ಕೀರ್ತಿ ಬಂತು! ಅಂತೂ ನಿನಗೆ ಇರುವ ಐದು ಜನ ಮಕ್ಕಳೇನೋ ಕಡಿಮೆಯಾಗುವುದಿಲ್ಲ !


ಕರ್ಣನ ಈ ಖಂಡಿತವಾದ ಮಾತನ್ನು ಕೇಳಿ ಕುಂತಿಯು ದುಃಖದಿಂದ ಕಂಪಿಸುತ್ತ, ಸ್ಥಿರನಾಗಿ ನಿಂತಿದ್ದ ಮಗನನ್ನು ತಬ್ಬಿಕೊಂಡು ''ಕರ್ಣ ! ಹಾಗೆಯೇ ಆಗಲಿ; ಅಂತು ಕೌರವರು ಕ್ಷಯಹೊಂದುತ್ತಾರೆ; ಏನು ಮಾಡುವುದು? ದೈವಬಲವಾದದ್ದು ! ನೀನು ನಿನ್ನ ನಾಲ್ಕು ಜನ ಸಹೋದರರಿಗೆ ಅಭಯ ಕೊಟ್ಟದ್ದನ್ನು ಯುದ್ಧಕಾಲದಲ್ಲಿ ಮರೆಯದಿರು! ನಿನಗೆ ಶುಭವಾಗಲಿ!'' ಎಂದಳು. ಕರ್ಣನು ಅವಳಿಗೆ ನಮಸ್ಕರಿಸಿದನು ಇಬ್ಬರೂ ಅವರವರ ದಾರಿಹಿಡಿದು ಹೋದರು.

**ಶಬ್ದಗಳ ಅರ್ಥ:**


ಅನುಮೋದಿಸಿ – ಸ್ವೀಕರಿಸು, ಒಪ್ಪು; ಕ್ಷೀಣಪುಣ್ಯ – ನಶಿಸುವ ಪುಣ್ಯ, ವೃಷ್ಣಿ – ಯದುವಂಶದ ಒಬ್ಬ ಅರಸು, ಅಧಿರಥ – ಕರ್ಣನ ಸಾಕು ತಂದೆ, ಗೋಪ್ಯ – ರಹಸ್ಯವಾದ, ಅಪರಾಹ್ಣ – ಮಧ್ಯಾಹ್ನದ ನಂತರ, ಇಳಿಹೊತ್ತು, ಅವಭೃಥ ಅಪಮಾನ ಕಣ್ಣೀರಿಗ ಸ್ನಾನ, ಕಾನೀನ – ಕನ್ನಿಕಾಜಾತ;

**ಕೃತಿ. 1) ಪಾಠವನ್ನು ಓದಿಕೊಂಡು ಕೆಳಗೆ ಕೊಟ್ಟಿರುವ ಕೃತಿಗಳನ್ನು ಸೂಚನೆಗನುಗುಣವಾಗಿ ಪೂರ್ಣ ಮಾಡಿರಿ.**


**I) ಕೆಳಗಿನ ಜಾಲವನ್ನು ಪೂರ್ಣಗೊಳಿಸಿರಿ.**




**II) ಕೆಳಗಿನ ಜಾಲ ತುಂಬಿರಿ.**




**III) ಧೃತರಾಷ್ಟ್ರನು ಕೃಷ್ಣನ ಕುರಿತು ಹೇಳಿದ ಗುಣಗಳು**




**ಕೃತಿ. 2) I) ಕರ್ಣನು ಪಾಂಡವರ ಪಕ್ಷ ಸೇರಿದರೆ ಎಲ್ಲರೂ ಹೇಗೆ ವಿಧೇಯರಾಗಿರುತ್ತಾರೆಂಬುದನ್ನು ಕೃಷ್ಣನು ತಿಳಿಸುವದನ್ನು ಬರೆಯಿರಿ.**

**II) ಕರ್ಣನ ಸ್ವಾಮಿನಿಷ್ಠೆಯ ಬಗ್ಗೆ ನಿಮ್ಮ ಅಭಿಪ್ರಾಯವನ್ನು ನಿಮ್ಮ ಮಾತುಗಳಲ್ಲಿ ವರ್ಣಿಸಿರಿ.**

**ಕೃತಿ. 3) I) ಕೃಷ್ಣನು ಕರ್ಣನ ಜನ್ಮದ ಬಗ್ಗೆ ತಿಳಿಸಿದಾಗ ಕರ್ಣ ಕೊಟ್ಟ ಉತ್ತರವನ್ನು ವಿವರಿಸಿರಿ.**

**II) ಕೆಳಗಿನ ಜಾಲಾಕೃತಿ ತುಂಬಿರಿ.**

ಯುದ್ಧ ಕಾಲದ ಸಮಯವು ಸೂಕ್ತವಿರುವುದಕ್ಕೆ ಕೃಷ್ಣ ಸೂಚಿಸಿದ ಸಲಹೆಗಳು



**III) ಕೆಳಗಿನ ವಾಕ್ಯ ಯಾವ ಪ್ರಕಾರದ ವಾಕ್ಯವಾಗಿದೆ ಗುರುತಿಸಿರಿ.**

**''ಅಮ್ಮ ! ನೀನು ಕ್ಷತ್ರಿಯೆ; ಆದ್ದರಿಂದ ನಿನ್ನ ಮಾತನ್ನು ನಂಬದಿರಲಾರೆ.**

**ಕೃತಿ. 4) ಕರ್ಣನ ಪಾತ್ರವನ್ನು ಕುರಿತು 8 - 10 ಸಾಲುಗಳಲ್ಲಿ ಬರೆಯಿರಿ.**

**ಕೃತಿ. 5) ಕೆಳಗಿನ ವಾಕ್ಯದ ಕರ್ತೃ, ಕರ್ಮ ಕ್ರಿಯಾಪದ ಗುರುತಿಸಿ ಬರೆಯಿರಿ.**

**ಉದಾ :** ನಾನು ನಿನಗೆ ರಾಜನನ್ನಾಗಿ ಪಟ್ಟಾಭಿಷೇಕ ಮಾಡುತ್ತೇನೆ.

| ಕರ್ತೃ | ಕರ್ಮ | ಕ್ರಿಯಾಪದ |
|---|---|---|
| | | |

**II) ಕೆಳಗಿನ ಅಕ್ಷರಗಳ ಸಮೂಹದಿಂದ ಯಾವುದಾದರೂ ಅರ್ಥ ಕೊಡುವ ನಾಲ್ಕು ಶಬ್ದಗಳನ್ನು ರಚಿಸಿರಿ.**

[ಮಹಗರಜಪತಟಕೆಲಸಯ]

| 1 | 2 | 3 | 4 |
|---|---|---|---|
| | | | |

**III) ನಿಮಗೆ ಗೊತ್ತಿರುವ ರಾಮಾಯಣದ ಕಥಾ ಸನ್ನಿವೇಶವನ್ನು 8-10 ವಾಕ್ಯದಲ್ಲಿ ಬರೆಯಿರಿ.**

**IV) ಧರ್ಮ ಅಧರ್ಮ ಇಂತಹ ವಿರುದ್ಧಾರ್ಥಕ ಶಬ್ದಗಳ ನಾಲ್ಕು ಜೋಡಿಗಳನ್ನು ಬರೆಯಿರಿ.**

**ಕೃತಿ. 6) ಅ) ಕೆಳಗಿನವುಗಳಲ್ಲಿ ಗುಂಪಿಗೆ ಸೇರದ ಪದ ಗುರುತಿಸಿರಿ**

1) ಅರ್ಜುನ, ನಕುಲ, ಭೀಮ, ದುಶ್ಶಾಸನ.
2) ಸುಗ್ರೀವ, ರಾಮ, ಲಕ್ಷ್ಮಣ, ಭರತ.
3) ಕೌಸಲ್ಯೆ, ಮಂಡೋದರಿ, ಸುಮಿತ್ರೆ, ಕೈಕೇಯಿ.
4) ದ್ರೌಪದಿ, ಕುಂತಿ, ಮಾದ್ರಿ, ಗಾಂಧಾರಿ

**ಆ) ಕೆಳಗಿನ ವಾಕ್ಯಗಳನ್ನು ಸರಿಯಾದ ಕ್ರಮದಲ್ಲಿ ಬರೆಯಿರಿ.**

1) ನಾನು ಹೋಗಿ ಬರುತ್ತೇನೆ ಅತ್ತೆ
2) ಯುದ್ಧದಲ್ಲಿ ಅರ್ಜುನನನ್ನು ನನ್ನ ಮುಂದೆ ಬರಿಸು
3) ಈ ಸೂರ್ಯದೇವನು ನಿನ್ನ ತಂದೆ
4) ನಿನ್ನಂಥ ಮೂಢನೂ ಕುಲಗೇಡಿಯೂ ಇನ್ನಿರಲಾರನು.

FXZ788

**3.**


# ಕಾಂಪ್ಲಿಮೆಂಟರಿ

– ಬೀಚಿ

**ಲೇಖಕರ ಪರಿಚಯ :** 'ಬೀಚಿ'ಯವರು ಕನ್ನಡ ಸಾಹಿತ್ಯದಲ್ಲಿ ವಿಡಂಬನಕಾರರೆಂದು ಹೆಸರು ಪಡೆದಿದ್ದಾರೆ. ಅವರ ವಿಡಂಬನೆಗಳು ಬಹಳ ತೀಕ್ಷ್ಣವಾಗಿರುತ್ತವೆ. ಅವರ ಶೈಲಿಯಾದರೂ ಅದರಂತೆಯೇ ಮೊನೆಯಾದದ್ದು. ಇವರು ಬರೆದ 'ತಿಂಮನ ತಲೆ' 'ಹನ್ನೊಂದನೆಯ ಅವತಾರ' 'ದಾಸಕೂಟ' ಮೊದಲಾದ ವಿಡಂಬನೆಗಳು ಬಹಳ ವಿನೋದಮಯವೂ ಜನಪ್ರಿಯವೂ ಆಗಿವೆ.

ಇಲ್ಲ ತೆಗೆದುಕೊಂಡ ಈ ವಿಡಂಬನೆಯು 'ತ್ರಿಶೂಲಿಗಳು' ಎಂಬ ಸಂಕಲನದಿಂದ ಎತ್ತಿಕೊಳ್ಳಲಾಗಿದೆ. ಈ ವಿಡಂಬನೆಯಲ್ಲಿ ನಮ್ಮ ನಾಟಕ ಕಂಪನಿಗಳು ಏಕೆ ಬಾಳುವುದಿಲ್ಲ. ಅವುಗಳಿಗೆ ಸಾಕಷ್ಟು ಹಣ ಏಕೆ ಸಿಗುವುದಿಲ್ಲ? ಎಂಬ ಪ್ರಶ್ನೆಗಳಿಗೆ ಉತ್ತರ ದೊರೆಯುತ್ತದೆ. ಈ ಬರಹವು ವಿನೋದಮಯವಾಗಿದ್ದಷ್ಟೇ ವಿಚಾರಾರ್ಹವೂ ಆಗಿದೆ.

ಸುಪ್ರಸಿದ್ಧ ಕಂಪನಿಯಾದ ಸರಸ್ವತಿ ಪ್ರಾಸಾದಿಕ ಸಾಹಿತ್ಯ ಸಂಗೀತ ನಾಟಕ ಕಂಪನಿ ಬರಲಿದೆ ಎಂದು ಅದರ ಅಡ್ವಾನ್ಸು ಮ್ಯಾನೇಜರು ನಮ್ಮೂರ ಬಸ್ಸು ಸ್ಟ್ಯಾಂಡಿನಲ್ಲಿ ಹೇಳಿದ್ದೊಂದೇ ತಡ, ಊರವರೆಲ್ಲರೂ ಓಡಿ ಬಂದು ಅವನನ್ನೇ ನೋಡಿದರು ತಿಕೀಟು ಇಲ್ಲದಲೆ. ಸಾಲ್ಟ ಜವಾನನು ಹುಲಿಯನು ಹೊಡೆದಾಗಲೂ ಸಹ ಇಷ್ಟು ಜನರು ಸೇರಿರಲಿಲ್ಲ. ನಮ್ಮೂರಲ್ಲಿ ಮುಖ್ಯ ಕುಪ್ಪಂಣನ ಪುಣ್ಯ. ಅಡ್ವಾನ್ಸ್ ಮ್ಯಾನೇಜರನು ಇವನ ಪಾಲಿಗೆ ಸಾಕ್ಷಾತ್ ಲಕ್ಷ್ಮಿಯಂತೆ ಬಂದಿದ್ದ. ದಿವಾಳಿಗೆ ಹಾದಿ ಹಿಡಿದು ಹಣ ಕೊಟ್ಟು ರುಮಾಲದವರಿಗೆ ಕೈಕೊಟ್ಟು ಬೆಳಗಿನ ಗಾಡಿಗೆ ಪಾರಾಗಬೇಕೆಂದಿದ್ದ ಅದೇ ಹೋಟೆಲ ಕುಪ್ಪಂಣ ಒಂದೇ ತಿಂಗಳಲ್ಲಿ ಬೆಂಣಿ ಬಾವಗನಂತಾಗಿ ಊರ ಗೌಡನ ಮಗನೊಡನೆ ಪೋಟಿ ಹೂಡುವಂತಾದ.



ಗೋಕರ್ಣೇಶ್ವರನ ಗುಡಿಯ ಹಿಂದೆ ಎಂಟೇ ದಿನದಲ್ಲಿ ಎದ್ದು ಬಿಟ್ಟಿತು ಭವ್ಯವಾದ ಬಟ್ಟಬಯಲು ದಿವ್ಯ ತಂಬೂ. ಮೇಲೆ ಒಳ್ಳೆಯ ಆಕಾಶದ ಹೊದಿಕೆ. ಮೀನ ಬಲೆಯನ್ನು ಮೀರಿಸುವಂತಹ ಚಿಂದಿಗಳು ಮ್ಯಾನೇಜರನು ನಿರ್ಮಿಸಿದ ಸ್ಟೇಜಿನ ಗೋಡೆಗಳು. 'ಸ್ತ್ರೀಯರಿಗೆ ಪ್ರತ್ಯೇಕ ಸ್ಥಳ', ಗಲಾಟೆ ಮಾಡುವವರನ್ನು ಪೋಲೀಸರ ತಾಬೇಕ್ಕೆ ಕೊಡಲಾಗುವುದು,' 'ಸಂದರ್ಭಾನುಸಾರ ತಿಕೀಟಿನ ದರಗಳನ್ನು ಹೆಚ್ಚು ಕಡಿಮೆ ಮಾಡುವ ಹಕ್ಕು ನಮ್ಮದು,' 'ಒನ್ಸಮೋರ್ ಎಂದಲ್ಲಿ ಪಾರ್ಟುದಾರರ ಇಷ್ಟ' 'ಸ್ತ್ರೀಯರೇ ಸ್ತ್ರೀ ಪಾತ್ರವನ್ನು ವಹಿಸುವರು' 'ಹೊಸ ಹೊಸ ಡ್ರೆಸ್ಸುಗಳು – ಅದ್ಭುತ ಸೀನರಿಗಳು,' 'ಹನುಮಂತಪ್ಪನವರು ನಕಲಿ ಪಾರ್ಟು ಮಾಡುತ್ತಾರೆ' 'ನಮ್ಮಲ್ಲಿ ಕಾಲಪಿಯಾನ ಇದೆ' 'ಬೀಡಿ ಚುಟ್ಟ ವಗೈರಾ ಸೇದಬಾರದು' ಮುಂತಾದ ಮಾಮೂಲು ಷರಾಗಳೊಂದಿಗೆ ಬಂಣ ಬಂಣದ ನೋಟೀಸುಗಳು ಅಚ್ಚಾಗಿ ಬಂದೇ ಬಿಟ್ಟವು. ಮೊಟ್ಟಮೊದಲೇ ಸಾಮಾಜಿಕ ನಾಟಕ – ಇರಲೇ ಬೇಕಲ್ಲ ಪುಟ್ಟ ವಿಧವೆ?

ನಮ್ಮೂರಲ್ಲಿ ನಾನೊಬ್ಬ ಕಾಂಪ್ಲಿಮೆಂಟರಿ ಕಲಾಭಿಮಾನಿ ಎಂದು ಅವರಿಗೆ ಯಾರೋ ತಪ್ಪು ಕಲ್ಪನೆ ಕೊಟ್ಟಂತಿತ್ತು. ಸಾಲಕೊಡುವ ಸೊಸಾಯಿಟಿಯಲ್ಲಿ ನಾನು ಅಧಿಕಾರಿಯಾಗಿದ್ದಕ್ಕೆ ಅವರು ನನ್ನ ಮೇಲೆ ಕಲಾಭಿಮಾನಿಯೆಂಬ ಆರೋಪ ಹೊರಿಸಿರಲಿಕ್ಕೂ ಸಾಕು. ಅಂತೂ ಇಂತೂ ಕಂಪನಿಯ ಸಾಕ್ಷಾತ್ ಮಾಲಕರೇ ಮನೆ ಬಾಗಿಲಿಗೆ ಬಂದು ಕೈಮುಗಿದು ಕಾಫಿ ಕುಡಿದು ಕಾಂಪ್ಲಿಮೆಂಟರಿ ತಿಕೀಟನ್ನು (ಇಡೀ ಕುಟುಂಬಕ್ಕೆ) ಕೊಟ್ಟು ಮುಲಾಜೆಯ ಬಾವಿಯಲ್ಲಿ ನನ್ನನ್ನಂತೂ ದೂಡಿಬಿಟ್ಟರು. ಬರುವಾಗ ನಿಮ್ಮ ಕುರ್ಚಿಗಳನ್ನೇ ತೆಗೆಯಿಸಿಕೊಂಡು ಬನ್ನಿರಿ ಎಂದು ಸೂಕ್ಷ್ಮವಾಗಿ ಸೂಚಿಸಿ ಹಾದಿ ಬಿಟ್ಟರು. ಅವಸರದಲ್ಲಿ ಊಟ ಮುಗಿಸಿ ನಾನು ಮತ್ತು ನನ್ನ ಇಡೀ ಕುಟುಂಬ (ಅಂದರೆ ನನ್ನ ಇಡೀ ಹೆಂಡತಿ) ಎಲ್ಲರಕಿಂತಲೂ ಮುನ್ನೆಯೇ ಹೂಲಿಗೇರಿ ಕಂಪನಿಯ ತಂಬೂದ ಮುಂದೆ ಬಂದು ನಿಂತೆವು. ಊರಮ್ಮನ ಮುಂದೆ ಕೋಣ ಕಡಿಯುವಾಗ ಬಾರಿಸುವ ಜೋಡು ತಪ್ಪಟಿಗಳನ್ನು ಉರಿಗೆ ಕಾಸಿ ಕಾಸಿ ಜಗ್ಗಡಿ ನಕ ನಕ್ಕ ಎಂಬ ಗತ್ತು ಹಿಡಿದು ಬಾರಿಸುತ್ತಿದ್ದರು. ಕರ್ಣತ್ರಾಣಕ್ಕೆ ಕಾಯಂ ಹಾನಿಯಾದೀತೆಂಬ ಭಯದಿಂದ ಅಲ್ಲಿ ನಿಲ್ಲದೆ ದಿವ್ಯವಾದ ಭವ್ಯ ತಂಬೂದಲ್ಲಿ ತೂರಿದೆವು. ಮುಂದಿನ ಎರಡು ಸಾಲು ಬೆಂಚುಗಳು ಮಾತ್ರ (ಕುರ್ಚಿಗಳು ಇರಲೇ ಇಲ್ಲ.) ತುಂಬಿದ್ದವು. ಪರವಾ ಇಲ್ಲ, ಸರಸ್ವತೀ ಪ್ರಾಸಾದಿಕ ಕಂಪನಿಗೆ ಕೊಂಚ ಹಣ ಆಗಿದೆ ಎಂದು ಅಂದುಕೊಂಡೆ. ಆ ಮೇಲೆ ತಿಳಿಯಿತು. ಆ ಮುಂದಿನ ಬೆಂಚಿಗಳನ್ನು ಗುತ್ತಿಗೆ ಹಿಡಿದವರು ಮರ್ಯಾದಸ್ಥರೆಂದು – ಪೋಲೀಸು, ಮ್ಯಾಜಿಸ್ಟ್ರೇಟು, ಹೆಲ್ಥ, ಯೂನಿಯನ್ನು ಸಾಲಕೊಟ್ಟ ಸೆಟ್ಟರು, ಕಿರಾಣಿ ಸಾಮಾನುಗಳನ್ನು ಉದ್ದರಿ ಕೊಟ್ಟವರು, ಕೊನೆಗೆ ಸಾಹುಕಾರ ಕುಪ್ಪಂಣ – ಇದರಲ್ಲಿ ತಿಕೀಟುಕೊಳ್ಳುವ ದರಿದ್ರಾರಾರು? ಇದ್ದುದರಲ್ಲಿಯೇ ನಾಲ್ಕಾಣೆಯ ಸ್ಥಳವೇ ಕೊಂಚ ಮೇಲು, ಆದರೂ ಅದರಲ್ಲಿ ಹದಿನೈದಾಣೆ ಬಾಬದಾರರೇ. ಮುಂದೆ ಕುಳಿತ ಮರ್ಯಾದಸ್ತರ ಆಳುಗಳು ಹಲವರು, ಉಳಿದವರು ಸ್ಟೇಜು ಕಟ್ಟುವಾಗ ಮಣ್ಣು ಕಡಿದವರು, ಬೊಂಬುಗಳನ್ನು ಹೂಳಿದವರು, ಮತ್ತಿತರ ಉಮೇದುವಾರೀ ಕಾರ್ಮಿಕರು ರಾರಾಜಿಸುತ್ತಿದ್ದರು.

'ನಾನು ಕಳಿಸಿದ ಕುರ್ಚಿಗಳು ಎಲ್ಲೆ?' ಎಂದು ಬಾಗಿಲಲ್ಲಿ ಕುಳಿತಿದ್ದ ಮ್ಯಾನೇಜರನನ್ನು ಕೇಳಿದೆ. ಅಲ್ಲಿಯೇ ಇದ್ದಿತು ಅವನ ಬುಡದಲ್ಲಿ. ಇನ್ನೊಂದನ್ನು ಪಡದೇ ಕಟ್ಟಲು ಒಳಗೆ ಒಯ್ದಿದ್ದಾರೆಂದು ಹೇಳಿ ಮಾತನ್ನು ನಗುವಿನಲ್ಲಿ ತೇಲಿಸಿ ಕೈಯಲ್ಲಿದ್ದ ಬೀಡಿಯನ್ನು ಹಲ್ಲಿನಿಂದ ಕಚ್ಚಿ ಕಡ್ಡಿಪೆಟ್ಟಿಗೆಗಾಗಿ ಕೈಸೌಜ್ಞೆ ಮಾಡಿದ. ಕೊಟ್ಟೆ. ಎತ್ತಲೋ ನೋಡುತ್ತ ಏನನ್ನೋ ವಟಗುಟ್ಟುತ್ತ ಕಡ್ಡೀಪೆಟ್ಟಿಗೆಯನ್ನು ಕಿಸೆಗೆ ಹಾಕಿ ಬಣ್ಣದ ಮನೆಯಲ್ಲಿ ನುಗ್ಗಿದ. ಪಾಪ ! ಮೂವತ್ತು ವರುಷದ ಅಭ್ಯಾಸ; ಅವನಿಗಿನ್ನೂ ಮೂವತ್ತೈದುವರ್ಷ ವಯಸ್ಸು.

ಕಡೆಗೂ ನನ್ನ ಕುರ್ಚಿಗಳೆರಡೂ ದೊರೆತವು. ಇಬ್ಬರೂ ಕುಳಿತೆವು. ತುಸು ಸಮಯದನಂತರ ಪಡದೆಯ ತೂತಿನಲ್ಲಿ ಇಣಿಕಿ ನೋಡಿ ಮಾಲಕರು ಹಣಕೊಟ್ಟು ಬಂದವರೆಷ್ಟು ಮಂದಿ ಎಂದು ಸಿಂಹಾವಲೋಕನ ಮಾಡಿದರು. ಕುಳಿತವರೆಲ್ಲರನ್ನೂ ಗುರುತಿಸಿದ ಮೇಲೆ ಅವರ ಸಿಂಹಾವಲೋಕನವು ಗ್ರಾಮ ಸಿಂಹಾವಲೋಕನವಾಗಿರಬೇಕೆನಿಸಿತು. ಆದರೂ ಎದೆಗುಂದುವುದು ನಾಟಕ ಕಂಪನಿಯ ಕಸುಬಲ್ಲವಲ್ಲ? ಕೈಸನ್ನೆ ಮಾಡಿ ನನ್ನನ್ನು ಅದೇಕೋ ಕರೆದರು. ಬಣ್ಣದ ಮನೆಗೆ ಹೋಗಲು ಎದ್ದೆ. ಆದರೆ ಕೂಡಲೇ ನೆನಪಾಯಿತು, ಕುರ್ಚಿ. ನನ್ನ ಅವಳ ಬದಿಯಲ್ಲಿ ಯಾರಾದರೂ

ಕೊಡ್ತ್ರುವರೆಂಬ ಭಯದಕಿಂತಲೂ ನನ್ನ ಇದ್ದೊಂದೇ ಕುರ್ಚಿಯೂ ಹೋದರೆ? ಕಂಕುಳಲ್ಲಿದ್ದ ಕಾಶ್ಮೀರದ ಕೆಂಪು ಶಾಲನ್ನು ಕುರ್ಚಿಯ ಮೇಲಿಟ್ಟು ಒಳ ನಡೆದೆ. ನನ್ನೆರಡೂ ಕೈಗಳನ್ನು ಹಿಡಿದು ಬರಮಾಡಿಕೊಂಡ ಮಾಲಕರು ನಿಮ್ಮ ಟೈಯನ್ನು ಕೊಂಚ ಕೊಡಿರಿ, ಅಳಿಯನ ಪಾರ್ಟು ಮಾಡುವ ಹುಡುಗನಿಗೆ ಬೇಕಾಗಿದೆ ಎಂದು, ನನ್ನ ಕತ್ತಿಗೆ ಕೈ ಹಾಕಿಯೇ ಬಿಟ್ಟರು. ಸಾಧ್ಯವಿಲ್ಲವೆಂದು ಸಿಟ್ಟಾಗಬೇಕೋ ನಗುತ್ತ ತೆಗೆದುಕೊಳ್ಳಿ ಎನ್ನಬೇಕೋ ಎಂದು ನಾನಿನ್ನೂ ಮೀನ ಮೇಷ ಮಾಡುತ್ತಿರುವಾಗಲೇ ಅವರ ಜಗ್ಗಾಟದಿಂದ ಟೈಯು ಉರುಲು ಬಿದ್ದಿತು. ಕೂಡಲೇ ಬಿಚ್ಚಿಕೊಟ್ಟು ಪಾರಾಗಿ ಹೊರಬಂದೆ.

ಕಳೆದ ಕರುವನ್ನು ಹುಡುಕಿ ಇಲ್ಲೆಂದು ಮನೆಗೆ ಬಂದಾಗ ಆವೂ ತಪ್ಪಿಸಿಕೊಂಡಿದೆ ಎಂದು ಕೇಳಿದಷ್ಟು ಸಂತಸವಾಯಿತು. ''ಅತ್ತೆಯ ಪಾರ್ಟು ಮಾಡುವ ಪಾಂಡುರಂಗ ನಿಮ್ಮ ಶಾಲನ್ನು ಕೊಂಡೊಯ್ದ'' ಎಂದು ಅವಳು ನಗುತ್ತ ಹೇಳಿದಳು. ಅತ್ತೆಗೇಕೆ ಬೇಕಂತೆ ಆ ಕೆಂಪು ಶಾಲು ಎಂದು ಹುಬ್ಬೇರಿಸಿದೆ. 'ವಿಧವೆ ಪಾರ್ಟಿಗೆ ಕೆಂಪು ಸೀರೆ ಇಲ್ಲವಂತೆ. ಅದಕ್ಕೇ ಆ ಶಾಲನ್ನೇ ಉಡುತ್ತಾನಂತೆ. ತಂದು ಕೊಡುತ್ತಾನೇಳಿ, ಅದಕ್ಕೇಕೆ ಅಷ್ಟು ಯೋಚನೆ'' ಎಂದು ನನ್ನನ್ನೇ ಸಂತೈಸಿದಳು.

ಸದ್ಯ ಮೊದಲನೆಯ ಯಾಮದಲ್ಲಿಯೇ ಮೊದಲನೆಯ ಗಂಟೆಯು ಆಯಿತು. ಗಲ್ಲಿ ಮೀಸೆಯ ಸ್ಥೂಲ ಕಾಯದವನೊಬ್ಬ ಏನನ್ನೋ ಕಳೆದುಕೊಂಡವನಂತೆ ಹುಡುಕುತ್ತ ಬಂದ. ಸನಿಯ ಬಂದಾಗ ಕೇಳಿದೆ.

''ಇನ್ನೂ ಏಕಯ್ಯಾ ತಡ.''

''ಎಲ್ಲರಿಗೂ ಡ್ರೆಸ್ಸು ದೊರೆತಿಲ್ಲ ಸ್ವಾಮಿ, ಪಡದೆ ಎತ್ತಿ ಏನು ಮಾಡಬೇಕು.?'' ಎಂದವನೇ ತನ್ನ ಹುಡುಕುವ ದೃಷ್ಟಿಯನ್ನು ನನ್ನ ಚರಣಾರವಿಂದದ ಮೇಲೆ ಚೆಲ್ಲಿದ. ನೋಡಬೇಕಿತ್ತು ನೀವು ಅವನ ಮುಖವನ್ನು – ಅಮೇರಿಕೆಯನ್ನು ಕಂಡ ಕೋಲಂಬಸ್ಸಿನಂತೆ, ಕತ್ತೆಯನ್ನು ಕಂಡ ಅಗಸನಂತೆ, ಎಲುಬನ್ನು ಕಂಡ ನಾಯಿಯಂತೆ, ಅಧಿಕಾರವನ್ನು ಕಂಡ ನಮ್ಮವರಂತೆ ಹಿರಿಹಿರಿ ಹಿಗ್ಗಿದ. ಇಡೀ ಅವನ ಮುಖವೇ ಬಾಯಿ ಆಗಿದ್ದಿತು. ಆರಡಿ ಎತ್ತರ ಮೂರಡಿ ದಪ್ಪದ ಆ ಗಲ್ಲಿ ಮೀಸೆಯ ವಜೆಯಾಳು ನನ್ನ ಕಾಲಡಿಯಲ್ಲಿ ಕುಳಿತಾಗ ನನಗೇಕೋ ಬಹು ಕೆಡಕೆನಿಸಿತು.

''ಏನಯ್ಯಾ ಬೇಕು ನಿನಗೆ'' ಎಂದು ಕೇಳಿದೆ.

''ಪೋಲೀಸ ಇನ್ಸಪೆಕ್ಟರ ಪಾರ್ಟ ಸ್ವಾಮಿ ನನ್ನದು; ನಿಮ್ಮ ಬೂಟ ಕಾಲಚೀಲ ಬೇಕು.'' ಎಂದವನೇ ಲೇಸುಗಳನ್ನು ಸಹ ಬಿಚ್ಚದಲೇ ಬೂಟನ್ನು ಎಳೆಯಲು ಸುರು ಮಾಡಿದ. ರಾಜ್ಯವು ಯಾವುದಾದರೂ ಪೋಲೀಸ ಜುಲಂ ತಪ್ಪಲಿಲ್ಲ.! ಕಾಲು ಮುರಿದೀತೆಂಬ ಭಯದಿಂದ ನಾನೇ ಬೂಟು ಕಾಲುಚೀಲಗಳನ್ನು ಬಿಚ್ಚಿ ಆ ಪೋಲೀಸ ಇನ್ಸಪೆಕ್ಟರನಿಗೆ ಕೊಟ್ಟೆ. ಶ್ರೀರಾಮನ ಪಾದುಕೆಗಳನ್ನು ಪಡೆದ ಭರತನಂತೆ ಆನಂದಸಾಗರದಲ್ಲಿ ಮುಣು ಮುಣಗಿ ತೇಲಿದನು. ನನ್ನ ಬೂಟು ಹೊತ್ತ ಆ ಮೀಸೆದಾರಿ.

ಉದ್ದ ಕ್ರಾಫಿನ ಹುಡುಗನೊಬ್ಬನು ನನ್ನ ಕಡೆ ಬರಹತ್ತಿದ. ಏನಪ್ಪಾ ಬಂದಿ ಎಂದು ಮಾತನಾಡಿಸುವ ಮುನ್ನೆಯೇ ನನ್ನ ಕನ್ನಡಕಕ್ಕೆ ಕೈ ಹಾಕಿ 'ಕೊಂಚ ಕೊಡಿ ಸಾರ್–ನಾನು ಡಾಕ್ಟರ ಪಾರ್ಟುಮಾಡುತ್ತೇನೆ' ಎಂದ. ನನ್ನ ಕಣ್ಣನ್ನೇ ಅವನಿಗೆ ಕೊಟ್ಟು ನಾನು ನಾಟಕ ನೋಡುವದೆಂತು. ಆದರೆ ಒಂದೇ ಧೈರ್ಯ ಬದಿಯಲ್ಲಿಯೇ ಇದ್ದ ನನ್ನ ಅವಳು ಹೇಳಬಹುದಲ್ಲ ನನಗೆ – ವೇಷ ಬಂದಿತ್ತು, ವೇಷಹೋಯಿತು, ಪಡದೆ ಬಿದ್ದಿತು, ಪಡದೆ ಎದ್ದಿತು ಎಂಬುದನ್ನು ನಾನಿನ್ನೂ ಯೋಚಿಸುತ್ತಿರುವಾಗಲೆ ನನ್ನ ಕನ್ನಡಕಗಳು ಆ ಡಾಕ್ಟರನ ಕೈಸೇರಿದವು. 'ಕೊಂಚ ಕೊಡಿಸಾರ್, ಎರಡನೆ ಬೆಲ್ಲಾಯಿತು. ಯಜಮಾನರು ಬೈಯುತ್ತಾರೆ' ಎಂದವನೇ ಸಾಗಿಯೇ ಬಿಟ್ಟ. ಮುಂದೇನಾಯಿತೋ ದೇವರೇ ಬಲ್ಲ. ನನಗಂತೂ ಕಂಣಿಲ್ಲ. ತುಸು ಹೊತ್ತಿನಲ್ಲಿಯೇ ಮೂರನೆಯ ಗಂಟೆಯೂ ಆಯಿತು. ಸದ್ಯ ಕಂಪನಿಯ ಕಲಾಕೋವಿದರು ನನ್ನ ಮೂಗು ಕಿವಿಗಳಿಗೂ ಗಂಟು ಬೀಳಲಿಲ್ಲ.

ಸೂತ್ರಧಾರನು ಹಾಡುವಾಗ ನಾಲ್ಕಾಣೆ ವರ್ಗದಿಂದ ಕೂಗು ಕೇಳಬಂದಿತು, 'ಬಸವಣ್ಣೆಪ್ಪಂದು ನೋಡಲೆ ಆ ಹಸರು ರುಮಾಲು' ಎಂದಾರೋ ಅಂದರು. ರಸಿಕ ಪ್ರೇಕ್ಷಕರು ತಂತಮ್ಮ ಬಟ್ಟೆಬರೆಗಳನ್ನು ಗುರುತಿಸಿ ಕೂಗಿ ಹೇಳಿದಂತೆಲ್ಲ ನನಗೆ ತಿಳಿಯುತ್ತಿದ್ದಿತು. ಹೊಸ ಹೊಸ ವೇಷಗಳು ಬಂದಿವೆಯೆಂದು ನಾಟಕವು ಆರಂಭವಾದ ಅರ್ಧ ಗಂಟೆಯಲ್ಲಿಯೇ ಮನೆಗೆ ಹೋಗೋಣವೆಂದು ನನ್ನ ಅವಳು ಕಾಡಹತ್ತಿದಳು. ಆದರೆ ನಾನು ಹೊರಡುವುದಾದರೂ ಹೇಗೆ – ಕಡ್ಡಿ ಪೆಟ್ಟಿಗೆ, ಟೈ, ಶಾಲು, ಕಾಲು, ಕಂಬು ಎಲ್ಲವೂ ನಟನಟೀ ವರ್ಗಕ್ಕೆ ಕೊಟ್ಟು ಪೂರ್ತಿ ಪರಾಧೀನನಾದ ಮೇಲೆ? ಚಳಿಯಲ್ಲಿ ನಡುಗುತ್ತ ಬೆಳ್ಳಂ – ಬೆಳಗೂ ಕಂಬು ಮುಚ್ಚಿ ಕುಳಿತು ನಾಟಕವನ್ನು ಕೇಳಿದೆ.

ಕಡೆಯ ದೃಶ್ಯವಿರುವಾಗಲೆ ಕಂಪನಿಯ ಮಾಲಕರು ದೀರ್ಘ ಭಾಷಣವೊಂದನ್ನು ಮಾಡಿ ರಸಿಕ ಪ್ರೇಕ್ಷಕವೃಂದದ ಆಭಾರವನ್ನು ಮನ್ನಿಸಿ ನಾಳಿನ ನಾಟಕವು ಪೌರಾಣಿಕ – ರಾಮಾಂಜನೇಯ ಯುದ್ಧವೆಂದು ತಿಳಿಸಿ ಇಂದಿನಂತೆ ಎಲ್ಲರೂ ನಾಳೆಯೂ ಬರಬೇಕೆಂದು ವಿಜ್ಞಾಪಿಸಿಕೊಂಡರು.

ಮನೆ ಮುಟ್ಟಿದ ಕೂಡಲೆ ಸುಪ್ರಸಿದ್ಧ ಸರಸ್ವತೀ ಪ್ರಾಸಾದಿಕ ನಾಟಕ ಕಂಪನಿಗೆ ಕಾಂಪ್ಲಿಮೆಂಟರಿ ಪಾಸನ್ನು ಹಿಂದೆ ಕಳುಹಿ ಕೆಳಗಿನಂತೊಂದು ಪತ್ರವನ್ನು ಬರೆದೆ.

''ಆಂಜನೇಯನ ಬಾಲಕ್ಕೆ ಸೀರೆ ಬೇಕಾಗಬಹುದು. ನನ್ನ ಅವಳಿಗೆ ಇರುವದು ಒಂದೇ ಸೀರೆ. ಕಾರಣ ಕ್ಷಮಿಸಿ, ನಾನು ನಿಮ್ಮ ಮುಂದಿನ ನಾಟಕಕ್ಕೆ ಬರಲಾರೆ. ನನ್ನ ಕಡ್ಡಿ ಪೆಟ್ಟಿಗೆ, ಕನ್ನಡಕ, ಶಾಲು, ಟೈ, ಬೂಟು ಮುಂತಾದ ಸೆಕಂಡಹ್ಯಾಂಡ ಡ್ರೆಸ್ಸುಗಳನ್ನು ನಿಮ್ಮ ಕಲಾಕೋವಿದರಿಗೆ ಬಹುಮಾನವಾಗಿ ಕೊಟ್ಟಿದ್ದೇನೆ.''

ಪತ್ರವನ್ನೊಯ್ದ ಆಳು ಕೂಡಲೇ ಮರಳಿ ಬಂದ. ಏನೋ ಬಂದಿ ಎಂದು ಕೇಳಿದೆ. ನಾಟಕ ಕಂಪನಿ ಆಗಲೆ ಮುಂದಿನ ಊರಿಗೆ ಹೋಯಿತಂತೆ ಸ್ವಾಮಿ ಎಂದ.

## ಶಬ್ದಗಳ ಅರ್ಥ:

ಅಡ್ವಾನ್ಸು – ಮುಂಗಡ; ಬಂಣ ಬಂಣದ – ಬಣ್ಣ ಬಣ್ಣದ; ಸಿಂಹಾವಲೋಕನ – ಹಿನ್ನೋಟ; ಯಾಮ – ಜಾವ, ಗಳಿಗೆಯ ಸಮಯ; ಕೊಂಚ – ಸ್ವಲ್ಪ; ಕಾಲಪಿಯಾನ – ಹಾರ್ಮೋನಿಯಂ


**ಕೃತಿ. 1) ಕೆಳಗಿನ ಸುಳಿವುಗಳಿಗೆ ಹೊಂದುವ ಸರಿಯಾದ ಅಕ್ಷರಗಳನ್ನು ಖಾಲಿ ಚೌಕೋನಗಳಲ್ಲಿ ತುಂಬಿರಿ.**

| ಸುಳಿವು | | | | | |
|---|---|---|---|---|---|
| 1) ಮತ್ತೆ ಮತ್ತೆ ಪ್ರದರ್ಶನ ಮಾಡುವುದಕ್ಕೆ | ಒ | | | | |
| 2) ನಾಟಕದಲ್ಲಿ ಬಳಸುವ ವಿವಿಧ ಪರದೆಗಳು | ಸೀ | | | | |
| 3) ಇಡೀ ಕುಟುಂಬಕ್ಕೆ ಕೊಡುವ ಪಾಸು | ಕಾಂ | | | | |
| 4) ಶ್ರೀರಾಮನ ಪಾದುಕೆಗಳನ್ನು ಪಡೆದವ | ಭ | | | | |


**ಕೃತಿ. 2) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1) ಲೇಖಕರ ಊರಿಗೆ ಬಂದ ನಾಟಕ ಕಂಪನಿಯ ಹೆಸರೇನು?
2) ಭವ್ಯವಾದ ತುಂಬೂ ಎಲ್ಲಿ ನಿರ್ಮಾಣವಾಯಿತು?
3) ನಕಲಿ ಪಾರ್ಟು ಮಾಡುವವರು ಯಾರು?
4) ಪತ್ರವನ್ನೊಯ್ದ ಆಳು ಮರಳಿ ಬಂದು ಏನು ಹೇಳಿದ?

ಕೃತಿ. 3) ಮುಂದಿನ ಚೌಕಟ್ಟುಗಳನ್ನು ಯೋಗ್ಯ ಪದಗಳಿಂದ ಪೂರ್ಣಗೊಳಿಸಿರಿ.




ಕೃತಿ. 4) ಕೆಳಗಿನ ಜಾಲಾಕೃತಿಯನ್ನು ಪೂರ್ಣಗೊಳಿಸಿರಿ.




ಕೃತಿ. 5) ಕೆಳಗಿನ ಪದಗಳು ಯಾವ ಭಾಷೆಯವು ಎಂಬುದನ್ನು ಗುರುತಿಸಿರಿ.

ಕಾಂಪ್ಲಿಮೆಂಟರಿ, ಷರಾ, ಪಾರ್ಟು, ಮುಲಾಜೆ, ಲೇಸು, ಪೋಲೀಸು.

FY939V

# 4. ಬೇಲೂರು ಹಳೆಬೀಡುಗಳ ಶಿಲ್ಪಕಲಾ ವೈಭವ

''ಇಡೀ ಜಗತ್ತಿನಲ್ಲಿನ ಗುಡಿಗಳನ್ನು ಅತ್ಯಂತ ಸೂಕ್ಷ್ಮವಾದ ಕಲ್ಲಿನ ಕೆತ್ತನೆಯ ಕೆಲಸದಲ್ಲಿ ಮೀರಿಸುವಂಥ ಅನೇಕ ದೇವಾಲಯಗಳು ಹಿಂದುಸ್ಥಾನದಲ್ಲಿವೆ. ಅವುಗಳಲ್ಲಿ ಬೇಲೂರು ಮತ್ತು ಹಳೆಬೀಡುಗಳಲ್ಲಿರುವ ಗುಡಿಗಳೇ ಶ್ರೇಷ್ಠವಾದುವು. ಇಷ್ಟು ಕುಸುರಿಯ ಕೆಲಸವು ಪೃಥ್ವಿಯಲ್ಲಿಯ ಮಿಕ್ಕ ಯಾವ ಗುಡಿಗಳಲ್ಲಿಯೂ ಕಂಡು ಬರುವುದಿಲ್ಲ. ಮಾನವ ಕೃತಿಗಳಲ್ಲಿ ಇವು ಆಶ್ಚರ್ಯಜನಕವಾದ ಕೃತಿಗಳೆಂದೇ ಹೇಳಬೇಕು.'' ಡಾ. ಫರ್ಗುಸನ್ ಎಂಬ ಪಾಶ್ಚಾತ್ಯ ತಜ್ಞನೊಬ್ಬನು ಹಳೆಬೀಡು ಮತ್ತು ಬೇಲೂರುಗಳಲ್ಲಿರುವ ದೇವಾಲಯಗಳನ್ನು ಕಂಡು ಹೇಳಿದ ಮಾತುಗಳು ಇವು.

ಕನ್ನಡ ನಾಡಿನ ವಾಸ್ತುಶಿಲ್ಪದಲ್ಲಿ ಹೊಯ್ಸಳ ಚಕ್ರವರ್ತಿಗಳ ಪಾತ್ರ ಅತ್ಯಂತ ಶ್ರೇಷ್ಠವಾದುದು. ಅವರು 11ನೇ ಶತಮಾನದಲ್ಲಿ ರಾಜ್ಯ ಕಟ್ಟಿ ವಿಷ್ಣುವರ್ಧನ (ಬಿಟ್ಟಿದೇವ)ನ ಕಾಲ (ಕಿ. ಶ. 1111-1140)ದ ವೇಳೆ ಅತ್ಯಂತ ಉಚ್ಛ್ರಾಯ ಸ್ಥಿತಿ ಗೇರಿದರು. ಈ ಬಿಟ್ಟಿದೇವನು ಚೋಳರನ್ನು ಯುದ್ಧದಲ್ಲಿ ಸೋಲಿಸಿದನು. ಈ ವಿಜಯದ ಗುರುತಿಗಾಗಿ ತನ್ನ ಗುರುವಾದ ರಾಮಾನುಜಾಚಾರ್ಯರ ಸಲಹೆಯ ಮೇರೆಗೆ ಬೇಲೂರಿನಲ್ಲಿ ಚೆನ್ನ ಕೇಶವ ದೇವಾಲಯ (ವಿಜಯ ನಾರಾಯಣ ದೇವಾಲಯ)ವನ್ನು ಕಟ್ಟಿಸಿದನು. ಆ ಕಾಲದಲ್ಲಿ ಬೇಲೂರು ಹೊಯ್ಸಳ ಚಕ್ರವರ್ತಿಗಳ ಮುಖ್ಯ ನಗರವಾಗಿತ್ತು. ವಿಜಯದ ಜ್ಞಾಪಕವಾಗಿ ಕಟ್ಟಿಸಿದುದರಿಂದಲೇ ಈ ದೇವಾಲಯಕ್ಕೆ ವಿಜಯ ನಾರಾಯಣ ದೇವಾಲವೆಂದು ಹೆಸರಾಯಿತು. ಆದರೆ ಈಗ ಅದನ್ನು ಚೆನ್ನ ಕೇಶವ ದೇವಾಲಯವೆಂದೇ ಕರೆಯುತ್ತಾರೆ. ಈ ದೇವಾಲಯವು ಕ್ರಿ. ಶ. 1117ರಲ್ಲಿ ನಿರ್ಮಿಸಲ್ಪಟ್ಟಿತೆಂದು ವಿಗ್ರಹದ ಪೀಠದ ಕೆಳಗೆ ಬರೆದ ಶಾಸನದಿಂದ ತಿಳಿದು ಬರುತ್ತದೆ.



ಇದೇ ಹೊಯ್ಸಳ ಚಕ್ರವರ್ತಿಗಳು ಬೇಲೂರಿನಿಂದ ಹತ್ತು ಮೈಲು ಪೂರ್ವಕ್ಕಿರುವ ಹಳೆಬೀಡಿನಲ್ಲಿ ಲೋಕ ವಿಖ್ಯಾತವಾದ ಹೊಯ್ಸಳೇಶ್ವರ ಮತ್ತು ಕೇದಾರೇಶ್ವರ ದೇವಾಲಯಗಳನ್ನು ಕಟ್ಟಿಸಿದರು. ಹಳೆಬೀಡು ಹಿಂದೆ ದ್ವಾರಸಮುದ್ರವೆಂದು ಕರೆಯಲ್ಪಡುತ್ತಿತ್ತು. ಹೊಯ್ಸಳ ಸಾಮ್ರಾಜ್ಯಕ್ಕೆ ಇದು ಕೂಡಾ ರಾಜಧಾನಿಯಾಗಿತ್ತು. ಈ ಊರನ್ನು ಬಿಟ್ಟು ಬೇಲೂರನ್ನು ರಾಜಧಾನಿಯನ್ನಾಗಿ ಮಾಡಿಕೊಂಡ ಮೇಲೆ ದ್ವಾರ ಸಮುದ್ರಕ್ಕೆ ಹಳೆಬೀಡೆಂದು ಹೆಸರಾಯಿತಂತೆ. ಹಳೆಬೀಡು ಹೊಯ್ಸಳ ದೇವಾಲಯಗಳ ಬೀಡೆಂದರೂ ತಪ್ಪಲ್ಲ. ಏಕೆಂದರೆ ಬಹಳ ಕಾಲದವರೆಗೆ ಹೊಯ್ಸಳ ಚಕ್ರವರ್ತಿಗಳು ಇದನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಹೊಯ್ಸಳೇಶ್ವರ ಕೇದಾರೇಶ್ವರ ದೇವಾಲಯಗಳನ್ನು ಕಟ್ಟಿಸಿದುದಲ್ಲದೆ ಇನ್ನೂ ಅನೇಕ ದೇವಾಲಯಗಳನ್ನು ಕಟ್ಟಿಸಿದರು. ಆದರೆ ಹೊಯ್ಸಳೇಶ್ವರ ದೇವಾಲಯವೇ ಆ ಎಲ್ಲ ದೇವಾಲಯಗಳಿಗಿಂತ ಎಲ್ಲ ವಿಧದಲ್ಲೂ ಶ್ರೇಷ್ಠವಾದ ವಾಸ್ತು ಶಿಲ್ಪದಿಂದ ಕೂಡಿದೆ. ಈ ದೇವಾಲಯವನ್ನು ವಿಷ್ಣುವರ್ಧನನ ಅಧಿಕಾರಿಯಾದ ಕೇತಮಲ್ಲನೆಂಬವನು ವಿಷ್ಣುವರ್ಧನನ ಪಟ್ಟ ಮಹಿಷಿಯಾದ ಶಾಂತಲಾದೇವಿಗೆ ಸದ್ಗತಿಯಾಗಲೆಂದು ಕಟ್ಟಿಸಿದನಂತೆ. ಕ್ರಿ. ಶ. 1121ರಲ್ಲಿ ಕಟ್ಟಡದ ರಚನೆಯು ಪ್ರಾರಂಭವಾಗಿ ವಾಸ್ತುಶಿಲ್ಪ ರಚನಾ ಕಾರ್ಯವು ಕ್ರಿ. ಶ. 1141ರ ಹೊತ್ತಿಗೆ ಈಗಿರುವ ರೂಪಕ್ಕೆ ಬಂದಂತೆ ತಿಳಿದು ಬರುವುದು. ಆದರೂ ಈ ದೇವಾಲಯವು ಪೂರ್ತಿಯಾಗಲಿಲ್ಲ. ಇದನ್ನು ಕಟ್ಟುವ ಕೆಲಸವು 86 ವರ್ಷಗಳ ಕಾಲದವರೆಗೆ ಮುಂದುವರಿಯುತ್ತಲೇ ಬಂದಿತಂತೆ. ಈ ಗುಡಿಯನ್ನು ಪೂರ್ಣವಾಗಿ ಮುಗಿಸಿರುತ್ತಿದ್ದರೆ ಆಗ ಅವರ ಸೌಂದರ್ಯವು ಹೇಗೆ ಇರುತ್ತಿತ್ತೊ ಎಂದು ಊಹಿಸಲಿಕ್ಕೆ ಸಾಧ್ಯವಿಲ್ಲವೆಂದು ಹೇಳಲಾಗುತ್ತದೆ. ಈ ಗುಡಿಯಲ್ಲಿ ವಿಷ್ಣುವರ್ಧನನ ನೆನಪಿಗಾಗಿ ಹೊಯ್ಸಳೇಶ್ವರ ಶಿವಲಿಂಗ ಶಾಂತಲಾ ದೇವಿಯ ಸವಿನೆನಪಿಗಾಗಿ ಶಾಂತಳೇಶ್ವರ ಶಿವಲಿಂಗ – ಹೀಗೆ ಎರಡು ಶಿವಲಿಂಗಗಳು ಸ್ಥಾಪಿಸಲ್ಪಟ್ಟಿವೆ.

ಕೇದಾರೇಶ್ವರ ದೇವಾಲಯವನ್ನು ಕ್ರಿ. ಶ. 1219ರಲ್ಲಿ ಎರಡನೆಯ ಬಲ್ಲಾಳ ಚಕ್ರವರ್ತಿಯು ಕಟ್ಟಿಸಿದನು. ಇದನ್ನು ತನ್ನ ಧರ್ಮಪತ್ನಿ ಕೇತಾದೇವಿಯ ಸ್ಮಾರಕವಾಗಿ ಕಟ್ಟಿಸಿದನೆಂದು ಹೇಳಲಾಗುತ್ತದೆ. ಇದು ಹೊಯ್ಸಳೇಶ್ವರ ದೇವಾಲಯದ ಭವ್ಯತೆಗೆ ಸಮಾನವಾಗದಿದ್ದರೂ ಈ ಗುಡಿಯಲ್ಲಿ ತೋರಿಸಿದ ಕೆತ್ತನೆಯ ಕೆಲಸ ಲೋಕೋತ್ತರ, ಅದ್ಭುತ ಹಾಗೂ ಆಶ್ಚರ್ಯಜನಕ.



ಬೇಲೂರು ಚೆನ್ನಕೇಶವ ದೇವಾಲಯ ಮತ್ತು ಹಳೇಬೀಡಿನ ಹೊಯ್ಸಳೇಶ್ವರ ಮತ್ತು ಕೇದಾರೇಶ್ವರ ದೇವಾಲಯಗಳ ಸ್ಥೂಲ ಪರಿಚಯವನ್ನು ಈ ಕೆಳಗಿನಂತೆ ಸಂಕ್ಷೇಪವಾಗಿ ಹೇಳಬಹುದು.

ಬೇಲೂರು ಇನ್ನೂ ಒಂದೆರಡು ಮೈಲು ದೂರದಲ್ಲಿರುವಾಗಲೇ ಸುಮಾರು 30 ಅಡಿ ಎತ್ತರದ ಐದಂತಸ್ತಿನ ಗೋಪುರವು 'ಓ ಯಾತ್ರಿಕನೆ, ಇಗೋ ಇಲ್ಲಿ ನಾನಿದ್ದೇನೆ ಶಿಲೆಯ ಕಲೆಯ ಅದ್ಭುತವನ್ನು ನಿನಗೆ ತೋರಿಸುತ್ತೇನೆ ಬಾ'' ಎಂದು ಕರೆಯುವಂತೆ ಭಾಸವಾಗುತ್ತದೆ. ಈ ಗೋಪುರದ ಮೇಲೆ ಪಂಚ ಕಲಶಗಳು ಕಂಗೊಳಿಸುತ್ತವೆ. ಮಹಾದ್ವಾರವನ್ನು ದಾಟಿ ಒಳಗೆ ಹೆಜ್ಜೆಯಿಟ್ಟೊಡನೆ ವಿಶಾಲವಾದ ಪೌಳಿಯ ಕಾಣಿಸುವುದು. ಈ ಪೌಳಿಯ ತಳಕ್ಕೆಲ್ಲ ಕಲ್ಲು ಹಲಗೆಗಳನ್ನು ಹಾಸಿದ್ದಾರೆ. ಪೌಳಿಯ ಮಧ್ಯದಲ್ಲಿ ಭೂಲೋಕದ ಅದ್ಭುತ ಕೃತಿಯೆನಿಸಿದ ಚೆನ್ನ ಕೇಶವ ಸ್ವಾಮಿಯ ದೇವಾಲಯವು ಐದು ಅಡಿ ಎತ್ತರದ ನಕ್ಷತ್ರಾಕಾರದ 'ಶ್ರೀ ಚಕ್ರ' ಎಂಬ ಪೀಠದ ಮೇಲೆ ಕಟ್ಟಲ್ಪಟ್ಟಿದೆ. ದೇವಾಲಯಕ್ಕೆ ಪೂರ್ವ, ಉತ್ತರ, ದಕ್ಷಿಣ ದಿಕ್ಕುಗಳಲ್ಲಿ ಮೂರು ದ್ವಾರಗಳಿದ್ದು ಪೂರ್ವಕ್ಕಿರುವ ದ್ವಾರವೇ ಪ್ರವೇಶ ದ್ವಾರವಾಗಿದೆ. ಪ್ರವೇಶ ದ್ವಾರದ ಎಡಬಲಗಳಲ್ಲಿ ದ್ವಾರಪಾಲಕರ ವಿಗ್ರಹಗಳನ್ನು ಕಾಣಬಹುದು. ಇದು ಹೊಯ್ಸಳ ಲಾಂಛನವಾಗಿದ್ದು ಹೊಯ್ಸಳರು ಕಟ್ಟಿಸಿದ ಎಲ್ಲ ಕಲಾಕೃತಿಗಳಲ್ಲೂ ಈ ಲಾಂಛನವನ್ನು ನಾವು ಕಾಣಬಹುದು. ಉತ್ತರ ದಿಕ್ಕಿಗಿರುವ ಬಾಗಿಲು ಸ್ವರ್ಗದ ಬಾಗಿಲೆಂದೂ ದಕ್ಷಿಣದ ಬಾಗಿಲು ಶುಕ್ರವಾರದ ಬಾಗಿಲೆಂದೂ ಕರೆಯಿಸಿ ಕೊಳ್ಳಲ್ಪಡುತ್ತವೆ. ಈ ಮೂರು ಬಾಗಿಲುಗಳ ಮುಂದೆ ಎರಡೂ ಕಡೆಗಳಲ್ಲಿ ಎರಡೆರಡು ಮಂಟಪಗಳುಂಟು. ಈ ದೇವಾಲಯವನ್ನು ಮೂರು ಭಾಗಗಳನ್ನಾಗಿ ಮಾಡಬಹುದು. ಒಂದನೆಯದು ಗರ್ಭಗುಡಿ, ಎರಡನೆಯದು ಗರ್ಭಗುಡಿಯ ಮುಂದಿರುವ ಪಡಸಾಲೆ, ಮೂರನೆಯದು ಮಧ್ಯದ ಹಜಾರ ಅಥವಾ ನವರಂಗ. ಈ ಮಧ್ಯದ ಹಜಾರಕ್ಕೆ ಮೂರು ಬಾಗಿಲುಗಳ ಸಂಬಂಧವುಂಟು.

ಗೋಡೆಗಳ ಹೊರಭಾಗದ ಸುತ್ತ ಆನೆಗಳ ಸಾಲುಗಳು ಕೆತ್ತಲ್ಪಟ್ಟಿವೆ. ಕೆಲವು ಆನೆಗಳು ಓಡುವಂತೆ, ಕೆಲವು ಜಗಳವಾಡುವಂತೆ, ಕೆಲವು ಗಂಭೀರವಾಗಿ ನಿಂತಂತೆ ಇವೆ. ಆನೆಗಳ ಸಾಲಿನ ಮೇಲೆ ಸಿಂಹಗಳ ಸಾಲು ಕೆತ್ತಲ್ಪಟ್ಟಿವೆ. ಮೂರನೆಯದರಲ್ಲಿ ಬಳ್ಳಿಗಳ ಕುಸುರಿಯ ಅನಂತ ಸೌಂದರ್ಯ ರಾಶಿಯಿದೆ. ನಾಲ್ಕನೆಯ ಸಾಲಿನಲ್ಲಿ ಹೆಂಗಸರ ಮತ್ತು ದೇವತೆಗಳ ಚಿತ್ರಗಳು ಕೆತ್ತಲ್ಪಟ್ಟಿವೆ. ಐದನೆಯ ಸಾಲಿನಲ್ಲಿ ಸಣ್ಣ ಕಂಬಗಳು – ಇವುಗಳ ಮಧ್ಯದಲ್ಲಿ ಹೆಂಗಸರ ಚಿತ್ರಗಳು, ಇಲ್ಲಿನ ವಿಗ್ರಹಗಳಲ್ಲಿ ಬೇಟೆಗಾರರು ಸಂಗೀತಕಾರರು ಕುಣಿಯುವವರು ಇವರೆಲ್ಲ ಇದ್ದಾರೆ. ದೇವರುಗಳ, ಪ್ರಾಣಿಗಳ, ಮತ್ತು ಮನುಷ್ಯರ ಬೇರೆ ಬೇರೆ ಭಾವಗಳಿಂದ ಕೂಡಿದ ಅನೇಕ ಚಿತ್ರಗಳು ಇಲ್ಲಿ ಕೆತ್ತಲ್ಪಟ್ಟಿವೆ. ಇವುಗಳಲ್ಲಿ ಕೆಲವು ಅತಿ ಚಿಕ್ಕವಾಗಿದ್ದು ಮೇಣದಿಂದಲೂ ಇಂತಹ ವಿಗ್ರಹಗಳನ್ನು ಇಷ್ಟೊಂದು ಪರಿಷ್ಕಾರವಾಗಿಯೂ ವಿಪುಲ ಸಂಖ್ಯೆಯಲ್ಲಿ ಕೆತ್ತಲು ಶಕ್ಯವಿಲ್ಲವೆನ್ನುವಂಥ ಕಲಾಗಾರಿಕೆ ನೋಡುವವರನ್ನು ದಂಗುಗೊಳಿಸುತ್ತದೆ.

ಈ ಸಾಲುಗಳ ಮೇಲ್ಭಾಗದಲ್ಲಿ ಸಣ್ಣ ಸಣ್ಣ ಕಂಬದ ಆಕೃತಿಗಳು ಕೆತ್ತಿದ್ದು ಇವುಗಳ ಮೇಲೆ ಹೂವಿನಿಂದ ಕೂಡಿದ ಬಳ್ಳಿಗಳು ಅತಿ ಸೂಕ್ಷ್ಮವಾಗಿ ಹಬ್ಬಿದಂತೆ ಕೆತ್ತಲ್ಪಟ್ಟಿವೆ. ಇಲ್ಲಿನ ವಿಗ್ರಹಗಳು ಮಹಾಭಾರತ, ರಾಮಾಯಣದ ಕಥೆಗಳಿಗೆ ಸಂಬಂಧಿಸಿದವುಗಳಾಗಿವೆ. ಈ ವಿಗ್ರಹಗಳು ಬಹು ಚಿಕ್ಕವಾಗಿದ್ದು ಮಾರ್ಮಿಕವಾಗಿ ನೋಡುವವರ ಕಣ್ಣಿನ ಬರವನ್ನೆ ಹಿಂಗಿಸುವಂತೆ ಇವೆ. ರೂವಾರಿಯ ಕಲಾಪರಿಣತೆಗೆ ನಾವು ಕೈಯೆತ್ತಿ ಮುಗಿಯುತ್ತೇವೆ. ಇವೆಲ್ಲ ಕನ್ನಡಿಗರ ಅದ್ಭುತ ಪ್ರತಿಭಾ ಸಂಪನ್ನತೆಯ ಜ್ವಲಂತ ನಿದರ್ಶನಗಳು.

ಇದಕ್ಕೂ ಮೇಲ್ಭಾಗದಲ್ಲಿ ಜಾಲಂದ್ರಗಳು ನಮಗೆ ಗೋಚರಿಸುತ್ತವೆ. ಜಾಲಂದ್ರಗಳೆಂದರೆ ಕಲ್ಲಿನಲ್ಲಿ ಅನೇಕ ಚಚ್ಚೌಕದ ತೂತು ಕೊರೆದು ಹೊಂದಿಸಿದಂಥವು. ಈ ದೇವಾಲಯದಲ್ಲಿ ಒಟ್ಟು 20 ಜಾಲಂದ್ರಗಳಿವೆ. ಈ ಜಾಲಂದ್ರಗಳು ಎರಡು ಕಂಬಗಳ ಮಧ್ಯೆ ಕೂಡಿಸಿದವುಗಳು ಇಲ್ಲಿನ ಕಂಬಗಳು ಗಂಟೆಯಾಕಾರದವುಗಳು. ಈ ಜಾಲಂದ್ರ ಮತ್ತು ಕಂಬಗಳ ಸುತ್ತಲೂ ಅನೇಕ ಬಗೆಯ  ಸುಂದರವಾದ ವ್ಯವಸ್ಥಿತ ಕೆತ್ತನೆಯ ಕೆಲಸಗಳು ಕಂಗೊಳಿಸುತ್ತವೆ.

ಜಾಲಂದ್ರದ ಪಕ್ಕದಲ್ಲಿರುವ ಗಂಟೆಯಾಕಾರದ ಕಂಬಗಳ ಮೇಲೆ ಸೂರುಕಲ್ಲುಗಳಿವೆ. ಈ ಕಲ್ಲುಗಳಲ್ಲಿ ಸುಂದರವಾಗಿರುವ ವಿಗ್ರಹಗಳು ಕೆತ್ತಲ್ಪಟ್ಟಿವೆ. ಈ ವಿಗ್ರಹಗಳಿಗೆ ಮದನ ಕೈ ಗೊಂಬೆಗಳೆಂದು ಹೆಸರು. ಈ ಬಗೆಯ ವಿಗ್ರಹಗಳು ದೇವಾಲಯದ ಸುತ್ತಲೂ ಒಟ್ಟು ನಲ್ವತ್ತೆರಡು ಇವೆ. ಚೆನ್ನಕೇಶವ ಮೂರ್ತಿಯನ್ನು ಬಿಟ್ಟರೆ ಈ ವಿಗ್ರಹಗಳೇ ಅತ್ಯಂತ ಸುಂದರ ಮತ್ತು ಭಾವಪೂರ್ಣವಾಗಿವೆ. ಈ ಮೂರ್ತಿಗಳೆಲ್ಲ ಹೆಂಗಸರದಾಗಿದ್ದು ಒಂದೊಂದು ಮೂರ್ತಿಯೂ ಒಂದೊಂದು ಭಾವಭಂಗಿಯಲ್ಲಿದೆ. ಕೆಲವು ಹೆಂಗಸರು ಅಲಂಕಾರ ಮಾಡಿಕೊಳ್ಳುವಂತೆ ಕೆಲವರು ನಾಟ್ಯಮಾಡುವಂತೆ

ಇನ್ನು ಕೆಲವರು ವಾದ್ಯಗಳನ್ನು ಬಾರಿಸುವಂತೆಯೂ ಇವೆ. ಕೆಲವರು ನಾಟ್ಯಮಾಡುವಂತೆ ಇನ್ನು ಕೆಲವರು ವಾದ್ಯಗಳನ್ನು ಬಾರಿಸುವಂತೆಯೂ ಇವೆ. ಬೇಟೆಗಾತಿಯರ ಮೂರ್ತಿಗಳು ಅತ್ಯದ್ಭುತ ಕಲೆಯಿಂದ ಕೂಡಿದವುಗಳು. ಒಂದು ಕೆತ್ತನೆಯಲ್ಲಿ ಒಬ್ಬ ಹೆಂಗಸಿನ ಕಾಲಿಗೆ ಚುಚ್ಚಿದ ಮುಳ್ಳನ್ನು ಇನ್ನೊಬ್ಬ ಹೆಂಗಸು ತೆಗೆಯುವಂತೆ ಇದೆ. ಮತ್ತೊಂದು ಚಿತ್ರದಲ್ಲಿ ಒಬ್ಬ ಹೆಂಗಸು ತನ್ನ ಬಟ್ಟೆಯಲ್ಲಿನ ಚೇಳಿಗಾಗಿ ಹೆದರಿ ಬಟ್ಟೆಯನ್ನು ಕೊಡಕುವಂತಿದೆ. ಚಾಮುಂಡೇಶ್ವರಿ, ನಾಟ್ಯ ಸರಸ್ವತಿ, ಭುವನೇಶ್ವರಿ ಗಂಧರ್ವಕನ್ಯೆ ಮೊದಲಾದ ವಿಗ್ರಹಗಳು ಅಪೂರ್ವ ಸೊಬಗಿನವುಗಳು. ಈ ವಿಗ್ರಹಗಳನ್ನು ನೋಡಿ ಆನಂದಿಸಬೇಕೇ ವಿನಾ ಶಬ್ದಗಳಿಂದ ವರ್ಣಿಸುವುದು ಅಸದಳ. ದೇವಾಲಯದ ಒಳಭಾಗದಲ್ಲಿನ ಕಂಬಗಳನ್ನು ರಚಿಸಿದ ರೀತಿ ಅತ್ಯಂತ ಕುತೂಹಲಕಾರಿ. ನವರಂಗ ಮತ್ತು ಸುಕನಾಸಿಯ ಮೇಲ್ಭಾಗದಲ್ಲಿ ಕೆತ್ತಿರುವ ಕೆತ್ತನೆ ಮತ್ತು ಕಲ್ಲುಗಳನ್ನು ಜೋಡಿಸಿದ ರೀತಿ ಪ್ರೇಕ್ಷಕರ ಮನಸ್ಸನ್ನು ಸೂರೆಗೊಳ್ಳುತ್ತದೆ. ಗರ್ಭಗುಡಿಯ ಬಾಗಿಲಿನ ಕೆತ್ತನೆ ನಯನ ಮನೋಹರ. ಒಟ್ಟಿನಲ್ಲಿ ಬೇಲೂರು ಚೆನ್ನಕೇಶವ ದೇವಾಲಯವು ಭೂಲೋಕದ ಅಚ್ಚರಿಗಳಲ್ಲೊಂದು ಎಂದೆನ್ನಬಹುದು.

ಬೇಲೂರಿಗಿಂತಲೂ ಹಳೆಬೀಡಿನಲ್ಲಿ ಶಿಲ್ಪಸಮೃದ್ಧಿ ಹೆಚ್ಚು. ಹೊಯ್ಸಳೇಶ್ವರ ದೇವಾಲಯವು ಶಿವನ ದೇವಾಲಯ. ದೇವಾಲಯವೆಲ್ಲ ಬಳಪದ ಕಲ್ಲಿನಿಂದ ಕಟ್ಟಲ್ಪಟ್ಟಿದೆ. ಇದರ ಹೊರಗೋಡೆಗಳೂ ಬೇಲೂರಿನ ದೇವಾಲಯದಂತೆ ಸ್ಥಳ ವಿನ್ಯಾಸವನ್ನುಳ್ಳ ಎರಡು ದೇವಸ್ಥಾನಗಳ ಜೋಡಣೆಯಿಂದ ಕೂಡಿದೆ. ಹೊಯ್ಸಳೇಶ್ವರ, ಶಾಂತಳೇಶ್ವರ ಎಂಬೆರಡು ಶಿವಲಿಂಗಗಳು ಇವುಗಳಲ್ಲಿ ಸ್ಥಾಪಿಸಲ್ಪಟ್ಟಿವೆ. ಸ್ಥಳಪಾಯದ ಕಟ್ಟಡದಲ್ಲಿ ಸುತ್ತಲೂ ಬೇಲೂರಿನ ದೇವಾಲಯದಂತೆಯೇ ಶಿಲ್ಪಿಯ ಅನಂತ ಪ್ರತಿಭಾಮಯ ಶಕ್ತಿಯ ಪ್ರದರ್ಶನ ಮೂಡಿದೆ. ಗೋಡೆಗಳ ಮೇಲ್ಭಾಗದಲ್ಲಿ ಸುಮಾರು 180ರಷ್ಟು ಸುಂದರವೂ ಭಾವ ಪೂರ್ಣವೂ ಆದ ವಿವಿಧ ಮೂರ್ತಿಗಳ ಕೆತ್ತನೆ ಕಂಡುಬರುತ್ತದೆ. ದೇವಾಲಯದ ಒಳಭಾಗದಲ್ಲಿಯೂ ಇದೇ ರೀತಿಯ ಕೆತ್ತನೆಯ ಕೆಲಸ ಕಂಡುಬರುತ್ತದೆ. ಈ ದೇವಾಲಯವನ್ನು ಅನೇಕ ದೇಶೀಯ ಮತ್ತು ವಿದೇಶೀಯ ಪ್ರವಾಸಿಗಳು ಹಿಂದೂ ಶಿಲ್ಪ ಕಲೆಯ ಗಣಿಯೆಂದು ಕರೆದಿರುತ್ತಾರೆ. ಈ ದೇವಾಲಯವಲ್ಲದೆ ಇನ್ನೂ ಅನೇಕ ದೇವಾಲಯಗಳೂ, ಬಸದಿಗಳೂ ಹೊಯ್ಸಳ ರಾಜರಿಂದ ಕಟ್ಟಲ್ಪಟ್ಟಿವೆ. ಪ್ರತಿಯೊಂದರ ನವರಂಗವು ಭವ್ಯವಾದ ನಂದಿಯ ಮಂಟಪದಿಂದ ಕೂಡಿದೆ. ಈ ನಂದಿಗಳ ಕಾಲಗೊರಸು, ಗಂಟೆಯ ಸರ ನೂಲ ಹಗ್ಗಮೊದಲಾದುವುಗಳನ್ನು ಬಹು ನಾಜೂಕಾಗಿ ಕೆತ್ತಿ ಬಿಡಿಸಿ ಅಪೂರ್ವವಾದ ಶಿಲ್ಪ ಕಲಾ ನೈಪುಣ್ಯವನ್ನು ರೂವಾರಿಗಳು ತೋರಿಸಿದ್ದಾರೆ. ಜಗತ್ತಿನ ಕಲಾ ಪರಿಣತರ, ಕಲಾರಾಧಕರ ನಿರಂತರ ಸ್ತುತಿಗೆ ಈ ರೂವಾರಿಗಳು ಪಾತ್ರರಾಗಿದ್ದಾರೆ. ಈ ದೇವಾಲಯದಲ್ಲಿ ಕೆತ್ತಲ್ಪಟ್ಟಿರುವ ಸೂರ್ಯನಾರಾಯಣ ವಿಗ್ರಹ, ಭೈರವೀ ವಿಗ್ರಹ, ಗೋವರ್ಧನ ಗಿರಿಧಾರಿ ಬಲಿಚಕ್ರವರ್ತಿಯ ಕಥೆ ಗಿರಿಜಾಕಲ್ಯಾಣ – ಒಂದೇ – ಎರಡೇ ಅನಂತ ಕೆತ್ತನೆಯ ಸೊಬಗು ಭಾರತೀಯರ ವಿಶ್ವಮಾನ್ಯ ಕಲಾವೈಭವದ ಸಾಕ್ಷಿಯಾಗಿದೆ. ನಮ್ಮ ಪ್ರಾಚೀನ ಉದಾರಿಗಳೂ ಧರ್ಮಭೀರುಗಳೂ ಆದ ರಾಜಮಹಾರಾಜರ ಬಗೆಗೆ ಶ್ರೇಷ್ಠ ರೂವಾರಿಗಳ ಬಗೆಗೆ ಅಪೂರ್ವ ಭಕ್ತಿಯನ್ನೂ ಅಭಿಮಾನವನ್ನೂ ನಮ್ಮಲ್ಲಿ ಉಕ್ಕಿಸುತ್ತವೆ.

ಬೇಲೂರು ಹಳೆಬೀಡುಗಳ ದೇವಾಲಯಗಳನ್ನು ಜಕ್ಕಣಾಚಾರಿ ಮತ್ತು ಡಕ್ಕಣಾಚಾರಿಗಳು ಕಟ್ಟಿದರೆಂದು ಹೇಳುವ ಪರಿಪಾಠವುಂಟು. ಆದರೆ ಈ ಕುರಿತು ಚರಿತ್ರೆಯ ಉಲ್ಲೇಖಗಳು ಇದುವರೆಗೆ ಕಂಡುಬಂದಿಲ್ಲ. ವಿಷ್ಣುವರ್ಧನನಿಂದ ಪ್ರೋತ್ಸಾಹಿತರಾದ ಅನೇಕ ರೂವಾರಿಗಳು ಬೇಲೂರು ದೇವಸ್ಥಾನದಲ್ಲಿ ತಾವು ಕೆತ್ತಿದ ಕೆತ್ತನೆಯ ಕೆಳಗೆ ತಮ್ಮ ಹೆಸರುಗಳನ್ನು ಕೆತ್ತಿರುತ್ತಾರೆ. ಇವರಲ್ಲಿ ದಾಸೋಜ ಮತ್ತು ಅವನ ಮಗ ಚಾವಣನೆಂಬವರು ಪ್ರಧಾನರು. ಇವರ ಶಿಲ್ಪಕಲಾ ಕುಶಲತೆಯು ಅತ್ಯದ್ಭುತವಾದುದು. ಇವರನ್ನೇ ಜಕ್ಕಣಾಚಾರಿ ಮತ್ತು ಡಕ್ಕಣಾಚಾರಿಗಳೆಂದು ಜನರು ಕರೆದಿರಬಹುದು ಎಂತ ಊಹಿಸಬಹುದು. ಜಕ್ಕಣ ಮತ್ತು ಡಕ್ಕಣಾಚಾರಿಗಳ ಸಂಬಂಧವಾಗಿ ಅನೇಕ ದಂತ ಕಥೆಗಳುಂಟು. ಇವರ ಹುಟ್ಟೂರು ತುಮಕೂರಿನ ಹತ್ತಿರದ 'ಕೈದಾಳ'ವೆಂಬ ಗ್ರಾಮವೆಂದೂ, ಜಕ್ಕಣಾಚಾರಿ ಹುಟ್ಟಾ ಕಲಾಗಾರನಾಗಿದ್ದು, ತನಗೊಬ್ಬ ಮಗನು ಹುಟ್ಟಿದ ಮೇಲೆ ಮನೆಯನ್ನು ಬಿಟ್ಟು ಕರ್ನಾಟಕದ ಮಹಾಮಹಾ ರಾಜರುಗಳ ಆಶ್ರಯ ಪಡೆದು ದೇವಾಲಯ ನಿರ್ಮಾಣದಲ್ಲಿ ತೊಡಗಿದನೆಂದೂ ಕೊನೆಗೆ ಬೇಲೂರು ಚೆನ್ನ ಕೇಶವ ದೇವಾಲಯವನ್ನು ನಿರ್ಮಾಣಮಾಡಿ ವಿಗ್ರಹ ಪ್ರತಿಷ್ಠಾಪನೆಯ ಕಾಲಕ್ಕೆ ಮಗನೂ ದೊಡ್ಡವನಾಗಿ ಶಿಲ್ಪಕಲೆಯಲ್ಲಿ ಪ್ರಾವೀಣ್ಯ ಪಡೆದು ಅಲ್ಲಿಗೆ ಬಂದು ತಂದೆಯೆಂದು ತಿಳಿಯದೆ ಜಕ್ಕಣಚಾರಿಯು ಕೆತ್ತಿದ ವಿಗ್ರಹದ ಬಗೆಗೆ ಆಕ್ಷೇಪಣೆಯೆತ್ತಿದನೆಂದೂ ಕೊನೆಗೆ ತಂದೆ ಮಕ್ಕಳಿಗೆ ಸಮಾಗಮವಾಗುವುದೆಂದೂ ಕಥೆಯೊಂದು ಜನಜನಿತವಾಗಿದೆ. ಆದುದರಿಂದ ದಾಸೋಜ ರೂವಾರಿಯೇ ಜಕ್ಕಣಾಚಾರಿಯಾಗಿರಬೇಕೆಂದು ವಿದ್ವಾಂಸರು ತರ್ಕಿಸುತ್ತಾರೆ. ದಾಸೋಜನಿಗೆ 'ಬಿರುದ ರೂವಾರಿ ಮದನ ಮಹೇಶ'

ಎಂಬ ಬಿರುದಿತ್ತು. ದಾಸೋಜ ಮತ್ತು ಚಾವಣರು ತಲಾ ನಾಲ್ಕು ನಾಲ್ಕು ಬೇಲೂರಿನ ಶಿಲಾಬಾಲಿಕೆಯವರ ವಿಗ್ರಹಗಳನ್ನು ಕೆತ್ತಿದರು. ದಾಸೋಜನ ಬೇಟೆಗಾತಿಯ ವಿಗ್ರಹವು ಅತ್ಯದ್ಭುತವಾದುದು. ಕೋತಿಯೊಂದು ಯುವತಿಯ ಸೀರೆಯನ್ನೆಳೆಯುವಂತೆ ಕೆತ್ತಿರುವ ಚಾವಣನ ಶಿಲ್ಪ ಪ್ರಶಂಸನೀಯವಾದುದು. ಇದರಂತೆ ಕೊಳಲಿನ ಶಿಲಾಬಾಲಿಕೆಯನ್ನು ಕೆತ್ತಿದ ಮಲ್ಲಿಯಣ್ಣ, ನೃತ್ಯದಲ್ಲಿ ತೊಡಗಿರುವ ಯುವತಿಯ ವಿಗ್ರಹ ಕೆತ್ತಿದ ಗದುಗಿನ ನಾಗೋಜ, ನವರಂಗದಲ್ಲಿ ಶಿಲ್ಪದ ಕುಸುರಿಯ ಕೆಲಸಮಾಡಿದ ಚಿಕ್ಕ ಹಂಪ ಮತ್ತು ಪಾದರಿ ಮಲ್ಲೋಜ, ಇವೇ ಮೊದಲಾದವರ ಹೆಸರುಗಳನ್ನು ಉಲ್ಲೇಖಿಸಬಹುದು. ಇಂಥ ಸಾವಿರಾರು ಜನ ಅದ್ಭುತ ಕಲಾಸಂಪನ್ನರಾದ ಪ್ರತ್ಯುತ್ಪನ್ನಮತಿಗಳಾದ ರೂವಾರಿಗಳು ಕರ್ನಾಟಕದಲ್ಲಿ ಇದ್ದರು. ಇದರಂತೆ ಹಳೆಬೀಡಿನ ಹೊಯ್ಸಳೇಶ್ವರ ದೇವಾಲಯದ ಕೆತ್ತನೆಯ ಕಾರ್ಯದಲ್ಲಿ ಮಾಬನೆಂಬವನು ಪ್ರಮುಖನು. ಇಪ್ಪತ್ತು ವರ್ಷಗಳ ತರುವಾಯ ಕೇದಾರೋಜನೆಂಬವನು ನಾಲ್ಕು ಬಾಗಿಲು ಮತ್ತು ಜಾಲಂದ್ರಗಳನ್ನು ಸೇರಿಸಿದನು. ಇವನು ಹೊಯ್ಸಳ ನರಸಿಂಹನ ಪಟ್ಟಶಿಲ್ಪಿ. ಅಲ್ಲಿ ಒಂದು ಶಾಸನದಲ್ಲಿ ''ಹೊಯ್ಸಳ ನಾರಸಿಂಹ ದೇವನ ರೂವಾರಿ ಕೇದಾರೋಜಂಗೆ ಮಲಪರ ಗಂಡಭೇರುಂಡ ರೂವಾರಿ ಕಾಳಿದಾಸಿಗೈದ ಮಕರ ತೋರಣ'' ಎಂದು ಕೆತ್ತಿದ್ದಾರೆ. ಈ ದೇವಾಲಯಕ್ಕೆ ಸೇರಿದ ಪ್ರಸಿದ್ಧ ಕಲಾಕೃತಿ 'ನಾಟ್ಯಸರಸ್ವತಿ'' 'ಹರಿಪ'ನೆಂಬವನು ಕೆತ್ತಿದನು. ಹೀಗೆ ಅನೇಕ ಶಿಲ್ಪಿಗಳು ತಾವು ಮಾಡಿದ ಕಲಾಕೃತಿಯ ಕೆಳಗೆ ತಮ್ಮ ಹೆಸರುಗಳನ್ನು ಪೂರ್ಣವಾಗಿಯೋ ಸಂಕ್ಷೇಪವಾಗಿಯೋ ಹಾಕಿಕೊಂಡಿದ್ದಾರೆ.

ಬೇಲೂರು ಹಳೆಬೀಡುಗಳು ಹಾಸನ ಜಿಲ್ಲೆಯಲ್ಲಿವೆ. ಬೇಲೂರು ಹಳೆಬೀಡಿನಿಂದ ಕೇವಲ 10 ಮೈಲಿಗಳ ಅಂತರದಲ್ಲಿದೆ. ಹಾಸನಕ್ಕೆ ಬಂದು ಅಲ್ಲಿಂದ ಬಸ್ಸಿನಲ್ಲಿ ಬೇಲೂರಿಗೂ ಅನಂತರ ಹಳೆಬೀಡಿಗೂ ಹೋಗಿಬರಲು ಅನುಕೂಲವಿದೆ. ಪ್ರಕೃತಿಯ ಸೌಂದರ್ಯ ತಾಂಡವವಾಡುತ್ತಿರುವ ಈ ಎರಡು ಊರುಗಳು ಹಿತಕರವಾದ ಹವಾಗುಣದಿಂದ ಕೂಡಿದ್ದು ಸದಾ ಪ್ರವಾಸಿಗಳಿಗೆ ಅನುಕೂಲಕರವಾಗಿವೆ. ಭಾರತದ ಉದಯೋನ್ಮುಖ ತರುಣ ವಿದ್ಯಾರ್ಥಿಗಳು ನಮ್ಮ ಪೂರ್ವಜರ ಕಲಾನೈಪುಣ್ಯ, ಔದಾರ್ಯ, ಸೌಂದರ್ಯೋಪಾಸನೆಗಳ ಜೀವಂತ ನಿದರ್ಶನಗಳನ್ನು ಕಾಣಲು ಇಂಥ ಜಗತ್ಪ್ರಸಿದ್ಧ ಅಪೂರ್ವ ಕಲಾಕೃತಿಗಳನ್ನು ಕಣ್ಮುಟ್ಟ ನೋಡಿ ಅವುಗಳ ಬಗೆಗೆ ಯೋಚಿಸಬೇಕು.

---

**ಶಬ್ದಗಳ ಅರ್ಥ:**

ಉಚ್ರಯ – ಶ್ರೇಷ್ಠ, ಉಚ್ಚ; ಜ್ಞಾಪಕ – ನೆನಪು; ಲಾಂಛನ – ಚಿಹ್ನೆ, ಕುರುಹು; ವಿಪುಲ – ಹೆಚ್ಚಿನ; ಸೂರುಕಲ್ಲು – ಎಲ್ಲರಿಗೂ ತಿಳಿ ಹೇಳುವ ಕಲ್ಲು; ಸೂರೆ – ಸೆಳೆ; ಉಕ್ಕಿಸು – ಹೆಚ್ಚಿಸು; ದಂತ ಕತೆ – ಕಟ್ಟು ಕತೆ; ಗಂಡಭೇರುಂಡ – ಎರಡು ಮುಖವುಳ್ಳ ಪಕ್ಷಿ.

**ಪಠ್ಯಾಧಾರಿತ ಗದ್ಯಖಂಡವನ್ನು ಓದಿಕೊಂಡು ಸೂಚನೆಗೆ ಅನುಗುಣವಾಗಿ ಕೊಟ್ಟ ಚಟುವಟಿಕೆಗಳನ್ನು ಪೂರ್ಣ ಮಾಡಿರಿ.**

ಕೃತಿ 1) I)

ಬೇಲೂರು ಹಳೆಬೀಡನ್ನು ಕಂಡ ಡಾ।। ಫರ್ಗುಸನರ ಮಾತುಗಳು

II) **ಹಳೇಬೀಡಿನ ಲೋಕವಿಖ್ಯಾತ ದೇವಾಲಯಗಳು.**

| 1 | 2 |
| --- | --- |
| | |

**III)** ವಿಷ್ಣುವರ್ಧನ ಮತ್ತು ಶಾಂತಲೆಯ ನೆನಪಿಗಾಗಿ ಸ್ಥಾಪಿಸಿದ ದೇವಾಲಯಗಳು

**ಕೃತಿ. 2) I)** ಕೇದಾರೇಶ್ವರ ಮತ್ತು ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯಗಳ ಸ್ಥೂಲ ಪರಿಚಯವನ್ನು ಏಳೆಂಟು ವಾಕ್ಯಗಳಲ್ಲಿ ಬರೆಯಿರಿ.

**II)** ಗೋಡೆಗಳ ಹೊರಭಾಗದ ಮೇಲೆ ಕಂಡು ಬಂದಿರುವ ಚಿತ್ರಗಳು

1ನೇ ಸಾಲಿನಲ್ಲಿ

2ನೇ ಸಾಲಿನಲ್ಲಿ

3ನೇ ಸಾಲಿನಲ್ಲಿ

4ನೇ ಸಾಲಿನಲ್ಲಿ

5ನೇ ಸಾಲಿನಲ್ಲಿ


**III)** ನಿಮ್ಮ ಶೈಕ್ಷಣಿಕ ಪ್ರವಾಸ ಕೈಗೊಂಡಾಗ ಯಾವುದಾದರೊಂದು ದೇವಸ್ಥಾನದ ವರ್ಣನೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**IV)** ಬೇಲೂರಿನ ಚೆನ್ನಕೇಶವ ದೇವಾಲಯದ ಸುತ್ತಮುತ್ತಲಿರುವ ಶಿಲಾಬಾಲಿಕೆಯರ ಭಾವಭಂಗಿಗಳನ್ನು ವರ್ಣಿಸಿರಿ?

**ಕೃತಿ. 3) I)** ಹಳೇಬೀಡಿನ ಶಿಲ್ಪಸಮೃದ್ಧಿಯ ಕಲಾತ್ಮಕತೆಯನ್ನು ವಿವರಿಸಿರಿ?

**II)** ಚರಿತ್ರೆಯ ಉಲ್ಲೇಖದ ಪ್ರಕಾರ ಶಿಲ್ಪಿಗಳ ಜನಜನಿತವಾದ ಕಥೆಯನ್ನು ಬರೆಯಿರಿ?

**III)**




**ಕೃತಿ. 4) I)** ಕೆಳಗಿನವುಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.

ವಿದೇಶ x ........... ಅನುಕೂಲ x ........... ಹಿತಕರ x ...........

**II)** ''ದೇಶ ನೋಡು ಕೋಶ ಓದು'' ಈ ಗಾದೆಮಾತಿನ ಅರ್ಥ ನಿಮ್ಮ ಸ್ವಂತ ವಾಕ್ಯಗಳಲ್ಲಿ ಬರೆಯಿರಿ.

**III)** ಶೈಕ್ಷಣಿಕ ಪ್ರವಾಸಕ್ಕಾಗಿ ತಂದೆಯವರಿಗೆ ಹಣ ಕಳಿಸುವ ಕುರಿತು ಪತ್ರ ಬರೆಯಿರಿ.

# 5. ಒಲಿಂಪಿಕ್ ಕ್ರೀಡೋತ್ಸವ

ಕ್ರಿ. ಶ. 1972ರ ಸಪ್ಟೆಂಬರ ತಿಂಗಳಲ್ಲಿ ಇಪ್ಪತ್ತನೇ ಒಲಿಂಪಿಕ್ ಕ್ರಿಡೋತ್ಸವವು ಪಶ್ಚಿಮ ಜರ್ಮನಿಯ ಮ್ಯೂನಿಕ್ ನಗರದಲ್ಲಿ ನಡೆಯಿತು. ಹನ್ನೆರಡು ಸಾವಿರ ಮಂದಿ ಕ್ರೀಡಾಪಟುಗಳು ಪ್ರಪಂಚದ ನಾನಾ ಭಾಗಗಳಿಂದ ಅಲ್ಲಿಗೆ ಬಂದು ವಿವಿಧ ಆಟೋಟ ಸ್ಪರ್ಧೆಗಳಲ್ಲಿ ಭಾಗವಹಿಸಿದರು. ಸುಮಾರು ಹತ್ತು ಕೋಟಿ ಜನರು ಈ ಕ್ರೀಡೋತ್ಸವದ ಕಾರ್ಯಕ್ರಮವನ್ನು ಟೆಲಿವಿಷನ್ ಮೂಲಕ ವೀಕ್ಷಿಸಿ ಸಂತೋಷಪಟ್ಟರು. ಕ್ರಿ.ಶ. 1928ರಿಂದ ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ಜರುಗಿದ ಈ ಕ್ರೀಡೋತ್ಸವದಲ್ಲಿ ಆ್ಯಮಸ್ಟರಡಮ್' ಲಾಸ್ ಏಂಜಲಿಸ್, ಬರ್ಲಿನ್, ಲಂಡನ್, ಹೆಲ್ಸಿಂಕಿ ಮತ್ತು ಮೆಲ್ಬೋರ್ನ್ ನಗರಗಳಲ್ಲಿ ಭಾರತವು ಹಾಕಿ ಆಟದಲ್ಲಿ ಅದ್ವಿತೀಯವಾದ ಸ್ಥಾನವನ್ನು ಗಳಿಸಿತ್ತು. ಕ್ರಿ. ಶ. 1906ರಲ್ಲಿ ರೋಮ್ ನಗರದಲ್ಲಿ ನಡೆದ ಒಲಿಂಪಿಕ್ ಕ್ರೀಡೋತ್ಸವದಲ್ಲಿ ಹಾಕಿ ಆಟದಲ್ಲಿ ಪ್ರಥಮ ಸ್ಥಾನವನ್ನು ನಮ್ಮ ನೆರೆ ರಾಷ್ಟ್ರವಾದ ಪಾಕಿಸ್ತಾನವು ಗಳಿಸಿಕೊಂಡರೂ ನಾಲ್ಕು ವರ್ಷಗಳ ಬಳಿಕ ನಡೆದ ಟೋಕಿಯೋ ಒಲಿಂಪಿಕ್ ಕ್ರೀಡೋತ್ಸವದಲ್ಲಿ ಭಾರತವು ಪುನಃ ಹಾಕಿ ಆಟದಲ್ಲಿ ಪ್ರಥಮ ಸ್ಥಾನವನ್ನು ಪಡೆದು ಸ್ವರ್ಣ ಪದಕವನ್ನು ಗಳಿಸಿ ಕೊಂಡಿತು. ಕೊನೆಗೆ ಮ್ಯೂನಿಕ್ ನಗರದಲ್ಲಿ ನಡೆದ ಒಲಿಂಪಿಕ್ ಕ್ರೀಡೋತ್ಸವದಲ್ಲಿ ಪ್ರಥಮ ಸ್ಥಾನವನ್ನು ಬಿಟ್ಟುಕೊಡಬೇಕಾಯಿತು.

ಒಲಿಂಪಿಕ್ ಕ್ರೀಡೋತ್ಸವಕ್ಕೆ ಒಂದು ಚಾರಿತ್ರಿಕ ಹಿನ್ನೆಲೆಯಿದೆ. ಇತಿಹಾಸ ಪೂರ್ವದ ಕಾಲದಲ್ಲಿ ಗ್ರೀಸ್ ದೇಶದ ಒಲಿಂಪಸ್ ಎಂಬ ಕ್ಷೇತ್ರದಲ್ಲಿ 'ಜ್ಯೂಸ್' ಎಂಬ ದೇವತೆಯನ್ನು ಗ್ರೀಕರು ಆರಾಧಿಸುತ್ತಿದ್ದರು. ಈ ದೇವತೆಯ ಆರಾಧನೆಗೆ ಬೇರೆ ಬೇರೆ ಕಡೆಗಳಿಂದ ಜನರು ಯಾತ್ರೆ ಮಾಡಿಕೊಂಡು ಬರುತ್ತಿದ್ದರೆಂದೂ ಜ್ಯೂಸ್ ದೇವತೆಯ ಪ್ರೀತ್ಯರ್ಥವಾಗಿ ಕ್ರೀಡೋತ್ಸವ ಕಾರ್ಯಕ್ರಮಗಳು ನಡೆಯುತ್ತಿದ್ದುವೆಂದೂ ಇತಿಹಾಸಕಾರರು ಅಭಿಪ್ರಾಯಪಡುತ್ತಾರೆ. ಅತ್ಯಂತ ದೂರದ ಪ್ರದೇಶದಲ್ಲಿದ್ದ 'ಎಲಿಸ್' ಎಂಬ ಚಿಕ್ಕ ರಾಜ್ಯವು 'ಪಿಸಾ' ಎಂಬ ಇನ್ನೊಂದು ರಾಜ್ಯದೊಡನೆ ಯುದ್ಧದಲ್ಲಿ ನಿರತವಾದಾಗ ಕ್ರಿ. ಪೂ. 776ರಲ್ಲಿ ಒಲಿಂಪಿಯಾ ಎಂಬ ಸ್ಥಳದಲ್ಲಿ ಒಂದು ಒಪ್ಪಂದವಾಯಿತೆಂದೂ ಆ ಒಪ್ಪಂದಕ್ಕನುಗುಣವಾಗಿ ಉಭಯ ರಾಷ್ಟ್ರಗಳು ಒಲಿಂಪಿಕ್ ಕ್ರೀಡೋತ್ಸವವನ್ನು ನಡೆಸಿದರೆಂದೂ ತಿಳಿಯಲಾಗಿದೆ. ಅಂದಿನಿಂದ ಜ್ಯೂಸ್ ದೇವತೆಯ ಪ್ರೀತ್ಯರ್ಥವಾಗಿ ನಾಲ್ಕು ವರ್ಷಗಳಿಗೊಮ್ಮೆ ಕ್ರೀಡೋತ್ಸವವನ್ನು ಆಚರಿಸುತ್ತಾ ಬಂದಿರುವರೆಂದೂ ನಂಬಲಾಗಿದೆ.



ಗ್ರೀಸ್ ದೇಶದಲ್ಲಿರುವ ಒಲಿಂಪಿಯಾ ನಗರವೇ ಈ ಕ್ರೀಡೋತ್ಸವ ಆರಂಭದಲ್ಲಿ ನಡೆಯುತ್ತಿದ್ದ ಸ್ಥಳವಾಗಿತ್ತು. ಗ್ರೀಸಿನ ವೀರಾಗ್ರಣಿಯಾದ ಹಿರಾಕ್ಲಿಸ್ (ಹರ್ಕ್ಯುಲಿಸ್) ಎಂಬಾತನಿಂದಲೇ ಈ ಪಂದ್ಯಾಟಗಳನ್ನಾಡುವ ಕ್ರಮವುಂಟಾಯಿತೆಂದೂ ಪ್ರತೀತಿಯಿದೆ. ಗ್ರೀಸಿನ ನಾನಾ ಭಾಗಗಳಿಂದ ಜನರು ಒಲಿಂಪಿಯಾ ನಗರಕ್ಕೆ ಬಂದು ಪಂದ್ಯಾಟಗಳಲ್ಲಿಯೂ ಜ್ಯೂಸ್ ದೇವತೆಯ ಆರಾಧನೆಯಲ್ಲಿಯೂ ಭಾಗವಹಿಸುತ್ತಿದ್ದರು. ಗುಲಾಮರಿಗೂ ಸ್ತ್ರೀಯರಿಗೂ ಇವುಗಳಲ್ಲಿ ಪಾಲುಗೊಳ್ಳಲು ಅವಕಾಶವಿದ್ದಿರಲಿಲ್ಲ. ಜೂನ್ ತಿಂಗಳ ಅಂತ್ಯ ಇಲ್ಲವೇ ಜುಲಾಯಿ ತಿಂಗಳ ಆದಿಭಾಗವು ಈ ಕ್ರೀಡೋತ್ಸವ ನಡೆಸಲು ಪ್ರಶಸ್ತ ಕಾಲವೆಂದು ಪರಿಗಣಿಸಲ್ಪಟ್ಟಿತ್ತು. ಕ್ರೀಡೋತ್ಸವ ಕಾರ್ಯಕ್ರಮಗಳು ಎಡೆಬಿಡದೆ ಐದು ದಿನಗಳವರೆಗೆ ಜರುಗುತ್ತಿದ್ದುವು. ಗ್ರೀಕ್ ಪ್ರಪಂಚದ ಮೂಲೆ ಮೂಲೆಗಳಿಂದ ಜನರು ಕ್ರೀಡಾಪಟುಗಳಾಗಿಯೂ ಪ್ರೇಕ್ಷಕರಾಗಿಯೂ ಬಂದು ಭಾಗವಹಿಸುತ್ತಿದ್ದುದರಿಂದ ಅವರಿಗೆ ತಾವೆಲ್ಲರೂ ಒಂದೇ ಜನಾಂಗ ಹಾಗೂ ಸಂಸ್ಕೃತಿಗೆ ಸೇರಿದವರೆಂದು ತಿಳಿದುಕೊಳ್ಳುವುದಕ್ಕೆ ಆಸ್ಪದವಾಗುತ್ತಿತ್ತು. ಯುದ್ಧ ನಿರತವಾದ ರಾಷ್ಟ್ರಗಳೂ, ಒಲಿಪಿಂಕ್ ಕ್ರೀಡೋತ್ಸವದಲ್ಲಿ ಭಾಗವಹಿಸಲು ಯಾವ ಕ್ರೀಡಾಪಟುವಿಗೂ ಅಡ್ಡಿಯುಂಟುಮಾಡುತ್ತಿರಲಿಲ್ಲ. ಒಂದು ವೇಳೆ ಹಾಗೆ ಯಾರಾದರೂ ಒಬ್ಬ ಕ್ರೀಡಾಪಟುವನ್ನು ತಡೆದಲ್ಲಿ ಆ ದೇಶದ ರಾಜನು ಜ್ಯೂಸ್ ದೇವತೆಗೆ ಅತ್ಯಧಿಕ ದಂಡಕಾಣಿಕೆಯನ್ನು ಅರ್ಪಿಸಬೇಕಾಗಿತ್ತು. ಒಮ್ಮೆ ಅಲೆಕ್ಸಾಂಡರನ ಪಿತನಾದ ಮೆಸಿಡೋನಿಯದ ಶಕ್ತಿಶಾಲಿ ದೊರೆಯಾದ ಫಿಲಿಪ್ಪನ ಸೈನಿಕರ ಕ್ರೀಡೋತ್ಸವಕ್ಕೆ ತೆರಳುತ್ತಿದ್ದ ಕ್ರೀಡಾಪಟುವೊಬ್ಬನನ್ನು ತಡೆದು ನಿಲ್ಲಿಸಿದರಂತೆ. ಪರಿಣಾಮವಾಗಿ ಸೈನಿಕರು ಮಾಡಿದ ತಪ್ಪಿಗೆ ದೊರೆಯೇ ಅತ್ಯಧಿಕ ಪ್ರಮಾಣದ ದಂಡ ಕಾಣಿಕೆಯನ್ನು ಅರ್ಪಿಸಬೇಕಾಗಿ ಬಂತಂತೆ !

ಪ್ರಾಚೀನ ಜಗತ್ತಿನ ರಮಣೀಯ ದೃಶ್ಯಗಳಲ್ಲೊಂದಾದ ಒಲಿಂಪಿಯಾದ ಕ್ರೀಡಾಂಗಣವು ತನ್ನ ಮುಂದೆ ವಿಶಾಲವಾಗಿ ಚಾಚಿ ನಿಂತಿರುವುದನ್ನು ಅಲ್ಲಿಗೆ ತೆರಳಿದ ಪ್ರತಿಯೊಬ್ಬ ಶಾಂತ, ಕ್ರೀಡಾಸಕ್ತ ಯಾತ್ರಿಕನು ಕಾಣಬಹುದಾಗಿತ್ತು. ಒಲಿಂಪಸ್ ಪರ್ವತವು ಈ ಕ್ರೀಡಾಂಗಣದಿಂದ ಉತ್ತರಕ್ಕೆ ಕೇವಲ 175 ಮೈಲುಗಳ ದೂರದಲ್ಲಿದ್ದರೂ ಒಲಿಂಪಿಕ್ ಕ್ರೀಡೋತ್ಸವಕ್ಕೂ ಈ ಪರ್ವತಕ್ಕೂ ಯಾವ ಸಂಬಂಧವೂ ಇರಲಿಲ್ಲ. ಹಸಿರು ಬಣ್ಣದಿಂದ ಕೂಡಿದ ವಿಶಾಲ ಮಂದಸ್ಮಿತ ಕಣಿವೆಯ ಬದಿಯಲ್ಲಿ ಪೈನ್ ಮರಗಳ ತೋಟದ ಮಧ್ಯೆ ರಾರಾಜಿಸುವ ದಿಣ್ಣೆಯೊಂದರ ಮೇಲೆ ಥಳಥಳಿಸುವ ಸ್ತಂಭಗಳಿಂದಾವೃತವಾದ ವ್ಯಾಯಾಮ ಶಾಲೆಯೂ, ಸರ್ವ ವಿಧದ ಸುಖಸೌಕರ್ಯಗಳನ್ನೊದಗಿಸುವ ವಿಶ್ರಾಂತಿ ಧಾಮವೂ, ಕಣ್ಣ ನೋಟ ಹರಿಯುವಷ್ಟು ದೂರಕ್ಕೆ ಚಾಚಿನಿಂತಿರುವ ವಿಶಾಲ ಹುಲ್ಲು ಗಾವಲಿನ ಮಧ್ಯೆ ರಂಜಿಸುವ ಸಮತಟ್ಟಾದ ಕ್ರೀಡಾಂಗಣವೂ, ಕುದುರೆ ಓಟದ ಸ್ಥಳವೂ ಅಲ್ಲಲ್ಲಿ ನಿಂತ ನೂರಾರು ಅದ್ಭುತ ಪ್ರತಿಮೆಗಳೂ, ಇವೆಲ್ಲವುಗಳ ಮಧ್ಯೆ ಎಲ್ಲವನ್ನೂ ಮೀರಿ ತಲೆ ಎತ್ತಿ ನಿಂತಿರುವ ಅರವತ್ತು ಅಡಿಗಳಷ್ಟು ಎತ್ತರದ ಕೆಂಬಣ್ಣದ ತುದಿಯಿಂದ ಕೂಡಿರುವ ಹಲವಾರು ಕಂಬಗಳಿಂದ ಶೋಭಿಸುವ ಜ್ಯೂಸ್ ದೇವತೆಯ ಮಂದಿರವೂ ನಯನ ಮನೋಹರವಾಗಿ ಯಾತ್ರಿಕನನ್ನು ಆಕರ್ಷಿಸುತ್ತಿದ್ದುವು.

ರತ್ನ ಖಚಿತವಾದ ಸಿಂಹಾಸನದ ಮೇಲೆ ಕುಳಿತ ಭಂಗಿಯಲ್ಲಿರುವ ಜ್ಯೂಸ್ ದೇವತೆಯ ಭವ್ಯ ಮೂರ್ತಿಯು ಪ್ರಾಚೀನ ಜಗತ್ತಿನ ಸಪ್ತಾದ್ಭುತಗಳಲ್ಲೊಂದೆಂದು ಹೆಸರು ಪಡೆದು ಗೋಚರಿಸುತ್ತದೆ. ದೇವತೆಯು ಸಿಟ್ಟುಗೊಂಡು ಎದ್ದು ನಿಲ್ಲುವುದೋ, ತಲೆಯ ಮೇಲಿನ ಮಾಡಿನ ಮೇಲಿನಿಂದ ಹೊರಬಂದು ತನ್ನ ಮುಖವನ್ನು ಜಗತ್ತಿಗೆ ತೋರುವುದೋ ಎಂಬಂತೆ ಕಾಣುತ್ತದೆ ಆ ಸುಂದರ ಕಲಾಕೃತಿ. ಮಾನವ ಜನಾಂಗದ ಪಿತನೆಂದೂ, ರಕ್ಷಕನೆಂದೂ, ಪೂಜಿಸಲ್ಪಡುತ್ತಿದ್ದ ಈ ದೇವತೆಯು ಪ್ರಕೃತಿಗೂ ಒಡೆಯನೆನಿಸಿಕೊಂಡಿತ್ತು. ಸ್ವಾತಂತ್ರ್ಯದ ಪ್ರತೀಕವಾಗಿ, ಅತಿಥ್ಯದ ಅಧಿದೇವತೆಯಾಗಿ ಉತ್ತಮವೆಂದು ಪರಿಗಣಿಸಲಾದ ಸಕಲ ವಸ್ತುಗಳ ಜನಕಳಾಗಿ ಒಲಿಂಪಿಕ್ ಕ್ರೀಡೋತ್ಸವದ ಪ್ರಾಮುಖ್ಯ ದೇವತೆಯಾಗಿ ಪೂಜೆ ಪುರಸ್ಕಾರಗಳನ್ನು ಸ್ವೀಕರಿಸುತ್ತಿತ್ತು.

ಪಂದ್ಯಾಟಗಳು ಆರಂಭವಾಗುವ ಮೊದಲು ಜ್ಯೂಸ್ ದೇವಾಲಯದಲ್ಲಿ ಜ್ಯೋತಿಯೊಂದನ್ನು ಬೆಳಗಿಸುತ್ತಿದ್ದರು. ಅಲ್ಲಿಂದ ಪಂಜೊಂದನ್ನು ಹೊತ್ತಿಸಿ ತರುಣ ಓಟಗಾರರು ಅದನ್ನು ಹಿಡಿದುಕೊಂಡು ನೆಲದ ಮೇಲೆ ಓಡಿಕೊಂಡೇ ಒಬ್ಬರಿಂದೊಬ್ಬರಿಗೆ ಕೈ ಬದಲಾಯಿಸಿಕೊಂಡು ಕ್ರೀಡಾಂಗಣಕ್ಕೆ ತರುವುದು ವಾಡಿಕೆಯಾಗಿತ್ತು. ಈ ಒಲಿಂಪಿಕ್ ಜ್ಯೋತಿಯನ್ನು ಒಂದು ಪೀಠದಲ್ಲಿರಿಸಿದ ಬಳಿಕವೇ ಕ್ರೀಡೆಗಳು ಜರುಗುತ್ತಿದ್ದುವು. ಸಾವಿರಾರು ವರ್ಷಗಳ ಬಳಿಕ ಈಗ ನಡೆಸಲ್ಪಡುವ ಒಲಿಂಪಿಕ್ ಕ್ರೀಡೋತ್ಸವಗಳಲ್ಲಿಯೂ ಈ ಪದ್ಧತಿ ಉಳಿದುಕೊಂಡಿದೆ. ಗ್ರೀಸಿನ ಒಲಿಂಪಿಯಾದಲ್ಲಿ ಹೊತ್ತಿಸಲ್ಪಟ್ಟ ಜ್ಯೋತಿಯನ್ನು ಹೊತ್ತುಕೊಂಡು ಅದನ್ನು ಪಂದ್ಯಾಟ ನಡೆಯುವ ನಗರಕ್ಕೆ ತಲುಪಿಸಿ ಪಂದ್ಯಾಟಗಳು ಮುಗಿಯುವವರೆಗೂ ಆ ಜ್ಯೋತಿಯನ್ನು ಬೆಳಗುವಂತೆ ಮಾಡುತ್ತಾರೆ.

ಒಲಿಂಪಿಕ್ ಕ್ರೀಡೋತ್ಸವವು ಜರುಗುವ ಮೊದಲನೆಯ ದಿನವು ಹುಣ್ಣಿಮೆಯಾಗಿರುತ್ತಿತ್ತು. ಪ್ರಥಮ ದಿನವು ಜ್ಯೂಸ್ ದೇವತೆಯ ಪೂಜಾ ದಿನವಾಗಿ ಆಚರಿಸಲ್ಪಡುತ್ತಿತ್ತು. ಈ ದಿನ ಆಟಗಳ ನಿರ್ಣಾಯಕರೂ ಪರರಾಷ್ಟ್ರಗಳ ಪ್ರತಿನಿಧಿಗಳೂ ತಮ್ಮ ಸುವರ್ಣ ರಜತಗಳಿಂದ ಕೂಡಿದ ಕಾಣಿಕೆಗಳನ್ನು ಹಿಡಿದುಕೊಂಡು ಮೆರವಣಿಗೆ ಹೋಗುವುದು ರೂಢಿಯಾಗಿತ್ತು. ಮೆರವಣಿಗೆಯ ಮುಂಭಾಗದಲ್ಲಿ ದೇವಾಲಯಕ್ಕೊಯ್ಯುವ ಬಲಿಪಶುಗಳೂ ಪುರೋಹಿತರೂ ಇರುತ್ತಿದ್ದರು. ದೇವಾಲಯದಲ್ಲೆಲ್ಲರೂ ಒಟ್ಟು ಸೇರಿದ ಬಳಿಕ ಪ್ರಮಾಣ ವಚನ ಸ್ವೀಕಾರ ನಡೆದ ಮೇಲೆ ಧಾರ್ಮಿಕ ವಿಧಿಯಂತೆ ಜ್ಯೂಸ್ ದೇವತೆಗೆ ಪಶುಬಲಿ, ಪೂಜೆ ಮೊದಲಾದುವು ಸಾಂಗವಾಗಿ ನಡೆಯುತ್ತಿದ್ದುವು. ಎರಡನೆಯ ದಿನ ಪಂದ್ಯಾಟಗಳು ನಡೆಯುತ್ತಿದ್ದುವು. ಗ್ರೀಕರು ನಡೆಸುತ್ತಿದ್ದ 606 ಅಡಿಗಳ ಓಟವೇ ಪ್ರಥಮ ಆಟವಾಗಿತ್ತು. ಈ ಓಟವನ್ನು ಗ್ರೀಕರು ಸ್ಟೇಡಿಯನ್ ಎಂದು ಕರೆಯುತ್ತಿದ್ದುದರಿಂದ ಕ್ರೀಡಾಂಗಣಕ್ಕೆ ಸ್ಟೇಡಿಯಮ್ ಎಂದು ಹೆಸರಾಯಿತು. ಮೆರಾಥನ್ ಓಟವು ಆಗಿನ ಕಾಲದಲ್ಲಿ ಇದ್ದಿರಲಿಲ್ಲ. ಓಟವನ್ನೊಳಗೊಂಡು ಒಟ್ಟಿಗೆ ಐದು ತರದ ಪಂದ್ಯಾಟಗಳಿರುತ್ತಿದ್ದುವು. ಕುಸ್ತಿ ಆಡುವುದು, ಮೇಲಕ್ಕೆ ಮತ್ತು ದೂರಕ್ಕೆ ಜಿಗಿಯುವುದು, ಡಿಸ್ಕಸ್ ಮತ್ತು ಜೇವಲಿನ್ ಬೀಸಾಡುವುದು ಮೊದಲಾದುವು ಇತರ ಪಂದ್ಯಾಟಗಳಾಗಿದ್ದುವು. ಕುಸ್ತಿ ಪಂದ್ಯದಲ್ಲಿ ಎದುರಾಳಿಯನ್ನು ಮೊದಲು ಯಾರು ನೆಲಕ್ಕುರುಳಿಸುವರೋ ಅವರು ವಿಜಯಿಗಳಾಗುತ್ತಿದ್ದರು. ಮುಷ್ಟಿಯುದ್ಧದಲ್ಲಿ ಭಾಗವಹಿಸುವವರು ಈಗಿನಂತೆ ಕೈಗೆ ಕವಚಗಳನ್ನು ಧರಿಸುತ್ತಿರಲಿಲ್ಲ. ಬದಲು ಬೆರಳುಗಳಿಗೆ ಮಾತ್ರ ಹಸಿ ತೊಗಲನ್ನು ಸುತ್ತಿ ಕೊಳ್ಳುತ್ತಿದ್ದರು. ತಲೆ ಕಿವಿಗಳಿಗೆ ಮುಷ್ಟಿಯಿಂದ ಹೊಡೆಯಬಹುದಿತ್ತೇ ವಿನಾ ಮೂಗಿಗೆ ಪರಾಜಿತನಾದವನು ತನ್ನ ಕೈಯನ್ನೆತ್ತಿ ತೋರಿಸಿ ತಾನು ಪರಾಜಿತನಾದೆನೆಂದು ತಿಳಿಯಪಡಿಸುವ ಕ್ರಮವಿತ್ತು. ನಾಲ್ಕು ಕುದುರೆಗಳನ್ನು ಕಟ್ಟಿದ ರಥಗಳ ಓಟ, ಕುದುರೆಗಳ ಓಟ ಮೊದಲಾದವು ಜರುಗುತ್ತಿದ್ದುವು. ರಥಗಳು ಓಟದಲ್ಲಿ ಒಂಬತ್ತು ಮೈಲುಗಳಷ್ಟು ದೂರ ಓಡಬೇಕಾಗಿದ್ದುವು. ಇದಕ್ಕಾಗಿ ಎದುರು ಬದುರಾಗಿ ನಟ್ಟಿರುವ ಎರಡು ಕಂಬಗಳ ಸುತ್ತಲೂ ಅವು ಇಪ್ಪತ್ತಮೂರು ಸುತ್ತು ಓಡಬೇಕಾಗಿತ್ತು. ಸುಮಾರು ನಲ್ವತ್ತೊಂದು ಮಂದಿ ಈ ಓಟದಲ್ಲಿ ಭಾಗವಹಿಸಿದರೆ ಸುರಕ್ಷಿತವಾಗಿ ಕೊನೆ ಮುಟ್ಟುತ್ತಿದ್ದುದು ಸಾಮಾನ್ಯವಾಗಿ ಒಬ್ಬನೇ ಆಗಿರುತ್ತಿದ್ದುದರಿಂದ ಈ ಪಂದ್ಯವು ಎಷ್ಟು ಅಪಾಯಕಾರಿಯಾಗಿತ್ತೆಂಬುದನ್ನು ನಾವು ಊಹಿಸಬಹುದು. ಹೀಗೆ ನಾಲ್ಕು ದಿನಗಳವರೆಗೆ ಕ್ರೀಡಾ ಸ್ಪರ್ಧೆಗಳು ಜರುಗಿ ಐದನೇ ದಿನ ಬಹುಮಾನ ವಿತರಣೆ ನಡೆಯುತ್ತಿತ್ತು. ವಿಜಯಿಯಾದ ಕ್ರೀಡಾ ಪಟುಗಳ ಮೆರವಣಿಗೆಯಿಂದ ಸಮಾರಂಭ ಅಂತ್ಯಗೊಳ್ಳುತ್ತಿತ್ತು. ಓಲಿವ್ ಗಿಡದ ಎಲೆಗಳಿಂದ ಮಾಡಿದ ಕಿರೀಟಗಳನ್ನು ವಿಜಯಿಗಳಿಗೆ ಬಹುಮಾನವಾಗಿ ನೀಡುತ್ತಿದ್ದುದೇ ಈ ಕ್ರೀಡೋತ್ಸವದ ವಿಶೇಷತೆಯಾಗಿತ್ತು.

ಆಟಗಳೆಲ್ಲವೂ ಮುಗಿದ ಬಳಿಕ ಬೆಳದಿಂಗಳ ರಾತ್ರಿಯಲ್ಲಿ ಗಾಯನ ಭೋಜನ ಕೂಟಗಳು ಜರುಗುತ್ತಿದ್ದುವು. ಹೀಗೆ ಒಲಿಂಪಿಕ್ ಆಟಗಳು ಬರೀ ಶಾರೀರಿಕ ಅಥವಾ ಧಾರ್ಮಿಕ ಪ್ರಾಮುಖ್ಯತೆ ಇದ್ದ ಕಾರ್ಯಕ್ರಮ ಮಾತ್ರವಾಗಿರದೆ ಸಾಂಸ್ಕೃತಿಕ ಮಹತ್ವವನ್ನು ಪಡೆದಿದ್ದುವು. ಈ ಕ್ರೀಡೋತ್ಸವವು ಕವಿಗಳು, ಶಿಲ್ಪಿಗಳು, ಕಲಾವಿದರು, ಕ್ರೀಡಾಪಟುಗಳು ಮಾತ್ರವಲ್ಲದೆ ವ್ಯಾಪಾರಸ್ಥರು, ಜಟ್ಟಿಗಳು, ಕುದುರೆ ವ್ಯಾಪಾರಿಗಳೂ, ಐಂದ್ರಜಾಲಿಗಳೂ ಜೇಬುಗಳ್ಳರೂ, ಮೋಸಗಾರ ವೈದ್ಯರು ಮೊದಲಾದ ನಾನಾ ರೀತಿಯ ಮತ್ತು ವೃತ್ತಿಯ ಜನರಿಗೆ ಸೇರಲು ಆಸ್ಪದವನ್ನೀಯುತ್ತಿದ್ದ ಒಂದು ಸಂತೆಯೂ ಆಗಿತ್ತೆಂದು ಇತಿಹಾಸಕಾರರು ಅಭಿಪ್ರಾಯಪಡುತ್ತಾರೆ.

ಕ್ರಿ. ಶ. 393ರಲ್ಲಿ ಥಿಯೊಡೋಸಿಯಸ್ ಎಂಬ ರೋಮನ್ ಚಕ್ರವರ್ತಿಯ ಕಾಲದಲ್ಲಿ ಒಲಿಂಪಿಕ್ ಕ್ರೀಡೋತ್ಸವಗಳನ್ನು ಕ್ರೈಸ್ತ ಮತಾಚಾರಗಳಿಗೆ ವಿರೋಧವಾದವುಗಳೆಂದು ನಿಲ್ಲಿಸಲಾಯಿತು. ಅಂದಿನಿಂದ ಸುಮಾರು ಸಾವಿರದೈನೂರು ವರ್ಷಗಳವರೆಗೆ ಈ ಕ್ರೀಡೋತ್ಸವವು ಜರುಗಲೇ ಇಲ್ಲ. ಪ್ರಾಚೀನ ಗ್ರೀಸಿನ ಮೇಲ್ಮೈಗೆ ಈ ಕ್ರೀಡೋತ್ಸವವೇ ಕಾರಣವಾಗಿತ್ತೆಂದು ಮನಗಂಡ ಫ್ರೆಂಚರು ಇದರ ಪುನರುತ್ಥಾನಕ್ಕೆ ಯತ್ನಿಸಿದರು. ಅದರ ಫಲವಾಗಿ ಕ್ರಿ. ಶ. 1895ರಲ್ಲಿ ಗ್ರೀಸಿನ ಅಥೆನ್ಸ್ ನಗರದಲ್ಲಿ ಗ್ರೀಸಿನ ರಾಜ ಸಮ್ಮುಖದಲ್ಲಿ ಒಲಿಂಪಿಕ್ ಕ್ರೀಡೋತ್ಸವವು ಜರುಗಿತು. ಆದರೆ ಅಲ್ಲಿ ಸೇರಿದ ಕಿಕ್ಕಿರಿದ ಜನರ ನಿಯಂತ್ರಣಾತೀತ ಗದ್ದಲದಿಂದಾಗಿ ಯಾವುದೂ ವ್ಯವಸ್ಥಿತವಾಗಿ ಜರುಗಲಿಲ್ಲ. ಐದು ವರ್ಷಗಳು ದಾಟಿದ ತರುವಾಯ ಒಂಬತ್ತು ರಾಷ್ಟ್ರಗಳ ಕ್ರೀಡಾ ಸಂಸ್ಥೆಗಳು ಒಟ್ಟಿಗೆ ಸೇರಿ ಪೇರಿಸ್ ನಗರದಲ್ಲಿ ಪೀರ್ ಡೀ ಕೂಬರ್ಟಿನ್ ಎಂಬವನ ನೇತೃತ್ವದಲ್ಲಿ ಒಲಿಂಪಿಕ್ ಕ್ರೀಡೋತ್ಸವಗಳನ್ನು ಪುನರಾರಂಭಿಸಲು ನಿಶ್ಚಯಿಸಿದ ಪರಿಣಾಮವಾಗಿ ಕ್ರಿ. ಶ. 1896ರಿಂದ ಪುನಃ ಕ್ರೀಡೋತ್ಸವಗಳನ್ನಾಚರಿಸುವಂತಾಯಿತು. ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ಜರುಗುವ ಈ ಕ್ರೀಡೋತ್ಸವವನ್ನು ಆಚರಿಸುವುದಕ್ಕಾಗಿ ಪ್ರತ್ಯೇಕವಾದ ಒಂದು ಅಂತರರಾಷ್ಟ್ರೀಯ ಸಂಸ್ಥೆಯ

ಸ್ಥಾಪನೆಯಾಯಿತು. ಪ್ರಪಂಚದ ರಾಷ್ಟ್ರಗಳ ಮುಖ್ಯ ನಗರಗಳಲ್ಲಿ ಈಗ ಕ್ರೀಡೋತ್ಸವಗಳು ಜರಗಿಸಲ್ಪಡುತ್ತವೆ. ರಾಷ್ಟ್ರ, ಜಾತಿ, ವರ್ಣ, ರಾಜಕೀಯ ಪಕ್ಷ ಪಂಗಡಗಳ ಯಾವ ನಿರ್ಬಂಧಗಳೂ ಇಲ್ಲದೆ ಯಾರೂ ಯಾವ ಪಂದ್ಯಾಟದಲ್ಲಿಯೂ ಭಾಗವಹಿಸಬಹುದಾಗಿದೆ. ಯಾವ ರಾಷ್ಟ್ರವೂ ತನ್ನ ರಾಜಕೀಯ ಚದುರಂಗದಾಟದಲ್ಲಿ ಇದನ್ನು ಸೇರಿಸಿಕೊಳ್ಳದಂತೆ ಇದರ ಸಂಪೂರ್ಣ ವ್ಯವಸ್ಥೆಯನ್ನು ಯಾವ ರಾಷ್ಟ್ರಕ್ಕೂ ವಹಿಸಿಕೊಡದೆ, ಅಂತರರಾಷ್ಟ್ರೀಯ ಸಂಸ್ಥೆಯ ಕ್ರೀಡೋತ್ಸವವನ್ನು ನಡೆಸಲೊಪ್ಪಿದ ನಗರದ ನಾಗರಿಕರಿಗೆ ವಹಿಸಿಕೊಡುತ್ತದೆ. ಯಾವ ದೇಶದಲ್ಲಿ ಈ ಕ್ರೀಡೋತ್ಸವವು ಜರುಗುವುದೋ ಆ ದೇಶದ ಕ್ರೀಡಾ ಸಮಿತಿಗೆ ಕ್ರೀಡೋತ್ಸವದಿಂದ ದೊರಕುವ ಉತ್ಪತ್ತಿಯನ್ನು ವಿನಿಯೋಗಿಸಲು ಮೀಸಲಾಗಿರಿಸುತ್ತಾರೆ.

ಒಲಿಂಪಿಕ್ ಕ್ರೀಡೋತ್ಸವವು ಜರುಗಬೇಕಾದ ಸ್ಥಳದಲ್ಲಿ ಈಗ ಒಲಿಂಪಿಕ್ ನಗರವೆಂಬೊಂದು ನಗರವನ್ನೇ ಸೃಷ್ಟಿ ಮಾಡುತ್ತಾರೆ. ಇಲ್ಲಿ ಸ್ಟೇಡಿಯಂ, ವ್ಯಾಯಾಮದ ಕಣಗಳು ಈಜುವ ಕೊಳಗಳು, ಓಟದ ಸಾಲುಗಳು ಮೊದಲಾದುವನ್ನೆಲ್ಲ ನಿರ್ಮಾಣಮಾಡುತ್ತಾರೆ. ಕ್ರೀಡಾಪಟುಗಳಿಗೂ ಸಂಬಂಧಪಟ್ಟ ಅಧಿಕಾರಿಗಳಿಗೂ ವಾಸಿಸಲು ಬೇಕಾದ ನಿವಾಸಸ್ಥಾನಗಳನ್ನು ಅಲ್ಲೇ ಪಕ್ಕದಲ್ಲಿ ಒದಗಿಸುತ್ತಾರೆ. ಇವುಗಳಿರುವ ಪ್ರದೇಶವನ್ನು ಒಲಿಂಪಿಕ್ ಗ್ರಾಮವೆಂದು ಕರೆಯುತ್ತಾರೆ. ಪ್ರಪಂಚದ ಎಲ್ಲೆಡೆಗಳಿಂದಲೂ ಬರುವ ಪತ್ರಿಕಾ ವರದಿಗಾರರಿಗೆ ತಕ್ಕ ತಂಗುದಾಣಗಳನ್ನು ನಿರ್ಮಿಸಿಕೊಡುತ್ತಾರೆ. ಇದಕ್ಕೆ ಪತ್ರಿಕಾ ನಗರವೆಂದು ಹೆಸರಿಡುತ್ತಾರೆ. ಈಗ ಒಲಿಂಪಿಕ್ ಕ್ರೀಡೋತ್ಸವದಲ್ಲಿ ಅನೇಕ ಪ್ರಕಾರದ ಆಟಗಳಲ್ಲಿ ಸ್ಪರ್ಧೆಗಳನ್ನು ಜರಗಿಸುತ್ತಾರೆ. ವಿಜಯಿಗಳಿಗೆ ಪ್ರಥಮಸ್ಥಾನ ಪಡೆದವರಿಗೆ ಚಿನ್ನದ ಪದಕಗಳನ್ನೂ ದ್ವಿತೀಯ ಸ್ಥಾನ ಪಡೆದವರಿಗೆ ರಜತ ಪದಕಗಳನ್ನೂ ತೃತೀಯ ಸ್ಥಾನ ಪಡೆದವರಿಗೆ ಕಂಚಿನ ಪದಕಗಳನ್ನೂ ಬಹುಮಾನವಾಗಿ ಇಡುತ್ತಾರೆ.

ಒಲಿಂಪಿಕ್ ಕ್ರೀಡೋತ್ಸವ ಸಂಸ್ಥೆಗೆ ಒಂದು ಪ್ರತ್ಯೇಕವಾದ ಧ್ವಜವಿದೆ. ಬಿಳಿಯ ಬಣ್ಣದ ಪತಾಕೆಯಲ್ಲಿ ನೀಲಿ, ಹಳದಿ, ಕಪ್ಪು, ಹಸುರು ಮತ್ತು ಕೆಂಪು ವೃತ್ತಾಕಾರದ ಬಳೆಗಳು ಪರಸ್ಪರ ಬಂಧಿಸಿರುವಂತೆ ಸಂಕೇತವನ್ನು ಬಿಡಿಸಲಾಗಿದೆ. ಇಲ್ಲಿರುವ ಐದು ಬಳೆಗಳು ಐದು ಭೂಖಂಡಗಳನ್ನು ಪ್ರತಿನಿಧೀಕರಿಸುತ್ತವೆ. ಒಲಿಂಪಿಕ್ ಬೀಜಮಂತ್ರವು 'ಇನ್ನೂ ವೇಗವಾಗಿ, ಇನ್ನೂ ಎತ್ತರವಾಗಿ, ಇನ್ನೂ ಶಕ್ತಿಯುತವಾಗಿ' ಎಂಬ ಅರ್ಥ ಬರುವ ಲ್ಯಾಟಿನ್ ಪದಗಳಿಂದ ಕೂಡಿಕೊಂಡಿರುತ್ತದೆ. ಅಂತರರಾಷ್ಟ್ರೀಯ ಸೌಹಾರ್ದದ ಹಿನ್ನೆಲೆಯಲ್ಲಿ ಕ್ರೀಡೋತ್ಸವವನ್ನು ನಡೆಸಿ ಜಗತ್ತಿನ ಕ್ರೀಡಾಪಟುಗಳಿಗೆ ಸ್ಥಾನ ಮನ್ನಣೆಗಳನ್ನು ಕೊಟ್ಟು ಜಗತ್ತಿನ ಮಾನವ ಸಮಾಜವನ್ನು ಪ್ರಗತಿಯತ್ತ ಒಯ್ಯುವುದೇ ಅಂತರರಾಷ್ಟ್ರೀಯ ಒಲಿಂಪಿಕ್ ಸಂಸ್ಥೆಯ ಗುರಿಯಾಗಿದೆ.

## ಶಬ್ದಗಳ ಅರ್ಥ:

ನಿರತ – ತೊಡಗು; ಎಡೆಬಿಡದೆ – ಒಂದೇ ಸವನೆ; ವಾಡಿಕೆ – ರೂಢಿ; ಪರಾಜಿತ – ಸೋಲು; ನಿಯಂತ್ರಣ – ಹತೋಟಿ; ಪ್ರಗತಿ – ಸುಧಾರಣೆ.

**ಕೃತಿ 1) ಕೆಳಗಿನ ವಾಕ್ಯಗಳಿಗೆ ಕಂಸದಲ್ಲಿ ನೀಡಿದ ಯೋಗ್ಯ ಪರ್ಯಾಯವನ್ನು ಆರಿಸಿ ಚೌಕೋನದಲ್ಲಿ ತುಂಬಿರಿ.**

(ಸ್ತ್ರೀಯರಿಗೂ, ಜ್ಯೂಸ್, ಕ್ರಿಕೇಟ, ಹಾಕಿ, ಮ್ಯೂನಿಕ್)

1) ಇಪ್ಪತ್ತನೆಯ ಒಲಿಂಪಿಕ್ ಕ್ರೀಡೋತ್ಸವವು ಪಶ್ಚಿಮ ಜರ್ಮನಿಯ ನಗರದಲ್ಲಿ ನಡೆಯಿತು.

2) ಭಾರತವು ಆಟದಲ್ಲಿ ಅದ್ವಿತೀಯವಾದ ಗಣ್ಯ ಸ್ಥಾನವನ್ನು ಗಳಿಸಿತು.

3) ಗ್ರೀಸ್ ದೇಶದ ಒಲಿಂಪಸ್ ಎಂಬ ಕ್ಷೇತ್ರದಲ್ಲಿ ಈ ದೇವತೆಯನ್ನು ಗ್ರೀಕರು ಆರಾಧಿಸುತ್ತಿದ್ದರು.

4) ಗುಲಾಮರಿಗೂ ಮತ್ತು ಇನ್ನೊಬ್ಬರಿಗೆ ಇವುಗಳಲ್ಲಿ ಪಾಲುಗೊಳ್ಳಲು ಅವಕಾಶವಿದ್ದಿರಲಿಲ್ಲ.

**ಕೃತಿ 2)** **ನಿಮ್ಮ ನೆಚ್ಚಿನ ಆಟವನ್ನು ಕುರಿತು ನಿಮ್ಮ ಮಾತುಗಳಲ್ಲಿ 8ರಿಂದ 10 ವಾಕ್ಯಗಳಲ್ಲಿ ಬರೆಯಿರಿ.**

**ಕೃತಿ 3)** **ಕೆಳಗಿನ ಪದಬಂಧವನ್ನು ಪೂರ್ಣಗೊಳಿಸಿರಿ.**

**ಅ) ಎಡದಿಂದ ಬಲಕ್ಕೆ**


1) ಐತಿಹಾಸಿಕ ಘಟನೆಗಳನ್ನು ಸಂಶೋಧಿಸುವವ

2) ಹಾಡುವ ಕಲೆ

**ಬ) ಮೇಲಿನಿಂದ ಕೆಳಗೆ**

3) ಮೋಸಗೊಳಿಸುವವನಿಗೆನ್ನುವರು

4) ಊಟಕ್ಕೆ ಇನ್ನೊಂದು ಹೆಸರು




**ಕೃತಿ 4)** **ಗುಂಪಿಗೆ ಸೇರದ ಪದ ಬರೆಯಿರಿ.**

1) ಗ್ರೀಕ್, ರೋಮನ್, ಭಾರತ, ಟೋಕಿಯೊ

2) ಚಿನ್ನ, ಪದಕ, ರಜತ, ಕಂಚು

3) ಥಳಥಳ, ಪಳ ಪಳ, ಝಣ ಝಣ, ಜಳ ಜಳ

4) ನಗರ, ಪಟ್ಟಣ, ಪ್ರಪಂಚ, ಶಹರ

**ಕೃತಿ 5)** **ವಿರುದ್ಧ ಪದ ಬರೆಯಿರಿ.**

i) ಆರಂಭ x ............................

ii) ವಿಶಾಲ x ............................

iii) ದೂರು x ...........................

iv) ಪ್ರಾಚೀನ x .........................

**ಕೃತಿ 6)** **ಸಮಾಸ ವಿಗ್ರಹಿಸಿ ಹೆಸರಿಸಿರಿ.**

ಮುಂಭಾಗ, ವೀರಾಗ್ರಣಿ, ಕೆಂಬಣ್ಣ, ಮತಾಚಾರ

**ಕೃತಿ 7)** **ಕೆಳಗಿನ ದಿನಗಳನ್ನು ಎಂದು ಆಚರಿಸುತ್ತಾರೆ.**

1) ವಿಶ್ವ ಪರಿಸರ ದಿನ ..........................................

2) ವಿದ್ಯಾರ್ಥಿ ದಿನ ..........................................

3) ಶಿಕ್ಷಕರ ದಿನ ..........................................

4) ವಾಚನಾ ಪ್ರೇರಣಾ ದಿನ ..........................................

GANBOF

# 6. ನಿರ್ನಾಳ ಗ್ರಂಥಿಗಳು

ಚೆನ್ನಾಗಿ ಆಟವಾಡಿ ದಣಿಯುವಾಗ ಮೈಯೆಲ್ಲ ಬೆವರುತ್ತದೆ. ನೀರುಳ್ಳಿಯನ್ನು ಕೊಯ್ಯುತ್ತಾ ಹೋದರೆ ಕಣ್ಣುಗಳಲ್ಲಿ ನೀರು ಬರುತ್ತವೆ. ರುಚಿಕರವಾದ ತಿಂಡಿಗಳನ್ನು ಕಣ್ಣಲ್ಲಿ ಕಂಡರೆ ಸಾಕು. ಬಾಯಲ್ಲಿ ಜೊಲ್ಲು ಸ್ರವಿಸುತ್ತದೆ. ಬೆವರು, ಕಣ್ಣೀರು, ಜೊಲ್ಲು ಮುಂತಾದವುಗಳು ನಮ್ಮ ದೇಹದ ವಿವಿಧ ಭಾಗಗಳಲ್ಲಿರುವ ಗ್ರಂಥಿಗಳಿಂದ ಸುರಿಯುವ ದ್ರವಗಳಾಗಿರುತ್ತವೆ. ಇವುಗಳೆಲ್ಲ ನಾಳಗಳ ಮೂಲಕ ಸುರಿಯುವ ದ್ರವಗಳು.

ಈ ಗ್ರಂಥಿಗಳಲ್ಲದೆ ನಮ್ಮ ದೇಹದಲ್ಲಿ ಕೆಲವು ವಿಶೇಷ ತರದ ಗ್ರಂಥಿಗಳಿವೆ. ಇವುಗಳಿಂದ ಒಸರುವ ದ್ರವಗಳು ನಮಗೆ ಗೋಚರಿಸುವುದಿಲ್ಲ. ಇವುಗಳ ಸ್ರಾವಕ್ಕೆ ನಾಳಗಳು ಬೇಕಾಗಿಲ್ಲ. ಯಾವ ನಾಳಗಳೂ ಇಲ್ಲದಿರುವ ಈ ಗ್ರಂಥಿಗಳಿಗೆ ನಿರ್ನಾಳ ಗ್ರಂಥಿಗಳೆಂದು ಹೆಸರು. ಇವು ತಮ್ಮಲ್ಲುಂಟುಮಾಡುವ ರಸವನ್ನು ನೇರವಾಗಿ ರಕ್ತಕ್ಕೆ ಸೇರಿಸುತ್ತವೆ. ನಿರ್ನಾಳ ಗ್ರಂಥಿಗಳಿಂದ ರಕ್ತಕ್ಕೆ ನೇರವಾಗಿ ಸೇರುವ ಈ ದ್ರವಗಳಿಗೆ ಹಾರ್ಮೋನುಗಳೆಂದು ಹೆಸರು. ಹಾರ್ಮೋನುಗಳೆಂದರೆ ನಮ್ಮ ದೇಹದಲ್ಲಿ ಉತ್ಪತ್ತಿಯಾಗುವ ಒಂದು ಬಗೆಯ ರಾಸಾಯನಿಕ ದ್ರವ. ಈ ದ್ರವವು ನೇರವಾಗಿ ರಕ್ತಾಭಿಸರಣೆಯೊಂದಿಗೆ ಸೇರಲನುಕೂಲವಾಗುವಂತೆ ಈ ಗ್ರಂಥಿಗಳು ಕೆಲವು ನಿರ್ದಿಷ್ಟ ಸ್ಥಾನಗಳಲ್ಲಿ ರಕ್ತನಾಳಗಳ ಬಳಿಯೇ ಇದ್ದುಕೊಂಡು



ಕೆಲಸ ಜರುಗಿಸುತ್ತವೆ. ಶರೀರದ ಅವಯವಗಳೆಲ್ಲ ಯೋಗ್ಯ ರೀತಿಯಲ್ಲಿ ಕೆಲಸ ನಿರ್ವಹಿಸುವುದಕ್ಕೆ ಬೇಕಾದ ಪ್ರಚೋದನೆಗಳನ್ನು ಈ ಹಾರ್ಮೋನುಗಳು ಕೊಡುತ್ತವೆ. ಈ ನಿರ್ನಾಳ ಗ್ರಂಥಿಗಳು ರಕ್ತಚಲನೆಯೊಂದಿಗೆ ನಿಕಟ ಸಂಪರ್ಕವಿರಿಸಿಕೊಂಡೇ ಕೆಲಸ ಜರುಗಿಸುವುದರಿಂದ ದೇಹದಲ್ಲಿ ಸಮರಸವಿರುವಂತೆಯೂ, ಅಂಗಾಂಗಗಳು ಸಮರ್ಥವಾಗಿ ಕೆಲಸ ನಿರ್ವಹಿಸುವಂತೆಯೂ ನೋಡಿಕೊಳ್ಳುತ್ತವೆ. ಸಂಕ್ಷೇಪವಾಗಿ ಹೇಳುವುದಾದರೆ ಮಾನವನ ಆರೋಗ್ಯ ಸ್ಥಿತಿಯ ಈ ನಿರ್ನಾಳ ಗ್ರಂಥಿಗಳ ರಚನೆ ಮತ್ತು ಕ್ರಿಯೆಗಳನ್ನು ಹೊಂದಿಕೊಂಡಿರುತ್ತದೆನ್ನಬಹುದು.

ಮಾನವ ಶರೀರದಲ್ಲಿರುವ ಮುಖ್ಯವಾದ ನಿರ್ನಾಳ ಗ್ರಂಥಿಗಳು ಪಿಟ್ಯುಟರಿ' ಥೈರಾಯ್ಡ್, ಪ್ಯಾರಾಥೈರಾಯ್ಡ್, ಆಡ್ರಿನಾಲ್, ಲೇಂಗರ್‌ಹಾನ್ – ಎಂಬವುಗಳಾಗಿವೆ. ಇವಲ್ಲದೆ ಅಷ್ಟು ಪ್ರಾಮುಖ್ಯವಲ್ಲದ ಥೈಮಸ್ ಮತ್ತು ಪೀನಿಯಲ್ ಬಾಡಿ ಎಂಬ ಗ್ರಂಥಿಗಳೂ ಇವೆ. ಇವೆಲ್ಲವೂ ಹಾರ್ಮೋನುಗಳನ್ನು ತಯಾರಿಸಿ ರಕ್ತದಲ್ಲಿ ಸೇರಿಸಿಬಿಡುತ್ತವಾದರೂ ಒಂದೊಂದು ಗ್ರಂಥಿಯು ದೇಹಕ್ಕೆ ಒಂದೊಂದು ರೀತಿಯಲ್ಲಿ ವಿಶಿಷ್ಟ ಪ್ರಯೋಜನವನ್ನು ಒದಗಿಸುತ್ತವೆ. ಈ ನಿರ್ನಾಳ ಗ್ರಂಥಿಗಳ ಆಕಾರ, ಪ್ರಮಾಣ, ರಚನೆಗಳೆಲ್ಲ ಒಂದೊಂದರದು ಒಂದೊಂದು ತೆರನಾಗಿದೆ. ಹಾರ್ಮೋನುಗಳ ಉತ್ಪಾದನೆ ಅಧಿಕವಾದರೂ ಸಾಕು. ಅಲ್ಪವಾದರೂ ಸಾಕು. ಶರೀರದಲ್ಲಿ ಏನಾದರೊಂದು ರೀತಿಯ ವಿಕಾರವು ತಲೆ ದೋರುವುದು. ಆದರೆ ಸಾಮಾನ್ಯವಾಗಿ ಅಂತಹ ತೊಂದರೆಗಳು ಸಂಭವಿಸುವುದು ತೀರ ಅಪರೂಪ. ಏಕೆಂದರೆ ಅವು ನಿಯತವಾಗಿ ನಿರಂತರವೂ ಸಮ ಪ್ರಮಾಣದಲ್ಲಿಯೇ ಹಾರ್ಮೋನುಗಳನ್ನು ಒಸರಿಸಿ ದೇಹ ಮತ್ತು ಮನಸ್ಸುಗಳೆರಡೂ ಸಮತೆಯಿಂದಿರುವಂತೆ ಮಾಡುತ್ತವೆ.

ಮಾನವ ಶರೀರದಲ್ಲಿ ಇಷ್ಟು ಪ್ರಾಧಾನ್ಯವನ್ನು ಗಳಿಸಿರುವ ಈ ಗ್ರಂಥಿಗಳನ್ನು ಒಂದೊಂದಾಗಿ ತಿಳಿಯುವ. ಇವೆಲ್ಲವುಗಳಲ್ಲಿ ಅತಿ ಪ್ರಧಾನವಾದ ಪಿಟ್ಯುಟರಿ ಗ್ರಂಥಿ ಇದು ಶರೀರದ ಎಲ್ಲ ಭಾಗಗಳನ್ನು ನಿಯಂತ್ರಿಸುತ್ತದೆ ಎಂದು ನಂಬಲಾಗಿದೆ. ಇದು ಗುಲಾಬಿ ವರ್ಣದ್ದಾಗಿದ್ದು ಸುಮಾರು ಅರ್ಧ ಗ್ರಾಮಿನಷ್ಟು ಭಾರವಿದ್ದು ಕಡಲೆಕಾಯಿಯಷ್ಟರ ಗಾತ್ರದಲ್ಲಿ ಮೆದುಳಿನ ತಳಭಾಗದಲ್ಲಿ ಸುಭದ್ರವಾಗಿ ಸ್ಥಾಪಿತವಾಗಿದೆ. ಶೇಕಡಾ 85 ಪಾಲಿನಷ್ಟು ನೀರೆ ತುಂಬಿರುವ ಈ ಗ್ರಂಥಿಯ ರಚನೆಯು ಮೆದುಳನ್ನು ಬಿಟ್ಟರೆ ಅತ್ಯಂತ ಸಂಕೀರ್ಣದ್ದಾಗಿರುತ್ತದೆ. ಮಾನವನ ಸಕಲ ಚಟುವಟಿಕೆಗಳನ್ನು ಈ ಚಿಕ್ಕ ಗ್ರಂಥಿಯು ನಿಯಂತ್ರಿಸಿ ನಿರ್ದೇಶಿಸುತ್ತದೆ. ಮಾನವನ ಸಕಲ ಚಟುವಟಿಕೆಗಳನ್ನು ಈ ಚಿಕ್ಕ ಗ್ರಂಥಿಯು ನಿಯಂತ್ರಿಸಿ ನಿರ್ದೇಶಿಸುತ್ತದೆ. ಇದರಿಂದ ಒಸರುವ ಹಾರ್ಮೋನು ಅದ್ಭುತ ಕಾರ್ಯಗಳನ್ನು ಮಾಡುವಂತೆ ಮಾನವನನ್ನು ಪ್ರಚೋದಿಸಬಹುದು, ಇಲ್ಲವೇ ಅವನಿಗೆ ಅನಿಷ್ಟವನ್ನೇ ತಂದೊಡ್ಡಬಹುದು; ನಿರಂತರ ರೋಗಿಯಾಗಿರುವಂತೆ ಮಾಡಲೂಬಹುದು. ಪಿಟ್ಯುಟರಿ ಗ್ರಂಥಿಯೊಂದರಿಂದಲೇ ಹಲವಾರು ತರದ ಹಾರ್ಮೋನುಗಳು ಸ್ರವಿಸಿ ಅವುಗಳಲ್ಲಿ ಒಂದೊಂದೂ ನಿರ್ನಾಳ ಗ್ರಂಥಿಯನ್ನು ಕಾರ್ಯೋನ್ಮುಖವಾಗುವಂತೆ ಪ್ರಚೋದಿಸಿ ಅದು ತನ್ನ ಹಾರ್ಮೋನನ್ನು ಸ್ರವಿಸುವಂತೆ ಮಾಡುತ್ತದೆ.

ಸರ್ಕಸ್ಸಿನಲ್ಲಿ ಕೆಲವು ಕುಳ್ಳರಾಗಿರುವ ಮನುಷ್ಯರು ಬಂದು ಪ್ರೇಕ್ಷಕರನ್ನು ನಗಿಸುವಂತೆ ಮಾಡುವುದನ್ನು ನೀವು ಕಂಡಿಲ್ಲವೆ? ಸ್ವಾಭಾವಿಕವಾದ ಬೆಳವಣಿಗೆಯು ಕುಂಠಿತವಾದುದರಿಂದಲೇ ಇವರು ಹೀಗೆ ಕುಬ್ಜರಾಗಿರುತ್ತಾರೆ. ಬೆಳವಣಿಗೆಗೆ ಸಹಾಯಕವಾದ ಹಾರ್ಮೋನನ್ನು ತಕ್ಕ ಪ್ರಮಾಣದಲ್ಲಿ ಪಿಟ್ಯುಟರಿ ಗ್ರಂಥಿಯು ಉತ್ಪಾದಿಸದೆ ಇದ್ದುದೇ ಇದಕ್ಕೆ ಕಾರಣ. ಅಪರೂಪವಾಗಿ ನಾವು ಅತಿಯಾಗಿ ಉದ್ದ ಬೆಳೆದು ಬೇತಾಳನಂತೆ ಕಾಣುವ ಜನರನ್ನೂ ಅಲ್ಲಲ್ಲಿ ಕಾಣುತ್ತೇವೆ. ಈ ಮಿತಿಮೀರಿದ ಬೆಳವಣಿಗೆಗೂ ಬೇರೇನೂ ಕಾರಣವಾಗಿರದೆ ಪಿಟ್ಯುಟರಿ ಗ್ರಂಥಿಯ ಬೆಳವಣಿಗೆಯ ಹಾರ್ಮೋನಿನ ಅತಿ ಸ್ರಾವವೇ ಕಾರಣವಾಗಿರುತ್ತದೆ. ಯೌವನ ಕಾಲದಲ್ಲಿ ಎಂದರೆ ಸಾಧಾರಣ ಇಪ್ಪತ್ತೈದು ವರ್ಷಗಳವರೆಗೆ ಬೆಳವಣಿಗೆಯ ಪ್ರಾಯವಾದುದರಿಂದ ಈ ಬೆಳವಣಿಗೆಯ ಹಾರ್ಮೋನು ಹಿತಮಿತವಾಗಿ ಸ್ರವಿಸಿದರೆ ಮೇಲಿನ ಯಾವ ರೀತಿಯ ವಿಕಾರಗಳಿಲ್ಲದೆ ನೈಸರ್ಗಿಕ ಬೆಳವಣಿಗೆಯುಂಟಾಗುತ್ತದೆ. ಇಂಥ ಅದ್ಭುತ ಸಾಮರ್ಥ್ಯವನ್ನು

ಪಡೆದಿರುವ ಈ ದ್ರವದ ಉತ್ಪಾದನೆ ದಿನ ಒಂದಕ್ಕೆ ಒಂದು ಗ್ರಾಮಿನ ಕೇವಲ ಮಿಲಿಯದ ಒಂದು ಭಾಗವಾಗಿದೆ ಎಂದರೆ ಈ ದ್ರವದ ಅದ್ಭುತ ಶಕ್ತಿಯನ್ನೂ ಮಾನವ ಶರೀರದ ರಚನೆ ಎಷ್ಟು ಗೂಢತರವಾಗಿದೆಯೆಂಬುದನ್ನೂ ನಾವು ಊಹಿಸಬಹುದು.

ಐವತ್ತನೇ ವರ್ಷಕ್ಕೆ ಕಾಲಿಟ್ಟ ಯಾ ಅದನ್ನು ದಾಟಿದ ಮನುಷ್ಯರಿಗೆ ಹಾರ್ಮೋನಿನ ಸಹಾಯವು ಅಗತ್ಯವೆಂದು ತಿಳಿದುಬಂದಿದೆ. ಈ ಪ್ರಾಯದವರು ಏನಾದರೊಂದು ಅವಘಡದಲ್ಲಿ ಮೂಳೆ ಮುರಿದುಕೊಂಡರೆಂದರಾದರೆ ಮೂಳೆಗಳು ಕೂಡಿಕೊಳ್ಳಬೇಕಾದರೆ ಹಾರ್ಮೋನಿನ ನಿಯಮಿತ ಸ್ರಾವವು ಅವಶ್ಯಕವಾಗುತ್ತದೆ.

ಒಮ್ಮೊಮ್ಮೆ ನೀವು ಚೆಂಡಿನಂತೆ ಉರುಟು ತುದಿಯುಳ್ಳ ಮೂಗಿನಿಂದಲೂ, ಬಹಳ ಅಗಲವಾದ ಕಪೋಲಗಳಿಂದಲೂ ಅಸಾಮಾನ್ಯವಾಗಿ ಉದ್ದುದ್ದ ಬೆಳೆದ ಬೆರಳುಗಳಿರುವ ಕೈಕಾಲುಗಳಿಂದಲೂ ಕೂಡಿರುವ ವಿಕಾರ ರೂಪದ ಮನುಷ್ಯರನ್ನು ಕಾಣಬಹುದು. ಈ ವಿಕಾರವಾದ ಬೆಳವಣಿಗೆಗೆ ಪಿಟ್ಯುಟರಿ ಗ್ರಂಥಿಯ ಹಾರ್ಮೋನು, ಪ್ರಾಯ ದಾಟಿದ ಬಳಿಕವೂ ಹೆಚ್ಚಿನ ಚಟುವಟಿಕೆಯನ್ನು ಉಂಟು ಮಾಡಿದುದೇ ಕಾರಣವಾಗಿದೆ ಎಂದು ಕಂಡುಕೊಂಡಿದ್ದಾರೆ. ಹೀಗೆ ಮೇಲೆ ಹೇಳಿದ ಎಲ್ಲ ಉದಾಹರಣೆಗಳಿಂದ ಪಿಟ್ಯುಟರಿ ಗ್ರಂಥಿಯನ್ನು ಸರ್ವನಿಯಂತ್ರಕವೆಂದು ಪರಿಗಣಿಸಲಾಗುತ್ತದೆ.

ಥೈರಾಯ್ಡ್ ಗ್ರಂಥಿಗಳು ಕಂಠನಾಳದ ಮುಂಭಾಗದಲ್ಲಿ ಅಕ್ಕಪಕ್ಕದಲ್ಲಿರುತ್ತವೆ. ಈ ಗ್ರಂಥಿಗಳಿಂದ ಸ್ರವಿಸುವ ಹಾರ್ಮೋನು ಒಂದು ವರ್ಷಕ್ಕೆ ಒಂದು ಚಾ ಚಮಚದಷ್ಟೆಂದು ತಿಳಿಯಲಾಗಿದೆ. ಸಾಕಷ್ಟು ಪ್ರಮಾಣದಲ್ಲಿ ಈ ಹಾರ್ಮೋನು ಶರೀರಕ್ಕೆ ಒದಗದಿದ್ದಲ್ಲಿ ದೇಹವೂ ಮನಸ್ಸೂ ಆಲಸ್ಯದಿಂದಿದ್ದು ಸದಾ ಜಿಗುಪ್ಸೆಯಿಂದ ಕೂಡಿ ಜಿಡ್ಡು ಹಿಡಿದ ಮಂದ ಬುದ್ಧಿಯವನಂತೆ ಮಾನವನು ವರ್ತಿಸುತ್ತಾನೆ. ಶರೀರಕ್ಕೆ ಬೇಕಾದ ಅಯೋಡಿನಿನ ಅಂಶವನ್ನು ಇವು ದೊರಕುವಂತೆ ಮಾಡುತ್ತವೆ. ಥೈರಾಯ್ಡ್ ಗ್ರಂಥಿಗಳು ಸ್ವಾಸ್ಥ್ಯವನ್ನು ಕಳೆದುಕೊಂಡರೆ ಮನುಷ್ಯನಲ್ಲಿ ಗಂಟಲು ಊದಿಕೊಳ್ಳುವುದು, ಕಣ್ಣು ಗುಡ್ಡೆಗಳು ಉಬ್ಬಿಕೊಳ್ಳುವುದು ಮುಂತಾದ ಸ್ಥಿತಿಗಳು ತೋರಿಬರುತ್ತವೆ. ಆಗ ಅಯೋಡಿನ್ ಅಂಶವು ಅಧಿಕವಾಗಿರುವ ಆಹಾರವನ್ನು ಸೇವಿಸಬೇಕಾಗುತ್ತದೆ. ಥೈರಾಯ್ಡ್ ಗ್ರಂಥಿಗಳು ಬಹಳ ಹೆಚ್ಚು ಚಟುವಟಿಕೆಯನ್ನು ತೋರಿಸಿದರೆ ದೇಹವು ಕೃಶವಾಗಿ ಮಾನವನು ಒಣಗಿದ ಕಡ್ಡಿಯಂತಾಗಬಹುದು. ಸಾಮಾನ್ಯವಾಗಿ ಈ ಗ್ರಂಥಿಗಳು ಯುಕ್ತ ಪ್ರಮಾಣದಲ್ಲೇ ಶರೀರಕ್ಕೆ ಹಾರ್ಮೋನನ್ನು ಒದಗಿಸುತ್ತವಾದುದರಿಂದ ಮೇಲೆ ಹೇಳಿದ ವೈಪರೀತ್ಯಗಳು ಕಂಡುಬರುವುದು ಬಹಳ ಅಪೂರ್ವವಾಗಿದೆ.

ಕಂಠನಾಳದ ಹಿಂಭಾಗದಲ್ಲಿ ಕೂಡಾ ಅಕ್ಕಪಕ್ಕದಲ್ಲಿ ಪ್ಯಾರಾ ಥೈರಾಯ್ಡ್ ಎಂಬ ಎರಡು ಗ್ರಂಥಿಗಳಿವೆ. ನಮ್ಮ ದೇಹಕ್ಕೆ ಬೇಕಾದ ಕ್ಯಾಲ್ಸಿಯಂ ಮತ್ತು ರಂಜಕಗಳನ್ನು ಸಾಕಷ್ಟು ಪ್ರಮಾಣದಲ್ಲಿ ಒದಗಿಸಿಕೊಡುವ ಕಾರ್ಯವನ್ನು ಇವು ನಿರ್ವಹಿಸುತ್ತವೆ. ಇವು ತಮ್ಮ ಹಾರ್ಮೋನನ್ನು ಅಧಿಕ ಪ್ರಮಾಣದಲ್ಲಿ ಸ್ರವಿಸಿದರೆ ಮನುಷ್ಯನಮೂಳೆ ಗಳಿಂದ ಕ್ಯಾಲ್ಸಿಯಂ ಮತ್ತು ರಂಜಕಗಳು ಮಾಯವಾಗಿ ಅವು ಸುಲಭವಾಗಿ ಮುರಿದು ಹೋಗುವಷ್ಟು ದುರ್ಬಲಗೊಳ್ಳುತ್ತವೆ.

ಉಂಡ ಆಹಾರವು ಜೀರ್ಣವಾಗಬೇಕಾದರೆ ಮೇದೋಜ್ಜೀರಕ ಗ್ರಂಥಿಯ ನೆರವು ಬೇಕು. ಈ ಗ್ರಂಥಿಯ ಮೇಲ್ಭಾಗದಲ್ಲಿ ಲೇಂಗರ್‌ಹಾನ್ ಎಂಬ ನಿರ್ನಾಳ ಗ್ರಂಥಿಯು 'ಇನ್ಸುಲಿನ್' ಎಂಬ ಹಾರ್ಮೋನನ್ನು ಉತ್ಪಾದಿಸುತ್ತದೆ. ನಾವು ತಿಂದ ಆಹಾರದಿಂದ ದೇಹಕ್ಕೆ ಬೇಕಾದ ಸಕ್ಕರೆಯ ಪ್ರಮಾಣವು ಸಮತೂಕದಲ್ಲಿ ರಕ್ತಕ್ಕೆ ಸೇರುವಂತೆ ಮಾಡವುದೇ ಇದರ ಕೆಲಸವಾಗಿದೆ. 'ಇನ್ಸುಲಿನ್' ತಕ್ಕ ಪ್ರಮಾಣದಲ್ಲಿ ಉತ್ಪಾದನೆಯಾಗಿ ರಕ್ತಗತವಾಗದಿದ್ದರೆ 'ಮಧುಮೇಹ' ಡಯಾಬಿಟಿಸ್ ಅಥವಾ ಸಿಹಿಮೂತ್ರ ಎಂಬ ರೋಗಕ್ಕೆ ನಾವು ಬಲಿಯಾಗುತ್ತೇವೆ. ಇನ್ಸುಲಿನ್ ತಕ್ಕ ಪ್ರಮಾಣದಲ್ಲಿ ಉತ್ಪಾದನೆಯಾಗದಿದ್ದರೆ ದೇಹವು ಸಕ್ಕರೆಯನ್ನು ಮೂತ್ರದ ಮೂಲಕ ಹೊರಕ್ಕೆ ತಳ್ಳುತ್ತದೆ. ಆದುದರಿಂದ 'ಸಿಹಿ ಮೂತ್ರದ'ದ ರೋಗಿಗಳಿಗೆ ಇನ್ಸುಲಿನನ್ನು ಗುಳಿಗೆಗಳ ಮೂಲಕ ಅಥವಾ ಇಂಜಕ್ಷನ್ನಿನ ಮೂಲಕ ದೊರಕುವಂತೆ ಮಾಡುತ್ತಾರೆ.

ಅಡ್ರಿನಾಲ್ ಎಂಬ ಗ್ರಂಥಿಗಳು ಎಡಬಲ ಪಕ್ಕಗಳಲ್ಲಿರುವ ಮೂತ್ರಪಿಂಡಗಳ ಮೇಲ್ಭಾಗದಲ್ಲಿವೆ. ಈ ಗ್ರಂಥಿಯ ಹೊದಿಕೆಯಿಂದ ಹೈಡ್ರೋ ಕಾರ್ಟಿಸನ್ ಎಂಬ ಹಾರ್ಮೋನು ಸ್ರವಿಸುವುದರ ಮೂಲಕ ಅದು ಮೂತ್ರದ ಮೂಲಕ ಹೊರತಳ್ಳಲ್ಪಡುವ ನೀರು ಮತ್ತು ಲವಣದ ಅಂಶವನ್ನು ನಿಯಂತ್ರಿಸುತ್ತದೆ. ಥಕ್ಕನೆ ನಮಗೆ ಭಯವುಂಟಾದರೆ ಅಡ್ರಿನಾಲ್ ಗ್ರಂಥಿಯು ಸ್ರವಿಸುವ ಒಂದು ಜಾತಿಯ ಹಾರ್ಮೋನು ರಕ್ತಕ್ಕೆ ಸೇರಿ ಹೃದಯದ ಬಡಿತವನ್ನು ವೇಗವಾಗುವಂತೆ ಮಾಡುತ್ತದೆ. ಭಯವುಂಟಾದಾಗ ನಾವು ಕಾಲು ಕಿತ್ತು ಓಡಿಹೋಗಬಹುದು, ಇಲ್ಲವೇ ಧೈರ್ಯದಿಂದ ಪರಿಸ್ಥಿತಿಯನ್ನು ಎದುರಿಸಬಹುದು, ಅಥವಾ ಸುರಕ್ಷಿತ ಸ್ಥಿತಿಗೆ ಉಪಾಯವನ್ನು ಹೂಡಬಹುದು. ಇವೆಲ್ಲ ಮನಸ್ಥಿತಿಗಳಿಗೆ ಮತ್ತು ತನ್ಮೂಲಕವಾದ ಕಾರ್ಯಗಳಿಗೆ ಅಡ್ರಿನಾಲ್ ಗ್ರಂಥಿಯ ಚಟುವಟಿಕೆಯೇ ಕಾರಣವಾಗಿದೆ. ಈ ಎಲ್ಲ ಸಂದರ್ಭಗಳಲ್ಲಿಯೂ ಕ್ರಿಯೆಯು ಕಣ್ಣು ಮುಚ್ಚಿ ತೆರೆಯುವುದರೊಳಗೆ ನಡೆದು ಹೋಗುತ್ತದೆ. ಈ ನಿರ್ನಾಳ ಗ್ರಂಥಿಯು ಜೀವಮಾನದಲ್ಲಿ ಒಟ್ಟು ಒಂದು ಚಮಚದಷ್ಟು ರಸವನ್ನು ಒಸರಿಸುತ್ತದೆ. ಈ ಗ್ರಂಥಿಯ ಸ್ರಾವವು ಮಿತಿಮೀರಿದರೆ ಹೊಟ್ಟೆಯುಬ್ಬಿಕೊಳ್ಳುವುದು, ಕುತ್ತಿಗೆ ಮತ್ತು ಬೆನ್ನಿನ ಮೇಲ್ಭಾಗಗಳಲ್ಲಿ ಬೊಜ್ಜು ಬೆಳೆಯುವುದು, ಕಾಲುಗಳು ಕ್ಷೀಣವಾಗಿ ಉದ್ದವಾಗುವುದು. ಎದೆ ಬಡಿತದ ವೇಗವು ತೀವ್ರಗೊಂಡು ಮೂಳೆಗಳಲ್ಲಿನ ಕ್ಯಾಲ್ಸಿಯಮಿನ ಅಂಶವು ಕಡಿಮೆಯಾಗುವುದು – ಮುಂತಾದ ವಿಕಾರಗಳು ಕಂಡುಬರುತ್ತವೆ. ಬೆನ್ನು ಮೂಳೆಯು ಬಲಹೀನವಾಗಿ ಬೆನ್ನು ಬಗ್ಗುವುದರಿಂದ ಬಲಹೀನತೆಯೂ ಎದೆಬಡಿತವು ತೀವ್ರವಾದಾಗ ಹೃದಯಘಾತದ ಸಂಭವವೂ ಉಂಟಾಗಬಲ್ಲುದು. ಈಗ ಈ ಗ್ರಂಥಿಯ ಅತ್ಯಧಿಕ ಚಟುವಟಿಕೆಯನ್ನು ತಪ್ಪಿಸಲು ಶಸ್ತ್ರಚಿಕಿತ್ಸೆಯ ಮೂಲಕ ಈ ಗ್ರಂಥಿಯನ್ನೇ ಕಳಚಿ ಹಾಕುವರು. ಆಗ ಈ ಹಾರ್ಮೋನನ್ನು ಇತರ ರೀತಿಯಲ್ಲಿ ಶರೀರಕ್ಕೆ ಒದಗಿಸುವಂತೆ ಮಾಡಬೇಕಾಗುತ್ತದೆ.

ಹಾರ್ಮೋನುಗಳ ಅದ್ಭುತ ಪ್ರಪಂಚದ ಒಂದು ಚಿಕ್ಕ ವೀಕ್ಷಣೆಯನ್ನು ಜರುಗಿಸಿದ ನಾವು ಅವುಗಳ ಕಾರ್ಯ ಸಾಮರ್ಥ್ಯಕ್ಕೆ ತಲೆದೂಗದೆ ನಿರ್ವಾಹವಿಲ್ಲ. ಇತ್ತೀಚೆಗೆ ಪ್ರಯೋಗಶಾಲೆಯಲ್ಲಿ ಕೆಲವು ಹಾರ್ಮೋನುಗಳನ್ನು ಕೃತಕವಾಗಿ ತಯಾರಿಸುತ್ತಾರೆ. ಈ ಮೊದಲು ಹಾರ್ಮೋನುಗಳನ್ನು ಆಗತಾನೇ ಮರಣಹೊಂದಿದವರ ಶರೀರದಿಂದ ಪಡೆಯುತ್ತಿದ್ದರು. ಆದರೆ ಈಗ ಅದರ ಅವಶ್ಯಕತೆಯು ಕಡಿಮೆಯಾಗಿದೆ. ಮಾನವ ಶರೀರದಲ್ಲಿದ್ದಂತೆ ಇತರ ಪ್ರಾಣಿಗಳ ಶರೀರದಲ್ಲಿಯೂ ಹಾರ್ಮೋನುಗಳ ಉತ್ಪತ್ತಿಯಾದರೂ ಹೆಚ್ಚಿನ ಪ್ರಾಣಿಗಳ ಶರೀರದಿಂದ ಪಡೆದ ಹಾರ್ಮೋನುಗಳು ಮಾನವ ಶರೀರದ ಮೇಲೆ ಪ್ರಭಾವ ಬೀರುವುದಿಲ್ಲವೆಂದು ತಿಳಿದುಬಂದಿದೆ. ಮಾನವ ಜಾತಿಯ ಪ್ರಾಣಿಗಳಿಂದ ದೊರಕಿದ ಹಾರ್ಮೋನುಗಳು ಮಾತ್ರ ಮಾನವ ಶರೀರದ ಮೇಲೆ ಪರಿಣಾಮ ಬೀರುತ್ತವೆ ಎಂದು ಕಂಡುಕೊಂಡಿದ್ದಾರೆ. ಆದರೆ ಕೃತಕವಾಗಿಯಾಗಲೀ ಇತರ ರೀತಿಯಿಂದಾಗಲೀ ಪಡೆದು ಹಾರ್ಮೋನನ್ನು ಶರೀರಕ್ಕೆ ಒದಗಿಸಿದಲ್ಲಿ ಶರೀರದಲ್ಲಿ ಹಾರ್ಮೋನಿನ ಹೆಚ್ಚಳವಾಗುವುದೆಂಬ ಭಯಕ್ಕೆ ಕಾರಣವಿಲ್ಲ. ಅಂತಹ ಸಂದರ್ಭದಲ್ಲಿ ಶರೀರದಲ್ಲಿ ಹಾರ್ಮೋನುಗಳ ಉತ್ಪಾದನೆಯನ್ನೇ ನಿಲ್ಲಿಸಿಬಿಡುತ್ತವೆ. ಆದುದರಿಂದ ಈ ಹಾರ್ಮೋನುಗಳ ಕ್ರಿಯೆಗಳ ಕುರಿತು ನಾವು ಭಯಪಡಬೇಕಾಗಿಲ್ಲ – ನಿರ್ನಾಳ ಗ್ರಂಥಿಗಳು ತಪ್ಪು ದಾರಿಯನ್ನೆಂದೂ ಹಿಡಿಯದಂತೆ ಅವುಗಳ ರಚನೆಯು ಪ್ರೇರಿಸುತ್ತದೆ ಎಂಬುದು ಮಾನವ ಶರೀರ ರಚನೆಯ ವಿಶೇಷತೆಗಳಲ್ಲೊಂದು ಎಂದು ಹೇಳದೆ ನಿರ್ವಾಹವಿಲ್ಲ.

ಹಾರ್ಮೋನುಗಳ ಕುರಿತಾದ ಅಧ್ಯಯನ ಮತ್ತು ಸಂಶೋಧನೆ ಇನ್ನೂ ಪೂರ್ತಿಯಾಗಿಲ್ಲ. ತಜ್ಞವೈದ್ಯರು ಅವನ್ನು ಕುರಿತು ಸಂಶೋಧನೆಗಳನ್ನು ನಡೆಸುತ್ತಲೇ ಇದ್ದಾರೆ ಇನ್ನಷ್ಟು ವಿಸ್ಮಯಕಾರಿಯಾದ ಸತ್ಯಾಂಶಗಳನ್ನು ನಿರೀಕ್ಷಿಸುತ್ತಿದ್ದಾರೆ.

## ಶಬ್ದಗಳ ಅರ್ಥ:

ಜರಗು – ಮಾಡು; ಗ್ರೇಮಿ – ಗ್ರಾಮ್ಯಮ; ಪ್ರಚೋದ – ಮುನ್ನಡೆಸುವಿಕೆ; ಕುಬ್ಜ – ಕುಳ್ಳ; ಕಪೋಲ – ಗಲ್ಲ; ಅಯೋಹಿನ – ಉಷ್ಣಾಂಶ; ಕೃಶ – ಬಡಕಲು.

**ಕೃತಿ 1) ಕೆಳಗಿನ ಜಾಲಾಕೃತಿಯನ್ನು ಪೂರ್ಣಗೊಳಿಸಿರಿ.**

ಮಾನವನ ಶರೀರದಲ್ಲಿರುವ ಗ್ರಂಥಿಗಳು

**ಕೃತಿ 2) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1) ನಿರ್ನಾಳ ಗ್ರಂಥಿ ಎಂದರೇನು?
2) ಪ್ರಾಮುಖ್ಯವಲ್ಲದ ಗ್ರಂಥಿಗಳು ಯಾವುವು?
3) ಪಿಟ್ಯುಟರಿ ಗ್ರಂಥಿ ಯಾವ ಭಾಗದಲ್ಲಿದೆ?
4) ಉಂಡ ಆಹಾರವನ್ನು ಜೀರ್ಣಿಸುವ ಗ್ರಂಥಿ ಯಾವುದು?
5) ಅಡ್ರಿನಾಲ್ ಗ್ರಂಥಿಯ ಜೀವಯಾನದಲ್ಲಿ ಎಷ್ಟು ರಸವನ್ನು ಒಸರಿಸುತ್ತದೆ?
6) ಸರ್ವ ನಿಯಂತ್ರಕ ಗ್ರಂಥಿ ಎಂದು ಯಾವುದಕ್ಕೆ ಕರೆಯುತ್ತಾರೆ?

**ಕೃತಿ 3) ಕೆಳಗಿನ ಗ್ರಂಥಿಗಳಿಗೆ ಅವುಗಳು ಇರುವ ಸ್ಥಳವನ್ನು ಬರೆಯಿರಿ.**

1) ಪಿಟ್ಯುಟರಿ ಗ್ರಂಥಿ →
2) ಥೈರಾಯ್ಡ್ ಗ್ರಂಥಿ →
3) ಪಾರಾ ಥೈರಾಯ್ಡ್ ಗ್ರಂಥಿ →
4) ಅಡ್ರಿನಾಲ್ ಗ್ರಂಥಿ →

**ಕೃತಿ 4) I) ಕೆಳಗಿನವುಗಳಿಗೆ ಸಮಾನಾರ್ಥ ಪದಗಳನ್ನು ಪಾಠದಿಂದ ಆರಿಸಿ ಬರೆಯಿರಿ.**

ರಕ್ತಸಂಚಾರ, ಪ್ರೋತ್ಸಾಹ, ಅಂಕೆಯಲ್ಲಿಡು, ಕೆಲಸಕ್ಕೆ ತೊಡಗು, ಫಕ್ಕನೆ ಸಂಭವಿಸುವ ಗಂಡಾಂತರ.

**II) ಕೆಳಗಿನವುಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಉಪಯೋಗಿಸಿರಿ.**

ವಿಕಾರ, ಪ್ರಚೋದಿಸು, ನಿಯಮಿತ, ಅಕ್ಕಪಕ್ಕ, ಸ್ವಾಸ್ಥ್ಯ, ತಲೆದೂಗು

**III) ''ಮರಳುಗಾಡಿನಲಿ ಬೀಸುತಲಿರುವ'' ಈ ಶಬ್ದಗಳಿಂದ ಒಂದೇ ಅಕ್ಷರ ಆಯ್ದು ಚೌಕೋನಗಳಲ್ಲಿ ತುಂಬಿ ಎರಡು ಅಕ್ಷರಗಳ ಅರ್ಥಪೂರ್ಣ ಶಬ್ದ ತಯಾರಿಸಿರಿ.**

ಮ ಗಾ ನ ಸು

# 7. ಡಾ|| ಡಾಮೋದರಂ

– ನಾ. ಕಸ್ತೂರಿ

**ಲೇಖಕರ ಪರಿಚಯ :** ನಾ. ಕಸ್ತೂರಿಯವರ ಪರಿಮಳ ಕರ್ನಾಟಕ ತುಂಬ ಇದೆ. ಅವರು ಕನ್ನಡ ನಾಡಿನ ಅತ್ಯುತ್ತಮ ಸಾಹಿತಿಗಳು. ಯಾವ ಸಾಮಾನ್ಯ ವಿಷಯವನ್ನೇ ಆಯ್ದು ಕೊಳ್ಳಲಿ, ಆ ವಿಷಯವನ್ನು ಹಾಸ್ಯ ರಸದಲ್ಲಿ ಮುಳುಗಿಸಿ ಬಹುಸರಸವಾಗಿ ಹೇಳಬಲ್ಲ ಅಪೂರ್ವ ಶಕ್ತಿ ನಾ. ಕಸ್ತೂರಿಯವರಿಗಿದೆ. ಅವರ ಹಾಸ್ಯ ಲೇಖಗಳನ್ನೊಳಗೊಳ್ಳದ ಯಾವ ವಿಶೇಷ ಸಂಚಿಕೆಗಳೂ, ಪಠ್ಯಪುಸ್ತಕಗಳೂ ಇಂದು ಪೂರ್ಣವೆನಿಸುವುದಿಲ್ಲ. ಇವರು ಹಲವಾರು ನಗೆಬರೆಹಗಳ ಸಂಕಲನಗಳನ್ನು, ಹಾಸ್ಯಮಯ ನಾಟಕ – ಕಾದಂಬರಿಗಳನ್ನು ಪ್ರಕಟಿಸಿದ್ದಾರೆ. ಅವುಗಳಲ್ಲಿ ಮುಖ್ಯವಾದವುಗಳು ಕೆಲವು ಹೀಗಿವೆ :– ಚಕ್ರದೃಷ್ಟಿ, ಚಂಗೂಲಿಯ ಚಲುವೆ, ವರ ಪರೀಕ್ಷೆ, ಗಗ್ಗಯ್ಯನ ಗಡಿಬಿಡಿ, ಚಿತ್ರ ವಿಚಿತ್ರ, ಅಲ್ಲೋಲ–ಕಲ್ಲೋಲ, ಉಪಾಯ ವೇದಾಂತ ಮುಂ.

ಇಲ್ಲಿ ಆಯ್ದುಕೊಂಡ ನಗೆಬರೆಹವು 'ಉಪಾಯ ವೇದಾಂತ' ದೊಳಗಿನದು. ಇಲ್ಲಿ ಪರದೇಶಕ್ಕೆ ಹೋಗಿ ಬಂದ ಪದವೀಧರರ ಬಗ್ಗೆ ವಿಡಂಬನೆ ಬಹಳ ಚೆನ್ನಾಗಿ ವ್ಯಕ್ತವಾಗಿದೆ.

ನಾಲ್ಕು ವರ್ಷಗಳ ಹಿಂದೆ, ಅವರಿಗೆ ಇಂಥ ಹೆಸರಿರಲಿಲ್ಲ. ಆದರೆ, ಅಮೇರಿಕಾ ಖಂಡಕ್ಕೆ ಉಚ್ಚ ಶಿಕ್ಷಣಕ್ಕಾಗಿ ಪ್ರಯಾಣ ಬೆಳೆಸಿ, ಅಲ್ಲಿ ಇಳಿದು, ಆರು ತಿಂಗಳಾಗುತ್ತಲೂ, ಆತನ ನಾಮವೇ ಹೊಸ ರೂಪ ತಾಳಿತು; ತವರ್ಗದಿಂದ ಟವರ್ಗಕ್ಕೆ ಏರಿತು. ಎರಡು ವರ್ಷಗಳಾಗುತ್ತಲೂ, ಚೂಡಾಮಣಿಯಂತೆ, ಅವರ ಹೆಸರಿನ ತಲೆಗೆ ಡಾ|| ಎಂಬ ಅಲಂಕಾರ ಸೇರಿಕೊಂಡಿತು. ಅದಕ್ಕಾಗಿಯೇ ಅವರು ಸಮುದ್ರವನ್ನು ದಾಟಿದ್ದು.



ಅಮೇರಿಕಾ ಎಂಬುದು ಶುದ್ಧ ತಲೆ ಕೆಳಗಿನ ಊರು. ಇಲ್ಲಿ ಹಗಲೆಂದರೆ ಅಲ್ಲಿ ರಾತ್ರಿ; ನಾವು ಗೊರಕೆ ಹೊಡೆಯುವಾಗ ಅಲ್ಲಿ ಅವರು ಹೊರಕ್ಕೆ ಹೊರಡುವರು. ವಿಚಿತ್ರದೇಶ. ಇಲ್ಲಿ ನಾವು ಪರಸ್ಪರ ಕೈ ಮುಗಿಯುತ್ತೇವೆ; ಅಲ್ಲಿ ಒಬ್ಬ ಮತ್ತೊಬ್ಬನನ್ನು ಕಂಡರೆ ಸರಿ; ನಾಚಿಕೆ ಭಯ ಏನೂ ಇಲ್ಲದೆ, ಕೈಕೊಟ್ಟು ಬಿಡುತ್ತಾನೆ. ಮನೆ ಮಠ ಅಂದರೆ ಇಲ್ಲಿ ನಾವು ಕಾಲಿನದು ಕಳಚುತ್ತೇವೆ; ಅಲ್ಲಿ ತಲೆಯದನ್ನು ತೆಗೆದು ಕೈಯಲ್ಲಿ ಹಿಡಿಯುತ್ತಾರೆ. ವಿಚಿತ್ರ ಜನ ! ಇಲ್ಲಿ ನಾವು 'ಗಂಜಿ ಬಿತ್ತೆ?' ಅಂತ ಕುಶಲ ಪ್ರಶ್ನೆ ಮಾಡುತ್ತೇವೆ. ಅಲ್ಲಿ ಹಾಗಲ್ಲ, 'ಮಂಜು ಬಿತ್ತೆ?' ಅಂತ ವಿಚಾರಿಸುತ್ತಾರೆ ಮಟ ಮಟ ಮಧ್ಯಾಹ್ನದಲ್ಲೂ! ........ ಇಲ್ಲಿ ಕಪ್ಪಗಿದ್ದರೆ, ಕೃಷ್ಣಾ ಅಂತ ಗುಡಿ ಕಟ್ಟಿ ಪೂಜಿಸುತ್ತೇವೆ. ಅಲ್ಲಿ ಕಪ್ಪಗಿದ್ದರೆ, ನಿಗ್ರೋ ಅಂದು ಬಿಡುತ್ತಾರೆ. ಡಾ|| ಗೆ ಅಲ್ಲಿ ತುಂಬ ತಾಪತ್ರಯವಾಯಿತಂತೆ. ಅಲ್ಲಿ ಅವರಿಗೆ ಹಗಲೆಲ್ಲ ನಿದ್ದೆ; ರಾತಿಯೆಲ್ಲ ಎಚ್ಚರ, ಹಗಲು ಕುರುಡು; ರಾತ್ರಿ ಬೆಳಕು. ಹಗಲು ಕನಸು; ರಾತ್ರಿ ತಿನಿಸು! ಅವರಿಗೋಸ್ಕರ ಅಲ್ಲಿಯ ಪಾಠ ಪ್ರವಚನ ಪರೀಕ್ಷೆ ಎಲ್ಲವನ್ನೂ ನಟನಟ ನಡುರಾತ್ರಿಯಲ್ಲೇ ನಡೆಸಬೇಕೆಂದು ಅವರು ಅಧ್ಯಕ್ಷರಿಗೆ ಕಾಗದ ಬರೆದರಂತೆ.

ಅಮೇರಿಕಾ ಅಂದರೆ ಜಾದೂ ಖಂಡ. ಅಲ್ಲಿ ಸರಾಸರಿ ನಾಲ್ಕು ಜನರಿಗೊಂದು ಫೋರ್ಡ್ ಫೋರ್ ಸೀಟರಿದೆಯಂತೆ. ಆದ್ದರಿಂದ ಅಲ್ಲಿ ಯಾರೂ ನಡೆಯುವಂತೆಯೇ ಇಲ್ಲ. ಗುಂಡಿ ಅದುವಿದರೆ ಅಲ್ಲಿ ಸ್ನಾನ ಸಂಪೂರ್ಣ. ಅಡಿಗೆ ಉಡಿಗೆ ಎಲ್ಲಕ್ಕೂ ಎಲೆಕ್ಟ್ರಿಕ್ ಯಂತ್ರಗಳ ರಾಶಿ. ಕಸ ಗುಡಿಸುವುದಕ್ಕೊಂದು, ರಸ ಕುಡಿಸುವುದಕ್ಕೊಂದು, ದನ ಮೇಯಿಸುವುದಕ್ಕೊಂದು, ಧನ ಕೂಡಿಸುವುದಕ್ಕೊಂದು, ಕವನ ಬರೆಯುವುದಕ್ಕೊಂದು, ಹವನ ಏರಿಸುವುದಕ್ಕೊಂದು, ಕೆಮ್ಮಲು ಯಂತ್ರ, ಉತ್ತು, ಬಿತ್ತಿ, ಕಳೆಕಿತ್ತು, ಬೆಳೆ ಎತ್ತಿ, ಕೊಯ್ದು ತುಳಿದು ಕೇರಿ ಕುಟ್ಟಿ ಬೇಯಿಸಿ ಜೀರ್ಣಿಸಲು ತರತರದ ಯಂತ್ರಗಳು! ಹಬ್ಬದ ಒಬ್ಬಟ್ಟುಗಳೆಲ್ಲ ಡಬ್ಬಗಳಲ್ಲಿ ಸಿದ್ಧ! ಕಳ್ಳು ತೆಗೆಯುವುದಕ್ಕೆ, ಕಳ್ಳನನ್ನು ಹಿಡಿಯುವುದಕ್ಕೆ, ಮಗ್ಗಿ ಕಲಿಸುವುದಕ್ಕೆ, ಸುಗ್ಗಿ ಕುಣಿಸುವುದಕ್ಕೆ, ನಾಯಿ ಸಾಕುವುದಕ್ಕೆ, ಕಾಯಿ ಒಡೆಯುವುದಕ್ಕೆ – ಎಲ್ಲಕ್ಕೂ ಯಂತ್ರಗಳು! ಅವನ್ನೆಲ್ಲ ನೋಡಿ, ಡಾ|| ಬೆಚ್ಚಿ ಬೆರಗಾದರು; ಅಚ್ಚ ಮಗುವಾದರು.

ಭರತ ಖಂಡವನ್ನೂ ಅಂಥ ಜಾದೂ ಖಂಡ ಮಾಡಬೇಕೆಂಬುದೇ ಡಾ|| ರ ಧೃಡ ಸಂಕಲ್ಪ. ಬೆಂಕಿ ಕಡ್ಡಿಗೆ ಬದಲಾಗಿ ಬೆಂಕಿಯನ್ನೇ ಕಡ್ಡಿ ಮಾಡಿ ಪೆಟ್ಟಿಗೆಗಳಲ್ಲಿರಿಸಿ ಮಾರಬೇಕು, ಹಾಡಿದ್ದನ್ನೇ ಹಾಡುವ ಕಿಸಿಬಾಯಿ ಗ್ರಾಮಫೋನುಗಳಿಗೆ ಬದಲು ಹಾಡಿದ್ದನ್ನೆಲ್ಲ ನುಂಗಿ ಮೌನವಾಗಿರುವ ನಗರ ಫೋನುಗಳನ್ನು ತಯಾರಿಸಬೇಕು; ಗುಂಡಿ ಅದುಮಿದರೆ ಗುಂಡಿಗೆ ಬಲ ಇಮ್ಮಡಿಸಬೇಕು; ಹೊಗೆ ಇಲ್ಲದ ಸಿಗರೇಟು, ಮಿಗವಿಲ್ಲದ ಸಾರೋಟು, ಹಗೆ ಇಲ್ಲದ ನಗೆ, ಲಂಗ ಇಲ್ಲದ ಕುದುರೆ, ಕಣ್ಣೇ ಇಲ್ಲದ ಕನ್ನಡಕ, ಇತ್ಯಾದಿ ಚಮ ಚಮತ್ಕಾರದ ಪದಾರ್ಥಗಳನ್ನು ತಯಾರಿಸಿ ಭಾರತಮಾತೆಯ ಬೊಕ್ಕಸವನ್ನು ತುಂಬಬೇಕೆಂದು ಡಾ|| ರು ನಿಶ್ಚಯಿಸಿದರು. ರಾಮನನ್ನೂ ರಾಮಾನುಜನನ್ನೂ ಕೃಷ್ಣನನ್ನೂ ಕೃಷ್ಣಾನುಜವನ್ನೂ ಮೀರಿಸಬೇಕೆಂದು ಮನಸ್ಸಿನಲ್ಲೇ ಕನಸು ಕಂಡರು. ರೆ ಲೋಕದಲ್ಲಿ ತಾನೂ ಪ್ರಖ್ಯಾತನಾಗಬೇಕೆಂದು ಸಂಕಲ್ಪಿಸಿದರು.

ಅಮೇರಿಕಾದಲ್ಲಿದ್ದಾಗಲೇ, ಡಾ|| ಗೆ ಚಿಂತೆ ಪ್ರಾರಂಭವಾಯಿತು. ಡಾಕ್ಟರ್ ಪಟ್ಟ ದೊರೆಯುತ್ತಲೂ ಶಿರೋಭಾರ ಇಮ್ಮಡಿಸಿತು. ತಲೆಯಮೇಲಿನ ಕೂದಲೆಲ್ಲ ಉದುರಿತು. ವಿಚಾರಗಳೂ ಬುರುಡೆಯೂ ಥಳಥಳನೆ ಹೊಳೆಯಲು ತೊಡಗಿದವು. ವಿಜ್ಞಾನಶಾಸ್ತ್ರ ಸಂಶೋಧನೆಗಳಲ್ಲೇ ಅವರು ಇರುಳೆಲ್ಲ ಮುಳುಗಿ ಮೇಲೇರಲರಿಯದೆ ಕೈಕಾಲು ಬಡಿದರು. ಅವರ ಆಗಿನ ಸಂಶೋಧನೆಗಳಿಗೆ ಒಂದು ಉದಾಹರಣೆಯನ್ನು ಕೊಡುವುದು ಸೂಕ್ತ. ಹೆಚ್ಚು ಕೊಡಬೇಕಾದ ಅವಶ್ಯಕತೆ ಇಲ್ಲ... ನೆಯ್ಗೆ ಮಿಷೀನುಗಳಿಂದ ಉದ್ದಕ್ಕೂ ಥಾನ್ ಥಾನ್ ಎಂದು ಈಗ ಹೊರಬರುತ್ತಿರುವ ಬಟ್ಟೆಗೆ ಬದಲಾಗಿ ಲಂಗ ಲುಂಗಿ ಅಂಗಿ ಜುಬ್ಬ ಕುಪ್ಪುಸ ಕೋಟು – ಷಾರಾಯಿ ಷರ್ವಾನಿ ಇತ್ಯಾದಿಗಳೇ ಏಕೆ ಬರಬಾರದು, ಎಂದು ಡಾ|| ರು ಯೋಚಿಸಿದರು. ಒಂದುಭಾರಿ ಗುಂಡಿಯನ್ನು ಕಿರುಬೆರಳಿನಿಂದ ಅಮುಕಿದ ಕೂಡಲೇ ಚಕ್ರಗಳು ತಿರುಗಿ ಸುತ್ತಿಗೆಗಳು ಬಡಿದು ಬೆಲ್ಟುಗಳು ಬಿಗಿದು ನೂಲೆಲ್ಲ ಸೇರಿ ಬಟ್ಟೆಯಾಗಿ ಕತ್ತರಿ ಕೆಲಸ ನಡೆದು, ಆಯಾ ವ್ಯಕ್ತಿಯ ಅಳತೆ ಅವಶ್ಯಕತೆ ಆಚಾರ ಇವುಗಳಿಗನುಗುಣವಾಗಿ ತರತರದ ಉಡಿಗೆಗಳು ತಯಾರಾಗುವಂತೆ ಯಂತ್ರ ಸಮೂಹವನ್ನು ಜೋಡಿಸಲು ಅವರು ಹಗಲೆಲ್ಲ ಎಚ್ಚರವಾಗಿದ್ದು ಹವಣಿಸಿದರು. ಅಂಥ ಒಂದು ಯಂತ್ರ ಸಿದ್ಧವಾದರೆ, ಟೈಲರಂಗಡಿಯಲ್ಲಿ ದಪ್ಪ ಹೊಟ್ಟೆಯವರಿಗಾಗುವ ಅವಮಾನ ಪ್ರಸಂಗಗಳು ವಜಾ ! ಟೈಲರುಗಳಿಗೂ ಸರಾಗ! ಗಿರಾಕಿಯ ಬಾಗಿಲು ಕಾದು ಅವರನ್ನು ನಡುದಾರಿಯಲ್ಲಿ ಅಡ್ಡ ಕಟ್ಟಿ ಬಾಕಿ ವಸೂಲಿಗೆ ಪ್ರಯತ್ನಿಸಬೇಕಾಗಿಲ್ಲ ........... ಆದರೆ, ಡಾ|| ರ ಈ ಸಂಶೋಧನೆಯ ಮರ್ಮವನ್ನು ಪತ್ತೆ ಹಚ್ಚಿದ ಅವರ ವಿಶ್ವವಿದ್ಯಾನಿಲಯದ ಅಧಿಕಾರಿಗಳು – ''ನೀವು ತಕ್ಷಣವೇ

ಸ್ವದೇಶಕ್ಕೆ ಹಿಂತಿರುಗುವುದು ಮೇಲು. ಇಲ್ಲಿರುವುದು ಕೀಳು!'' ಎಂದರು. ಬಹಳವಾಗಿ ಪ್ರಯಾಸಪಟ್ಟು ಅವರು ಡಾ|| ರಿಗೆ ಒಂದು ನೌಕೆಯನ್ನೊದಗಿಸಿ, ರವಾನಿಸಿದರು.

ಒಂದು ತಿಂಗಳ ಕಾಲ ಡಾ|| ಡಾಮೋದರರಂರವರು ನೀರಿನ ಮೇಲಿಂದ ಬಂದರು. ಆಗ ಅವರ ತಲೆಯನ್ನು ತಿನ್ನುತ್ತಿದ್ದದ್ದು ರೋಮನಾಶಕ ಕ್ರಿಮಿಕೀಟಗಳಲ್ಲ – ಯಂತ್ರ ಸೃಷ್ಟಿಯ ಚಿಂತೆಗಳು! ಅಟ್ಲಾಂಟಿಕ್ ಸಾಗರ, ಭೂಮಧ್ಯಸಾಗರ, ಕೆಂಪುಸಾಗರ, ಹಿಂದೂಸಾಗರ, ಮುಂದೂಸಾಗರ ಎಂದೆಲ್ಲ ಸಾಗರಗಳಿಗೆ ನಾಮಕರಣ ಮಾಡಿದ ಭೂಪತಿಗಳು ನೀರಿನ ಮೇಲೆ ಅವುಗಳನ್ನು ಬರೆದಿಡಬೇಡವೆ? ಒಂದು ಕಡೆಯೂ ಬರೆದೇ ಇಲ್ಲ. ಇದು ಶುದ್ಧ ಮೋಸ – ಎಂದು ಡಾ||ರಿಗೆ ಅನ್ನಿಸಿದ್ದರಲ್ಲಿ ಆಶ್ಚರ್ಯವೇನು? ''ಕೊಳದ ಮೇಲೆ ಅಕ್ಷರವ ಕೊರೆದಂತೆ'' ಎಂದು ಅಜ್ಞಾನಯುಗದ ಸರ್ವಜ್ಞ ಹೇಳಿರುವಾಗ, ವಿಜ್ಞಾನಯುಗದ ಸರ್ವಜ್ಞನಾದ ತನಗೆ ಅದು ಸಾಧ್ಯವೇ? ಎಂದು ಡಾ|| ರು ಪ್ರಶ್ನಿಸಿಕೊಂಡರು. ವಾಟರ್ ಕಲರ್‌ನಿಂದ ಹೆಸರುಗಳನ್ನು ಬರೆಯುವುದಕ್ಕಾಗುವುದಿಲ್ಲವೆಂದು ಡಾ|| ರಿಗೆ ಬಲು ಬೇಗ ಹೊಳೆಯಿತು. ಅವರು ರಂಗಶಾಯಿ ಫಣಿಶಾಯಿಗಳನ್ನುಪಯೋಗಿಸಿ ನೋಡಿದರು. ತೇಲುವ ತೈಲವನ್ನೂ ಪರೀಕ್ಷಿಸಿದರು. ಒಂದು ದಿನ ಹಡಗಿನ ಪಕ್ಕಕ್ಕೆ ಸರಿದು ಬಾಗಿ ಬಗ್ಗಿ ಬ್ರಷ್ ಹಿಡಿದು ಕೊಂಬಿನ ದೀರ್ಘವನ್ನು ಸೇರಿಸುತ್ತಿದ್ದಾಗ, ಕಪ್ತಾನ ಬಂದು ಡಾ|| ರನ್ನು ಎಳೆದು ಹಡಗಿನ ವೈದ್ಯನ ಕೊಠಡಿಗೆ ನೂಕಿದರು. ವೈಜ್ಞಾನಿಕ ಸಂಶೋಧನೆಗಳ ಕಷ್ಟ ನಿಷ್ಟುರಗಳನ್ನು ಆ ಅಂಬಿಗನೇನು ಬಲ್ಲ?

ಬೊಂಬಾಯಿ ಬಂದರಿಗೆ ಹಡಗು ಬಂದು ನಿಲ್ಲುತ್ತಲೂ, ಹಡಗು ಬೊಂಬಾಯನ್ನು ಸಮೀಪಿಸಿತೋ ಅಥವಾ ಬೊಂಬಾಯಿ ತೆರೆದು ಹಡಗನ್ನು ಕಬಳಿಸಲು ಸರಿದು ಬಂತೋ, ಎಂಬ ಸಂದೇಹ ಡಾ|| ರ ಮೆದುಳನ್ನು ಹೊಕ್ಕಿರಿಯಿತು. ''ಇಳಿಯಿರಿ! ಇಳಿಯಿರಿ!'' ಎಂಬ ಕೂಗು ಅವರ ಡೋಲಾಯಮಾನವನ್ನು ನಿಲ್ಲಿಸಿತು. ಹಡಗಿನಿಂದ ಇಳಿಯಲು, ಡಾ|| ರು ಒಂದು ಹೊಸ ಯಾಂತ್ರಿಕ ವಿಧಾನವನ್ನು ಕಂಡು ಹಿಡಿದಿದ್ದರು. ಅದರ ಸಾರ್ಥಕತೆಯನ್ನು ಪರೀಕ್ಷಿಸಲು ಇದೇ ತಕ್ಕ ಸನ್ನಿವೇಶ ಎಂದು ಅವರಿಗೆ ತೋರಿತು..... ಸಸ್ಯದ ಎಲೆಗಳು ಸೂರ್ಯನ ಕಡೆ ತಾವಾಗಿಯೇ ತಿರುಗುತ್ತವೆ; ಹಾಗೆಯೇ, ಅದರ ಬೇರುಗಳು ತಾವಾಗಿಯೇ ನೆಲವನ್ನರಸುತ್ತವೆ. ಹಾಗೆಂದ ಮೇಲೆ, ಬೇರು ಸಹಿತ ಕಿತ್ತ ಹಲವಾರು ಸಸಿಗಳನ್ನು ಎರಡೂ ಕಡೆ ಕಿಸೆಗಳಲ್ಲಿ ತುಂಬಿಕೊಂಡು, ಹಡಗಿನ ಡೆಕ್ ಮೇಲೆ ಒಬ್ಬ ಮನುಷ್ಯ ನಿಂತನಾದರೆ, ಅಷ್ಟೊಂದು ಬೇರುಗಳು ''ಮಣ್ಣ ! ಮಣ್ಣ ! ನೆಲ ! ನೆಲ !'' ಎಂದು ಒದ್ದಾಡುತ್ತ, ನೂರಡಿ ಆಚೆ ನೂರಡಿ ಕೆಳಗೆ ಕಾಣಿಸುವ ನೆಲಕ್ಕೆ ಧಾವಿಸಲು ಪ್ರಕೃತಿದತ್ತವಾದ ಎಲ್ಲ ಶಕ್ತಿಯನ್ನೂ ಉಪಯೋಗಿಸುತ್ತವೆ; ಧಾವಿಸುತ್ತಿವೆ. ಹಾಗೆ ಧುಮಕುವಾಗ, ಸಂಗಡಲೇ ತಮ್ಮನ್ನು ಹೊತ್ತುನಿಂತಿರುವ 140 ಪೌಂಡು ತೂಕದ ವ್ಯಕ್ತಿಯನ್ನೂ ಎಳೆದುಕೊಂಡು ಬೀಳದೆ ಗತ್ಯಂತರವಿಲ್ಲ. ಇದೇ ಡಾ|| ರ ಹೊಸ ಸಂಶೋಧನೆ.

ಆದರೆ ಸಸಿಗಳ ಸಂಖ್ಯೆ ಸಾಲದೆ ಹೋದದ್ದರಿಂದಲೋ, ಕಿಸೆಗಳ ಅಗಲ ಆಳ ಕಡಿಮೆ ಬಿದ್ದದ್ದರಿಂದಲೋ, ಹಡಗಿಂದ ಇಳಿಯುವ ಕಡೆ ನೆಲಕ್ಕೆ ಸಿಮೆಂಟ್ ಕ್ರಾಂಕ್ರೀಟ್ ಹಾಕಿದ್ದರಿಂದಲೋ, ಏನೋ ಸಸಿಗಳು ಡಾ|| ರನ್ನು ಇಳಿಸಲಿಲ್ಲ. ಅವರೇ ಸ್ವಶಕ್ತಿಯನ್ನು ವೆಚ್ಚ ಮಾಡಿ ಇಳಿಯಬೇಕಾಗಿ ಬಂತು.

ಅಮೇರಿಕಾದಲ್ಲಿ ಅವರ ವಿದ್ಯಾಗುರುಗಳಾಗಿದ್ದ ಒಬ್ಬರು ಮಹಾಶಯರು, ''ಇಂಥ ವ್ಯಕ್ತಿ ಇಲ್ಲಿಗೆ ಬಂದದ್ದು ಇದೇ ಮೊದಲು. ಇವರನ್ನು ನೀವು ಜೋಪಾನವಾಗಿ ನೋಡಿ ಕೊಳ್ಳಬೇಕಾದದ್ದು'' ಎಂದು ಸರ್ಟಿಫಿಕೇಟ್‌ನಲ್ಲಿ ಬರೆದಿದ್ದರು. ಅದನ್ನು ಓದಿ ಅನೇಕರು ಡಾ|| ರ ಪ್ರತಿಭೆಗೆ ತಕ್ಕ ನೌಕರಿ ತಮ್ಮಲ್ಲಿಲ್ಲವಲ್ಲಾ ಎಂದು ವ್ಯಥೆಪಟ್ಟರು.

ಡಾ|| ಡಾಮೋದರಂ ನಮ್ಮ ಬಡಜೀವನವನ್ನು ಉತ್ತಮಗೊಳಿಸಲು ಅನೇಕ ಶಾಸ್ತ್ರೀಯ ವಿಧಾನಗಳನ್ನು ತಮ್ಮ ವಿಜ್ಞಾನ ಜ್ಞಾನದಿಂದ ಕಂಡು ಹಿಡಿದಿದ್ದಾರೆ. ಬಿಸಿ ನೀರು ಸ್ನಾನ ನಮಗೆಲ್ಲ ಅಪ್ಯಾಯಮಾನ; ಆದರೆ ಕಟ್ಟಿಗೆ ಅಭಾವ ! ಈ ಸಂಕಟ ನಿವಾರಣೆಗೆ ಡಾ|| ರು ಮೊನ್ನೆ ಒಂದು ಉಪಾಯ ಕಂಡು ಹಿಡಿದರು. ಯಾರಾದರೂ ನಮ್ಮನ್ನು ಅಕಾರಣವಾಗಿ ಬೈದರೆ, ನಮ್ಮ ರಕ್ತ ಕುದಿಯುವುದಿಲ್ಲವೆ? ಹಾಗೆ ಕುದಿಯಲು ಅಡ್ರಿನಲಿನ್ ಎಂಬ ಒಂದು ದ್ರಾವಕ ರಕ್ತನಾಳದಲ್ಲಿ ಉತ್ಪತ್ತಿಯಾಗುವುದೇ ಕಾರಣ. ಆದ್ದರಿಂದ, ಅಡ್ರಿನಲಿನ್ ಗುಳಿಗೆಗಳನ್ನು ಸಾಕಷ್ಟು ನುಂಗಿದರೆ, ನಮ್ಮ ರಕ್ತ ಸಾಕಷ್ಟು ಕುದಿದು, ಅದರ ಕಾವಿನಿಂದಲೇ, ಮೇಲೆ ಹುಯ್ದುಕೊಳ್ಳುವ ತಣ್ಣೀರು ಬಿಸಿಯಾಗಿ ಸೌದೆ ಖರ್ಚು ಉಳಿಯುವುದೆಂದು

ಡಾ। ಊಹಿಸಿ, ಅದರಂತೆ ಗುಳಿಗೆಗಳಿಗಾಗಿ ರಸ ಶೇಖರಿಸಲು, ಅಕಾರಣವಾಗಿ ಆಳುಗಳನ್ನೂ ನೆರೆಹೊರೆಯವರನ್ನೂ ಯದ್ವಾತದ್ವಾ ಬೈದರು. ಆದರೆ, ಅವರು ಯಾರಿಗೂ ವಿಜ್ಞಾನ ಮನೋಭಾವ ಇರಲಿಲ್ಲವಾದ್ದರಿಂದ ಆ ಪ್ರಯೋಗ ಅಲ್ಲಿಗೆ ಮುಗಿಯಿತು.

ಡಾ|| ರ ಬಂಗಲೆಯಲ್ಲಿ ಲಕ್ಷಗಟ್ಟಲೆ ಸೊಳ್ಳೆಗಳು ಝೇಂಕರಿಸುತ್ತಿದ್ದುವು. ಅವುಗಳನ್ನು ನಾಶಮಾಡಲು ಅವರು ಒಂದು ಸುಲಭ ಮಾರ್ಗ ಕಂಡುಹಿಡಿದರು. ಕಬ್ಬಿಣದ ಪುಡಿ ಮಿಶ್ರವಾದ ಒಂದು ತರದ ಬಣ್ಣವನ್ನು ಗೋಡೆಗೆ ಬಳಿಯುವದು; ಆಗ ಅದರ ಮೇಲೆ ಕೂಡುವ ಸೊಳ್ಳೆಗಳ ಕಾಲಿಗೆ ಆ ಧೂಳು ಸೇರಿಕೊಳ್ಳುತ್ತದೆ. ರೂಮಿನ ನಡುವಣ ಭಾಗದಲ್ಲಿ, ತಾರ್ಸಿಯಿಂದ ಒಂದು ದೊಡ್ಡ ಅಯಸ್ಕಾಂತವನ್ನು ತೂಗುಹಾಕುವುದು. ಆಗ ಸೊಳ್ಳೆ ಕಾಲುಗಳನ್ನು ಅದು ತನ್ನಲ್ಲಿಗೆ ಬಲವಂತದಿಂದ ಎಳೆದುಕೊಳ್ಳುತ್ತದೆ; ಕಾಂತದಿಂದ ತಪ್ಪಿಸಿಕೊಳ್ಳಲಾಗದೆ, ಸೊಳ್ಳೆ ಸಮೂಹ ಅಲ್ಲೇ ಅಂಟಿಕೊಂಡಿದ್ದು, ಉಪವಾಸದಿಂದ ಸಾಯುವವು. ಇದೇ ತರವೆ? ಅಲ್ಲದೆ ಕಬ್ಬಿಣ ಬಣ್ಣವನ್ನು ಪ್ರಾಯೋಗಿಕವಾಗಿ ಬಳಿದಿದ್ದ ಕೊಠಡಿಯಲ್ಲಿ ಅನೇಕ ಅನಾಹುತಗಳೂ ಸಂಭವಿಸಿದುವು. ತಿಳಿಯದೆ ಗೋಡೆಗೆ ಒರಗಿಕೊಂಡ ಅವರ ತಮ್ಮನನ್ನು ಕಾಂತ ಎಳೆದೇಬಿಟ್ಟಿತು. ಗೋಡೆಗೆ ಹೊಡೆದಿದ್ದ ಮೊಳೆಗಳೆಲ್ಲ ಒಮ್ಮೆಲೆ ಕಾಂತದ ಕಡೆ ಧಾವಿಸಿ ಪಟಗಳೆಲ್ಲ ಕೆಳಕ್ಕುರುಳಿದುವು. ಸಿಮೆಂಟ್ ಕ್ರಾಂಕೀಟ್ ತಾರ್ಸಿಯೊಳಗಿದ್ದ ಕಬ್ಬಿಣದ ತಂತಿಗಳೆಲ್ಲ ಅದರ ಕಡೆ ಬಾಗಿದವು. ಇದರಿಂದಾಗಿ, ಆ ಹೊಸ ವಿಧಾನವೂ ಕೂಡ ಬೆಳಕಿಗೆ ಬರಲು ಅವಕಾಶ ದೊರೆಯಲಿಲ್ಲ.


ಹೆಚ್ಚು ಆಹಾರ ಬೆಳೆಯಿರಿ, ಎಂದು ಚಳುವಳಿಗೆ ಅವಶ್ಯ ಬೇಕಾಗಿರುವ ನೀರಾವರಿ ಸಹಾಯವನ್ನೊದಗಿಸಲು ಡಾ|| ರು ಒಂದು ವೈಜ್ಞಾನಿಕ ಸೌಲಭ್ಯವನ್ನು ಕಂಡುಹಿಡಿದರು. ಹತ್ತಿ ದಾರದ ಒಂದು ಎಳೆಯ ತುದಿಯನ್ನು ಒಂದು ಬಟ್ಟಲು ನೀರಿಗಿಳಿ ಬಿಟ್ಟರೆ, ನೀರು ಆ ದಾರದ ಮೂಲಕ ಮೇಲಕ್ಕೇರುವುದನ್ನು ನಾವೆಲ್ಲ ನೋಡಿದ್ದೇವೆ. ಆದರೆ ಭೂಮಿ ತಾಯಿಯ ಬಸುರಿನಲ್ಲಿರುವ ಅಂತರ್ಗಂಗೆಗೆ ದಾರದ ಎಳೆಗಳ ತುದಿಗಳನ್ನು ಇಳೀಬಿಡುವುದರಿಂದ ಆ ನೀರನ್ನು ಮೇಲಕ್ಕೆಳೆದು, ಅಂಥ ಎಳೆಗಳನ್ನು ಹೊಲ, ಗದ್ದೆಗಳ ಕೆಳಭಾಗದಲ್ಲಿ, ಎರಡು ಎರಡೂವರೆ ಅಡಿ ಆಳದಲ್ಲಿ, ಹರಡಿದರೆ, ಸದಾಗಿಡಗಳ ಬೇರಿಗೆ ತಂಪೆರೆಯಬಹುದೆಂದು ನಮ್ಮಲ್ಲಿ ಎಷ್ಟು ಜನಕ್ಕೆ ಹೊಳೆದಿದೆ? ಡಾ|| ರಿಗೆ ಇದು ಹೊಳೆಯಿತು. ತಮ್ಮ ಹಿತ್ತಲಲ್ಲಿ ಅವರು ಪ್ರಯೋಗ ನಡಿಸಿ, ಹತ್ತಿ ದಾರಗಳನ್ನಿಳಿ ಬಿಟ್ಟರು. ನೀರು ಮೇಲಕ್ಕೇರಿತು. ಗಿಡಕ್ಕೆ ತಂಪು ನಿಂತಿತು. ಆದರೆ...... ಅಕ್ಕ ಪಕ್ಕದ ಮನೆ ಭಾವಿಗಳೆಲ್ಲ ಬತ್ತಿದುವು. ನೀವು ಪತ್ರಿಕೆಯಲ್ಲೋದಿರಬಹುದು. ಕನ್ನಂಬಾಡಿ ಕೆರೆಯ ಮಟ್ಟವೂ ಕಡಿಮೆಯಾಯಿತು. ಮೆಟ್ಟೂರಿಂದ ಮದ್ರಾಸಿಗೆ ತಂತಿ ಹೋಯಿತು. ಬೊಂಬಾಯಿ ಬಂದರದಲ್ಲಿದ್ದ ಹಡಗುಗಳೆಲ್ಲ ಕೆಸರಲ್ಲಿ ಹೂತು ಹೋದವು. ಡಾ|| ರು ''ಶ್ರೀಯಾಂಸಿ ಬಹು ವಿಘ್ನಾಸಿ'' ಎಂದು ಗೊಣಗುಟ್ಟಿದರು.

ಆದರೂ ಅವರು ಎದೆಗೆಡದೆ ತಮ್ಮ ಸಂಶೋಧನೆಗಳನ್ನು ಮುಂದುವರಿಸುತ್ತಲೇ ಇದ್ದಾರೆ. ನಾಳೆ ನಮಗೆ ಏನು ಕಾದಿದೆಯೋ?

## ಶಬ್ದಗಳ ಅರ್ಥ:

ಹಗೆ - ವೈರಿ; ಲಂಗ - ಲಗಾಮು; ಪ್ರಖ್ಯಾತ - ಪ್ರಸಿದ್ಧ; ಹವಣಿಸು - ಪ್ರಯತ್ನಿಸು; ಝೇಂಕಾರ - ಸಪ್ಪಳ; ಒರಗಿ - ತಾಗಿ; ಬಸುರಿ - ಹೊಟ್ಟೆ.

**ಕೃತಿ 1) ಕೆಳಗಿನ ಜಾಲಾಕೃತಿಯನ್ನು ಪೂರ್ಣಗೊಳಿಸಿರಿ.**



ಡಾ|| ಡಾಮೋದರಂ ಅಧ್ಯಕ್ಷರಿಗೆ ಏನೆಂದು ಕಾಗದ ಬರೆದರು

**ಕೃತಿ 2)** ಸರಿ ಹೊಂದುವ ಶಬ್ದಕ್ಕೆ ವಾಕ್ಯ ಹುಡುಕಿ ಬರೆಯಿರಿ.

| ನಾಮಪದಗಳು | ಉಪಯೋಗಿಸಿದ ವರ್ಣನಾತ್ಮಕ ಶಬ್ದಕ್ಕೆ ವಾಕ್ಯ |
|---|---|
| 1) ಸಾಗರಗಳು<br>2) ವಾಟರ ಕಲರ್<br>3) ಅಂಬಿಗ<br>4) ಬಂದರು<br>(ಹಡುಗು ನಿಲ್ಲುವ ಸ್ಥಳ) | |

**ಕೃತಿ 3)** ಕೆಳಗಿನ ವಾಕ್ಯಗಳನ್ನು ಅನುಕ್ರಮವಾಗಿ ಬರೆಯಿರಿ.

1) ಲೋಕದಲ್ಲಿ ತಾನೂ ಪ್ರಖ್ಯಾತನಾಗಬೇಕೆಂದು ಸಂಕಲ್ಪಿಸಿದರು.
2) ಚಮತ್ಕಾರದ ಪದಾರ್ಥಗಳನ್ನು ತಯಾರಿಸಿ ಭಾರತಮಾತೆಯ ಬೊಕ್ಕಸವನ್ನು ತುಂಬಬೇಕೆಂದು ಡಾ|| ರು ನಿಶ್ಚಯಿಸಿದರು.
3) ಹೊಗೆ ಇಲ್ಲದ ಸಿಗರೇಟು, ಮಿಗ್‌ವಿಲ್ಲ ಸಾರೋಟ, ಹಗೆ ಇಲ್ಲದ ನಗೆ, ಲಂಗ ಇಲ್ಲದ ಕುದುರೆ, ಕಣ್ಣೇ ಇಲ್ಲದ ಕನ್ನಡಕ ಇತ್ಯಾದಿಗಳು.
4) ಭರತ ಖಂಡವನ್ನೂ ಅಂಥ ಜಾದೂ ಖಂಡ ಮಾಡಬೇಕೆಂಬುದೇ ಡಾ|| ರ ಧೃಡ ಸಂಕಲ್ಪ.

**ಕೃತಿ 4)** ಭಾರತ ಅಮೇರಿಕಾ ದೇಶದಲ್ಲಿರುವ ವ್ಯತ್ಯಾಸಗಳನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**ಕೃತಿ 5)** ಕೆಳಗಿನ ಶಬ್ದ ರಿಂಗಣದಿಂದ ಆಯ್ದು ಮೂರು ಅಕ್ಷರಗಳಿಂದ ಕೂಡಿದ ನಾಲ್ಕು ಅರ್ಥ ಪೂರ್ಣ ಶಬ್ದ ಬರೆಯಿರಿ.

ಭ
ಖಂ ಕ
ತ ಡ ಮ ಚ
ತ್ಕಾ ಗ ನ
ನ್ನ ಏ
ರ ಡ

**ಕೃತಿ 6)** ಕೆಳಗಿನ ಪದಬಂಧವನ್ನು ಪೂರ್ಣಗೊಳಿಸಿರಿ.

| | | | | | |
|---|---|---|---|---|---|
| | | | ಅ | | |
| | | | | | |
| ಮ | | | ವ | | |

**ಮೇಲಿನಿಂದ ಕೆಳಗೆ**

1) ಒಳ್ಳೆಯವನಿಗೆ ಹೀಗೆನ್ನುವರು
2) ಕಡಿಮೆಯಾಯಿತು

**ಎಡದಿಂದ ಬಲಕ್ಕೆ**

3) ಮನಸಿನ ಭಾವನೆಗಳಿಗೆ
4) ಸಾಕ್ಷರರಾಗಲು ಯಾವುದರ ಜ್ಞಾನ ಬೇಕು.

# 8. ಭೂಮಿಯು ಇನ್ನು ಬಡವಾಯಿತು

– ಸಿ. ಕೆ. ವೆಂಕಟರಾಮಯ್ಯ

**ಲೇಖಕರ ಪರಿಚಯ :** ಈ ನಾಟಕ ಭಾಗವನ್ನು ಶ್ರೀ ಸಿ. ಕೆ. ವೆಂಕಟರಾಮಯ್ಯ ಅವರ ''ಮಂಡೋದರಿ'' ಎಂಬ ನಾಟಕದಿಂದ ಆಯ್ದುಕೊಳ್ಳಲಾಗಿದೆ.

ಸಿ. ಕೆ. ವೆಂಕಟರಾಮಯ್ಯನವರು 1897ರಲ್ಲಿ ಬೆಂಗಳೂರು ಜಿಲ್ಲೆಯ ಚನ್ನ ಪಟ್ಟಣದಲ್ಲಿ ಹುಟ್ಟಿದರು. ಇವರು ಮೈಸೂರು ಸರ್ಕಾರದ ಪ್ರಧಾನ ಭಾಷಾಂತರಕಾರರಾಗಿದ್ದರು. ಈಗ ನಿವೃತ್ತರಾಗಿ ವಿಶ್ರಾಂತಜೀವನ ನಡೆಸುತ್ತಿದ್ದಾರೆ. ಈಗ ನಿವೃತ್ತರಾಗಿ ವಿಶ್ರಾಂತಜೀವನ ನಡೆಸುತ್ತಿದ್ದಾರೆ. ಇವರಿಗೆ ರಾಷ್ಟ್ರಪತಿಗಳಿಂದ ''ಪದ್ಮಶ್ರೀ'' ಪ್ರಶಸ್ತಿ ದೊರೆತಿದೆ. ಇವರು ನಾಟಕ, ಕಥೆ, ಜೀವನಚರಿತ್ರೆ, ವಿಮರ್ಶೆ – ಹೀಗೆ ಹಲವು ಕ್ಷೇತ್ರಗಳಲ್ಲಿ ಕೆಲಸ ಮಾಡಿ ಇಪ್ಪತ್ತಕ್ಕೂ ಹೆಚ್ಚು ಗ್ರಂಥಗಳನ್ನು ಪ್ರಕಟಿಸಿದ್ದಾರೆ. 'ಮಂಡೋದರಿ', ನಚಿಕೇತ', ಬ್ರಹ್ಮವಾದಿನಿ'' ''ತೆನಾಲಿ ರಾಮಕೃಷ್ಣ'' ಮುಂತಾದುವು ಅವರ ನಾಟಕಗಳು; ''ಹಳ್ಳಿಯ ಕಥೆಗಳು''. ''ತುರಾಯಿ'' ಮುಂತಾದವು ಅವರ ಕಥಾಸಂಕಲನಗಳು; ಬುದ್ಧ', 'ಹರ್ಷವರ್ಧನ', 'ಏಬ್ರಹಾಂ ಲಿಂಕನ್', 'ಗುರುದೇವ', 'ಆಳಿದ ಮಹಾಸ್ವಾಮಿಯವರು' – ಇವು ಅವರು ಬರೆದಿರುವ ಕೆಲವು ಜೀವನಚರಿತ್ರೆಗಳು, 'ಭಾಸ ಮಹಾಕವಿ' – ಅವರ ವಿಮರ್ಶನ ಗ್ರಂಥ.

ರಾಮಾಯಣದಲ್ಲಿ ಬರುವ ಮಂಡೋದರಿಯ ಪಾತ್ರವನ್ನೇ ಪ್ರಧಾನವಾಗಿಟ್ಟುಕೊಂಡು ರಚಿಸಿದ ನಾಟಕ 'ಮಂಡೋದರಿ'. ರಂಗಭೂಮಿಯ ದೃಷ್ಟಿಯಿಂದ ಇದೊಂದು ಯಶಸ್ವಿಯಾದ ನಾಟಕ. ರಾವಣ ಮತ್ತು ಮಂಡೋದರಿಯರ ಅಂತ್ಯದಲ್ಲಿ ಈ ನಾಟಕ ಮುಕ್ತಾಯವಾಗುತ್ತದೆ. ಆ ಒಂದು ದೃಶ್ಯವನ್ನು ಇಲ್ಲಿ ಚಿತ್ರಿಸಲಾಗಿದೆ. ರಾವಣನ ಮನಃಪರಿವರ್ತನೆ ಮಂಡೋದರಿಯ ಪತಿಪ್ರೇಮ – ಇವು ಇಲ್ಲಿ ಮನನೀಯವಾಗಿ ಉಲ್ಲೇಖಗೊಂಡಿವೆ. ದುರಂತಕತೆಯಲ್ಲಿ ಮುಗಿಯುವ ಈ ಚಿತ್ರ ಕರುಳನ್ನು ಮಿಡಿಯುವಂತಿದೆ. ಪರಸ್ಪರ ಅರಿವು, ಉದ್ದೇಶ, ಗುರಿಗಳನ್ನು ಇಲ್ಲಿ ಹೇಳಲಾಗಿದೆ.

(ರಾವಣನ ಶಿಬಿರ : ರಾವಣನು ಮರಣಶಯ್ಯೆಯಲ್ಲಿ ಮಲಗಿರುವನು. ಪರಿವಾರದವರೆಲ್ಲರೂ ನಿಸ್ತೇಜರಾಗಿರುವರು. ಸಮಯ : ಸಂಧ್ಯಾಕಾಲಕ್ಕೆ ಸ್ವಲ್ಪ ಮುಂಚೆ).



ರಾವಣ – ದುರಂತವಾದ ಹೃದಯಯಾತನೆಯೊಡನೆ ಜೀವನವು ಕೊನೆಗಾಣುವ ಸಮಯವು ಸನ್ನಿಹಿತವಾಯಿತು. ಸೀತಾದೇವಿ ! ನೀನು ಜಗದ್ವಂದ್ಯಳು! ಲೋಕೈಕ ವೀರನಾದ ರಾಮಚಂದ್ರನನ್ನು ವರಿಸಿರುವ ನೀನೇ ಭಾಗ್ಯಶಾಲಿನಿ. ನನ್ನ ಅಪರಾಧವನ್ನು ಮನ್ನಿಸು... ಸಂಕಟ... ಸಂಕಟ... ವತ್ಸ ವಿಭೀಷಣ! ನನ್ನ ಕೆಲಸವು ಪೂರೈಸಿತು. ನನ್ನ ಸತ್ಸಂಕಲ್ಪಗಳಿಗೆಲ್ಲ ಸಜೀವಸಮಾಧಿಯಾಯಿತು. ವತ್ಸ !ಇನ್ನು ಮುಂದೆ ನೀನೇ ಚಕ್ರವರ್ತಿ. ಪ್ರಜೆಗಳನ್ನು ಮಕ್ಕಳಂತೆ ಕಾಪಾಡುತ್ತ ಸುಖವಾಗಿ ಬಾಳು. ಮಂಡೋದರಿಯು ಇನ್ನೂ ಬರಲಿಲ್ಲವಲ್ಲಾ! ಎಷ್ಟು ಬಾಧೆಯಾಗಿದೆಯೋ ಅವಳಿಗೆ! ನನ್ನ ಭಂಡಾರದಲ್ಲಿರುವ ಸುವಸ್ತುಗಳಲ್ಲಿ ಕಾಲುಭಾಗವನ್ನು ಸೀತಾದೇವಿಗೆ ಬಳುವಳಿಯಾಗಿ ಕೊಟ್ಟಿರುವೆನು. ಉಳಿದುದರಲ್ಲಿ ಅರ್ಧಭಾಗವನ್ನು ಪಾತ್ರವರಿತು ಪ್ರಜೆಗಳಿಗೆ ದಾನಮಾಡು. ಮಿಕ್ಕ ವಸ್ತುನಿಚಯವೆಲ್ಲಾ ನಿನ್ನದು.

(ನೇಪಥ್ಯದಲ್ಲಿ ಪ್ರಜೆಗಳೆಲ್ಲರೂ ''ಲಂಕೆಯ ಲಕ್ಷ್ಮಿಯಾದ ಮಂಡೋದರೀದೇವಿ. ಅಯ್ಯೋ! ಅಯ್ಯೋ!'' ಎಂದು ಕೂಗಿಕೊಳ್ಳುತ್ತಿರುವಲ್ಲಿ ಮಂಡೋದರಿಯು ಆಂಜನೇಯನ ಸಹಾಯದಿಂದ ಮೆಲ್ಲಗೆ ಹೆಜ್ಜೆಯನ್ನಿಡುತ್ತ ಪ್ರವೇಶಿಸುವಳು. ರಾವಣನನ್ನುಕಂಡೊಡನೆಯೇ ಆವೇಶಗೊಂಡವಳಂತೆ ಅವನ ಬಳಿಗೆ ಹೋಗುವಳು.)

ಮಂಡೋದರಿ – (ರಾವಣನ ಪಾದದ ಮೇಲೆ ತಲೆಯನ್ನಿಟ್ಟು) ಪ್ರಾಣನಾಥ! ನನ್ನ ಕೊನೆಯ ಅಂಜನೇಯ – ಸೀತಾಮಾತೆಗೆ ಸರಿದೂಗುವವಳು ಇವಳೊಬ್ಬಳೇ. ಎಂತಹ ಪತಿಪ್ರೇಮ! (ಕಂಬನಿದುಂಬಿ ಗದ್ಗದ ಸ್ವರದಿಂದ) ಅಯ್ಯೋ! ಅನರ್ಘ್ಯವಾದ ಜೀವರತ್ನವೊಂದು ಪುಡಿಯಾಯಿತು.

ಸೀತಾದೇವಿ – (ಪ್ರವೇಶಿಸಿ) ಆಂಜನೇಯ! ಸುಷೇಷನೂ ದೇವಿಯನ್ನು ಉಳಿಸಲಾರದೆ ಹೋದನೆ? (ಮಂಡೋದರಿಯ ಬಳಿಗೆ ಹೋಗುವಳು)

ಆಂಜನೇಯ – (ಸೀತಾದೇವಿಗೆ ನಮಸ್ಕರಿಸಿ ಮೇಲಕ್ಕೆದ್ದು) ಮಂಡೋದರೀದೇವಿಯನ್ನು ಉಳಿಸಿದವರಿಗೆ ಅಯೋಧ್ಯೆಯ ರಾಜ್ಯವನ್ನು ಕೊಟ್ಟು ತಾನು ಸತೀಸಹೋದರರೊಡನೆ ವನವಾಸವನ್ನು ಕೈಕೊಳ್ಳುವುದಾಗಿ ಪ್ರಭು ರಾಮಚಂದ್ರನು ತಿಳಿಸಿದನು. ಯಾರ ಚಿಕಿತ್ಸೆಯಿಂದಲೂ ಫಲವಾಗಲಿಲ್ಲ. ಸ್ವಲ್ಪಕಾಲ ಮಾತ್ರ ತ್ರಾಣದಾಯಕವಾಗುವಂತೆ ಸುಷೇಣನು ಮೂಲಿಕಾ ಪ್ರಯೋಗ ಮಾಡಿದ್ದಾನೆ.

ರಾವಣ – (ಏಳಲು ಪ್ರಯತ್ನಿಸಿ ಮತ್ತೆ ಹಿಂದಕ್ಕೆ ಬಿದ್ದು) ಮಂಡೋದರಿ! ನನ್ನ ಮುದ್ದು ಗಿಳಿ! ನನ್ನ ಹೃದಯದಲ್ಲಿ ಈಗಿರುವುದು ನಿನ್ನ ಮೋಹನಮೂರ್ತಿಯೊಂದೇ. (ಸಂಕಟವನ್ನು ಸೂಚಿಸುವನು) ನೀನು ಮೊದಲೇ ರಣರಂಗಕ್ಕೆ ಬಂದಿದ್ದರೆ ನಾನೇ ಜಯಿಸುತ್ತಿದ್ದೇನೋ ಏನೋ! ನಿನಗೂ ತೋರಲಿಲ್ಲ.... ನಾನೂ ಕೇಳಲಿಲ್ಲ...... ಮಾಯೆಯ ಕಾವಳ ..... ನಾನು ನಿನ್ನಲ್ಲಿಯೂ, ಸೀತೆಯಲ್ಲಿಯೂ ಎಷ್ಟು ಅಪರಾಧಿ! ಮಂಡೋದರಿ, ಮಂಡೋದರಿ .... (ಸಂಕಟಪಡುವನು. ಪರಿಜನರು ಬಲವಾಗಿ ಗಾಳಿ ಹಾಕುವರು)

ಮಂಡೋದರಿ – (ಕಂಬನಿದುಂಬಿ) ಆರ್ಯಪುತ್ರನ ಅವಸ್ಥೆಯನ್ನು ನೋಡಲಾರೆ, ಆರ್ಯಪುತ್ರ! ನಿನ್ನ ಪ್ರೇಮಕ್ಕೆ ಪಾತ್ರಳಾದ ನಾನೇ ಧನ್ಯಳು. ನನ್ನ ಜೀವನದ ಚೈತನ್ಯವೇ ನೀನು ! ನನ್ನ ಕಥೆಯು ಮುಗಿಯುತ್ತ ಬಂದಿತು. ಸೀತಾದೇವಿ ! ಆಲಿಂಗಿಸು ತಾಯಿ. ಈ ಸುಖವು ಪರಲೋಕದಲ್ಲೆಲ್ಲಿ ದೊರೆಯುವುದು! ನನ್ನನ್ನು ಬಿಗಿಯಾಗಿ ಅಪ್ಪು. ಆಂಜನೇಯ! ನಿನ್ನ ಸಹಾಯದಿಂದ ಪತಿಯನ್ನು ಕೊನೆಯಸಾರಿ ನೋಡುವ ಭಾಗ್ಯವನ್ನು ಪಡೆದೆನು. (ರಾವಣನ ಪದತಲದ ಬಳಿಯಲ್ಲಿ ಸೀತೆಯ ಅವಳನ್ನು ಒಂದು ಆಸನದಲ್ಲಿ ಕುಳ್ಳಿರಿಸುವಳು).

ಆಂಜನೇಯ – (ಕಂಬನಿಯನ್ನು ಸುರಿಸುತ್ತ ನಮಸ್ಕರಿಸಿ) ಮಾತೆ ! ಮಾತೆ ! ನನ್ನದು ನಿಜವಾಗಿಯೂ ವಜ್ರಹೃದಯ. ಅದಕ್ಕೇ ಈ ಹಾಳು ಹೃದಯವು ಇನ್ನೂ ಸೀಳಿಹೋಗಿಲ್ಲ.

ಮಂಡೋದರಿ – ಏಳು, ಏಳು, ಸ್ವಾಮಿಭಕ್ತಿಪರಾಯಣ. ಏಳು, ನಿನ್ನಂತಹ ಸ್ವಾಮಿನಿಷ್ಠರು ಜಗತ್ತಿಗೇ ಅಲಂಕಾರಪ್ರಾಯರು. ವಿಭೀಷಣ, ನಿನ್ನ ವಿಷಯದಲ್ಲಿ ನಾನು ಬಿರುನುಡಿಗಳನ್ನು ಆಡಿರುವೆನು. ಕ್ಷಮಿಸು. ಆ ಕಾಲವು ಆಗಿ ಹೋಯಿತು. ಈಗ ನನ್ನ ಮನಸ್ಸಿನಲ್ಲಿರುವುದು ಪ್ರೀತಿಯೊಂದೇ.

ವಿಭೀಷಣ – (ಓಡಿಬಂದು ನಮಸ್ಕರಿಸಿ ಗದ್ಗದ ಸ್ವರದಿಂದ) ಬೇಡ! ಮಾತೆ. ನನ್ನ ಹೃದಯವನ್ನು ಸೀಳಬೇಡ. ನೀನು ಸತ್ಯಲೋಕದ ದೇವಿ. ನಮಗೆಲ್ಲಿ ನಿನ್ನ ಸೇವಾಭಾಗ್ಯ! ಪಾಪಿಷ್ಠರಿಗೆ ಅದು ಸಿಕ್ಕೀತೆ? ಮಾತೆ! ನೀನು ಸತ್ತು ಬದುಕುವವಳು. ನಾವು ಬದುಕಿ ಸತ್ತವರು.

ಮಂಡೋದರಿ – ವಿಭೀಷಣ! ನನ್ನ ಅಂತರಾತ್ಮವು ಲಂಕೆಯನ್ನು ಬಿಟ್ಟು ಹೋಗಬಾರದು. ನನ್ನ ದೇಹವು ಬಿದ್ದುಹೋದರೂ ನನ್ನ ಆತ್ಮವು ಪತಿಪುತ್ರರ ಆತ್ಮಗಳೊಡನೆ ಲಂಕಾರಾಜ್ಯದ ಎಲ್ಲೆಡೆಗಳನ್ನೂ ವ್ಯಾಪಿಸುವಂತೆ ಸರ್ವಮಂಗಳೆಯು ಅನುಗ್ರಹಿಸಬಾರದೆ! ವಿಭೀಷಣ! ಸಮಸ್ತ ವಿಧಗಳಲ್ಲೂ ನೀನು ಲಂಕಾಮಾತೆಯನ್ನು ಸೇವಿಸು. ಸಚ್ಚರಿತ್ರನಾಗಿ ಬಾಳು. ವಿಭೀಷಣ! ಪ್ರಜೆಗಳನ್ನು ಮಕ್ಕಳಂತೆ ಕಾಪಾಡು. ರಾವಣೇಶ್ವರ ಬೂಪಾಲನಿಗಿಂತ ಮಿಗಿಲೆನಿಸುವಂತೆ ಪ್ರಜಾಭ್ಯುದಯವನ್ನು ಸಾಧಿಸಿ ಧನ್ಯನಾಗು. ಆರ್ಯಪುತ್ರನು ಒಂದು ಕ್ಷಣವೂ ರಾಜಧರ್ಮವನ್ನು ಆಲಕ್ಷ್ಯ ಮಾಡಿಲ್ಲವೆಂಬುದನ್ನು ನೆನಪಿನಲ್ಲಿಡು. ನಾವಿಬ್ಬರೂ ಪ್ರಜೆಗಳನ್ನು ಬಿಡಲಾರದೆ ಬಿಟ್ಟು ಹೋಗುತ್ತಿದ್ದೇವೆ. ಅಯ್ಯೋ! ಆರ್ಯಪುತ್ರನು ಎಷ್ಟು ಸಂಕಟಪಡುತ್ತಿದ್ದಾನೆ! ಇಂತಹ ಸಮಯದಲ್ಲಿ ಅವನನ್ನು ಸೇವಿಸಲು ನನಗೆ ಶಕ್ತಿಯಿಲ್ಲವಲ್ಲಾ! ಅಯ್ಯೋ! ಹೇಗೆ ಸಹಿಸಲಿ?

ವಿಭೀಷಣ – (ಅಳುತ್ತ ಅಳುತ್ತ ಬಂದು ಮಂಡೋದರಿಯ ಕಾಲುಗಳನ್ನು ಹಿಡಿದುಕೊಂಡು) ಸಾತ್ವಿಕಪ್ರೇಮವೇ ಸ್ತ್ರೀರೂಪವನ್ನು ಧರಿಸಿರಬೇಕು. ತಾಯಿ! ನೀನು ಸರ್ವಮಂಗಳೆಯ ಅವತಾರ. ಲಂಕೆಯ ವೈಭವವು ಇಲ್ಲಿಗೆ ಮುಗಿಯಿತು.

ಮಂಡೋದರಿ – ವತ್ಸ ! ಪ್ರೀತಿಭರದಲ್ಲಿ ಅಲತೆಗೆಟ್ಟು ಮಾತನಾಡಬೇಡ. (ಅವನ ತಲೆಯ ಮೇಲೆ ಕೈಯಿಟ್ಟು) ಸುಖವಾಗಿ ಬಾಳು. ಶುದ್ಧಹೃದಯದಿಂದ ಲಂಕಾಮಾತೆಯನ್ನು ಸೇವಿಸಿ ಧನ್ಯನಾಗು. (ವಿಭೀಷಣನು ಮೇಲಕ್ಕೆದ್ದು ನಿಲ್ಲುವನು) ಮೂಲಿಕೆಯಿಂದ ಕೃತಕವಾಗಿ ದೊರೆತಿದ್ದ ತ್ರಾಣವೂ ಹೋಯಿತು. ಸಂಕಟ, ಸಂಕಟ...

ಸೀತಾದೇವಿ – ಅಯ್ಯೋ! ಇದನ್ನು ನೋಡಿ ಸೈರಿಸಲಾರೆ.

ಮಂಡೋದರಿ – ಎಲ್ಲವೂ ಸರ್ವಮಂಗಳೆಯ ಲೀಲೆ. ಸೀತಾದೇವಿ, ಲೋಕವಂದಿತೆಯಾದ ನನ್ನ ಸಹೋದರಿ! ನನ್ನದೊಂದು ಯಾಚನೆಯುಂಟು.

ಸೀತಾದೇವಿ – ಅಕ್ಕ! ಯಾಚನೆಯೆನ್ನಬೇಡ. ಅಯ್ಯೋ! ಹಾಗೆನ್ನಬೇಡ, ಅದು ಅನುಗ್ರಹ. ಹೇಳು, ಹೇಳು, ನನ್ನ ಪ್ರಾಣವನ್ನು ಬೇಕಾದರೂ ಕೊಡಬಲ್ಲೆ.

ಮಂಡೋದರಿ – ತಂಗಿ ! ನಮ್ಮ ಸ್ನೇಹದ ಗುರುತಾಗಿ, ನಮ್ಮ ಪ್ರೀತಿಯ ನೆನಪಾಗಿ ಒಂದು ಕಾರ್ಯವನ್ನು ಮಾಡುವೆಯಾ! ಸಂಕಟ...

ಸೀತಾದೇವಿ – ಹೇಳು. ಹೇಳು, ಆಜ್ಞೆಯೆಂದು ಭಾವಿಸಿ ಆನಂದದಿಂದ ಮಾಡುವೆನು. ಈ ದೇಹವನ್ನೇ ಬೇಕಾದರೂ ಅರ್ಪಿಸುವೆನು.

ಮಂಡೋದರಿ – ತಂಗಿ! ನನ್ನ ಅಂತಃಪುರದಲ್ಲಿರುವ ಸಮಸ್ತ ವಸ್ತುಗಳನ್ನೂ ನನ್ನ ಜ್ಞಾಪಕಾರ್ಥವಾಗಿ ನೀನು ಸ್ವೀಕರಿಸಿ ಆಯೋಧ್ಯೆಗೆ ತೆಗೆದುಕೊಂಡು ಹೋಗಬೇಕು. ಇದೇ ನನ್ನ ಕೊನೆಯ ಕೋರಿಕೆ.

ಸೀತಾದೇವಿ – (ಬಿಕ್ಕಿ ಬಿಕ್ಕಿ ಅಳುತ್ತ ಮಂಡೋದರಿ ಕಂಠವನ್ನಾಲಿಂಗಿಸಿ) ಅಕ್ಕ ! ನೀನು ಪ್ರೀತಿಮಯಿ. ವಿಶ್ವಪ್ರೇಮಿಯಾದ ದೇವಿ. ನಿನ್ನನ್ನು ಕಳೆದುಕೊಳ್ಳುವ ನಾವೆಲ್ಲರೂ ಹತಭಾಗ್ಯರು, ಅಯ್ಯೋ!

ಮಂಡೋದರಿ – (ಪ್ರಯತ್ನಪೂರ್ವಕವಾಗಿ ರಾವಣನ ಹೆಜ್ಜೆಯ ಮೇಲೆ ತಲೆಯನ್ನಿಟ್ಟು ಮತ್ತೆ ಕಷ್ಟದಿಂದ ತಲೆಯನ್ನು ಮೇಲಕ್ಕೆತ್ತಿ) ಇದೇ ಈ ದಿವ್ಯಪಾದಕ್ಕೆ ಕೊನೆಯ ವಂದನೆ. ಜನ್ಮಜನ್ಮಾಂತರಗಳಲ್ಲೂ ಆರ್ಯಪುತ್ರನೇ ನನಗೆ ಪತಿಯಾಗಲಿ! ಪುಣ್ಯವಿದ್ದರೆ ಲಂಕೆಯಲ್ಲೇ ನಮಗೆ ಜನ್ಮವಾಗಲಿ! (ರಾವಣನ ಪಾದಗಳ ಮೇಲೆ ತಲೆಯನ್ನೂರಿ ಸಂಕಟಪಡುವಳು)

ರಾವಣ – ಹೃದಯೇಶ್ವರಿ! ನಾನೇ ನಿನಗೆ ಮೃತ್ಯುವಾದೆನೇ! ಮಂಡೋದರೀ, ಮಂಡೋದರೀ, ನೀನು ನನ್ನ ಜೀವದ ಗೆಳತಿಯಾಗಿದ್ದೆ. ನನ್ನ ಹೃದಯದ ಬೆಳಕಾಗಿದ್ದೆ. ಜಗತ್ತಿಗೇ ಜೀವರತ್ನವಾಗಿದ್ದೆ. ಪಾಪಿ ರಾವಣನಿಂದ.....

ಮಂಡೋದರಿ – (ಅತಿ ಕಷ್ಟದಿಂದ ತಲೆಯನ್ನೆತ್ತಿ) ಆ....ರ್ಯ....ಪು ತ್ರ ಹಾಗೆನ್ನಬೇಡ, ನೀನೇ ನನ್ನ ಸರ್ವಸೌಭಾಗ್ಯ. ನಿನ್ನ ಸೇವೆಯಿಂದ... ನಾನು... ಧನ್ಯಳು... (ಬೀಳುವಳು)

ಸೀತಾದೇವಿ – (ಕಂಬನಿದುಂಬಿ ಮಂಡೋದರಿಯನ್ನಾಲಿಂಗಿಸಿ) ಅಕ್ಕಾ! ನನ್ನನ್ನು ಬಿಟ್ಟು ಎಲ್ಲಿಗೆ ಹೋಗುವೆ?

ಮಂಡೋದರಿ – (ಮಾತನಾಡಲು ಯತ್ನಿಸಿ ಸಂಕಟದಿಂದ) ತಂಗಿ ! (ಮುಂದೆ ಮಾತನಾಡಲು ಪ್ರಬಲವಾಗಿ ಪ್ರಯತ್ನಿಸಿ, ಸಾಧ್ಯವಿಲ್ಲದೆ ಪ್ರಾಣವನ್ನು ತ್ಯಜಿಸುವಳು).

ಸೀತಾದೇವಿ – (ಗದ್ಗದ ಸ್ವರದಪಿಂದ) ಲಂಕೆಯ ಅಮೃತಲತೆಯು ಒಣಗಿಹೋಯಿತು! ಭೂಮಿಯು ಇನ್ನು ಬಡವಾಯಿತು! ಅಯ್ಯೋ! ನನಗೆ ಏನನ್ನೋ ಹೇಳಬೇಕೆಂದಿದ್ದಳು. ಮಂಡೋದರೀದೇವಿಯ ಸ್ಮರಣೆಯಿಂದ ಮಹಾಪಾತಕವೂ ನಾಶವಾಗುವುದು. ಸ್ತ್ರೀಜಾತಿಯ ಆದರ್ಶಕುಸುಮವು ಮಾಯವಾಯಿತು. ಸೂರ್ಯಚಂದ್ರರಿದ್ದು ಇನ್ನು ಕತ್ತಲೆಯೇ. ಪ್ರಪಂಚದ ಬೆಳಕು ಮುಳುಗಿಹೋಯಿತು. ಅಯ್ಯೋ!

ರಾವಣ – (ಬಹು ಸಂಕಟದಿಂದ) ವತ್ಸ! ವಿ... ಭೀ... ಷ... ಣ... ನಿನಗೆ... ಮಂ... ಗ... ಳ, (ಮುಂದೆ ಮಾತು ಹೊರಡದೆ ಸಂಕಟಪಡುವನು. ಮಂಡೋದರಿಯ ಕಡೆಗೆ ದೃಷ್ಟಿಸಿ ನೋಡುತ್ತ ಕಂಬನಿದುಂಬುವನು)

ವಿಭೀಷಣ – ಅಣ್ಣ ! ಅಣ್ಣ ! ಈ ಸಂಕಟವನ್ನು ಹೇಗೆ ನೋಡಲಿ?

ರಾವಣ – ಧರ್ಮ ನಾನು ನಂ... ಬ... ಲಿ... ಲ್ಲ... ನೀನು... ನಂ... ಬು... ಮಂ... ಗ... ಳ (ರಾವಣನು ಅಂತರಿಕ್ಷದ ಕಡೆಗೆ ಕೈಮುಗಿದು ತನ್ನ ಹಣೆಯನ್ನು ಎರಡು ಸಾರಿ ಮುಟ್ಟಿ ತೋರಿಸಿ ಸಂಕಟದಿಂದ ಮೃತಪಡುವನು)

(ತೆರೆಯು ಬೀಳುವುದು)

**ಶಬ್ದಗಳ ಅರ್ಥ:**

ಅನರ್ಘ್ಯ – ಶ್ರೇಷ್ಠ; ಚೈತನ್ಯ – ಶಕ್ತಿ; ಬಿರುನುಡಿ – ಸಿಟ್ಟಿನ ಮಾತುಗಳು; ಸಾತ್ವಿಕ ಪ್ರೇಮ – ನಿಜ ಪ್ರೇಮ; ತ್ರಾಣ – ಪ್ರಾಣ

ಮೂಲಿಕಾ = ಗಿಡ ಮೂಲಿಕೆಗಳಿಂದ ತಯಾರಿಸಿದ ಭೌಷದ, ಆಲಿಂಗಿಸು = ಅಪ್ಪಿಕೊಳ್ಳು, ಸಾತ್ವಿಕ = ಪವಿತ್ರ, ಯಾಚನೆ = ಕೇಳಿಕೊಳ್ಳು.

**ವಿಶೇಷ ವಿಚಾರ :**

ಪಂಚ ಮಹಾಪತಿ ವ್ರತೆಯರು :- ಅಹಲ್ಯಾ, ತಾರಾ, ಮಂಡೋದರಿ, ದ್ರೌಪದಿ, ಸೀತಾ ಮಾತೆ.

**ಕೃತಿ 1) ಕೆಳಗಿನ ಶಬ್ದ ರಿಂಗಣದಿಂದ ಅಕ್ಷರಗಳನ್ನು ಆಯ್ದು ರಾಮಾಯಣದಲ್ಲಿ ಬರುವ ನಾಲ್ಕು ಹೆಸರುಗಳನ್ನು ಬರೆಯಿರಿ.**

ರಾ

ದೇ ಸೀ ಭೀ

ಮಂ ಣ ರಿ ಷ ಡೋ

ಚಂ ವಿ ತಾ ವ

ದ್ರ ಮ ದ

**ಕೃತಿ 2) ಈ ಕೆಳಗಿನ ಹೇಳಿಕೆಗಳು ಸರಿಯೋ ತಪ್ಪೋ ಎಂಬುದನ್ನು ತಿಳಿಸಿರಿ.**

1) ವಿಭೀಷಣ ಅಣ್ಣ ಶ್ರೀರಾಮ ಚಂದ್ರ.

2) ರಾಮನು ಲಂಕಾದ ಅಧಿಪತಿಯಾಗಿದ್ದನು.

3) ಸೀತೆಯು ರಾಮನ ಪತ್ನಿಯಾಗಿದ್ದಳು.

4) ರಾವಣನ ತಮ್ಮ ವಿಭೀಷಣ.

**ಕೃತಿ 3) ಕೆಳಗಿನ ಶಬ್ದಗಳನ್ನು ಹೊಂದಿಸಿ ಅರ್ಥಗರ್ಭಿತವಾದ ವಾಕ್ಯ ಬರೆಯಿರಿ.**

1) ಬಂದಿತು ಮುಗಿಯುತ್ತ ಕಥೆಯು ನನ್ನ! ನೀನು ಚೈತನ್ಯವೇ ಜೀವನದ ನನ್ನ.

2) ವಜ್ರ ಹೃದಯ ನಿಜವಾಗಿಯೂ ಮಾತೆ! ಮಾತೆ! ನನ್ನದು.

3) ವಿಭೀಷಣ ನಿನ್ನ ಬಿರುನುಡಿಗಳನ್ನು ಆಡಿಸುವೆನು ವಿಷಯದಲ್ಲಿ ನಾನು ಕ್ಷಮಿಸು.

4) ಮಾತೆ! ನೀನು ಸತ್ತವರು ಸತ್ತು ನಾವು ಬದುಕಿ ಬದುಕುವವಳು.

**ಕೃತಿ 4) ಮಂಡೋದರಿಯ ಒಳ್ಳೆಯ ಗುಣಗಳನ್ನು ಬರೆಯಿರಿ.**

**ಕೃತಿ 5) ಕೆಳಗಿನ ಸುಳಿವುಗಳಿಗೆ ಹೊಂದುವ ಸರಿಯಾದ ಅಕ್ಷರಗಳನ್ನು ಖಾಲಿ ಚೌಕೋನಗಳಲ್ಲಿ ತುಂಬಿರಿ.**

| | | | | |
|---|---|---|---|---|
| 1) ಶ್ರೀ ರಾಮನ ಪತ್ನಿ | | | ದೇ | |
| 2) ರಾವಣನ ಪತ್ನಿ | | | | ರಿ |
| 3) ರಾಮನ ಭಕ್ತ | | | ನೇ | |
| 4) ರಾವಣನ ತಮ್ಮ | | | | ಣ |

**ಕೃತಿ 6) ತತ್ಸಮ - ತದ್ಭವ ಬರೆಯಿರಿ.**

ಪ್ರಾಣ, ಪ್ರೀತಿ

**ಉಪಸರ್ಗಯುಕ್ತ ಪದಗಳು**

ನಾಥ, ಯತ್ನ

# 9. ಪಂಜರಪರೀಕ್ಷೆ

**– ಕೆಂಪುನಾರಾಯಣ**

**ಲೇಖಕರ ಪರಿಚಯ :** ಇಲ್ಲಿಯ ' ಪಂಜರಪರೀಕ್ಷೆ' ಎಂಬ ಭಾಗವನ್ನು ಕೆಂಪುನಾರಾಯಣ ಕವಿಯ 'ಮುದ್ರಾಮಂಜೂಷ'ವೆಂಬ ಗದ್ಯಕಾವ್ಯದಿಂದ ಎತ್ತಿಕೊಂಡಿದೆ. ಈ ಕವಿಯು ಮುಮ್ಮಡಿ ಕೃಷ್ಣರಾಜರ (1764–1868) ಆಶ್ರಯದಲ್ಲಿದ್ದನು. ವಿಶಾಖದತ್ತನೆಂಬ ಕವಿ ಸಂಸ್ಕೃತದಲ್ಲಿ ಬರೆದಿರುವ 'ಮುದ್ರಾರಾಕ್ಷಸ' ಎಂಬ ನಾಟಕ ಈತನ ಗ್ರಂಥಕ್ಕೆ ಆಧಾರ. ಆಧುನಿಕ ಕಾದಂಬರಿಗಳು ಇನ್ನೂ ಹುಟ್ಟಿದಿದ್ದ ಕೆಂಪುನಾರಾಯಣನ ಕಾಲದಲ್ಲಿ, ಕಾದಂಬರಿಯನ್ನು ಹೋಲುವ ಮುದ್ರಾಮಂಜೂಷವು ಅತ್ಯಂತ ಜನಪ್ರಿಯವಾದುದು ಸಹಜವಾಗಿಯೇ ಇದೆ. ರಾಜತಂತ್ರ ನಿಪುಣನಾದ ಚಾಣಕ್ಯನು ಮದಾಂಧರಾದ ನವನಂದರನ್ನು ಸಂಹರಿಸಿ. ಮೌರ್ಯನಾದ ಚಂದ್ರಗುಪ್ತನನ್ನು ಪಟ್ಟಕ್ಕೇರಿಸಿದುದು ಈ ಕತೆಯ ತಿರುಳು. ಕೆಂಪುನಾರಾಯಣನ ಗದ್ಯ ಪ್ರೌಢವಾಗಿದ್ದರೂ ಲಲಿತವಾಗಿದೆ, ಶಕ್ತಿಯುತವಾಗಿದೆ. ಗದ್ಯಸಾಹಿತ್ಯದ ಬೆಳವಣಿಗೆಯಲ್ಲಿ ಈ ಗ್ರಂಥದ ಪಾತ್ರವು ಗಮನಾರ್ಹವಾದುದು.

ಪಾಟಲೀಪುರದ ಸರ್ವಾರ್ಥಸಿದ್ಧಿ ರಾಯನಿಗೆ ಇಬ್ಬರು ಹೆಂಡತಿಯರು. ಇವರಲ್ಲಿ ಪಟ್ಟದ ರಾಣಿಯಲ್ಲಿ ಜನಿಸಿದವರು ನವನಂದರು. ಪ್ರೇಮದ ಮಡದಿ ಮುರೆಯಿಂದ ಜನಿಸಿದವರು ಚಂದ್ರಗುಪ್ತನೇ ಮೊದಲಾದ ನೂರ್ವರು ಮಕ್ಕಳು. ಶೂರವಾದ ಈ ಮೌರ್ಯರನ್ನು ನಾಶ ಮಾಡುವುದಕ್ಕಾಗಿ ನವನಂದರು ಅವರನ್ನು ನೆಲಮಾಳಿಗೆಯಲ್ಲಿ ಸೆರೆಹಾಕಿದರು. ಸಾಕಷ್ಟು ಆಹಾರವಿಲ್ಲದೆ ಅವರೆಲ್ಲ ಸತ್ತುಹೋದರು. ಚಂದ್ರಗುಪ್ತನೊಬ್ಬನು ಮಾತ್ರ ಅರೆಜೀವವಾಗಿ ಉಳಿದುಕೊಂಡಿದ್ದನು. ಈ ಸನ್ನಿವೇಶದಲ್ಲಿ ಪರ್ವತರಾಜನು ಪಾಟಲೀಪುರದವರ ಬುದ್ಧಿಶಕ್ತಿಯನ್ನು ಪರೀಕ್ಷಿಸುವುದಕ್ಕಾಗಿ, ಅಖಂಡವಾದ ಪಂಜರದಲ್ಲಿ ಜೀವಸಿಂಹದಂತೆ ಕಾಣುವ ಕಪಟಸಿಂಹವೊಂದನ್ನು ಶಿಲ್ಪಿಗಳಿಂದ ಮಾಡಿಸಿ, ಅದನ್ನು ತಕ್ಕ ರಕ್ಷಕರೊಡನೆ ಪಾಟಲೀಪುರಕ್ಕೆ ಕಳುಹಿಸಿಕೊಟ್ಟನು. ಈ ಸಿಂಹವನ್ನು ಜೀವಂತವಾಗಿ ಹೊರಕ್ಕೆ ತೆಗೆಯುವ ಜಾಣರಾರಾದರೂ ಇರುವರೇ ಎಂದು ಊರಿನಲ್ಲಿ ಆರಕ್ಷಕರು ಸಾರುತ್ತಾ ಬಂದರು. ಅದರ ಮರ್ಮ ಯಾರಿಗೂ ಗೊತ್ತಿರಲಿಲ್ಲ ಕೇವಲ ಚಂದ್ರ ಗುಪ್ತನಿಗೆ ಮಾತ್ರ ಗೊತ್ತಿತ್ತು.

---

ಪಂಜರದವರು ಕೆಲವು ದಿವಸಗಳ ಮೇಲೆ ಪಾಟಲೀಪುರಕ್ಕೆ ಬಂದು. ಆಸ್ಥಾನದ ಬಳಿಯಲ್ಲಿ ಆ ಪಂಜರವನ್ನಿಳುಹಿ ವಾದ್ಯಸಮೇತವಾಗಿ – ಈ ಪುರದಲ್ಲಿ ಯಾರಾದರೂ ಜಾಣರಿದ್ದರೆ ಅಮಾನುಷಕೃತವಾದ ಈ ಪಂಜರವನ್ನು ಭೇದಿಸದೆ ಇದರಲ್ಲಿರುವ ಸಿಂಹವನ್ನು ಜೀವಸಹಿತವಾಗಿ ಹೊರಗೆ ತೆಗೆಯುವವರಾಗಲಿ. ಅಂಥವರು ಇಲ್ಲದಿದ್ದರೆ ಈಗ ನೋಡಿದ ದೇಶಗಳ ಜನದಂತೆ ನಮಗೆ ಸನ್ಮಾನಮಂ ಮಾಡಿ ಮುಂದಕ್ಕೆ ಅಪ್ಪಣೆಯಂ ಕೊಡುವವರಾಗಲಿ ಎಂದು ಭುಜಗಳನ್ನೆತ್ತಿಕೊಂಡು ಸಾರುತ್ತಿರಲು. ಆ ವಾಕ್ಯಮಂ ಕೇಳಿ ಪುರದ ಜನರೆಲ್ಲಾ ನೆರೆದು ನೋಡಿ ಅದರ ರಹಸ್ಯಮಂ ತಿಳಿಯಲಾರದೆ ಹೋಗುತ್ತಿದ್ದರು. ಆಗ ಅದು ಕಂಡು ರಾಜಭಟರು ಆಸ್ಥಾನದಲ್ಲಿ ಕುಳಿತಿರ್ದ ನಂದರಿಗೆ :–

ಜೀಯಾ, ಕೆಲವು ಜನರು ಅಖಂಡವಾದ ಪಂಜರದಲ್ಲಿ ಜೀವಸಿಂಹವಂ ಕೂಡಿಕೊಂಡು ದೇಶಾಂತರದಿಂದ ಇಲ್ಲಿಗೆ ಬಂದು ಆಸ್ಥಾನದ ಬಳಿಯಲ್ಲಿ ಅದನ್ನು ಇಳುಹಿ – ಈ ಊರಲ್ಲಿ ಪ್ರೌಢರಿದ್ದರೆ ಪಂಜರಮಂ ಖಂಡಿಸದೆ ಸಿಂಹವನ್ನು ಜೀವಸಹಿತವಾಗಿ ಹೊರಗೆ ತೆಗೆಯತಕ್ಕದೆಂದು ಸಾರಿ ಹೇಳುತ್ತಿರುವುದನ್ನು. ಈ ಊರಲ್ಲಿರುವ ಜನರೆಲ್ಲಾ ಕೇಳಿ ಬಂದು ಆ ಪಂಜರಮಂ ನೋಡಿ ಅದರ ವಿವರಮ ತಿಳಿಯಲಾರದೆ ಸುಮ್ಮನೆ ಹಿಂದಿರುಗಿ ಹೋದರಲ್ಲದೆ ಅದರ ಪರೀಕ್ಷಕರು ಒಬ್ಬರೂ ಕಾಣಲಿಲ್ಲವೆಂದು ತಿಳಿಸಲು, ನಂದರು ಅದಂ ಕೇಳಿ ತಮ್ಮ ಮಂತ್ರಿಗಳೆಲ್ಲಾ ಹೋಗಿ ನೋಡಿ ಬರಲಿ ಎಂದು ಆಜ್ಞಾಪಿಸಿದರು. ಆ ಪ್ರಕಾರವೇ ಅಮಾತ್ಯ ರಾಕ್ಷಸನೊಬ್ಬನ ಹೊರತು ಮಿಕ್ಕವರೆಲ್ಲರೂ ಆ ಪಂಜರದ ಬಳಿಗೆ ಹೋಗಿ ನೋಡಿ ಅದರ ವಿವರವು ತಮಗೂ ತಿಳಿಯದೆ ಸುಮ್ಮನೆ ಹಿಂದಿರುಗಿ ಬಂದು ನಂದರ ಬಳಿಯಲ್ಲಿ ನಿಂತರು. ಆಗ ಅಮಾತ್ಯ ರಾಕ್ಷಸನು ನಂತರಂ ಕುರಿತು :–

ಅಯ್ಯಾ, ರಾಜಕುಮಾರರುಗಳಿರಾ. ಸಿಂಹಮೇತವಾದ ಪಂಜರವು ಅಮಾನುಷಕೃತವಾಗದು. ಮತ್ತೇನಂದರೆ ಇದು ನಮ್ಮೆಲ್ಲರ ಬುದ್ಧಿ ಪರೀಕ್ಷಾರ್ಥವಾಗಿ ಕಪಟಿಗಳಾದ ಪರರಾಜರು ನಿರ್ಮಿಸಿ ಕಳಿಸಿರುವ

ಕಪಟಶಿಲ್ಪವೆಂದು ತೋರುತ್ತಿದೆ. ಆಗಲಿ, ಈ ಪುರದ ಜನರು ಇನ್ನೂ ಬಹಳವಾಗಿ ಇರುವರು. ಯಾರಲ್ಲಿ ಬುದ್ಧಿ ಕೌಶಲ್ಯವು ಹೇಗಿರುವುದೋ? ನಮ್ಮ ಭಟರುಗಳು ಹೋಗಿ ರಾಜಬೀದಿಗಳಲ್ಲಿ ಸಾರುತ್ತಾ ಬರಲಿ. ಅದರ ಪರೀಕ್ಷಕರು ಯಾರಾದರೂ ದೊರೆತಾರು. ಎಲ್ಲರೂ ನೋಡಿದ ಬಳಿಕ ಆ ಪಂಜರವಂ ತರಿಸಿ ನಾವೇ ನೋಡೋಣ ಎಂದು ಹೇಳಿ ದೂತರ ಮುಖವನ್ನು ನೋಡಿ– ಎಲೈ, ಇದರ ಪರೀಕ್ಷಕರು ಈ ಪಟ್ಟಣದಲ್ಲಿ ಇದ್ದರೆ ಅವರಿಗೆ ರಾಜ ಸನ್ಮಾನವು ಆದೀತೆಂದು ನೀವು ಸಾರುತ್ತಾ ಇರುವಾಗ ಯಾರಾದರೂ ದೊರೆತರೆ ಅವರನ್ನು ಕರಕೊಂಡುಬನ್ನಿರಿ ಎಂದು ಆಜ್ಞಾಪಿಸಲಾಗಿ, ಅದೇ ಪ್ರಕಾರ ಅವರು ರಾಜಬೀದಿಯಲ್ಲಿ ಕೂಗುತ್ತ ಬರುತ್ತಿರಲು ಸೆರೆಮನೆಯ ಬಾಗಿಲಲ್ಲಿ ನಿಂತಿದ್ದ ಚಂದ್ರಗುಪ್ತನು ಆ ದೂತರಂ ಕರೆದು :–

ಎಲೈ ದೂತರುಗಳಿರಾ, ಈ ಪಟ್ಟಣದಲ್ಲಿ ಆ ಪಂಜರಪರೀಕ್ಷಕರು ಯಾರೂ ದೊರಕಲಿಲ್ಲವೇ? ಎಂದು ಹೇಳಿದಾಗ್ಯೂ ಆ ದೂತರು ಆತನಿಗೆ ಪ್ರತ್ಯುತ್ತರವಂ ಹೇಳದೆ ಪುನಃ ನಂದರ ಸನ್ನಿಧಿಗೈದಿ ಕೈಮುಗಿದು :–

ಬುದ್ಧೀ ಅಪ್ಪಣೆಯ ಮೇರೆಗೆ ಪಟ್ಟಣದಲ್ಲೆಲ್ಲಾ ಸಾರಿದೆವು. ಈ ಪುರದ  ಆಬಾಲವೃದ್ಧರೆಲ್ಲರೂ ಬಂದು ನೋಡಿ ಒಬ್ಬರಿಗೂ ಅದರ ಪರೀಕ್ಷೆ ತಿಳಿಯದೆ ಇದು ಅಮಾನುಷಕೃತವೇ ಸರಿ ಎಂದು ಹೇಳಿಕೊಂಡು ಹೋದರೆಂದು ಬಿನ್ನವಿಸಲು, ನಂದರು ಆಶ್ಚರ್ಯಪಟ್ಟು ತಾವೇ ಆ ಪಂಜರಮಂತರಿಸಿ. ನೋಡಿ ತಮಗೂ ಅದರ ವಿವರ ತಿಳಿಯದೆ ಪುನಃ ಆ ದೂತರಂ ಕುರಿತು – ಇಂಥಾ ದೊಡ್ಡದಾದ ಪಟ್ಟಣದಲ್ಲಿ ಇದರ ಪರೀಕ್ಷಕರು ಯಾರೂ ಇಲ್ಲದೆ ಹೋದರೇ? ಎಂದು ಕೇಳಲಾಗಿ ಸ್ವಾಮೀ. ಯಾರೂ ಇಲ್ಲ. ಅವನಾರೋ ಕಾರಾಗೃಹದ ಬಾಗಿಲಲ್ಲಿ ನಿಂತಿದ್ದ ನಮ್ಮನ್ನು ಕುರಿತು – ಈ ಊರಲ್ಲಿ ಅದರ ಪರೀಕ್ಷಕರು ದೊರಕಲಿಲ್ಲವೇ? ಎಂದು ಕೇಳಿದನಲ್ಲದೆ ಮತ್ತಾರೂ ಹೀಗೆ ಹಾಗೆ ಎಂಬುದಾಗಿ ಕೇಳಲಿಲ್ಲವೆಂದು ಬಿನ್ನೈಸಿದರು.

ಆ ಮಾತಿಗೆ ನಂದರು – ಅವನು ಬಲ್ಲವನಾಗಿರಬೇಕು. ಅದರ ಪರೀಕ್ಷೆಯಂ ಅವನು ತಿಳಿದು ಹೇಳಿದರೆ ಕಾರಾಗೃಹದಿಂದ ತಾನು ಬಿಡಿಸಲ್ಪಟ್ಟು ವಿಶೇಷ ಸನ್ಮಾನಕ್ಕೆ ಪಾತ್ರನಾಗುವನು. ಅವನಂ ಕರೆದುಕೊಂಡು ಬನ್ನಿರಿ ಎನ್ನಲು, ಅಪ್ಪಣೆ ಎಂದು ಭಟರು ಅಲ್ಲಿಗೆ ಹೋಗಿ ಸೆರೆಮನೆಯಲ್ಲಿರುವ ಚಂದ್ರಗುಪ್ತನಂ ಕಂಡು ಮಹಾರಾಜರ ಅಪ್ಪಣೆಯಾಗಿದೆ. ಪಂಜರಪರೀಕ್ಷೆಯಂ ಮಾಡುವುದಕ್ಕೆ ಬನ್ನಿರಿ ಎಂಬುದಾಗಿ ಕರೆಯಲು. ಅವರ ಮಾತಿಗೆ – ಒಳ್ಳೆಯದು ಎಂದು ಚಂದ್ರಗುಪ್ತನು ಬರುತ್ತಿದ್ದನು. ಅಷ್ಟರೊಳಗೆ ರಾಕ್ಷಸನು ದೂರದಿಂದಲೇ ಆ ಪಂಜರವನ್ನು ನೋಡಿ ತನ್ನ ಮನಸ್ಸಿನಲ್ಲಿ ಆಲೋಚಿಸುತ್ತ :–

ನಾನು ಈಗಲೇ ಇದನ್ನು ನೋಡಿ ಇದರ ಪರೀಕ್ಷೆಯು ನನ್ನಿಂದ ಆಗದೆ ಹೋಗಿ ಆಮೇಲೆ ಮತ್ತೊಬ್ಬನು ಬಂದು ತಿಳಿದು ಹೇಳಿದರೆ ಆಗ ನನಗೆ ಬಹಳ ಅವಮಾನ ಉಂಟಾಗುವುದು. ಆದಕಾರಣ ಈ ಗ ಹೋಗಿ ನೋಡುವುದು ಯುಕ್ತವಲ್ಲ. ಪ್ರಕೃತದಲ್ಲಿ ಯಾವನೋ ಕಾರಾಗೃಹದಿಂದ ಬರುತ್ತಾನಷ್ಟೆ! ಅವನು ಬಂದು ನೋಡಿ ತಿಳಿದು ಅದರ ಪರೀಕ್ಷೆಯಂ ಮಾಡಿ ಸನ್ಮಾನಿತನಾಗಿ ಹೋದರೆ ಹೋಗಲಿ. ಅದು ಅವನಿಂದಲೂ ಆಗದ ಪಕ್ಷಕ್ಕೆ ಆಮೇಲೆ ನಾನು ಹೋಗಿ ತಿಳಿದು ಹೇಳಿದರೆ ವಿಶೇಷ ಬಹುಮಾನ ಉಂಟಾಗುವುದು. ತಿಳಿಯದ ಪಕ್ಷದಲ್ಲಿ ಎಲ್ಲರಂತೆ ನಾನೂ ಆಗುವೆನು ಹೊರತು ಅಪಮಾನ ಬೇರೆ ಇಲ್ಲವೆಂದು ನಿಶ್ಚಯಿಸಿ ಸುಮ್ಮನೆ ಇದ್ದನು. ಅಷ್ಟರಲ್ಲೇ ನಂದರು ಮತ್ತೊಂದು ಸ್ಥಾನಕ್ಕೆ ಹೋದರು.

ಆಗ ಚಂದ್ರಗುಪ್ತನು ಬಂದು ಆ ಪಂಜರವಂ ನೋಡಿ ತನ್ನೊಳಗೆ, ಈ ಪಂಜರವು ಅಖಂಡವಾದ ಎರಕವಾಗಿದೆ. ಇದರಲ್ಲಿರುವ ಸಿಂಹವು ಪೋಷಕನು ಕೊಟ್ಟ ಮಾಂಸಕ್ಕೆ ಎರಗುತ್ತ ಹೊರಗಡೆಯಲ್ಲಿ ಅವನು ಪಂಜರವಂ ಬಳಸಿ ಬಂದರೆ ಅವನು ಬಂದ ಕಡೆಯಲ್ಲೆಲ್ಲಾ ಮಾಂಸಾಪೇಕ್ಷೆಯಿಂದ ಒಳಗೆ ತಾನೂ ಬಳಸಿ ಬರುತ್ತಿದೆ.

ಪಂಜರವು ಅಖಂಡವಾಗಿಯೂ, ಒಳಗಿನ ಸಿಂಹವು ಮಾಂಸಾಭಿಲಾಷಿಯಾಗಿಯೂ ಇರುವುದರಿಂದ ಇದು ಮಾನುಷಕೃತವೆಂದು ಹೇಳುವುದಕ್ಕೆ ಆಸ್ಪದವಾಯಿತು ಎಂದು ಯೋಚಿಸಿ. ಅದರ ರಕ್ಷಕರು ಮಾಂಸಕೊಡುವುದನ್ನೂ, ಆ ಸಿಂಹವು ಗ್ರಹಿಸುವುದನ್ನೂ ನೋಡಿ ಅದರ ಭಾವವಂ ತನ್ನ ಮನಸ್ಸಿಗೆ ತಂದುಕೊಂಡು, ಸಮೀಪದಲ್ಲಿದ್ದ ರಾಜಭಟನಿಗೆ ಹೇಳಿ ಮಾಂಸಖಂಡವಂ ತರಿಸಿ ಅವರಂತೆ ತಾನೂ ಅದು ಸಿಂಹಕ್ಕೆ ನೀಡಿ ಕೊಡಲಾಗಿ, ಆ ಸಿಂಹವು ಆ ಮಾಂಸಾಭಿಮುಖವಾಗದೆ ಸುಮ್ಮನೆ ಇರಲು, ಆ ಪಂಜರರಕ್ಷಕರಂ ನೋಡಿ –

ಏನಿರೈ, ನಾನು ಕೊಟ್ಟ ಮಾಂಸವನ್ನು ಈ ಸಿಂಹವು ಏಕೆ ಗ್ರಹಿಸಲಿಲ್ಲ? ಎಂದು ಕೇಳಲು ಆ ಮಾತಿಗೆ ಪಂಜರರಕ್ಷಕರು ತಮ್ಮ ಮನದಲ್ಲಿ ಆತಂಕಪಡುತ್ತ :–

ಅಯ್ಯಾ, ನೋಟಕರೇ, ಸಿಂಹವು ಅಮಾನುಷಕೃತವಾದುದರಿಂದ ತನ್ನ ಉಪಾಸಕರ ಹಸ್ತಾಹಾರವಂ ಗ್ರಹಿಸುವುದಲ್ಲದೆ ಅನ್ಯರಂ ಭಾವಿಸುವುದುಂಟೆ? ಎಂದು ಕಪಟೋಕ್ತಿಯಂ ನುಡಿಯಲು, ಚಂದ್ರಗುಪ್ತನು – ಇದು ಅಪಲಾಪವಾಕ್ಯವೆಂದು ತಿಳಿದು ಪುನಃ ಯೋಚಿಸುತ್ತ :–

ಈ ಪಂಜರವು ಅಖಂಡವಾದುದರಿಂದ ಇದರೊಳಗೆ ಜೀವಸಿಂಹವು ಹೇಗೆ ಹೋಗುವುದು? ಈ ಪಂಜರರಕ್ಷಕನು ಪಂಜರವಂ ಬಳಸಿ ಬರುತ್ತಿದ್ದರೆ ಈ ಸಿಂಹ ಮಾಂಸವಂ ಕೊಡುವವನಲ್ಲಿ ಮಾಂಸಾಭಿಲಾಷೆಯಿಂದಲೋ ಎಂಬಂತೆ ಅವನು ಬಂದ ಕಡೆಗೆ ತಾನೂ ತಿರುಗುತ್ತಿರುವುದರಿಂದಲೂ, ಅವನು ದೂರಸ್ಥನಾದರೆ ತಿರುಗುವ ಆಯಾಸದಿಂದಲೋ ಎಂಬುವ ಹಾಗೆ ಕಂಠವನ್ನಲುಗಿಸುತ್ತ ಶ್ವಾಸವನ್ನು ಬಿಡುವಂತೆ ಇರುವುದರಿಂದಲೂ, ಪಂಜರರಕ್ಷಕನು ನೀಡಿ ಕೊಟ್ಟ ಮಾಂಸದಲ್ಲಿ ಆಸಕ್ತಿಯಿಂದಲೋ ಎಂಬಂತೆ ಬಾಲದ ತುದಿಯು ತಲೆಯಲ್ಲಿ ಕುಣಿಸುತ್ತ ಮಾಂಸವಂ ಕಚ್ಚುವುದರಿಂದಲೂ ಜೀವಸಿಂಹವೇ ಸರಿಯೆಂದು ತೋರುತ್ತಿದೆ. ಹೀಗಿದ್ದರೂ ಇದು ಜೀವಸಿಂಹವಾಗಲಾರದು. ಇದು ಅರಗು, ಮೇಣ ಈ ಮುಖ್ಯವಾದ ಸರಿಗಳಿಂ ತೊಡೆಯಲ್ಪಟ್ಟ ಬಟ್ಟೆಗೆ ಸಿಂಹದ ರೋಮಗಳಂ ಹತ್ತಿಸಿ ಅದು ಚರ್ಮದಂತೆ ಮಾಡಿ ಹೊರಗಿದ್ದ ಪುರುಷನ ಕೌಶಲ್ಯದಿಂದ ಮಾಂಸವಂ ಕೊಡುವ ರಂಧ್ರಮುಖವಂ ಹಿಡಿದು ಅದರ ಅಸ್ಥಿಸ್ಥಾನಕ್ಕೆ ಕಬ್ಬಿಣದ ಸಲಾಕಿಗಳಂ ಜೋಡಿಸಿ, ಬಾಲ ಕತ್ತುಗಳಿಗೆ ರೋಮಸಹಿತವಾದ ಉಕ್ಕಿನ ತಂತಿಗಳಂ ಜೊತೆಗೊಳಿಸಿ ಅಲ್ಲಿಗಲ್ಲಿಗೆ ಬಣ್ಣವಂ ಬರೆದು ಪೂರೈಸಿದ ಕೃತ್ರಿಮಸಿಂಹವಾಗಿರಬಹುದು. ಆದಾಗ್ಯೂ ಇನ್ನೊಂದು ಪರೀಕ್ಷೆಯಂ ಮಾಡುವೆನೆಂದು ದೂತರಂ ಕರೆದು ಅವರು ಆನೆಯ ಲಾಯಕ್ಕೆ ಕಳುಹಿಸಿ ಒಂದು ಮರಿಯಾನೆಯಂ ತರಿಸಿ ಅದರ ಕಣ್ಣುಗಳಂ ಕಟ್ಟಿಸಿ ಪಂಜರವಂ ಬಳಸಿ ಬರುವಂತೆ ಮಾಡಲು ಅದನ್ನು ನೋಡಿ ಆ ಸಿಂಹವು ಅರ್ಭಟಿಸದೇ ಇದ್ದುದರಿಂದ ಇದು ಕಪಟಿಸಿಂಹವೆಂದು ನಿಸ್ಸಂದೇಹವಾಗಿ ತಿಳಿದುದಲ್ಲದೆ ಆ ಸಿಂಹವು ಚಲಿಸುವುದಕ್ಕೂ. ಮಾಂಸಮಂ ಚುಚ್ಚಿಕೊಡುವುದಕ್ಕೂ ಸಾಧನವಾದ ಸಲಾಕಿಯಂ ಪಿಡಿದಿರುವ ಪಂಜರರಕ್ಷಕನಂ ನೋಡಿ – ಇದರ ತುದಿಯ ಮಾಂಸಕ್ಕೆ ಸಿಂಹವೆರಗಿ ಕಚ್ಚುವುದರಿಂದಲೂ, ಸಲಾಕಿಯಂ ಪಿಡಿದಿರುವ ಈ ಪುರುಷನು ತಿರುಗಿದ ಕಡೆಗೆಲ್ಲಾ ಒಳಗೆ ಈ ಸಿಂಹವು ತಾನೂ ತಿರುಗುವುದರಿಂದಲೂ ಈ ಕೈಸಲಾಕಿಯು ಸೂಜಿಗಲ್ಲಿನ ಸತ್ವದಿಂ ಮಾಡಿರಬೇಕು. ಕಬ್ಬಿಣವನ್ನು ಹಿಡಿಯುವ ಧರ್ಮವು ಸೂಜಿಗಲ್ಲಿನ ಸ್ವಭಾವವು ಎಂದು ನಿಶ್ಚಯಿಸಿ, ಆ ಪಂಜರರಕ್ಷನಂ ಕುರಿತು :–

ಅಯ್ಯಾ, ನೋಟಕರೇ. ಜನ್ಮಾರಭ್ಯ ಈ ಸಲಾಕಿಯ ತುದಿಯ ಮಾಂಸದಿಂದಲೇ ಬದುಕುವ ಈ ಸಿಂಹವು ಸಲಾಕಿಯಂ ಬಿಟ್ಟರೆ ಮಾಂಸದ ಆಸೆಯಂ ಬಿಟ್ಟು ಬರಿಗೈಯಿಂದಿರುವ ನನ್ನನ್ನು ನೋಡಿ ಪೋಷಕವಿಶ್ವಾಸಮಂ ತೊರೆದು ಸುಮ್ಮನಿರುವುದು, ಅದರಿಂದ ಸಲಾಕಿಯಂ ಬಿಡಕೂಡದು ಎಂದು ಹೇಳುವ ಪಂಜರರಕ್ಷಕನಂ ನೋಡಿ :–

ಎಲೈ, ಪ್ರಿಯನೆದುರಿಗೆ ವಿಲಾಸವಂ ತೋರುವ ಪ್ರೇಯಸಿಯಂತೆ ಸೂಜಿಗಲ್ಲಿನೆದುರಿಗೆ ಉಕ್ಕು, ಕಬ್ಬಿಣ, ಸಲಾಕಿ ಇವುಗಳ ಸಮೂಹದಿಂದ ಯುಕ್ತವಾದ ಈ ಕಪಟಸಿಂಹವು ಹಲವು ಪರಿಯಿಂ ಚಲಿಸುವುದು ಆಶ್ಚರ್ಯವೇನು? ಇದರಂತೆ ಅರಗು ಮೇಣಗಳು ಬೆಂಕಿಯ ಸೆಕೆಗೆ ಕರಗುವುದೆಂಬ ಅರ್ಥವು ಲೋಕಪ್ರಸಿದ್ಧವಲ್ಲವೇ? ಇನ್ನು ಈ ಕಪಟವಾಕ್ಯವಂ ಹೇಳುವುದನ್ನು ಸಾಕುಮಾಡು ಎಂದು ಚಂದ್ರಗುಪ್ತನು ಹೇಳಲಾಗಿ, ಆ ಮಾತನ್ನು ಕೇಳ ಪಂಜರರಕ್ಷಕರು ನಾಚಿಕೆಯಿಂದ ತಲೆವಾಗಿ ಕೈಮುಗಿದು. ತಾವು ಜಿತರಾದೆವೆಂದು ಹೇಳುತ್ತ ಸಲಾಕಿಯಂ ಚಂದ್ರಗುಪ್ತನಿಗೆ ಒಪ್ಪಿಸಲು :–

ಆಗ ಚಂದ್ರಗುಪ್ತನು ತನ್ನ ಮನಸ್ಸಿನಲ್ಲಿ – ಇಂಥ ಕಪಟಶಿಲ್ಪವಾದ ಪಂಜರವಂ ದೇಶಾಂತರದಿಂದ ಪ್ರಯತ್ನ ಪೂರ್ವಕವಾಗಿ ತಂದು ಈ ಆಸ್ಥಾನದ ಬಳಿಯಲ್ಲಿ ಇಳುಹಿ ಸಾರುವುದಕ್ಕೆ ನಿಮಿತ್ತವನ್ನು ಯೋಚಿಸಿದರೆ – ನಂದರು ಕಪಟೋಪಾಯದಿಂದ ಮೌರ್ಯರಂ ಸಿಂಹರಿಸಿದರೆಂಬ ವಾರ್ತೆಯು ದೇಶಾಂತರಗಳಲ್ಲಿ ಪ್ರಸಿದ್ಧವಾದುದರಿಂದ, ಅದು ಕೇಳಿ ಯಾರೋ ಪರರಾಜರು ಕಪಟಿಗಳಾದ ನಂದರ ವಿಡಂಬನಾರ್ಥವಾಗಿ ಅಶಕ್ಯವಾದ ಕಪಟಶಿಲ್ಪವಂ ರಚಿಸಿ ಅಲ್ಲಿನ ಜನರ ಬುದ್ಧಿ ಪರೀಕ್ಷಾರ್ಥವಾಗಿ ಕಳುಹಿಸಿದವರಾಗಿಬೇಕು. ಇದರಿಂದ ನಂದರಂ ನಿಂದಿಸುವ ಪರರಾಜರುಂಟಾಗಿರುವರು. ಆ ಕಪಟವು ಇಲ್ಲಿ ಬಯಲಾದುದರಿಂದ ಕಪಟಿಗಳಾದ ಪರರಾಜರು ದಂಡಿಸುವುದಕ್ಕೆ ಶಕ್ತನಾದ ಅಮಾತ್ಯರಾಕ್ಷಸನು ಅವರ ಮುಖಭಂಗವಂ ಮಾಡುವುದಕ್ಕೆ ಈ ಪಂಜರರಕ್ಷಕರು ಶಕ್ತನಾದ ಅಮಾತ್ಯರಾಕ್ಷಸನು ಅವರ ಮುಖಭಂಗವಂ ಮಾಡುವುದಕ್ಕೆ ಈ ಪಂಜರರಕ್ಷಕರು ಅಮಾನುಷಕೃತವೆಂದು ರಾಜಾಸ್ಥಾನದಲ್ಲಿ ಸುಳ್ಳು ಹೇಳಿದುದನ್ನೇ ಅಪರಾಧವಾಗಿ ಎಣಿಸಿ ಇವರಿಗೆ ದಂಡನೆಯಂ ಮಾಡಿಸುವನು. ಆದರೆ ಈ ಪಂಜರದ ನಿಮಿತ್ತವಾಗಿ ನನಗೆ ಬಂಧವಿಮೋಚನವಾಗುವುದೆಂದು ತೋರುತ್ತಿದೆ. ಆದುದರಿಂದ ಈ ದೂತರ ದೇಶವಂ ತಿಳಿದು ಇವರಂ ಈಗಲೇ ಇಲ್ಲಿಂದ ಚದರಿ ಹೋಗುವಂತೆ ಮಾಡಬೇಕು. ಈ ಜನಗಳ ಭೂಷಣಗಳನ್ನೂ. ಆಕಾರಗಳನ್ನೂ ನೋಡಿದರೆ ಪಾರ್ವತೇಯರಂತೆ ಕಾಣುವರೆಂದು ತನ್ನಲ್ಲಿ ನಿಶ್ಚಯಿಸಿ – ನಿಮ್ಮ ದೇಶ ಯಾವುದು? ಎಂದು ಕೇಳಲು :–

ಸ್ವಾಮಿ, ಗಟ್ಟ ಬೆಟ್ಟವಂ ಸೇರಿ, ಪರರಿಂ ಜೀವಿಸುತ್ತ ಕಾಡಿನ ಜೋಗಿಗಳಂತೆ ತಿರುಗುವವರಿಗೆ ಇಂಥಾ ದೇಶವೆಂದು ಹೇಗೆ ಹೇಳೋಣ? ಎಂದರು.

ಅದು ಕೇಳಿ ಚಂದ್ರಗುಪ್ತನು – ಇವರ ಮಾತಿನ ಗೂಢಾರ್ಥವನ್ನು ಯೋಚಿಸಿದರೆ ತಾವು ಪಾರ್ವತೇಯರೆಂದು ಸೂಚಿಸಿದಂತಾಯಿತು ಎಂದು ನಿಶ್ಚಯಿಸಿ. ಆ ದೂತರ ಮುಖವಂ ಚೆನ್ನಾಗಿ ನೋಡಿ ಈಗಲೇ ಹೊರಟುಹೋಗಿರೆಂದು ಕಣ್ಣುಸನ್ನೆಯಿಂದ ಸೂಚಿಸಿದನು.

ಅದು ತಿಳಿದು ಆ ಪಂಜರರಕ್ಷಕರು – ತಾವು ಇಲ್ಲಿದ್ದರೆ ತಮಗೇನೋ ತೊಂದರೆ ಸಂಭವಿಸುವ ಹಾಗಿದೆಯೆಂದೂ, ಇವನು ಚಂದ್ರಗುಪ್ತನಾಗಿರಬೇಕೆಂದೂ ನಿಶ್ಚಯಿಸಿ ಆ ಜನರ ಸಂದಣಿಯಲ್ಲಿ ತಮ್ಮ ಸಾಮಗ್ರಿಗಳಂ ಬಿಟ್ಟು ಬೈರಾಗಿಗಳ ವೇಷವನ್ನು ಧರಿಸಿ ಹೊರಟುಹೋದರು.

ಆಗ ಚಂದ್ರಗುಪ್ತನು ರಾಜಭಟರಂ ನೋಡಿ – ಈ ಸಿಂಹವು ಪರೀಕ್ಷಿತವಾಯಿತು. ಕೃತ್ರಿಮವಾದುದರಿಂದ ಇದು ಜಡಸಿಂಹವು. ಈ ಅರ್ಥವಂ ಪ್ರಭುಗಳಿಗೆ ಬಿನ್ನೈಸಿರಿ ಎಂದು ಹೇಳಲು. ಅದು ಕೇಳಿ ದೂತರು ಹೋಗಿ ಅಲ್ಲಿ ಚಂದ್ರಗುಪ್ತನಿಂದ ನಡೆದುದನ್ನೂ. ಆ ಪಂಜರ ರಕ್ಷಕರು ಜಿತರಾದೆವೆಂದು ಹೇಳಿದುದನ್ನೂ ನಂದರಿಗೆ ಅರುಹಲು, ಅವರು ಅಲ್ಲಿಗೆ ಬಂದು ಪಂಜರಪರೀಕ್ಷಕನಂ ನೋಡಿ ಚಂದ್ರಗುಪ್ತನೆಂದು ತಿಳಿದು –

ಎಲೈ ಚಂದ್ರಗುಪ್ತನೇ, ಇದು ಜಡಸಿಂಹವೆಂದು ನೀನು ತಿಳಿದ ಬಗೆ ಹೇಗೆ ? ಎನಲು ಬುದ್ಧೀ ಪರಾಂಬರಿಸಬೇಕೆಂದು ಬೆಂಕಿಯನ್ನು ಉರಿಮಾಡಿಸಿ ಅದರ ಸಮೀಪದಲ್ಲಿ ಆ ಪಂಜರವನ್ನು ಇರಿಸಿದ ಕೂಡಲೇ ಸಿಂಹದ ಮೇಲೆ ತೊಡೆದಿದ್ದ ಅರಗು, ಮೇಣಗಳು ಕರಗಿಹೋಗಿ ಅಚ್ಚಕಬ್ಬಿಣದ ಸಲಾಕಿಗಳು ಮಾತ್ರ ನಿಲ್ಲಲು, ನಂದರು ಆಶ್ಚರ್ಯಪಟ್ಟು ತಮ್ಮ ನಗರದಲ್ಲಿ ಪಂಜರಪರೀಕ್ಷೆ ಆಯಿತೆಂಬುದಲ್ಲಿ ಸಂತೋಷವೂ, ಅದು ಚಂದ್ರಗುಪ್ತನಿಂದ ಆದುದಕ್ಕಾಗಿ ಮಹಾಬುದ್ಧಿಶಾಲಿಯಾದ ಶತ್ರುವು ಉಳಿದನೆಂಬುದರಲ್ಲಿ ವ್ಯಸನವೂ ಉಂಟಾಗಿ ಇವೆರಡರಿಂದ ಆಕುಲಿತವಾದ ಹೃದಯ ಉಳ್ಳವರಾಗಿರಲು, ವೃದ್ಧಮಂತ್ರಿಯಾದ ವಕ್ರನಾಸನು ನಂದರಂ ನೋಡಿ :-

ಜೀಯಾ, ಯಾರಿಂದಲೂ ಶಕ್ಯವಾಗದ ಈ ಪಂಜರಪರೀಕ್ಷೆಯ ತಮ್ಮ ಮಗನಿಂದಲೇ ಆಯಿತೆಂದು ತಮ್ಮ ಕುಲಕ್ಕೆ ಲೋಕದಲ್ಲಿ ಬಹಳ ಖ್ಯಾತಿಯುಂಟಾಯಿತು. ಇಂಥಾ ಬುದ್ಧಿಶಾಲಿಯೂ. ನಿಮ್ಮ ಬಂಧುವೂ ಆಗಿರುವ ಇವನನ್ನು ಕಾರಾಗೃಹದಿಂದ ಬಿಡಿಸಿ ಯಥೋಚಿತಾಧಿಕಾರಮಂ ಕೊಡಿಸಿ ಸಂರಕ್ಷಿಸಿದರೆ ಮುಂದೆ ತಮ್ಮ ಕೆಲಸಕ್ಕೆ ಬಂದಾನು. ತಾವು ಸಭೆಯಲ್ಲಿ ನುಡಿದ ಮಾತೂ ಸತ್ಯವಾಗುವುದು, ಎನಲು ಅದಕ್ಕೆ ನಂದರು ತಮ್ಮ ಮನದಲ್ಲಿ – ಇವನು ಹೇಳಿದಂತೆ ಮಾಡಿದರೆ ಶತ್ರು ಶೇಷಮುಳಿಯುವುದು. ಮಾಡದಿದ್ದರೆ ನಂದರು ಆಡಿದ ಮಾತಿಗೆ ತಪ್ಪಿದರೆಂಬ ಜನಾಪವಾದಮುಂಟಾಗುವುದು ಎಂದು ಯೋಚಿಸುತ್ತಾ ಸುಮ್ಮನೆ ಇರಲು, ಸುಮತಿ ಎಂಬ ಮತ್ತೊಬ್ಬ ಮಂತ್ರಿಯು ತನ್ನ ಮನದಲ್ಲಿ :-

ಈ ನಂದರ ಮನಸ್ಸು ವೃದ್ಧಮಂತ್ರಿವಾಕ್ಯದಿಂದ ಅರ್ಧಾಂಗೀಕಾರವಾಗಿದೆ. ನಾನು ಇವರ ಮನೋನುಸಾರವಾಗಿ ಸದ್ಯಕ್ಕೆ ಇವರ ಮಾತು ಉಳಿಯುವಂತೆಯೂ, ಮುಂದೆ ಚಂದ್ರಗುಪ್ತನು ನಾಶವಾಗುವ ಸೂಚನೆಯು ತೋರುವಂತೆಯೂ ಹೇಳದಿದ್ದರೆ ಪುನಃ ಚಂದ್ರಗುಪ್ತನಿಗೆ ಕಾರಾಗೃಹವನ್ನೇ ನೇಮಿಸುವರು. 'ಈ ದುಷ್ಟರು ಯಾತಕ್ಕೂ ಹೆಸರೆಂದು ನಿಶ್ಚಯಿಸಿ ನಂದರಂ ಕುರಿತು :-

ಸ್ವಾಮೀ, ಈ ಚಂದ್ರಗುಪ್ತನನ್ನು ಕಾರಾಗೃಹದಿಂ ಬಿಡಿಸಿ ಅವನಿಗೆ ಇನ್ನಾವ ಅಧಿಕಾರವನ್ನೂ ಕೊಡಕೂಡದು. ಬ್ರಾಹ್ಮಣಭೋಜನದ ಅನ್ನಸತ್ರಾಧಿಕಾರವಂ ಕೊಡಿಸಬೇಕೆಂದು ಹೇಳಲಾಗಿ, ನಂದರು ಆ ಮಾತಿಗೆ ಇದರ ಅಭಿಪ್ರಾಯವೇನೆಂದು ರಾಕ್ಷಸನ ಮುಖವಂ ನೋಡಲು, ಆತನು ನಂದರಂ ಕುರಿತು ರಹಸ್ಯವಾಗಿ :-

ಎಲೈ ರಾಜಪುತ್ರರುಗಳಿರಾ, ಈ ಚಂದ್ರಗುಪ್ತನು ವೃದ್ಧರಾಜನ ಪೌತ್ರನಾದುದರಿಂದ ಆ ಸ್ವಲ್ಪಾಧಿಕಾರದಲ್ಲಿ ಉದಾಸೀನನಾಗಿ ಬ್ರಾಹ್ಮಣರ ಸಂತರ್ಪಣೆಯಂ ಚೆನ್ನಾಗಿ ವಿಚಾರಿಸದೇ ಹೋಗುವನು. ಆಗ ತಮಗೆ ಅಪವಾದವುಂಟಾಗದೆ ಬ್ರಾಹ್ಮಣರ ಶಾಪದಿಂದ ತಮ್ಮ ಶತ್ರುಶೇಷವು ಪರಿಹಾರವಾಗುವುದೆಂಬುವುದೇ ಸುಮತಿಯ ಮನೋಗತವು ಎಂದು ಹೇಳಿದನು. ಅದಕ್ಕೆ ನಂದರು ಸಮ್ಮತಿಪಟ್ಟು ಅದೇ ಪ್ರಕಾರವಾಗಿ ಚಂದ್ರಗುಪ್ತನಂ ಕಾರಾಗೃಹದಿಂ ಬಿಡಿಸಿ ಅನ್ನಸತ್ರಾಧಿಕಾರದೊಳ್ ನೇಮಿಸಿದರು.

ಆಗ ರಾಕ್ಷಸನು – ಪಂಜರರಕ್ಷಕರಂ ನಾವು ದಂಡಿಸದೆ ಇದ್ದರೆ ನಮ್ಮ ಅವಹೇಳನಾರ್ಥವಾಗಿ ಈ ಕಪಟಸಿಂಹವಂ ಕಳುಹಿಸಿದವರಿಗೆ ಮುಖಭಂಗವಾಗದೆಂದು ಅವರಂ ಕರೆತರುವುದಕ್ಕಾಗಿ ದೂತರಿಗೆ ನೇಮಿಸಲು, ಆ ದೂತರು ಅವರನ್ನು ಹುಡುಕಿ ಎಲ್ಲೂ ಕಾಣದೆ ಬಂದು ರಾಕ್ಷಸನಿಗೆ – ಅವರು ತಮ್ಮ ಸಾಮಗ್ರಿಗಳಂ ಬಿಟ್ಟು ಓಡಿಹೋಗಿರುವರು ಎಂದು ಹೇಳಲಾಗಿ ರಾಕ್ಷಸನು ತನ್ನ ಮನೆಗೆ ಹೋದನು.

ಆಗ ಚಂದ್ರಗುಪ್ತನು ಗಂಗಾನದಿಯಲ್ಲಿ ಸ್ನಾನವಂ ಮಾಡಿ ತಂದೆ ತಮ್ಮಂದಿರಿಗೆಲ್ಲಾ ತಿಲೋದಕವಂ ಕೊಟ್ಟು ಅನ್ನಸತ್ರಾಧಿಕಾರವಂ ಮಾಡಿಕೊಂಡಿದ್ದನು.

## ಶಬ್ದಗಳ ಅರ್ಥ:

ಕುಳಿತಿರ್ದ - ಕುಳಿತಿದ್ದ; ಅಮಾನುಷ - ಮನುಷ್ಯರಿಗೆ ಸಲ್ಲದ; ಬಿನ್ನೈಸಿ - ವಿನಂತಿಸಿ; ಯುಕ್ತವಾದ - ಸರಿಯಾದ; ತಲೆವಾಗಿ - ತಲೆಬಾಗಿ.

**ಕೃತಿ 1) ಗದ್ಯ ಪಾಠವನ್ನು ಓದಿಕೊಂಡು ಕೆಳಗಿನ ಸೂಚನೆಯಂತೆ ಕೃತಿಗಳನ್ನು ಬಿಡಿಸಿರಿ.**

**I) ಕೆಳಗಿನ ಜಾಲವನ್ನು ತುಂಬು**

**ಪಂಜರದವರು ಪುರಜನರನ್ನು ಉದ್ದೇಶಿಸಿ ಸಾರಿದ ನುಡಿಗಳು**

1.

2.

3.

4.

**II) ಅಮಾತ್ಯನ ಮನಸ್ಸಿನಲ್ಲಿ ಬಂದ ಯೋಚನೆಗಳು**

**III) ಕೆಳಗಿನ ವಾಕ್ಯಗಳಲ್ಲಿಯ ಶಬ್ದಗಳನ್ನು ಸರಿಪಡಿಸಿ ಅರ್ಥಪೂರ್ಣ ವಾಕ್ಯ ಬರೆಯಿರಿ.**

1) ಬಹಳವಾಗಿ ಇರುವರು ಜನರು ಈ ಪುರದ ಇನ್ನೂ.

2) ಪಟ್ಟಣದಲ್ಲೆಲ್ಲಾ ಬುದ್ಧೀ ಮೇರೆಗೆ ಸಾರಿದೆವು ಅಪ್ಪಣೆಯ

3) ಗ್ರಹಿಸಲಿಲ್ಲ? ಏನಿರೈ ಮಾಂಸವನ್ನು ನಾನು ಕೊಟ್ಟ ಏಕೆ ಸಿಂಹವು ಈ

4) ರಾಜಭಟರಂ ನೋಡಿ ಪರೀಕ್ಷಿತವಾಯಿತು ಚಂದ್ರಗುಪ್ತನು ಈ ಸಿಂಹವು ಆಗ

**ಕೃತಿ 2) I) ಪಂಜರವನ್ನು ವೀಕ್ಷಿಸಿ ಚಂದ್ರಗುಪ್ತನು ಹೇಳಿದ ಮಾತುಗಳನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.**

**II) ಪಕ್ಷಿ, ಪ್ರಾಣಿಗಳನ್ನು ಪಂಜರದಲ್ಲಿ ನೋಡಿದಾಗ ನಿಮ್ಮ ಮನಸ್ಸಿನಲ್ಲಿ ಮೂಡಿದ ಭಾವನೆಗಳನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.**

**ಕೃತಿ 3) I) ಪಂಜರ ವೀಕ್ಷಿಸಿ ಚಂದ್ರಗುಪ್ತನು ಪರೀಕ್ಷಿಸಿದ ವಿಧಾನಗಳು**

1

2

**II) ಕೆಳಗಿನ ವಾಕ್ಯಗಳಲ್ಲಿ ಸರಿಯೋ ತಪ್ಪು ಹೇಳಿರಿ.**

1) ಪಂಜರದಲ್ಲಿ ಪಾರ್ವತೇಯರು ಹುಲಿಯನ್ನು ತಂದಿದ್ದರು.

2) ಪಟ್ಟಣದಲ್ಲಿ ಪಂಜರ ಪರೀಕ್ಷಕರು ದೊರಕಲಿಲ್ಲ.

3) ಸಿಂಹವು ಮಾಂಸಾಭಿಮುಖವಾದಾಗ ಗ್ರಹಿಸಲಿಲ್ಲ.

4) ಪರೀಕ್ಷೆಗಾಗಿ ಕುದುರೆಯನ್ನು ಲಾಯದಿಂದ ತರಿಸಿದನು.

**ಕೃತಿ 4) ಕೆಳಗಿನವುಗಳಿಗೆ ಸೂಚನೆಯಂತೆ ಬರೆಯಿರಿ. ಸಂಯುಕ್ತವಾಕ್ಯ ನಿರ್ಮಿಸಿರಿ.**

| ಗಿರಿಜೆಯು ಶಾಲೆಗೆ ಹೋದಳು | ಗಿರಿಜೆಯು ಪಾಠವನ್ನು ಓದಿದಳು. |
|---|---|

↓

| |
|---|
| |

**II) ಕೆಳಗಿನ ಶಬ್ದಗಳಿಗೆ ತತ್ಸಮ - ತದ್ಭವ ಹಾಗೂ ಉಪಸರ್ಗಯುಕ್ತ ಶಬ್ದಗಳನ್ನು ಬರೆಯಿರಿ.**

| | | | | | |
|---|---|---|---|---|---|
| ಸಿಂಹ | | | ದರ್ಶನ | | |
| ಮುಖ | | | ಸ್ಥಾನ | | |

**III) ಸಮಾನಾರ್ಥಕ ಶಬ್ದಗಳನ್ನು ಬರೆಯಿರಿ.**

| | | | |
|---|---|---|---|
| ಚಂದ್ರ | | | |
| ರಾಜ | | | |
| ಬಂದಿಖಾನೆ | | | |

GBNUX1

# 10. ಸೀತಾ ಶೋಧ

**– ಮುದ್ದಣ**

**ಲೇಖಕರ ಪರಿಚಯ :** ಉಡುಪಿ ತಾಲೂಕಿನ ನಂದಳಿಕೆ ಗ್ರಾಮ ಮುದ್ದಣನು ಹುಟ್ಟಿದ ಊರು. ಶಾಲೆಯಲ್ಲಿ ಅಂಗಸಾಧನೆಯ ಶಿಕ್ಷಕನಾಗಿದ್ದ ಲಕ್ಷ್ಮೀನಾರಣಪ್ಪನು, 'ಮುದ್ದಣ' ಎಂಬ ಕಾವ್ಯನಾಮದಿಂದ ಕಾವ್ಯಗಳನ್ನು ರಚಿಸಿಸಿದನು. ಇವನು 'ಪದ್ಯಂ ವದ್ಯಂ, ಗದ್ಯಂ ಹೃದ್ಯಂ' ಎಂದು ನಂಬಿದವನು; 'ಕನ್ನಡಂ ಕತ್ತುರಿಯಲ್ತೆ !' ಎಂದು ಸಾರಿದವನು. ಇವನ ಗದ್ಯಶೈಲಿ ಪ್ರಾಚೀನ – ಅರ್ವಾಚೀನ ಕವಿಗಳ ಶೈಲಿಗಳನ್ನು ಜೋಡಿಸುವ ಸೇತುವೆ. ಇವನ ಗದ್ಯಕಾವ್ಯಗಳು : 'ರಾಮಾಶ್ವಮೇಧ', 'ಅದ್ಭುತ ರಾಮಾಯಣ'; ಪದ್ಯಕಾವ್ಯ : 'ರಾಮಪಟ್ಟಾಭಿಷೇಕ'; 'ರತ್ನಾವತೀ ಕಲ್ಯಾಣ', 'ಕುಮಾರವಿಜಯ' ಎಂಬ ಯಕ್ಷಗಾನ ಬರೆದಿದ್ದಾನೆ.

ರಾಮ – ಲಕ್ಷ್ಮಣ – ಸೀತೆಯರು ವನವಾಸದಲ್ಲಿರುವಾಗ, ರಾವಣನು ಮೋಸದಿಂದ ಸೀತೆಯನ್ನು ಅಪಹರಿಸುವನು. ಸಹೋದರರು ಸೀತೆಯನ್ನು ಕಾಣದೆ ನೊಂದು – ಬೆಂದು ಹುಡುಕಲು ಹೊರಡುವರು. ರಾಮನ ಸತಿ ವಿರಹದ ವ್ಯಥೆ, ಸಮದುಃಖಿಗಳಾದ ರಾಮ–ಸುಗ್ರೀವರ ಸಂದರ್ಶನ – ಸ್ನೇಹಗಳ ಸುಂದರ ಚಿತ್ರಣ ಈ ಭಾಗದಲ್ಲಿದೆ, 'ಅದ್ಭುತ ರಾಮಾಯಣ'ದ 10–11ನೆಯ ಅಧ್ಯಾಯಗಳು ಇಲ್ಲಿಯ ಭಾಗವು.

ಇಂತೀ ಪರಿಯೊಳ್ ರಘುಪುಂಗವನಯೋಧ್ಯೆಯೊಳಿರ್ಪುದುಂ; ದಿನಗತಿಯೊಳೆಂತಾನುಮೊಂದು ಹೇತುವಿಂ, ಈ ರೇೞ್ಗಲಂ ವನವಾಸಂ ಪ್ರಾಪ್ತಿಯಾಗೆ; ಸೀತಾಲಕ್ಷ್ಮಣಸಮೇತಂ ದಂಡಕಾರಣ್ಯದತ್ತಲ್ ಪೋಱಮೊಟ್ಟಂ. ಆಲಿಸೈ, ಈ ತೆಱದ ಬನ್ನಮೊದವಿದೊಡಂ ಮನಂಗುಂದಿದನೇ ! ಅಲ್ಲಿ ಗೋದಾವರೀತೀರದೊಳೆಲೆವನೆಗೆಯ್ದು ಕಾಡೇ ನಾಡಾಗೆ, ಎಲೆವನೆಯರಮನೆಯಾಗೆ, ಸಂತಸದೊಳಿರ್ದಂ. ಲಕ್ಷ್ಮಣನು ಅಣ್ಣನನ್ನೈಯ್ಯನಂತೆ, ಸೀತೆಯಂ ಮಾತೆಯಂತೆ ಭಾವಿಸಿ ನಿಚ್ಚಂ ಸೇವಿಸು ತಿರ್ಪಂ. ಸೀತೆಯುಂ ಪತಿಯೆ ಗತಿಯೆಂದು ಬಗೆದಾವಗಂ ಪೂಜಿಸುತಿರ್ಪಳ್. ಇಹಗಿಹಗೆ ರಾಘವಂಗೆ ಸೀತೆಯೊಳ್ ಪ್ರೀತಿಯುಂ ಲಕ್ಷ್ಮಣನೊಳ್ ಕಾರುಣ್ಯಮುಂ, ಸೀತೆಗೆ ಪತಿಯೊಳ್ ಭಕ್ತಿಯುಂ ಮೈದುನನೊಳ್ ದಯೆಯುಂ, ಲಕ್ಷ್ಮಣಂಗೆ ಅಣ್ಣನೊಳ್ ವಿಶ್ವಾಸಮುಂ ಅತ್ತಿಗೆಯೊಳ್ ವಿನಯಮುಂ ಅನ್ಯೋನ್ಯಮಾಗಿರ್ದುವು.




ರಾಘವನೋರೊರ್ಮೆ ಮಡದಿಗೆ ವನದಿರವಂ ಬಿತ್ತರಿಪಂ; ಕಣ್ಗಿದಿರೊಳ್ ಬರ್ಪ ಬಗೆಬಗೆಯ ಮಿಗಂಗಳಂ ಬಣ್ಣಿಪಂ; ಪಲವಣ್ಣದ ಪಕ್ಕಿಗಳಂ ತೋಱಿಪಂ; ಪೂವಳ್ಳಿಗಳ ಪೆಸರನೊರೆವಂ, ಸೀತೆ ಪತಿ ಬೇಂಟೆಯಾಡಿ ಬರೆ ಕೆಯ್ಯ ಬಿಲ್ಲಂ ಕೊಂಡಿಟ್ಟು, ಆಸನಮನಿತ್ತು ಪಚರಿಸುವಳ್; ಮೇಣ್ ಲಕ್ಷ್ಮಣಂ ಪಣ್ಗಳಂಱಿತಂದು, ಇರ್ವರ್ಗುಂ ಮರ್ಪಿಸಿ, ತಾನಿರುಳೊಳರ್ಗೆ ಕಾವಲಾಗಿರ್ಪಂ.

ಈ ಪರಿಯೊಳಿವರ್ ಪುರದೊಳೆಂತಂತೆ ಸೊಗದೊಳಿರ್ಪುದುಂ; ಕೆಲಗಾಲಂ ಪೋಗೆ, ದುಟ್ಟರಕ್ಕಸಂ ರಾವಣಂ ಗಂಡಸರ್ ಪೊಱಗಿರ್ಪಪೊೞ್ತಂ ಕಾದು, ಕವರ್ತೆಯೊಳ್ ಪರ್ಣಶಾಲೆಯಿಂ ಸೀತೆಯಂ ಕಳ್ದು ಲಂಕೆಯತ್ತಲ್ ಕೊಂಡುಯ್ದಂ.

ಇತ್ತಲ್ ರಾಮಲಕ್ಷ್ಮಣರ್ ಬೇಂಟೆಯಾಡೆ ಮೂರೞಿಲ್ದವನಗೆ ಬಂದುಮೂರ್ಛೆವೋಗಲಿರ್ವರುಂ; ಪುದಲ್ ಚೇತನಂಗೊಂಡೆಟ್ದು ಲಕ್ಷ್ಮಣನ ಶೈತ್ಯೋಪಚಾರದಿಂ ರಾಘವಂ ಧಾತುಗೊಂಡೆರೆಗಳಿಗೆ ಪರ್ಯಂತಂ ಮೋನಮಿರ್ದುಂ, ಮೇಣ್‌ತಾಂ ತಮಗೆ ದಿಟ್ಟಂಗೈದು ಪುಡುಕಲ್ ಪೊಱಮಟ್ಟರ್. ಇಂತು ಪೊಱಮಟ್ಟುಪೞುಮೊಳ್ ಪುಡುಕಿ, ಕಣಿಯೊಳ್ ಕಂಡು, ಕೊಳಮಂ ಕಲಂಕಿ. ಅಡವಿಯೆಲ್ಲ ಮನಱಿಸಿದೊಡಮರಸಿ ಮಱಿಸಿ ಪೋಗೆ; ಪೋಗಿ, ಕಂಡಕಂಡೆಡೆಯೊಳ್ ಕಂಡಕಂಡವರಂ ಬೆಸಗೊಂಡೊಡಂ, ಆರುಂ ಸದುತ್ತರಮಿತ್ತರಿಲ್ಲಂ. ಕೇಳ್ಕೆ ಮುನಿಪ, ಎಂತೆಂತು ಮಡದಿಯ ವಾರ್ತೆ ಮತ್ತೆ ಪುಟ್ಟಿತಿಲ್ಲಮಂತಂತು ಮೋಹಮಿರ್ಮಡಿಸೆ; ವನಮನೆಲ್ಲಮಂ ಸೀತೆಗೆತ್ತು ಪೂಗೊಂಚಲಂ, ಬಳ್ಳಿಯಂ, ಪಣ್ಣಂ ಎಣ್ಣದೆ ಪಿಡಿವಂ, ಅಪ್ಪುವಂ, ಮುದ್ದಿಪಂ. ಈ ತನ್ನ ಮರುಳ್ತನಂ ತನಗೆಯೆ ಅಱಿವಾಗೆ ನಾಣ್ಚುವಂ. ಎಂತಾದೊಡಂ ಸೀತೆಯ ಸುೞಿವು ಕಾಣದಿರೆ, ಎರ್ದೆಗುಂದಿ ಪೆಣ್ಣಂ ಪೆಣ್ಣಿನ ಗುಣಮಂ ನೆನೆನೆನೆದು ಬಾಯ್ವಿಟ್ಟೞಲ್ ತೊಡಂಗಿದಂ. ಇಂತು ಮಱುಗುವಾತನ ಕಣ್ಣೀರೆ ಪೊಚ್ಚಮಾಗೆ ಪರಿದುದು. ಮೇಣ್ ಕಣ್ಬುೞುಂಕೆ ಬೆಟ್ಟವಾದುದು. ಏನಾ ದೊಡಮಾರಾರೇವರ್?

ರಾಮಲಕ್ಷ್ಮಣರಿರ್ವರುಂ ಬಲ್ದುಗುಡದಿಂ ಮುಂತೆ ಮುಂತೆ ಋಷ್ಯಮೂಕ ಪರ್ವತನಿಕಟ ಪ್ರಾಂತದೊಳ್ ಬರೆವರೆ; ಆ ಬೆಟ್ಟದೊಡೆಯಂ ಸುಗ್ರೀವನೆಂಬೊರ್ವಂ ಗುರುವಾನರಂ ಇವರಂ, ಇವರ ಶೀವಿಯನಿರ್ವರ್ಪಿಡಿದ ಬಿಲ್ಗಣೆಗಳ ಬಲ್ಪಂ ದೂರದೆ ಕಂಡು, ಕಟ್ಟಚ್ಚರಿಯಿಂ ತಾಂ ತನ್ನ ಬೞಿಯವರೊಳಿಂತೆಂದಂ :- ನೋಳ್ಪುದು, ಬಟ್ಟೆವಿಡಿದೆಯ್ತರ್ಪಾ



ಕಿಱುಔವನಿಗರಂ. ನಡೆವ ಭಂಗಿಯಂ ನೋಡೆ ತಿರುಕುಳಿಗಳಂತೆಯುಂ, ಪಿಡಿವ ಧನುರ್ಬಾಣಂಗಳಂ ನೋಡೆ ಕ್ಷತ್ರಿಯರಂತುಂ, ಬಿಡುವ ಸೊಬಗಂ ನೋಡೆ ಅಮರ್ದುಣಿಗಳಂತುಂ ತೋರ್ಪರ್. ಆರಪ್ಪರಿವರ್? ಏಂಪಗೆಯಣ್ಣಂ ವಾಲಿಗೆ ನೆರವಾಂತೆಮ್ಮೊಳ್ ಪೊಣಱಲ್ ಬಂದರೆಯೆ? ಅಲ್ಲದೊಡೇಂ ಕಜ್ಜಂ? ಆರಾದೊಡಮವರನಾರೆಂದಾರಯ್ದು ಬರ್ಪಿರೆ?

ಆಗಳಾತನಾಪ್ತರೊಳಾಂಜನೇಯಂ ಅಣ್ಮನಾಣೆಯನಾಂತಾ ವೀರರ್ಕಳಾ ರೆನಾರಯ್ಯೆ ಪೋದಂ. ಮತ್ತಾ ಹನುಮಂತನವರ್ಗೆ ಕಾಣಿಸಿಕೊಂಡು – ''ನೀ ಮಾರ್?'' ಎಂಬುದುಂ, ರಾಘವಂ ಮುನ್ನಂ ಭಾರ್ಗವಂಗೆಂತಂತೆ ನಿಜರೂಪು ದೋಱಿದಂ. ಕ್ರಮದಿಂ ಶಂಖಂಚಕ್ರಗದಾಪದ್ಮಗಳಿಂ ಶೋಭಿಪ ನಾಲ್ಗೆಯ್ಗಳುಂ, ತೊಳಚಿ ಪೂದಂಡೆಯಿಂ ಮೆಱೆವ ಕೊರಲುಂ. ಸಿರಿವಚ್ಚಲಚ್ಚಣದಿನೊಪ್ಪುವೆರ್ದೆಯುಂ ಬೆಳ್ವಟ್ಟೆ ಬಿಗಿದ ನಡುವುಮಿಂಬಾಗೆ; ಎಡಬಲದೊಳ್ ಚೌರಿಯಂ ಬೀಸುವ ಲಕ್ಷ್ಮೀಸರಸ್ವತಿಯರುಂ, ಇದಿರೊಳ್ ತುತಿಸುವ ಸನಕ ಸನಂದಾದ್ಯರುಂ, ಸುತ್ತಮಿರ್ದು ಸೇವಿಪ ಸಿದ್ಧ ವಿದ್ಯಾಧರ ಗಂಧರ್ವಾದ್ಯರುಂ, ಮನಂಗೊಳೆ; ಸುಭ ಗಾತ್ರನಪ್ಪ ಪರಮಾತ್ಮನಂ, ಮೇಣ್ ಸಾಸಿರ ಪಡೆಗಳಂ ರಾಘವನ ಮೇಲೆ ಸತ್ತಿಗೆಯೊಲೆತ್ತಿ ನಾಗರ್ಕಳಿಂ ಸನ್ನುತಿಗೊಳ್ವ ಮಾಸೇಸನಂ ಕಾಣ್ಬುದುಂ; ಅಚ್ಚರಿಗಚ್ಚರಿ ದೋಱೆ, ತನಗೆ ಕಾಣಿಸಿದ ಬ್ರಹ್ಮಾಂಡನಾಯಕನಂ ಬಲ್ವಗೆಯೊಳ್ ಪೊಗಟ್ದು, ಆನಂದಾಬ್ಧಿಯೊಳ್ ಮುಂಬುಂಗಿ, ವಿಶ್ವಮೂರ್ತಿಯಿಂ ತತ್ತ್ವೋಪದೇಶಮಂ ಕೊಂಡು ನಲಿದಾಡುತಿರ್ದಂ.

ಶ್ರೀರಾಮಚಂದ್ರಮಂ ಮಾನುಷಮಾತ್ರನಾಗಿ ಹನುಮನನೊಡನಿಂತೆಂದಂ – ''ಕೇಳ್ವುದು, ತಿರೆಯೊಳ್ ನೆಗಟ್ತೆವಡೆದ ಅಯೋಧ್ಯೆಯೆಂಬ ಪೊಟಲೊಡೆಯನ್ನಪ್ಪ ಬಂತಿದೇರಂಗೆ ಅಣುಗರಾಂ. ಎಂತಾನುಮೊಂದು ಕಾರಣದಿಂ ಈಯಡವಿಗೆಯ್ತರೆ ಎನ್ನಾಪೆಣ್ಣ ತಿಯಂ ಜಾನಕಿಯಂ ರಕ್ಕಸಂ ರಾವಣಂ ಕಳ್ದುಯ್ದಂ. ಆ ದೊಡಂ ತಾ ದುಟ್ಟಂ ದಿಟ್ಟಗೊಟ್ಟಿದನಿಲ್ಲಂ. ಇಂತಾಗಲೀ ಸುಟುವಱುಯೆ ಪೊಱಮೊಟ್ಟಂತಿತ್ತಣ್ಗೆ ಎಮ್ಮ ಬರವಾದುದು. ಎಮ್ಮೊಳ್ ನಿನಗೆ ದಯೆಯುಂಟಾದೊಡೆ ನಿನ್ನೊಡೆಯನಪ್ಪ ಸುಗ್ರೀವನೊಡನೆಮ್ಮಂ ಕೆಳೆಯರನಾಗಿಪುದು. ಅಂತೆಸಗಲ್ನೀಂ ತಕ್ಕವನೆಂಬುದಂ ಬಲ್ಲೆಂ'' ಈ ನುಡಿಗೇಳ್ದು ಅಣುವಂ ಕಯ್ಮುಗಿಯುತೆ – ''ಜೀಯ, ನಿನ್ನ ಮಡದಿಯಂ ರಾವಣನುಯ್ದನೆಂಬೀ ನುಡಿಯನಾಂ ವಿಶ್ವರೂಪಮಿದನೆಂತಱಿತೆನಂತೆಯೆ ಬಗೆವೆಂ. ಇರ್ದೊಡಂ ಆಣ್ಮನಾಣತಿಯಂತೆ ನಡೆವುದು ಊಟಿಗದವರ್ಗೆ ನ್ಯಾಯಂ. ಎನಗೆ ನೀನುಂ ಸುಗ್ರೀವನು ವೊಡೆಯರಪ್ಪಿರ್. ಅಂತಾಗೆ ನಿಮ್ಮ ಮನಂಗಂಡಂತೆ ಆಂ ವರ್ತಿಪೆಂ, ದಿಟಂ ಅದಱಿಂದೀಗಳ್ ಗುರುವಾಣರನೆಡೆಗೆ ಬಿಜಯಂಗೆಯ್ದು ಅವರುಮನೆಮ್ಮವರುಮಂ ಪಾವನಂಗೆಯ್ವುದರ್ಕೆ ಪೊಱಮಡುವುದು'' ಎಂಬುದುಂ – ''ಅಕ್ಕೆ'' ಎನೆ; ಆಂಜನೇಯಂ ರಾಮಲಕ್ಷ್ಮಣರನಿರ್ವರುವಂ ಪೆಗಲೊಳ್ ಪೊತ್ತೊಡನೆ ಕೊಂಡುಯ್ದಿವರಿರವನೊರೆಯೆ; ಸುಗ್ರೀವಂ ತಡೆಯದೆಟ್ದು ಪಾಸಿತ್ತು ಕುಳ್ಳಿರಿಸಿ ಮನ್ನಿಸಿದಂ.

ಕೇಳ್ವೈ ಮುನಿನಾಥ ! ಬಟಿಕಮಾವಾನರಂ ತನ್ನಣ್ಣಂ ವಾಲಿ ಮಡದಿಯಪ್ಪ ರುಮೆಯನಪಹರಿಸಿದ ಪರಿಯಂ, ಮತ್ತಮೇಗಳುಂ ತನಗೀವ ಕೋಟಲೆಯಂ ಸವಿಸ್ತರಂ ಬಿನ್ನೈಸಿ ತನಗಿದಱೊಳ್ ಸಾಯನಪ್ಪನೆಂದು ದೇವರ್ ಒಳ್ನೆರವಾಗುತೆ ನಿಜಪತ್ನಿಯಂ ಮಗುಟ್ಚಿತಂದಿತ್ತೊಡೆ, ತಾನುಂ ಸೀತೆಯಂ ಪುಡಕಿ ತರ್ಪುದ ಆೞೊಳ್ ಸಾಯನಪ್ಪನೆಂದು ದೇವರೊಳ್ ಬೇಡಿಕೊಳ್ವುದುಂ; ರಾಘವಂ ವಾಲಿಯಂ ಲೀಲಾಮಾತ್ರಮೆನೆ ಕಾಲನೆಡೆಗಟ್ಟಿ ಬಾಲೆಯಂ ಮೇಣ್ ವಿಶಾಲರಾಜ್ಯಮಂ ಸುಗ್ರೀವಂಗಿತ್ತಂ.

ಇಂತಾಗಲ್ ಸುಗ್ರೀವಂ ವೀರರ ಸಾಸಕೆ ಪೊಗಟ್ದು ಒದನೆಯೆ ಸೀತೆಯುಂ ಪಿಂತರ್ಪ ಕಜ್ಜ ಮನಣಿಗೆಯ್ದು, ಪಲವೆಡೆಯ ವಾಣರರಂ ನೆರೆಯಿಸಿದಂ, ಮೇಣಾರಾಘವಂ ಲಂಕೆ ತೆಂಕಗಡಲಾಚೆಗಿರ್ಪುದೆಂದು ಬಗೆದಂದು ಸೋದರಂಗೆ – ''ತಮ್ಮ, ಈಗಳೀ ತಡಿಯೊಳ್ ನೆರೆದೆಮ್ಮೀ ಬಲಂ ಕಡಲ್ದಾಂಟ ಪೋಪಂ ತೆಸಗೈ'' ಎಂಬುದುಂ; ಲಚ್ಚುಮಣಂ ಕಡಲ್ಗೆ – ''ಎಲೆ ಕಡಲೆ, ಎಂತಿರ್ಪೆಯಂತೆಯೆ ಕದಲದಿರ್ಪುದೀಬಲಂ ನಿನ್ನಂ ದಾಂಟಿ ಪೋಪಿನಂ'' ಎನುತೆ ನುಡಿಯೆ, ನುಡಿಯಂ ಕಡೆಗೊತ್ತಿದಂ ಕಡಲೊಡೆಯಂ. ಮತ್ತಂ ಸೌಮಿತ್ರಿ ಕೋಪದಿಂದರೆಚಣಂ ಬಿಱುದಿಟ್ಟಿಯಿಂ ದಿಟ್ಟಿಸು ತೊಡನೆಯೆ ಮುನ್ನೀರೊಳ್ ಪಾಱಿಬಿಟ್ದಂ. ಏನೆಂಬೆನಾತನ ಮೆಯ್ಯಿಂ ಕಡಲ್ನೀರ್ ಬೇಗುದಿಗೊಂಡು ಬತ್ತಿದುದು; ಜೀವಾದಿಗಳ್ ಬೆಂದುವು; ಆಗಸವಟ್ಟೆಯೊಳ್ ಬಿಡುಗಣ್ಣರ್ ಬೆದರ್ದರ್; ಕಪಿಸೇನೆಯಚ್ಚರಿಗೊಂಡುದು. ಆಗಳ್ ಅಣ್ಣಂ ರಾಮಂ – ''ಇಂತು ನೀಂ ಗೆಯ್ದುದು ತಕ್ಕುದೆಂದಾಂ ಬಗೆಯೆಂ'' ಎಂದು ತಮ್ಮಂಗೆ ಬುದ್ಧಿವೇಟ್ದು. ಅಕ್ಕೆ, ಎಂತಾದೊಡಂ

ಕಡಲಂ ತುಂಬಿಸವೇೞ್ಕುಮೆನುತೆ ಸೀತೆಯಗಲ್ಕೆಯಿನುಂಟಾದ ಕಣ್ಣೀರಿಂ ಮುನ್ನಂ ಕಡಲೆಂತುಟಂತೆಗೆಯ್ದಂ. ಆಗಳ್ ಬಾನತ್ತಣಿನರಲ್ಮೞೆ ಸುರಿದತ್ತು ರಾಮನ ಸಿರದೊಳ್.

ಇಂತಾಗೆ ರಾಮಂ ಪೊಗಳುತಿರ್ಪ ಕಡಲೊಡೆಯನಂ ತಳ್ಕೈಸುತೆಡೆಗೊಂಡು, ಕಟ್ಟಂ ಕಟ್ಟಿ, ದಾಂಟಿ, ಲಂಕೆಗೆಯ್ದಿ, ರಾವಣನಂ ರಕ್ಕಸಕುಲದೊಡನೆಯೆ ಕೊಂದು, ಸೀತೆಯನೊಡಗೊಂಡು, ಪೂದೇರೊಳ್ ಸರ್ವರಿಂ ಕೂಡಿ, ನಿಜನಗರಿಯಂ ಪದಿನಾಲ್ಗಲಂ ಸಮೆಯೆ ಪುಗುತೆ, ಮೇಣೊಂದು ಮುಹೂರ್ತದೊಳ್ ಪಟ್ಟವಣೆಯೇರ್ದು, ತಿರೆಯಂ ಪೊರೆಯುತಿರ್ದಂ. ಈತಾನಾಳ್ವಿಕೆಯೊಳ್ ತಿರ್ಯಗ್ಜಂತುಗಳುಂ ಸಂತಸಂಗೊಂಡುವು; ದೇವದುಂದುಭಿ ಸೂೞಱಿತು ಮೊೞಗುಗುಂ.

## ಶಬ್ದಗಳ ಅರ್ಥ:

ಪುಂಗವ – ಶ್ರೇಷ್ಠ; ಹೇತು – ಕಾರಣ; ಈರೇೞ್ಗಲ = ಹದಿನಾಲ್ಕು ವರುಷ; ಬನ್ನ (ದ್ಭ) < ಭಗ್ನ (ತ್ಸ) = ಕೇಡು, ತೊಂದರೆ; ಐಯ್ಯ = ತಂದೆ; ನಿಚ್ಚ (ದ್ಭ) < ನಿತ್ಯ (ತ್ಸ); ಇಹಗಿಹಗೆ = ಹೀಗೆ ಹೀಗೆ; ಬಿತ್ತರಿಸು = ವಿಸ್ತರಿಸು, ವಿವರಿಸು – [ಬಿತ್ತರ (ದ್ಭ) () ವಿಸ್ತರ (ತ್ಸ)]; ದುಟ್ಟ – ದುಷ್ಟ; ಕವರ್ತೆಯೊಳ್ = ಮೋಸದಿಂದ, ಕಳ್ಳತನದಿಂದ; ಧಾತು = ಶಕ್ತಿ; ಮೋನ = ಮೌನ; ದಿಟ್ಟಂಗೈ = ಧೈರ್ಯತಾಳು; ಪಳು = ಹಳುವು, ಅರಣ್ಯ; ಕಣೆ – ಗಣೆ; ಬಾಯ್ವಿಡು (ಪ.ನು.) 1) ಬಳಲು, 2) ಬೆರಗಾಗು; ಎದೆಗುಂದು (ಪ. ನು.) – ಹತಾಶನಾಗು; ಪೊಚ್ಚ = ನದಿ; ಕಣ್ಣುೞುಂಕೆ = ಕಣ್ಣಿನ ಕೊಳೆ; ಗುರುವಾನರ – ಶ್ರೇಷ್ಠ ಕಪಿ; ಕಣೆ = ಬಾಣ; ಬಟ್ಟೆ = ದಾರಿ; ಜೌವನಿಗ – ಯೌವನಿಗ, ತರುಣ; ತಿರುಕುಳಿ = ತಿರಿಯುವುದೇ ಸ್ವಭಾವವಾಗಿ ಉಳ್ಳವನು; ಅಮರ್ದುಣಿ = [ಅಮರ್ದು (ದ್ಭ) < ಅಮೃತ (ತ್ಸ)] ಅಮೃತವನ್ನೇ ಉಂಡು ಜೀವಿಸುವನ = ದೇವತೆ; ಪೊಣರ್ = ಹೋರಾಡು, ಆಂಯ್ = ವಿಚಾರಿಸು; ಭಾರ್ಗವ = ಭೃಗುವಂಶದವ – ಪರಶುರಾಮ; ಸಿರಿವಚ್ಚಲಚ್ಚಣ (ದ್ಭ) < ಶ್ರೀವತ್ಸಲಾಂಛನ (ತ್ಸ) – ಶ್ರೀವತ್ಸ = ವಿಷ್ಣುವಿನ ಎದೆಯ ಮೇಲಿರುವ ಮಚ್ಚೆ; ಬೆಳ್ವಟ್ಟೆ = ಬಿಳಿಯ ಬಟ್ಟೆ; ಸುಭಗಾತ್ರ = ಸುಂದರ ದೇಹ ಉಳ್ಳವ; ಮಾಸೇಸ = ಮಹಾಶೇಷ; ತಿರೆ = ಭೂಮಿ; ಬಂತಿದೇರ = ಸಾಲಾದ ರಥಗಳುಳ್ಳವ = ದಶರಥ; ದಿಟ್ಟಿಗೊಡು (ಪ. ನು.) ಕಾಣಿಸಿಕೊಳ್ಳು, ತಲೆದೋರು; ಅಣುವ = ಹನುಮಂತ; ಅಕ್ಕೆ = ಆಗಲಿ; ಪಾಸು (ನಾ. ಪ.) – ಹಾಸು, ಕಂಬಳಿ, ಜಮಖಾನೆ ಮುಂ.; ಸಾಯ – ಸಹಾಯ; ಸಾಸ = ಸಾಹಸ; ಅಣಿಗೆಯ್ (ಪ. ನು.) = ಸಿದ್ಧಗೊಳಿಸು; ಕಡೆಗೊತ್ತು (ಪ. ನು.) = ಅಲಕ್ಷಿಸು, ಮೀರು; ಅರೆಚಣ = ಅರೆಕ್ಷಣ; ಅರಲಟಿ = ಹೂಮಳೆ; ಕಟ್ಟಂ = ಸೇತುವೆ, ಬಂಧನ; ಪಟ್ಟವಣೆ – ಪಟ್ಟದ ಮಣೆ, ಸಿಂಹಪೀಠ; ತಿರ್ಯಗ್ವಂತು = ಅಡ್ಡತಿಡ್ಡವಾಗಿ ಹರಿದಾಡುವ ಪಶು–ಪಕ್ಷಿ, ಕ್ರಿಮಿ ಕೀಟಕಗಳು; ಸೂೞಱಿತು = ಸಮಯ ತಿಳಿದು.

**ವಿಶೇಷ ವಿಚಾರ :** 1) ದಂಡಕಾರಣ್ಯ = ದಂಡಕನು ಇಕ್ಷ್ವಾಕು ರಾಜನ ಮಕ್ಕಳಲ್ಲಿ ಒಬ್ಬನು. ಇವನ ಉಪಟಳ ತಾಳಲಾರದೆ, ಅವನ ತಂದೆಯು, ವಿಂಧ್ಯ – ಶೈವಲ ಪರ್ವತಗಳ ನಡುವೆ ಒಂದು ರಾಜ್ಯ ಕಲ್ಪಿಸಿ ಅವನನ್ನು ಪ್ರತ್ಯೇಕವಾಗಿ ಇಟ್ಟನು. ದಂಡಕನು ಒಂದು ಸಲ ಶುಕ್ರಾಚಾರ್ಯರ ಆಶ್ರಮಕ್ಕೆ ಹೋದಾಗ, ಗುರುಪುತ್ರಿ ಅರಜೆಯಲ್ಲಿ ಮೋಹಿಸಿದನು. ಇದನ್ನು ತಿಳಿದ ಶುಕ್ರಾಚಾರ್ಯರು, ದಂಡಕನು ಪರಿವಾರಸಮೇತ ನಾಶವಾಗಿ, ಅವನ ರಾಜ್ಯವೆಲ್ಲ ಅರಣ್ಯವಾಗಲೆಂದು ಶಪಿಸಿದರು. ಅಂದಿನಿಂದ ದಂಡಕನ ರಾಜ್ಯವು ದಂಡಕಾರಣ್ಯವಾಯಿತು. 2) ಋಷ್ಯ ಮೂಕ :– ಆನೆಗೊಂದಿಯಿಂದ ಸುಮಾರು ಎಂಟು ಮೈಲು ದೂರದಲ್ಲಿ, ತುಂಗಭದ್ರೆಯ ದಡದಲ್ಲಿರುವ ಒಂದು ಬೆಟ್ಟ. ಇದರ ಬಳಿಯಲ್ಲಿ ಮತಂಗ ಮುನಿಯ ಆಶ್ರಮವಿತ್ತು. ವಾಲಿಯು ದುಂದುಭಿಯನ್ನು ಕೊಂದು, ಅವನ ತಲೆಯನ್ನು ಬೀಸಿ ಒಗೆದನು. ಆ ತಲೆಯು ಮುನಿಯ ಆಶ್ರಮದಲ್ಲಿ ಬಿದ್ದು, ಆಶ್ರಮವು ಅಪವಿತ್ರವಾಯಿತು. ಇದು ವಾಲಿಯ ಕೆಲಸವೆಂದರಿತ ಮುನಿಯು, 'ವಾಲಿಯು ಈ ಪ್ರದೇಶಕ್ಕೆ ಬಂದರೆ ಅವನ ತಲೆ ಒಡೆಯಲಿ' ಎಂದು ಶಾಪವಿಟ್ಟನು. ವಾಲಿಗೆ ಬಂದ ಶಾಪವಿಷಯ ತಿಳಿದ ಸುಗ್ರೀವನು, ಅಣ್ಣನಿಗೆ ಅಂಜಿ ಈ ಪರ್ವತದಲ್ಲಿ, ಹನುಮಂತಾದಿಗಳೊಡನೆ ಇದ್ದನು. ರಾಮ – ಲಕ್ಷ್ಮಣರು ಸೀತೆಯನ್ನು ಹುಡುಕುತ್ತ ಬಂದಾಗ, ಹನುಮಂತನು, ರಾಮ – ಸುಗ್ರೀವರ ಸ್ನೇಹಕ್ಕೆ ಕಾರಣವಾಗುತ್ತಾನೆ. 3) ಸನಕ, ಸನಂದಾದ್ಯರು :– ಸನಕ, ಸನನ್ದ, ಸನತ್ಕುಮಾರ, ಸನಾತನ ಜಾತರು, ಸೃಷ್ಟಿಯ ಆದಿಯಲ್ಲಿ ಬ್ರಹ್ಮಮಾನಸ ಪುತ್ರರು, ಮಹಾತಪಸ್ವಿಗಳು; ಜ್ಞಾನಸಂಪನ್ನರು. ಯಾವಾಗಲೂ ಕೌಮಾರಾವಸ್ಥೆಯಲ್ಲಿಯೇ ಇರುವವರು.

**ಕೃತಿ 1) ಕೆಳಗಿನ ಸುಳಿವುಗಳಿಗೆ ಹೊಂದುವ ಸರಿಯಾದ ಅಕ್ಷರಗಳನ್ನು ಖಾಲಿ ಚೌಕೋನಗಳಲ್ಲಿ ತುಂಬಿರಿ.**

| | | | |
|---|---|---|---|
| 1) ರಘುಕುಲದ ಶ್ರೇಷ್ಠವ್ಯಕ್ತಿ | ಶ್ರೀ | | |
| 2) ಸೀತೆಯ ಮೈದುನ | | ಕ್ಷ್ಮ | |
| 3) ರಾಮನ ಸಮ ದುಃಖಿ | | ಗ್ರೀ | |
| 4) ಸೀತೆಯನ್ನು ಅಪಹರಿಸಿದವ | | | ಣ |

**ಕೃತಿ 2) ಕೆಳಗಿನ ಪ್ರತಿ ಅಕ್ಷರಗಳಿಂದ ಒಂದು ಹೊಸ ಶಬ್ದ ಬರೆಯಿರಿ.**

**ರಘುಪುಂಗವ :-**

1) ರಘು ........................ 2) ಪುಂ ........................

3) ಗ ............................ 4) ವ ............................

**ಕೃತಿ 3) ಕೆಳಗಿನ ಶಬ್ದಗಳನ್ನು ಹೊಸಗನ್ನಡ ರೂಪದಲ್ಲಿ ಬರೆಯಿರಿ.**

1) ದುಟ್ಟರಕ್ಕಸ =

2) ತಿರೆ =

3) ಅಣುವ =

4) ಕಟ್ಟಂ =

**ಕೃತಿ 4) ಅ) ರಾಮನಿಗೆ ಗಾಳಿ ಬೀಸುವವರು**

| | | | |
|---|---|---|---|
| ಲ | | | |
| | | ಸ್ವ | |

**ಬ) ರಾಮನನ್ನು ಸ್ತುತಿಸುವವರು**

| | | |
|---|---|---|
| ಸ | | |
| | | ದಾ |

**ಕೃತಿ 5) ರಾಮ ಮತ್ತು ಸುಗ್ರೀವರ ಸಂಭಾಷಣೆ ನಿಮ್ಮ ಮಾತುಗಳಲ್ಲಿ ಬರೆಯಿರಿ.**

**ಕೃತಿ 6) ಅ) ಕೆಳಗಿನ ಶಬ್ದಗಳ ತತ್ಸಮ - ತದ್ಭವ ಬರೆಯಿರಿ.**

ಬಿನ್ನ ನಿಚ್ಚ ಎತ್ತರ ಸಾಸಿರ

**ಬ) ಸಮಾಸ ವಿಗ್ರಹಿಸಿ ಹೆಸರಿಸಿರಿ.**

ರಘು ಶ್ರೇಷ್ಠ, ರಾಮಲಕ್ಷ್ಮಣ, ಅಂಜನೆಯ.

**ಕೃತಿ 7) ಸೀತೆಯವಿರಹದ ವ್ಯಥೆಯನ್ನು ನಿಮ್ಮ ಮಾತುಗಳಲ್ಲಿ ವಿವರಿಸಿರಿ.**

# ಸ್ಥೂಲ ಅಭ್ಯಾಸ



# 1. ಡಾ|| ವಿಶ್ವೇಶ್ವರಯ್ಯ, ವ್ಯಕ್ತಿ ಮತ್ತು ಐತಿಹ್ಯ

**- ಎ. ಎನ್. ಮೂರ್ತಿರಾವ್**

**ಲೇಖಕರ ಪರಿಚಯ :** 'ಡಾ|| ವಿಶ್ವೇಶ್ವರಯ್ಯ, ವ್ಯಕ್ತಿ ಮತ್ತು ಐತಿಹ್ಯ' ಪರಿಚಯಾತ್ಮಕ ಲೇಖನವನ್ನು ಶ್ರೀಮಾನ್ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಸಂಪಾದಿಸಿ ಪ್ರಕಟಿಸಿದ 'ಸರ್ ವಿಶ್ವೇಶ್ವರಯ್ಯ ನೂರನೆಯ ವರ್ಧಂತಿಯ ಪೂಜನ ಲೇಖನ ಸಂಗ್ರಹ' ಎಂಬ ಗ್ರಂಥದಿಂದ ಆಯ್ದುಕೊಳ್ಳಲಾಗಿದೆ. ಈ ಗ್ರಂಥವು ವಿಶ್ವೇಶ್ವರಯ್ಯನವರ ಬದುಕಿನ ವಿವಿಧ ಮುಖಗಳನ್ನು ಅಳವಡಿಸಿಕೊಂಡಿರುವ ವಿವಿಧ ಲೇಖಕರ ಲೇಖನಗಳ ಆಕರವಾಗಿದೆ.

ಡಾ|| ವಿಶ್ವೇಶ್ವರಯ್ಯನವರ ವೈಯಕ್ತಿಕ ಹಾಗೂ ವ್ಯಾವಹಾರಿಕ ಜೀವನ, ಕ್ರಮ, ಶಿಸ್ತು ತರ್ಕಬದ್ಧವಾದ ಆಲೋಚನೆ, ನಿಷ್ಕೃಷ್ಟತೆ ಈ ಹುಟ್ಟುಗುಣಗಳಿಂದಾಗಿ ಅಚ್ಚುಕಟ್ಟಾಗಿತ್ತು. ಅಪ್ರಲೋಭನೆಯ. ವ್ಯಕ್ತಿಶಃ ಪರಿಶುದ್ಧ ವರ್ತನೆಯ, ಉದಾತ್ತ ಹೃದಯದ, ದೇಶಪ್ರೇಮಿ, ಭಾರತೀಯ ಮಹಾನ್ ತಾಂತ್ರಿಕ ವಿಜ್ಞಾನಿ ಶ್ರೀಮಾನ್ ವಿಶ್ವೇಶ್ವರಯ್ಯನವರ ಆದರ್ಶ ಜೀವನ ಚಿತ್ರಣವನ್ನು ಸರಳವಾಗಿ. ಚೊಕ್ಕಟವಾಗಿ ನಿರೂಪಿಸಿದವರು ಎ. ಎನ್. ಮೂರ್ತಿರಾವ್ ಅವರು. ಇವರು ಮೈಸೂರು ವಿಶ್ವವಿದ್ಯಾಲಯದಲ್ಲಿ ಇಂಗ್ಲೀಷ್ ಪ್ರಾಧ್ಯಾಪಕರಾಗಿ ಉತ್ತಮ ಶಿಕ್ಷಕರೆಂದು ಪ್ರಸಿದ್ಧಿ ಪಡೆದಿದ್ದರು. ಇವರ ಸೌಜನ್ಯ, ಸಜ್ಜನಿಕೆ, ಸರಳತೆ, ರಸಿಕತೆಗಳು ಇವರ ಬರಹದಲ್ಲಿಯೂ ಎದ್ದು ಕಾಣುತ್ತವೆ. ಇವರು ಷೇಕ್ಸ್‌ಪಿಯರ್, ಆಷಾಢಭೂತಿ ಇತ್ಯಾದಿ ಹಲವು ಗ್ರಂಥಗಳನ್ನು ಬರೆದಿದ್ದಾರೆ. ಇವರ 'ಹಗಲುಗನಸು' ಇತ್ಯಾದಿ ಪ್ರಬಂಧಗಳು ಅತ್ಯಂತ ಜನಪ್ರಿಯವಾಗಿವೆ.

ಪ್ರತಿಯೊಬ್ಬ ಮನುಷ್ಯನೂ ಬದುಕಿನಲ್ಲಿ ಆದರ್ಶವನ್ನಿರಿಸಿಕೊಂಡಿರಬೇಕು. ಅದರಂತೆ ನಡೆಯಬೇಕು. ನಡೆ-ನುಡಿಗಳಲ್ಲಿ ಹೊಂದಾಣಿಕೆ ಇರಬೇಕು. ಆದರೆ ಈ ಮಾತು ಹೇಳುವುದಕ್ಕೆಷ್ಟು ಸುಲಭವೋ ಅಷ್ಟು ಮಾಡಿ ತೋರಿಸುವುದು ಕಠಿಣ, ಅಂತಲೇ ಹೇಳುವುದು ನುಡಿದಂತೆ ನಡೆಯುವವರು ದೊರೆಯುವುದು ಅಪರೂಪವೆಂದು. ಅದರಲ್ಲಿಯೂ ಉನ್ನತ ಅಧಿಕಾರ ಸ್ಥಾನದಲ್ಲಿದ್ದು ನಡೆ-ನುಡಿಗಳಲ್ಲಿ ಪರಿಶುದ್ಧವಾಗಿರುವವರು ದೊರೆಯುವುದು ಅಪೂರ್ವ, ಇಂತಹ ಪರಿಶುದ್ಧವಾದ ಆದರ್ಶ ಜೀವನವನ್ನು ನಡೆಸಿದ ಅಪರೂಪದ ವ್ಯಕ್ತಿಗಳಲ್ಲಿ ವಿಶ್ವೇಶ್ವರಯ್ಯನವರು ಒಬ್ಬರಾಗಿದ್ದಾರೆ.

ಬೆಂಗಳೂರಿಂದ ಮೈಸೂರಿಗೆ ಪ್ರಯಾಣ ಮಾಡುವಾಗ ನೀವು ಮಂಡ್ಯ ಜಿಲ್ಲೆಯನ್ನು ಹಾದು ಹೋಗಬೇಕಾಗುತ್ತದೆ. ಬಹುಶಃ ಮೈಸೂರು ರಾಜ್ಯದಲ್ಲೆಲ್ಲಾ ಅತ್ಯಂತ ಸಂಪದ್ಯುಕ್ತವೆನ್ನಬಹುದಾದ ಈ ಜಿಲ್ಲೆ ಮೊದಲು ಮಳೆ ಸಾಲದೆ, ನೀರಿನ ಸೌಕರ್ಯವಿಲ್ಲದೆ ಹೆಚ್ಚು ಕಡಿಮೆ ಬರಡು ಭೂಮಿಯಾಗಿತ್ತು; ಈಗ ರಸ್ತೆಯ ಇಕ್ಕೆಲದಲ್ಲೂ ಕಣ್ಣಿಗೆ ಕಾಣುವಷ್ಟು ದೂರವೂ ಹಸುರು ಕಂಗೊಳಿಸುತ್ತಿದೆ; ಎಲ್ಲಿ ನೋಡಿದರೂ ಭತ್ತದ ಅಥವಾ ಕಬ್ಬಿನ ಗದ್ದೆ; ಎಲ್ಲ ಕಡೆಗಳಿಂದಲೂ ನೀರಿನ ಕಲರವ ನಿಮ್ಮ ಕಿವಿಯನ್ನು ಮುತ್ತುತ್ತದೆ. ನಿಮ್ಮ ಜೊತೆಯ ಪ್ರಯಾಣಿಕರಲ್ಲಿ ಯಾವನಾದರೂ ಒಬ್ಬ ಆ ಹಸುರಿನ ಕಡೆಗೆ ಕೈಬೀಸಿ ಹೇಳಿಯೇ ಹೇಳುತ್ತಾನೆ; ''ನೋಡಿ. ಇದೆಲ್ಲಾ ವಿಶ್ವೇಶ್ವರಯ್ಯ!'' ''ಈ ಜಿಲ್ಲೆಗೆ ನೀರನ್ನು ಒದಗಿಸುವ ಕೃಷ್ಣರಾಜ ಸಾಗರವನ್ನು ಮನಸ್ಸಿನಲ್ಲಿ ಕಲ್ಪಿಸಿಕೊಂಡರು. ಅದರ ಯೋಜನೆಯನ್ನು ತಯಾರಿಸಿದರು. ಅದನ್ನು ಕಟ್ಟಿದರು. ಡಾಕ್ಟರ್ ವಿಶ್ವೇಶ್ವರಯ್ಯ. ಅದರ ಪ್ರಯೋಜನವೆಲ್ಲಾ ನೇಗಿಲು ಹಿಡಿಯುವ ರೈತರಿಗೆ. ಇದೇ ಕಾರಣದಿಂದಿರಬೇಕು; ಈ ಎಂಜಿನಿಯರ್ ರಾಜತಂತ್ರಜ್ಞರು ಮೈಸೂರಿಗೆ ಮಾಡಿದ ಲೆಕ್ಕವಿಲ್ಲದಷ್ಟು ಉಪಕಾರಗಳಲ್ಲಿ ಮೊದಲು ನಾವು ಕೃಷ್ಣರಾಜಸಾಗರವನ್ನು ಸ್ಮರಿಸುತ್ತೇವೆ. ನಿಮ್ಮ ಸಹ ಪ್ರಯಾಣಿಕನು ವಿಶ್ವೇಶ್ವರಯ್ಯನವರ ಇತರ ಮಹಾ ಕಾರ್ಯಗಳನ್ನು, ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ. ಮೈಸೂರು ಬ್ಯಾಂಕು. ಮೈಸೂರು ವಿಶ್ವವಿದ್ಯಾನಿಲಯ. ಮೈಸೂರಿನ ಛೇಂಬರ್ ಆಫ್ ಕಾಮರ್ಸ್ ಇತ್ಯಾದಿಗಳನ್ನು ಸಹ ನೆನೆಯುತ್ತಾರೆ : ಆದರೆ ಕೃಷ್ಣರಾಜಸಾಗರದ ಹೆಸರು ಹೇಳಿದ ಮೇಲೆ.

ಡಾ|| ವಿಶ್ವೇಶ್ವರಯ್ಯನವರು 1919ರಲ್ಲಿ ತಾವಾಗಿಯೇ ಮೈಸೂರಿನ ದಿವಾನಗಿರಿಯನ್ನು ಬಿಟ್ಟುಕೊಟ್ಟು ಅಧಿಕಾರದಿಂದ ನಿವೃತ್ತರಾದರು : ಆದರೆ ದೇಶಸೇವೆಯಿಂದ ನಿವೃತ್ತರಾಗಲಿಲ್ಲ : ವರ್ಷಗಟ್ಟಲೆ ಅವರು ಕೃಷ್ಣರಾಜಸಾಗರ ಅಭಿವೃದ್ಧಿ ಸಮಿತಿಯ ಮತ್ತು ಭದ್ರಾವತಿಯ ಕಬ್ಬಿಣ ಉಕ್ಕಿನ ಕಾರ್ಖಾನೆಯ ಆಡಳಿತ



ಮಂಡಲಿಯ ಅಧ್ಯಕ್ಷರಾಗಿ ಕೆಲಸ ಮಾಡಿದರು. ಈಗಲೂ ಕೂಡ – ಅವರ 88ನೆಯ ವಯಸ್ಸಿನಲ್ಲಿ ಕೈಗಾರಿಕೆ ಅಥವಾ ಎಂಜಿನಿಯರಿಂಗಿಗೆ ಸಂಬಂಧಪಟ್ಟ ತೊಡಕಾದ ಸಮಸ್ಯೆಯೇನು ಬಂದರೂ ಮೈಸೂರು ರಾಜ್ಯ ಡಾ|| ವಿಶ್ವೇಶ್ವರಯ್ಯನವರ ಸಲಹೆಯನ್ನು ಬೇಡುತ್ತದೆ. ಅವರ ನಂತರ ಬಂದ ದಿವಾನರು ಮತ್ತು ಮಂತ್ರಿಗಳಲ್ಲಿ ಹೆಚ್ಚು ಕಡಿಮೆ ಎಲ್ಲರೂ ಅವರಲ್ಲಿ ಭಕ್ತಿಯಿಂದ ನಡೆದುಕೊಂಡು ಸಲಹೆ ಪಡೆದಿದ್ದಾರೆ. ನಮ್ಮ ರಾಜ್ಯದ ಜನಜೀವನದಲ್ಲಿ ಅದೆಷ್ಟು ಕಡೆ ಅವರ ಕೈವಾಡ ಕಾಣುತ್ತದೆಯೋ! ಅದಕ್ಕೆ ನಮ್ಮ ಜನ ದೊಡ್ಡವಾಗಿ ಕೈಬೀಸಿ ಹೇಳುತ್ತಾರೆ : 'ಇದೆಲ್ಲಾ ವಿಶ್ವೇಶ್ವರಯ್ಯನವರ ಕೆಲಸ ಎಂದಲ್ಲ' 'ಇದೆಲ್ಲಾ ವಿಶ್ವೇಶ್ವರಯ್ಯ' ಎಂದು.

ಡಾ|| ವಿಶ್ವೇಶ್ವರಯ್ಯನವರು ಸಾಧಿಸಿದ ಕೆಲಸಗಳಿಗಿಂತಲೂ ಹೆಚ್ಚಾಗಿ ಅವರ ವ್ಯಕ್ತಿತ್ವ ಜನರ ಮನಸ್ಸನ್ನು ಸೆಳೆದಿದೆ. ಅವರು ಅತ್ಯಂತ ದಕ್ಷರಾದ ಎಂಜಿನಿಯರ್ : ಮುಂದಾಲೋಚನೆಯುಳ್ಳ ರಾಜತಂತ್ರಜ್ಞರು; ರಾಜ್ಯದ ಅಭಿವೃದ್ಧಿಯ ವಿಷಯದಲ್ಲಿ ಘನವಾದ ಆದರ್ಶಗಳನ್ನು ಕಲ್ಪಿಸಿಕೊಂಡು ಅವನ್ನು ಸಾಧಿಸಲು ಶ್ರಮಿಸಿದವರು. ಇದನ್ನೆಲ್ಲಾ ಒತ್ತಿ ಹೇಳಬೇಕಾದ ಅವಶ್ಯಕತೆಯಿಲ್ಲ. ಇಲ್ಲಿ ಅವರ ವ್ಯಕ್ತಿತ್ವಕ್ಕೇ ಹೆಚ್ಚು ಗಮನ ಕೊಡಲಾಗಿದೆ. ಅವರ ವಿಷಯದಲ್ಲಿ ಹರಡಿರುವ ಐತಿಹ್ಯಗಳೆಲ್ಲಾ ನಿಜವಾಗಿ ನಡೆದುವೆಂದು ಹೇಳಲು ಆಧಾರ ಸಿಕ್ಕುವುದಿಲ್ಲ ; ಆದರೆ ಆ ಕಥೆಗಳೆಲ್ಲವೂ

ಅವರ ಸ್ವಭಾವಕ್ಕೆ ಹೊಂದುವಂಥವೇ. ಅವರನ್ನು ದಿವಾನರನ್ನಾಗಿ ನೇಮಿಸಿದ ಸರ್ಕಾರಿ ಆಜ್ಞೆ ಕೈಗೆ ಬಂದಾಗ ಅವರು ಅದನ್ನು ತಮ್ಮ ತಾಯಿಯ ಪಾದಗಳ ಬಳಿ ಇಟ್ಟು, ನಮ್ಮ ಬಂಧುಗಳಲ್ಲಿ ಯಾರೊಬ್ಬರಿಗಾಗಲಿ ನೌಕರಿ ಕೊಡಬೇಕೆಂದು ನೀನು ಶಿಫಾರಸು ಮಾಡಬಾರದು; ಮಾಡುವುದಿಲ್ಲವೆಂದು ಭರವಸೆ ಕೊಟ್ಟರೆ ದಿವಾನಗಿರಿಯನ್ನು ಒಪ್ಪಿಕೊಳ್ಳುತ್ತೇನೆ'', ಎಂದರಂತೆ ಇದು ನಿಜವೋ ಕಲ್ಪನೆಯೋ ತಿಳಿಯದು. ಆದರೆ ಅವರು ತಮ್ಮ ಬಂದುಗಳಲ್ಲಿ ಯಾರೊಬ್ಬರಿಗೂ ನೌಕರಿ ಕೊಡಲಿಲ್ಲವೆಂಬುದೇನೋ ಸತ್ಯ. ಇಂದಿಗೂ ಮೈಸೂರು ಸರ್ಕಾರದ ನೌಕರ ವರ್ಗದಲ್ಲಿ ಅವರ ಬಂಧುಗಳು ಯಾರೂ ಇಲ್ಲ.

ಕ್ರಮ, ಶಿಸ್ತು, ತರ್ಕಬದ್ಧವಾದ ಆಲೋಚನೆ. ನಿಷ್ಪಕ್ಷತೆ; ಇವು ಡಾ॥ ವಿಶ್ವೇಶ್ವರಯ್ಯನವರ ಹುಟ್ಟುಗುಣಗಳು ಇವುಗಳಿಗೆ ಲೋಪ ಬಂದೀತೆಂಬ ಶಂಕೆಯಿಂದ ಅವರು ಯಾವ ಕೆಲಸಕ್ಕಾಗಲಿ ಪೂರ್ವಸಿದ್ಧತೆಯಿಲ್ಲದೆ ಕೈಹಾಕುವುದಿಲ್ಲ. ಇದಕ್ಕೆ ಉದಾಹರಣೆಯಾಗಿ ಅವರ ಜೀವನದಲ್ಲಿ ನಡೆದ ಒಂದು ಸಂಗತಿಯನ್ನು ಹೇಳಬಹುದು. ಒಂದು ಬಾರಿ ಅವರು ತಮ್ಮ ತವರೂರಾದ ಮುದ್ದೇನಹಳ್ಳಿಯಲ್ಲಿ ತಂಗಿದ್ದರು. ಅಂದು ಸಂಜೆ ಹಳ್ಳಿಯ ಪ್ರಾಥಮಿಕ ಶಾಲೆಯ ಬಳಿ ಹೋಗುತ್ತಿರುವ ವೇಳೆಗೆ ಶಾಲೆಯಿಂದ ಮಕ್ಕಳು ಕೇಕೆ ಹಾಕುತ್ತ ನಗುತ್ತ. ಕುಣಿಯುತ್ತ. ಹೊರ ಬಂದರು. ಡಾ॥ ವಿಶ್ವೇಶ್ವರಯ್ಯನವರು ಮಕ್ಕಳ ಕುಣಿದಾಟವನ್ನು ನೋಡಿ ಮುಗುಳುನಗೆ ನಗುತ್ತಾ ಮೇಷ್ಟರನ್ನು ಕರೆದು ಹತ್ತು ರೂಪಾಯಿಯ ನೋಟನ್ನು ಅವರ ಕೈಲಿಟ್ಟು. ''ಮಕ್ಕಳಿಗೆ ಏನಾದರೂ ತರಿಸಿಕೊಡಿ. ಬಾಯಿ ಸಿಹಿಯಾಗಲಿ.'' ಎಂದರು. ಇದನ್ನು ನೋಡುತ್ತಿದ್ದ ವೃದ್ಧರೊಬ್ಬರು. ''ಸ್ವಾಮಿ. ಅವರಿಗೆ ಪೆಪ್ಪರ್‌ಮೆಂಟ್ ಹಂಚಿದರೆ ಸಾಕೆ? ನಾಲ್ಕು ಬುದ್ಧಿಯ ಮಾತೂ ಅಪ್ಪಣೆಯಾಗಬೇಕು.'' ಎಂದರು ಹುಡುಗರನ್ನೆಲ್ಲಾ ಮತ್ತೆ ಶಾಲೆಯೊಳಕ್ಕೆ ಕರೆ ತಂದದ್ದಾಯಿತು; ವಿಶ್ವೇಶ್ವರಯ್ಯನವರು ಐದು ನಿಮಿಷ ಮಾತನ್ನೂ ಆಡಿದರು ಆದರೆ ಈಚೆಗೆ ಬಂದಾಗ ಅವರಿಗೆ ತಮ್ಮ ವಿಷಯದಲ್ಲೇ ವಿಪರೀತ ಅಸಮಾಧಾನ, ಎಂದೂ ಮಾಡದ ಕೆಲಸವನ್ನು ಅಂದು ಮಾಡಿದ್ದರು : ಪೂರ್ವಸಿದ್ಧತದೆಯಿಲ್ಲದೆ ಭಾಷಣ ಮಾಡಿದ್ದರು! ಅವರ ದೃಷ್ಟಿಯಲ್ಲಿ ಅಕ್ಷಮ್ಯವಾದ ಈ ಅಪರಾಧಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳುವ ವರೆಗೂ ಅವರಿಗೆ ಸಮಾಧಾನವಿಲ್ಲ. ಒಂದು ವಾರದೊಳಗಾಗಿ ಅವರು ಹಳ್ಳಿಗೆ ಹಿಂದಿರುಗಿ, ಇಪ್ಪತ್ತೈದು ರೂಪಾಯಿ ಖರ್ಚುಮಾಡಿ ಮಕ್ಕಳಿಗೆ ತಿಂಡಿತೀರ್ಥಗಳನ್ನು ಹಂಚಿ. ಮತ್ತೆ ಒಂದು ಭಾಷಣ ಮಾಡಿದರು : ಜಾಗರೂಕತೆಯಿಂದ ತಯಾರು ಮಾಡಿದ್ದ ಭಾಷಣ. ಮೊದಲಿನ ಭಾಷಣಕ್ಕೂ ಎರಡನೆಯದಕ್ಕೂ ವಿಷಯ ಸಂಪತ್ತಿನಲ್ಲೂ ಸುಸಂಬದ್ಧತೆಯಲ್ಲೂ ಏನು ವ್ಯತ್ಯಾತಸವಿತ್ತೋ ತಿಳಿಯದು; ಇದ್ದರೂ ಅದು ಆ ಚಿಕ್ಕ ಮಕ್ಕಳ ಗಮನಕ್ಕಂತೂ ಬಂದಿರಲಾರದು. ಅವರು ಮಿಠಾಯಿ ತಿಂದು ಬಾಯಿ ಚಪ್ಪರಿಸುತ್ತಾ ಬಟ್ಟಲುಗಣ್ಣು ಬಿಟ್ಟು. 'ದಿವಾನರು' ಎಂಬ ವಿಚಿತ್ರ ವ್ಯಕ್ತಿಯನ್ನು ನೋಡುತ್ತಿದ್ದರೇ ಹೊರತು ಭಾಷಣವನ್ನು ಕೇಳುತ್ತಿದ್ದಿರಲಾರರು. ಈ ಪ್ರಸಂಗದಲ್ಲಿ ನಾವು ಗಮನಿಸಬೇಕಾದ ಅಂಶ ಇದು; ಡಾ॥ ವಿಶ್ವೇಶ್ವರಯ್ಯನವರು ಮೇಧಾವಿಗಳಾದ ಮತ್ತು ವಿಚಾರಪರರಾದ ಶ್ರೋತೃಗಳಿಗೆ ಎಷ್ಟು ಗೌರವ ಸಲ್ಲಿಸಬೇಕೋ ಅಷ್ಟೇ ಗೌರವವನ್ನು ಆ ಹಸು ಮಕ್ಕಳಿಗೂ ಸಲ್ಲಿಸಿದರು.

ಶ್ರೋತೃವರ್ಗದ ವಿಷಯದಲ್ಲಿ ಗೌರವ, ಆಲೋಚನೆಯಲ್ಲಿ ಸತ್ಯನಿಷ್ಠೆ, ಈ ಉದಾತ್ತ ಗುಣಗಳಿಗೆ ಬೆಲೆ ಕೊಡುವುದರಿಂದಲೇ ಅವರು ಎಂಥ ಅಮುಖ್ಯ ಸಂದರ್ಭದಲ್ಲಾಗಲಿ ಪೂರ್ವಸಿದ್ಧತೆಯಿಲ್ಲದೆ ಮಾತಾಡಲೊಲ್ಲರು. ಆಡಿದ ಮಾತು. ಬರೆದ ಬರಹ. ಯಾವುದರಲ್ಲೂ ಸತ್ಯಕ್ಕೂ ನಿಷ್ಪಕ್ಷತೆಗೂ ಲೋಪ ಬರಬಾರದು. ಕೆಲವರು ಪ್ರೀತಿಜನ್ಯವಾದ ವಿಷಾದಿಂದ, ''ಇವರು ತಮ್ಮ ಮಾತಿನಿಂದಲೂ ಬರಹದಿಂದಲೂ ಭಾಷಾ ಸೌಂದರ್ಯವನ್ನು ನಿರ್ದಯರಾಗಿ ಹೊರದೂಡುತ್ತಾರಲ್ಲ.'' ಎಂದು ಗೊಣಗಿದ್ದಾರೆ. ಡಾ॥ ವಿಶ್ವೇಶ್ವರಯ್ಯನವರು ಹಾಗೆ ಮಾಡುವುದೇನೋ ನಿಜ; ಆದರೆ ಅದು ನಕಾರಾತ್ಮಕ ಕ್ರಿಯೆಯಲ್ಲ. ಅವರ ಉದ್ದೇಶ ಭಾಷಾ ಸೌಂದರ್ಯವನ್ನು ಹೊರಹಾಕಬೇಕೆಂದಲ್ಲ, ಸತ್ಯವನ್ನು ಬರಮಾಡಿಕೊಳ್ಳಬೇಕೆಂದು. ಅನೇಕ ವೇಳೆ ''ಭಾಷಾ ಸೌಂದರ್ಯ. ಎಂದನ್ನಿಸಿಕೊಳ್ಳುವುದು ಸತ್ಯವನ್ನು ಮರೆಸುತ್ತದೆ. ಸುಂದರವಾದ ವಾಗ್ರತ್ನಗಳ ಅಲಂಕಾರ ಮಾಡಿ ಜನರನ್ನು ಮರುಳು ಮಾಡುವ ಕಲೆ ನಮ್ಮಲ್ಲಿ ಸಾಕಾದಷ್ಟು

ಬೆಳೆದಿದೆ ! ಡಾ|| ವಿಶ್ವೇಶ್ವರಯ್ಯನವರಿಗೆ ಸತ್ಯವೇ ಸೌಂದರ್ಯ; ಆದ್ದರಿಂದ ಅದನ್ನು ಅಲಂಕರಿಸಲೊಲ್ಲರು. ಸತ್ಯ ತನ್ನ ಸತ್ಯತೆಯಿಂದಲೇ ಪ್ರಭಾವಶಾಲಿಯಾಗಬಲ್ಲದು.

ಡಾ|| ವಿಶ್ವೇಶ್ವರಯ್ಯನವರು ಪ್ರಕೃತಿ ಸೌಂದರ್ಯಕ್ಕೆ ಮನಸೋಲುವವರಲ್ಲ.'' ಎಂಬ ಟೀಕೆಯನ್ನೂ ಇದೇ ದೃಷ್ಟಿಯಿಂದ ವಿಮರ್ಶಿಸಬೇಕು. ನನಗೆ ಹಿರಿಯ ಮಿತ್ರರಾಗಿ ಗುರು ಸ್ಥಾನದಲ್ಲಿರುವವರೊಬ್ಬರು ವಿಶ್ವೇಶ್ವರಯ್ಯನವರನ್ನು ಬಹುಕಾಲದಿಂದ ಚೆನ್ನಾಗಿ ಬಲ್ಲವರು. ಕೆಲವು ಸಂದರ್ಭಗಳಲ್ಲಿ ವಿಶ್ವಾಸಕ್ಕಾಗಿ ಅವರ ಕಾರ್ಯದರ್ಶಿಗಳಾಗಿ ಕೆಲಸ ಮಾಡಿದರು. ಅವರು ಒಂದು ಸಾರಿ ವಿಶ್ವೇಶ್ವರಯ್ಯನವರೊಡನೆ ಪ್ರವಾಸದಲ್ಲಿದ್ದಾಗ ಕನ್ಯಾಕುಮಾರಿಯಲ್ಲಿ ಸಂಜೆ ಬೆಳಕಿನ ಸೌಂದರ್ಯವನ್ನು ಭಾವಾವೇಶದಿಂದ ಬಣ್ಣಿಸ ತೊಡಗಿದರಂತೆ. ವಿಶ್ವೇಶ್ವರಯ್ಯನವರು ನಿಟ್ಟುಸಿರುಬಿಟ್ಟು, ''ನೀವು ಕವಿಗಳಾಗಿ ಬಿಟ್ಟರಿ''! ಎಂದರು. ಪ್ರಕೃತಿಯ ಸೌಂದರ್ಯ ಅವರ ಕಣ್ಣಿಗೆ ಕಾಣಲಿಲ್ಲವೆಂದಲ್ಲ. ಆ ಸೌಂದರ್ಯ ಅಲ್ಲಿ ಇದ್ದೇ ಇದೆ; ಅದಕ್ಕೆ ಮಾತಿನ ಆಭರಣ ತೊಡಿಸಬೇಕಾದ್ದೇನು? ಕಮಲಕ್ಕೆ ಬಣ್ಣ ಬಳಿಯಬೇಕೆ? ಅವರು ನಿಸರ್ಗ ಸೌಂದರ್ಯವನ್ನು ಬಲ್ಲರು; ಆದರೆ ಅದರ ಮುನ್ನೆಡೆಯಲ್ಲಿ ವಿಕಟನೃತ್ಯ ಮಾಡುತ್ತಿರುವ ಜನ ಜೀವನದ ಕಷ್ಟ, ಕಾರ್ಪಣ್ಯ, ದಾರುಣತೆಗಳನ್ನೂ ಬಲ್ಲರು. ಇದು ಅವರ ಹೃದಯವನ್ನು ಶೂಲದಂತೆ ಇರಿದಿದೆ. ನಿಸರ್ಗ ಸೌಂದರ್ಯವನ್ನು ಜನಜೀವನದಲ್ಲೂ ತರಬೇಕು : ನಮ್ಮ ಗಮನಹರಿಯಬೇಕಾದ್ದು ಅತ್ತಕಡೆಗೆ ! ಅವರು ಜೋಗ್ ಜಲಪಾತದ ಅದ್ಭುತ ಸೌಂದರ್ಯದ ಮುಂದೆ ಮೊದಲಬಾರಿ ನಿಂತಾಗ ಭಾವಸಮಾಧಿಗೆ ಹೋಗಲೊಲ್ಲದೆ. ''ಎಷ್ಟೊಂದು ಶಕ್ತಿ ಪೋಲಾಗುತ್ತಿದೆ!'' ಎಂದರಂತೆ. ಈ ಕಥೆ ನಿಜವಲ್ಲದಿದ್ದರೆ ನಿಜವಾಗಬೇಕಾದ್ದು. ವಿಶ್ವೇಶ್ವರಯ್ಯನವರಿಂದ ಹೊರಡಬೇಕಾದರೆ ಅಂಥ ಮಾತೇ.

ಬಡವರು ತಮಗೆ ಬೇಕಾದ ಸೇವೆಯೆಲ್ಲಕ್ಕೂ ಹಣ ಸುರಿಯಬೇಕು; ಹಣಗಾರರೂ ಅಧಿಕಾರದಲ್ಲಿರುವವರೂ ಅನೇಕ ವೇಳೆ ಬಿಟ್ಟಿ ಸೇವೆಯನ್ನು ನಿರೀಕ್ಷಿಸುತ್ತಾರೆ. ಪಡೆದೂ ಪಡೆಯುತ್ತಾರೆ. ಆದರೆ ಡಾ|| ವಿಶ್ವೇಶ್ವರಯ್ಯನವರು. ''ದುಡಿದವನಿಗೆ ಪ್ರತಿಫಲ ದೊರೆಯಲೇಬೇಕು.'' ಎಂಬ ತತ್ವಕ್ಕೆ ವಿರೋಧವಾಗಿ ಎಂದೂ ನಡೆದವರಲ್ಲ. ಒಂದು ಬಾರಿ ಅವರು ಯಾವುದೋ ಹಳ್ಳಿಯಲ್ಲಿ ಬಿಡಾರ ಮಾಡಿದ್ದಾಗ ಕೈಬೆರಳಿಗೆ ಸಣ್ಣ ಗಾಯವಾಗಿ ರಕ್ತ ಬಂತು. ಹಳ್ಳಿಯ ಆಸ್ಪತ್ರೆಗೆ ಹೋಗಿ ಗಾಯದ ಮೇಲೊಂದು ಪ್ಲಾಸ್ತ್ರಿ ಹಾಕಿಸಿ, ಮರಳಿ ಬಿಡಾರಕ್ಕೆ ಬಂದೊಡನೆ ಡಾಕ್ಟರಿಗೆ 25 ರೂಪಾಯಿನ ಚೆಕ್ಕು ಕಳುಹಿಸಿದರು. ಡಾಕ್ಟರು ಚೆಕ್ಕನ್ನು ಹಿಡಿದುಕೊಂಡು ಓಡಿಬಂದು. ''ತಮಗೆ ಸೇವೆ ಸಲ್ಲಿಸಲು ಅವಕಾಶ ಸಿಕ್ಕಿದ್ದೇ ನನಗೊಂದು ಗೌರವ. ನನ್ನ ಕರ್ತವ್ಯಕ್ಕಿಂತ ಹೆಚ್ಚಿನದೇನನ್ನೂ ನಾನು ಮಾಡಲಿಲ್ಲ. ಈ ಚೆಕ್ಕನ್ನು ತೆಗೆದುಕೊಳ್ಳಲಾರೆ,'' ಎಂದರು. ಅದಕ್ಕೆ ಉತ್ತರವಾಗಿ ವಿಶ್ವೇಶ್ವರಯ್ಯನವರು ಗಂಭೀರ ಮುದ್ರೆಯಿಂದ ಹೇಳಿದರು: ''ಹೌದು, ಯಾವ ರೋಗಿಗೇ ಆಗಲಿ ಸೇವೆ ಸಲ್ಲಿಸಿದಾಗ ನಿಮ್ಮನ್ನು ನೀವು ಗೌರವಿಸಿಕೊಂಡಂತೆ. ನೀವು ಹಾಗೆ ಭಾವಿಸಲೆಂದೇ ನನ್ನ ಆಸೆ. ಆದರೆ ಹಣ ಕೊಡಲು ಶಕ್ತಿಯುಳ್ಳವರು ಕೊಡಬೇಕು; ಕೊಡದಿದ್ದರೆ. ಕೊಡಲಾರದವರಿಂದ ಹಣ ಪಡೆಯುವ ಆಸೆ ನಿಮ್ಮಲ್ಲಿ ಕುದುರಬಹುದು. ನಿಮ್ಮ ಕರ್ತವ್ಯವನ್ನು ನೀವು ಪಾಲಿಸಿದ್ದೀರಿ. ನನ್ನದನ್ನೂ ಪಾಲಿಸಲು ಅವಕಾಶ ಕೊಡಿ.''

ಕೆಲವು ವೇಳೆ ಮಹಾಪುರುಷರು ಉನ್ನತವಾದ ವೃಕ್ಷದಂತೆ ನಿಂತು ಸುತ್ತಲೂ ನೆರಳು ಹಾಕುತ್ತಾರೆ; ಆ ನೆರಳಿನಲ್ಲಿ ಮತ್ತಾವ ಗಿಡವೂ ಬೆಳೆಯದು. ಅಂಥವರ ಪ್ರಭಾವದಿಂದಾಗಿ ಸುತ್ತಲೂ ಇರುವವರ ಆತ್ಮ ವಿಶ್ವಾಸ. ಎದೆಗಾರಿಕೆ. ಮುನ್ನುಗ್ಗುವ ಶಕ್ತಿ. ಇವೆಲ್ಲಾ ಕುಂದಿ ಹೋಗಬಹುದು. ಇಂಥ ಲೋಪಕ್ಕೆ ಅವಕಾಶ ಕೊಡದಿರುವ ಅಪರೂಪ ವ್ಯಕ್ತಿಗಳಲ್ಲಿ ಡಾ|| ವಿಶ್ವೇಶ್ವರಯ್ಯನವರೊಬ್ಬರು. ಅವರು ತಮ್ಮ ಸುತ್ತಲೂ ಚೆಲ್ಲಿರುವುದು ನೆರಳಲ್ಲ, ಬೆಳಕು. ಅವರಿಗೆ ಬೇಕಾದ್ದು ಕುರುಡು ವಿಧೇಯತೆಯಲ್ಲ. ಅವರು ಆತ್ಮ ವಿಶ್ವಾಸವುಳ್ಳವರನ್ನೂ ಹೊಸ ಪ್ರಯೋಗಗಳನ್ನು ನಡೆಸುವ ಕೆಚ್ಚುಳ್ಳವರನ್ನೂ ಹುಡುಕಿಕೊಂಡು ಹೋಗುತ್ತಾರೆ, ಆ ಗುಣಗಳನ್ನು ಇತರರ ಮೇಲೆ ಬಲವಂತವಾಗಿ ಹೊರಿಸುವುದೂ ಉಂಟು. ಮೈಸೂರಿನಲ್ಲಿ ಅವರ ನಂತರ ಅಧಿಕಾರಕ್ಕೆ ಬಂದು ದಕ್ಷತೆಗೂ ಪ್ರಾಮಾಣಿಕತೆಗೂ ಹೆಸರು ಪಡೆದ ದಿವಾನರಿಬ್ಬರೂ ಅವರೊಡನೆಯೇ ಬಹುಕಾಲ ಕೆಲಸಮಾಡಿ ಅವರಲ್ಲಿ ಭಕ್ತಿಯನ್ನಿಟ್ಟಿದ್ದವರು.

ಅವರ ಪಾಲನೆಗಳನ್ನು ಮುಂದುವರಿಸಿದವರು. ಆದರೂ ಅವಶ್ಯಕವೆಂದು ತೋರಿದಾಗ ವಿಶ್ವೇಶ್ವರಯ್ಯನವರ ಅಭಿಪ್ರಾಯಗಳನ್ನು ವಿರೋಧಿಸುವ ಧೈರ್ಯ ಅವರಲ್ಲಿ ಬೆಳೆದಿತ್ತು; ಪ್ರಾಮಾಣಿಕ ನಿರೋಧಕ್ಕೆ ಗೌರವ ಕೊಡುವಂಥ ಔನ್ನತ್ಯ ವಿಶ್ವೇಶ್ವರಯ್ಯನವರಲ್ಲಿತ್ತು. ಆತ್ಮವಿಶ್ವಾಸವನ್ನು ಅವರು ಹೇಗೆ ಬೆಳೆಸುತ್ತಿದ್ದರೆಂಬದಕ್ಕೆ ಉದಾಹರಣೆಯಾಗಿ ಒಂದು ಪ್ರಸಂಗವನ್ನು ಇಲ್ಲಿ ಕಾಣಿಸಬಹುದು. ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯಲ್ಲಿ ಬ್ಲಾಸ್ಟ್ ಫರ್ನೇಸಿನ ಮೇಲ್ವಿಚಾರಣೆಗೆ ಅಮೇರಿಕದವರೊಬ್ಬರನ್ನು ನೇಮಿಸಿದ್ದರು. ಆತನ ಅಧಿಕಾರಾವಧಿ ಮುಗಿದೊಡನೆ ವಿಶ್ವೇಶ್ವರಯ್ಯನವರು ಅವರನ್ನು ಗೌರವದಿಂದ ಕಳಿಸಿಕೊಟ್ಟು, ಮೈಸೂರಿನವರೊಬ್ಬರನ್ನು ಕರೆದು ''ಈ ಕೆಲಸವನ್ನು ನೀವು ವಹಿಸಿಕೊಳ್ಳಿ''. ಎಂದರು. ಆ ಯುವಕನಿಗೆ ಅನಿರೀಕ್ಷಿತವಾಗಿ ಈ ಸನ್ಮಾನ ದೊರೆತದ್ದು ಆಶ್ಚರ್ಯವುಂಟುಮಾಡಿತು. ಯಾಂತ್ರಿಕ ವಿಷಯಗಳಲ್ಲಿ ದಕ್ಷರೆಂದರೆ ಬಿಳಿಯರು ಮಾತ್ರ ಎಂದು ಜನ ನಂಬಿದ್ದ ಕಾಲ ! ಆತ. ''ನನ್ನ ಕೈಲಾದಷ್ಟು ನಿಷ್ಠೆಯಿಂದ ಕೆಲಸ ಮಾಡುತ್ತೇನೆ. ನನಗೆ ಅಷ್ಟು ಶಕ್ತಿಯಿದೆಯೋ ಇಲ್ಲವೋ ಕಾಣೆ,'' ಎಂದು ನಮ್ರನಾಗಿ ತಡವರಿಸಿದ. ಡಾಕ್ಟರ್ ವಿಶ್ವೇಶ್ವರಯ್ಯನವರ ಉತ್ತರ ಸ್ವಲ್ಪ ನಿಷ್ಠುರವಾಗಿಯೇ ಬಂತು.'' ''ನಿಮಗೆ ಶಕ್ತಿಯಿದೆಯೆ ಅಂತ ನಾನು ಕೇಳುತ್ತಿಲ್ಲ; ಇದೆ ಅಂತ ಹೇಳುತ್ತಿದ್ದೇನೆ.''

ಕೆಲವರು ಒಂದೊಂದು ವೇಳೆ. ''ಡಾ|| ವಿಶ್ವೇಶ್ವರಯ್ಯನವರಲ್ಲಿ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವ ಸ್ವಲ್ಪ ಹೆಚ್ಚಾಯಿತಲ್ಲವೆ?'' ಎಂದು ಸಂದೇಹ ಪಟ್ಟಿದ್ದಾರೆ. ವಿಶ್ವೇಶ್ವರಯ್ಯನವರ ಜೀವನಕ್ಕೆ ತಳಹದಿಯಾಗಿರುವುದು ನಮ್ಮ ದೇಶದ ಸಂಸ್ಕೃತಿಯಲ್ಲವೆಂದು ಭಾವಿಸಿದರೆ ಅದು ತಪ್ಪು. ಅವರಿಗೆ ಪಾಶ್ಚಾತ್ಯ ದಿರಸನ್ನು ಕಂಡರೆ ಅಭಿಮಾನವೇನೋ ಉಂಟು. ಅದು ನೀಟಾಗಿರುತ್ತದೆ. ಅತ್ತ ಇತ್ತ ಹಾರಾಡುವುದಿಲ್ಲ, ಕೈಕಾಲುಗಳ ಚಲನೆಗೆ ಅಡ್ಡಿಯಾಗುವುದಿಲ್ಲ; ಆದರೂ ಅವರು ಊಟಕ್ಕೆ ಕುಳಿತುಕೊಳ್ಳುವಾಗ ಪಂಚೆಯನ್ನೇ ಉಡುತ್ತಾರೆ. ಕೈಗಾರಿಕೆಗಳನ್ನು ಬೆಳಸಿ ಕೊಳ್ಳದಿದ್ದರೆ ಭಾರತಕ್ಕೆ ಉಳಿವಿಲ್ಲವೆಂಬುದನ್ನು ಅವರಿಗಿಂತ ಚೆನ್ನಾಗಿ ಮನಗಂಡವರಿಲ್ಲ; ಆದರೆ ಅವರು ಪ್ರಯಾಣ ಹೊರಟಾಗ ಅವರ ಸೂಟ್ ಕೇಸಿನಲ್ಲಿ ಭಗವದ್ಗೀತೆಯ ಪ್ರತಿಯಿದ್ದುದನ್ನು ಮಿತ್ರರೊಬ್ಬರು ಕಂಡಿದ್ದಾರೆ. ಇಂದೂ ಅವರ ಮನೆಯಲ್ಲಿ ಉಪಾಕರ್ಮ ಇತ್ಯಾದಿ ಹಬ್ಬಗಳು ಒಂದು ಮಿತಿಯಲ್ಲಿ ಅವರಿಗಿರುವ ಕಾಲಾವಕಾಶದ ಮಿತಿಯಲ್ಲಿ – ನಡೆಯುತ್ತವೆಯೆಂದು ಕೇಳಿದ್ದೇನೆ. ಅವರು ಇಹಜೀವನವನ್ನು ಬದಿಗಿಟ್ಟು ಆಧ್ಯಾತ್ಮಿಕ ಜೀವನವನ್ನು ಗಗನಕ್ಕೆ ಏರಿಸುವುದಿಲ್ಲ ನಿಜ. ಆದರೆ ನಮ್ಮ ಉಪನಿಷತ್ತುಗಳು ತಾನೆ ಹಾಗೆ ಮಾಡುತ್ತವೇನು? ಕಾಯಕದ ಹಿರಿಮೆ. ಕರ್ತವ್ಯನಿಷ್ಠೆ. ಸರ್ವರಿಗೂ ಸಂಪದ್ಯುಕ್ತವಾದ ಪೂರ್ಣ ಜೀವನ. ಇಂಥ ಆದರ್ಶಗಳನ್ನು ನಂಬಿರುವ ಡಾ|| ವಿಶ್ವೇಶ್ವರಯ್ಯನವರು ಉಪನಿಷತ್ತುಗಳ ಶ್ರುತಿಗೆ ಸೇರುವಂಥ ಜೀವನ ನಡೆಸುತ್ತಿದ್ದಾರೆ. ಅಸ್ಪಷ್ಟವಾದ. ಜೀವನದ ಸಬಂಧವನ್ನು ಕಡಿದುಕೊಂಡಿರುವ. ನಿಷ್ಫಲ ಅನುಭಾವವು. ''ನಾನೇ ಭಾರತದ ಅಂತರಾತ್ಮ'' ಎಂದು ಅನೇಕ ವೇಳೆ ಸೋಗುಹಾಕುತ್ತದೆ. ಈ ಬಗೆಯ ಅನುಭಾವ ಡಾ|| ವಿಶ್ವೇಶ್ವರಯ್ಯನವರಿಗೆ ಹಿಡಿಸದು.


''ವಿಶ್ವೇಶ್ವರಯ್ಯ; ವ್ಯಕ್ತಿ ಮತ್ತು ಐತಿಹ್ಯ:'' ಈ ದ್ವೈತಭಾವ ಡಾ|| ವಿಶ್ವೇಶ್ವರಯ್ಯನವರ ವಿಷಯದಲ್ಲಿ ಸಲ್ಲದು : ''ವ್ಯಕ್ತಿಯೇ ಐತಿಹ್ಯ. ಐತಿಹ್ಯವೇ ವ್ಯಕ್ತಿ.'' ಎನ್ನಬೇಕು.

## ಶಬ್ದಗಳ ಅರ್ಥ:


ಐತಿಹ್ಯ – ಬಾಯಿ ರೂಢಿ, ಇತಿಹಾಸಕ್ಕೆ ಸಂಬಂಧಿಸಿದು ಕಲರವ – ಇಂಚರ, ದಿವಾನ – ಮುಖ್ಯ ಕಾರಭಾರಿ, ದಕ್ಷ – ಸಮರ್ಥ ದಿವಾನ್ – ಮುಖ್ಯ ಕಾರಭಾರಿ, ದಕ್ಷ– ಸಮರ್ಥ, ಯೋಗ್ಯ, ನಿಷ್ಕೃಷ್ಟತೆ – ಸ್ಪಷ್ಟತೆ, ತಂಗು – ಬೀಡು, ಬಿಡು; ವಿಕಟ – ಪ್ರಚಂಡ, ಭಯಂಕರ; ದಾರುಣ – ಕ್ರೂರವಾದ ಬಿಡಾರ – ತಂಗುವಸ್ಥಳ, ಕುದುರು – ಅಂಕುರಿಸು, ಎದೆಗಾರಿಕೆ – ದಿಟ್ಟತನ, ದಿರಿಸು – ಉಡುಪು; ದ್ವೈತ – ಎರಡು, ಬಿನ್ನ.

## ಅಭ್ಯಾಸ


**ಕೃತಿ 1)** I) ಕೆಳಗಿನ ಜಾಲಾಕೃತಿ ಬಿಡಿಸಿರಿ.




II) ಭದ್ರಾವತಿಯ ಕಾರಖಾನೆಗಳು



III) ವಿಶ್ವೇಶ್ವರಯ್ಯನವರ ಹುಟ್ಟುಗುಣಗಳು



**ಕೃತಿ 2)**
i) ವಿಶ್ವೇಶ್ವರಯ್ಯನವರ ಕೈವಾಡ ಕರ್ನಾಟಕ ರಾಜ್ಯದ ಯಾವ ಯಾವ ಕಡೆಗಳಲ್ಲಿ ಕಾಣುತ್ತದೆ?
ii) ವಿಶ್ವೇಶ್ವರಯ್ಯನವರ ವ್ಯಕ್ತಿತ್ವ ಜನರ ಮನಸ್ಸನ್ನು ಹೇಗೆ ಸೆಳೆಯುತ್ತದೆ?
iii) ಪ್ರಕೃತಿ ಸೌಂದರ್ಯದ ವಿಷಯದಲ್ಲಿ ವಿಶ್ವೇಶ್ವರಯ್ಯನವರ ಅಭಿಪ್ರಾಯವೇನು?
iv) ಪರಿಸರ ಸಂರಕ್ಷಣೆ ಮಾಡಲು ನೀವು ಯಾವ ಉಪಾಯಗಳನ್ನು ಕೈಕೊಳ್ಳುವಿರಿ ಎಂಬುದನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.
v) ನಿಮ್ಮ ಶಾಲೆಯಲ್ಲಿ ಆಚರಿಸಿದ ವಿಶ್ವ ಪರಿಸರ ದಿನದ ಆಚರಣೆಯ ಕುರಿತು ನಿಮ್ಮ ಗೆಳೆಯ/ಗೆಳತಿಗೆ ಪತ್ರ ಬರೆಯಿರಿ.

**ಕೃತಿ 3)**
I) ಈ ಕೆಳಗಿನ ಪದಗಳ ಲಿಂಗಗಳನ್ನು ಬರೆಯಿರಿ ದಿವಾನ, ವಿಶ್ವೇಶ್ವರಯ್ಯ, ಧರ್ಮ, ಭಯ, ಕಲ್ಲು, ವಿದ್ಯಾರ್ಥಿ, ಬಾಲೆ, ಕವಿ, ಅವನು
II) ಶಕ್ತಿ ಗುಣ, ಬುದ್ಧಿ ಸತ್ಯ. ನಿಷ್ಠೆ - ಈ ಶಬ್ದಗಳಿಗೆ ಈ ಕೆಳಗಿನ ಶಬ್ದಗಳಿಗೆ ವಂತ'' ಎಂಬ ತದ್ಧಿತ ಪ್ರತ್ಯಯ ಸೇರಿಸಿ ಬರೆಯಿರಿ.
III) ಕೆಳಗಿನ ವಾಕ್ಯದಲ್ಲಿಯ ಕರ್ತೃ ಕರ್ಮ ಕ್ರಿಯಾಪದಗಳನ್ನು ಗುರುತಿಸಿ ಬರೆಯಿರಿ.
ವಿಶ್ವೇಶ್ವರಯನವರು ಐದು ನಿಮಿಷ ಮಾತನ್ನು ಆಡಿದರು.
IV) ಕೆಳಗಿನ ಶಬ್ದಗಳ ವಿಭಕ್ತಿ ಪ್ರತ್ಯಯ ಗುರುತಿಸಿ ಬರೆಯಿರಿ.
ಪ್ರಯಾಣಿಕರಲ್ಲಿ - ವ್ಯಕ್ತಿತ್ವಕ್ಕೆ - ಪರಿಸರದಿಂದ - ಪ್ರಯೋಗಗಳನ್ನು

2.

# ದೇವರ ನಗು

- ಜಿ. ಪಿ. ರಾಜರತ್ನಂ

**ಲೇಖಕರ ಪರಿಚಯ :** ಈ ಗದ್ಯಭಾಗವನ್ನು ಜಿ. ಪಿ. ರಾಜರತ್ನಂ ಅವರು ಬರೆದಿರುವ 'ನಕ್ಕಾಳಾ ತಾಯಿ' ಎಂಬ ಪುಸ್ತಕದಿಂದ ಆರಿಸಿಕೊಂಡಿದೆ. ಪ್ರಖ್ಯಾತ ಸಾಹಿತಿಗಳಾದ ರಾಜರತ್ನಂ ಅವರು ಕನ್ನಡ ಪ್ರಾಧ್ಯಾಪಕರಾಗಿ ಶ್ರೇಷ್ಠಮಟ್ಟದ ಸೇವೆಸಲ್ಲಿಸಿ ಈಗ ವಿಶ್ರಾಂತಿ ಪಡೆಯುತ್ತಿದ್ದಾರೆ. ಬೌದ್ಧಧರ್ಮ ಹಾಗೂ ಜೈನ ಧರ್ಮದ ವಿಚಾರವಾಗಿ ಅನೇಕ ಗ್ರಂಥಗಳನ್ನು ಬರೆದಿದ್ದಾರೆ. ಇವರ 'ರತ್ನನ ಪದಗಳು' ಕನ್ನಡ ಸಾಹಿತ್ಯದ ವಿಶಿಷ್ಟ ಕೊಡುಗೆಯಾಗಿದೆ. ಇವರು ಬುದ್ಧವಚನ ಪರಿಚಯ ಮೇಲಿಂದ ಪ್ರಶ್ನೆ, ಧರ್ಮಪದ (ದಮ್ಮಪದ) ಚೀನಾ ದೇಶದ ಗಾಂಧಿ, ನಮ್ಮ ನಗೆಗಾರರು, ಕೈಲಾಸಮಂಥನ, ಏಕಲವ್ಯ - ಇವೇ ಮೊದಲಾದ ಗ್ರಂಥಗಳನ್ನೂ : ಮಕ್ಕಳಿಗಾಗಿ ಬಾಕರೂ ಬಾ, ಗೋಳೂರಿನ ಗಾಯಕರು, ಗೌತಮಬುದ್ಧ, ತೆನಾಲಿರಾಮ, ಪುಟಾಣಿ ಪಂಚತಂತ್ರ, ರಾಬಿನ್‌ಹುಡ್ - ಇವೇ ಮೊದಲಾದ ಗ್ರಂಥಗಳನ್ನು ಬರೆದು ಕನ್ನಡಿಗರಿಗೆ ಚಿರ ಪರಿಚಿತರಾಗಿದ್ದಾರೆ. ಶ್ರೇಷ್ಠ ಬೋಧಕರೂ, ಒಳ್ಳೆಯ ಭಾಷಣಕಾರರೂ, ಶ್ರೇಷ್ಠ ಸಾಹಿತಿಗಳೂ ಆದ ಇವರನ್ನು ದೆಹಲಿಯಲ್ಲಿ ನಡೆದು 50ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಮಾಡಿ ಗೌರವಿಸಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯವು ಗೌರವ ಡಾಕ್ಟರೇಟ್ ಪ್ರಶಸ್ತಿ ನೀಡಿಸನ್ಮಾನಿಸಿದೆ.

ಆಡಂಬರದಿಂದ ಕೂಡಿದ ಪೂಜೆ, ದೇವಾಲಯಗಳ ನಿರ್ಮಾಣ ಇತ್ಯಾದಿ ಬಾಹ್ಯ ಕರ್ಮಗಳಿಂದ ಮೋಕ್ಷ ದೊರೆಯುವುದೆಂದು ಭಾವಿಸುವುದು ಮೌಢ್ಯ. ಎರಡಿಲ್ಲದ ಭಕ್ತಿಯಿಂದ ಭಗವಂತನನ್ನು ಪೂಜಿಸಿದಾಗ ಮಾತ್ರ ಅವನು ಒಲಿಯುವನು. ಈ ನಿತ್ಯ ಸತ್ಯ ಜ್ಞಾನಿಗಳಿಗೆ ಮಾತ್ರ ಅನುಭವ ವೇದ್ಯ. ಇಂತಹ ಜ್ಞಾನಿಗಳು ತಾವು ಮುಕ್ತರಾಗುವುದಲ್ಲದೆ ಲೋಕವನ್ನು ಉದ್ಧರಿಸುತ್ತಾರೆ. ಅವರ ಮಾರ್ಗದರ್ಶನದಿಂದ ಉದ್ಧಾರವಾದ ಮಹಾಪುರುಷನೊಬ್ಬನ ಜೀವನಕಥೆ ಇಲ್ಲಿ ವ್ಯಕ್ತವಾಗಿದೆ.

ಹನ್ನೆರಡನೆಯ ಶತಮಾನದಲ್ಲಿ ಕರ್ನಾಟಕ ದೇಶದಲ್ಲಿ ಅಲ್ಲಮನೆಂಬ ಮಹಾಪುರುಷನಿದ್ದ. ಆತನ ಜ್ಞಾನ ವೈರಾಗ್ಯಗಳನ್ನು ಕಂಡು ಜನ ಆತನನ್ನು ಪ್ರತ್ಯಕ್ಷ ಪರಮೇಶ್ವರನೆಂದು ಭಾವಿಸಿದ್ದರು. ಆತ ಅದೇ ಕಾಲದಲ್ಲಿ ಕರ್ನಾಟಕದಲ್ಲಿದ್ದ ಬಸವೇಶ್ವರ, ಸಿದ್ಧರಾಮ ಮುಂತಾದ ಶಿವಭಕ್ತರನ್ನು ಪುಟಕ್ಕಿಕ್ಕಿ ಪುನೀತರನ್ನಾಗಿ ಮಾಡಿದ.



ಹೀಗೆ ಅಲ್ಲಮನ ಕೃಪೆಗೆ ಪಾತ್ರರಾಗಿ ತಮ್ಮ ಬದುಕನ್ನು ತಿದ್ದಿಕೊಂಡವರಲ್ಲಿ ಒಬ್ಬನಾದ ಸಿದ್ಧರಾಮ ದೊಡ್ಡ ಕರ್ಮಯೋಗಿ. ಆತ ಗೃಹ ತ್ಯಾಗಮಾಡಿ. ಮಹಾ ಶಿವಾಲಯವನ್ನು ಕಟ್ಟಿ ಕೃತಾರ್ಥನಾಗಬೇಕೆಂದು ಸೊನ್ನಲಾಪುರದಲ್ಲಿ ಕೆಲಸಕ್ಕೆ ತೊಡಗಿದ್ದ. ಅಲ್ಲಿ. ದೇಗುಲವನ್ನು ಕಟ್ಟಿಸುತ್ತಿದ್ದ ಕಡೆಗೆ, ಸಿದ್ಧರಾಮನ ಶಿಷ್ಯರೂ ಮಣ್ಣು ಕೆಲಸದ ಒಡ್ಡರೂ ಬಂಡಿಕಾರರೂ ಕಲ್ಲುಕುಟಿಗರೂ ಇದ್ದ ಎಡೆಗೆ ಒಂದು ಸಲ ಅಲ್ಲಮ ಬಂದ.

ಬಂದು ಅಲ್ಲಿಯ ಸಂಭ್ರಮವನ್ನು ನೋಡಿ, ''ನೂಲಿನ ಸಂಕಲೆಯನ್ನು ಕಡಿದು ಚಿನ್ನದ ಕೋಳವನ್ನು ಕಾಲಿಗೆ ಕೀಲಿಸಿಕೊಂಡ ಮತಿಹೀನನ ಹಾಗೆ ಈ ರಾಮ ಏನು ಕೆಲಸ ಮಾಡಿದ ! ಹೆಂಡತಿ ಮಕ್ಕಳಿಂದ ಭಯವೆಂದು ಸಂಸಾರ ತ್ಯಾಗಮಾಡಿ ಪುನಃ ಬೋಳುಮಂಡೆಯ ಕೀರ್ತಿಗೋಸ್ಕರ ಸೋತನಲ್ಲ ! ಖ್ಯಾತಿಗಾಗಿ ಪೂಜಾಲಾಭದ ಇಚ್ಛೆಯಿಂದ ಚಿಕ್ಕ ಸಂಸಾರವನ್ನು ಸಡಿಲಿಸಿ ದೊಡ್ಡ ಸಂಸಾರಕ್ಕೆ ಗಂಟುಬಿದ್ದನಲ್ಲಾ! ಸಂಸಾರಿಯಲ್ಲದವನಿಗೇ ಈ ಗತಿಯಾದರೆ ಉಳಿದ ಸಂಸಾರಿಗಳ ಗತಿಯೇನು!'' ಎಂದು ಅಲ್ಲಮ ಬೆರಗಾದನು.

ಬಳಿಕ, ಆ ರಾಮಯ್ಯನ ಶಿಷ್ಯರಿಗೆ ಕೇಳಿಸುವ ಹಾಗೆ ''ಈ ಒಡ್ಡ ರಾಮ ಇದೇನು ಗೊಡವೆಯನ್ನು ಒಡ್ಡಿಕೊಂಡ! ವೃಥಾ ಮನಸ್ಸನ್ನು ಗೊಡ್ಡು ಮಾಡಿಯೆ ಕೆಟ್ಟ!'' ಎಂದ.

ಶಿಷ್ಯರು ಆ ಮಾತು ಕೇಳಿ. ''ನಮ್ಮ ಗುರುವನ್ನು ಒಡ್ಡನೆಂದು ಹೀಯಾಳಿಸುವವನು ಯಾವನೋ?'' ಎಂದು ಅಲ್ಲಮನ ಮೇಲೆ ಹಾಯ್ದು ಜಗಳಕ್ಕೆ ಬಂದರು.

ಅದಕ್ಕೆ ಅಲ್ಲಮನು ಎಂದ; ''ಅಯ್ಯೋ, ನಿಮ್ಮ ಗುರುವಿನ ಆಗಮಯುಕ್ತಿ ಕಲ್ಲಿಗೆ ಇಳಿಯಿತೆ? ಒಳ್ಳೆಯ ಬುದ್ಧಿಹೀನ ಸಿದ್ಧನನ್ನು ನಂಬಿ ಶಿಷ್ಯಪದವಿ ಪಡೆದಿರಿ. ಕಲ್ಲು ಕಡಿದು, ಕಲ್ಲಿನ ಮೇಲೆ ಕಲ್ಲು ಕೂಡಿಸಿ. ದೇಗುಲವನ್ನೆತ್ತುವವರು ಒಡ್ಡರೇ ಹೊರತು ಸಿದ್ಧರಲ್ಲ.''

ಆ ಮಾತು ಕೇಳಿ ಶಿಷ್ಯರಿಗೆ ಇನ್ನೂ ರೇಗಿತು. ''ನೋಡಿದೆಯ! ನೋಡಿದೆಯ! ಹುಚ್ಚ ಹಿಡಿದವನಂತೆ ಕಲಿತ ಮಾತನ್ನೆಲ್ಲ ಆಡಬೇಡ. ಬೇಡ! ಬೇಡ ! ನಮ್ಮ ಗುರುವನ್ನು ನಿಂದಿಸಿದರೆ ಅನ್ಯಾಯವಾಗಿ ಕೆಡುವೆ'' ಎಂದರು.

ಅದಕ್ಕೆ ಅಲ್ಲಮ ಆ ಶಿಷ್ಯರು ಇನ್ನೂ ಕೆರಳುವ ಹಾಗೆ ''ಪಾಪ, ನೀವು ಇನ್ನೂ ಶಿಷ್ಯರು. ನನ್ನ ಮೂರ್ಖತನ ಹಾಗಿರಲಿ, ನಿಮ್ಮ ದೊಡ್ಡವನನ್ನು ಕರೆದು ತನ್ನಿ. ಅವನ ಸಾಮರ್ಥ್ಯವನ್ನು ನೋಡೋಣ'' ಎಂದು ಪುನಃ ಹೇಳಿದನು.

ಶಿಷ್ಯರ ಸೈರಣೆ ಇನ್ನು ತಡೆಯದೆ ಹೋಯಿತು. ''ಕೆಡಹಿಕೊಳ್ಳಿರೊ ಇವನನ್ನು! ನಮ್ಮ ಯಜಮಾನನನ್ನು ಹೀಗೆ ಹೀಯಾಳಿಸಿ ಹೋಗಲು ಇವನನ್ನು ಬಿಡುವೆವೆ! ಹಿಡಿದುಕೊ! ಕೋ!!'' ಎನ್ನುತ್ತ ಆ ಶಿಷ್ಯರು ಒಂದು ಗುಂಪಾಗಿ ಬಂದು ಅಲ್ಲಮನನ್ನು ಹಿಡಿಯಬೇಕೆಂದು ತಬ್ಬಿದರು.

ಆದರೆ ಏನಾಶ್ಚರ್ಯ! ರೂಪ ಕಣ್ಣಿಗೆ ಕಾಣುತ್ತಿದ್ದರೂ ಕೈಗೆ ಏನೂ ಸಿಕ್ಕಲಿಲ್ಲ. ಬಯಲನ್ನು ಬಾಚಿಕೊಂಡಂತಾಯಿತು. ಆಗ ಲಕ್ಷಗಟ್ಟಲೆಯಾಗಿ ಜನ ಮುತ್ತಿಕೊಂಡು ಅಲ್ಲಮನ ಕಡೆಗೆ ಕವಣೆಯಿಂದ ಕಲ್ಲು ಬೀಸಿದರು. ಆದರೆ ಕಲ್ಲೊಂದೊ ತನಗೆ ತಾಗದೆ, ನಿರ್ಲೇಪನಾಗಿ ನಗು ನಗುತ್ತ ಅಲ್ಲಮಪ್ರಭು ಅಲ್ಲಿ ಕಲ್ಲುರಾಶಿಯ ಮೇಲೆ ನಿಂತಿದ್ದ.

ಶಿಷ್ಯರು ಕೈಮಾಡಿದುದು ನೆರಳಿನೊಡನೆ ಕಾಳಗ ಮಾಡಿದಂತಾಯಿತು. ಕದನದಿಂದ ಅವರಿಗೇ ಆಯಾಸವಾಯಿತಲ್ಲದೆ ಆತನಿಗೇನೂ ಆಗಲಿಲ್ಲ. ಅಲ್ಲಮನು ಕಾಯವಿರಹಿತನೆಂಬುದನ್ನು ತಿಳಿದು ಕೊಳ್ಳದೆ ಆ ಶಿಷ್ಯರು ವೃಥಾ ಶ್ರಮಕ್ಕೆ ಗುರಿಯಾದರು.

ಈ ವಿಷಮವಾದ ಕಾಳಗವನ್ನು ನೋಡುತ್ತಿದ್ದವರು ''ಇದೇನು ಆಶ್ಚರ್ಯ! ಇವನು ಯಾರು? ವಿಷ್ಣುವಾಗಿದ್ದರೆ ಎದುರಾಳಿಗಳನ್ನು ಚಕ್ರದಿಂದ ಕತ್ತರಿಸುತ್ತಿದ್ದ. ಹರನಾಗಿದ್ದರೆ ಹಣೆಗಣ್ಣಿನಿಂದ ಸುಡುತ್ತಿದ್ದ. ಆದರೆ ಈತನು ಶತ್ರುಗಳನ್ನೂ ನೋಯಿಸುವುದಿಲ್ಲ! ತಾನೂ ಕೆರಳುವುದಿಲ್ಲ'' ಎಂದು ಬೆರಗಾಗಿ, ''ಶರಣು, ಶರಣು!'' ಎನ್ನುತ್ತಿದ್ದರು.

ಈ ನಡುವೆ, ಆ ಶಿಷ್ಯರಲ್ಲಿ ಒಬ್ಬ ''ನಮ್ಮ ಸಿದ್ಧನನ್ನು ಹೀಯಾಳಿಸಿದ ಇವನಿಗೆ ಒಮ್ಮೆ ಶಿಕ್ಷೆ ಮಾಡುವ ವರೆಗೆ ನಮ್ಮ ಕೋಪಾಟೋಪ ನಿಲ್ಲದು'' ಎಂದು ಓಡಿಬಂದು, ''ಒಬ್ಬ ಜಂಗಮ ಸುಮ್ಮನೆ ಬಂದು. ನಿಮ್ಮನ್ನು ಹಳಿದು ಹೀಯಾಳಿಸಿದ'' ಎಂದು ಸಿದ್ಧರಾಮನಿಗೆ ವರದಿ ಒಪ್ಪಿಸಿದ.

ಸಿದ್ಧರಾಮ ತಾನೂ ಕೆರಳಿ ''ಯಾರು ನಮ್ಮನ್ನು ಜರೆದವನು? ಜಂಭಾರಿಯೋ? ದನುಜಾರಿಯೋ ಕಾಮಾರಿಯೋ? ಯಾರು? ಅವನನ್ನು ತೋರು. ಅವನ ಹೆಡತಲೆಗೆ ಉಗಿಯುತ್ತೇನೆ. ಅವನ ನಾಲಗೆಯನ್ನು ಬೇರುಸಹಿತ ಕೀಳುತ್ತೇನೆ. ಇದಕ್ಕೆ ಇಷ್ಟು ಮಾತೇಕೆ!'' ಎಂದು ಗಜರಿ ಗರ್ಜಿಸುತ್ತಾ ಬಂದ.

ಅಲ್ಲಮ ಅವನನ್ನು ನೋಡಿದ. ''ಬಹಳ ಚೆನ್ನಾಯಿತು. ಚೆನ್ನಾಯಿತು. ಸಿದ್ಧರಾಮ ಸಂಸಾರಿಗಳನ್ನೂ ಮೀರಿಸಿಬಿಟ್ಟಿದ್ದಾನೆ! ಛೆ! ಈ ಯತಿತ್ವವನ್ನು ಸುಡಬೇಕು! ಯೋಗಿಯಾದವನಿಗೆ, ಆಸೆಗಳು ಇಲ್ಲದವನಿಗೆ ಇಷ್ಟು ಕೋಪಾಟೋಪವೇಕೆ ರೋಷಾವೇಶವೇಕೆ?'' ಎಂದು ನಗುತ್ತ ಕೇಳಿದ.

ಅದಕ್ಕೆ ಸಿದ್ಧರಾಮ ಉದ್ರೇಕಗೊಂಡು, ''ಸಾಕು, ಸಾಕು, ಮಹೇಂದ್ರಜಾಲವನ್ನು ಕಲಿತು ಬಂದು ನಮ್ಮ ಶಿಷ್ಯರನ್ನು ಕಾಡಿದಂತಲ್ಲ! ಅದು ನಮ್ಮೊಡನೆ ಸಾಗದು!'' ಎಂದು ಅಲ್ಲಮನನ್ನು ಹಂಗಿಸಿದ.

ಅದಕ್ಕೆ ಅಲ್ಲಮ ''ಭಲೆ! ಭಾಪುರೆ ರಾಮಯ್ಯ! ಮಾಯಾ ಪ್ರಪಂಚದಲ್ಲಿ ಮನಸ್ಸು ಮಾತು, ಕೆಲಸಗಳು ಹೀಗಿರಬೇಕು. ನಿಮ್ಮ ಸಂಪ್ರದಾಯ ಕಲಾಪದಲ್ಲಿ ಕೋಪ ಶಾಶ್ವತವಲ್ವೆ! ಆದರೆ. ನಿರ್ಲೇಪನಾದವನಿಗೆ ಈ ರೀತಿ ಉಚಿತವೇ ರಾಮಯ್ಯ? ಎಂದು ಕೇಳಿದ.

ಅಲ್ಲಮ ನಗುತ್ತಿದ್ದಷ್ಟೂ ಸಿದ್ಧರಾಮನಿಗೆ ಕೋಪ ಉಕ್ಕುತ್ತಿತ್ತು. ''ಬೇಡ, ಕೆಣಕಬೇಡ. ಸಂಪ್ರದಾಯಗಳ ಎಣಿಕೆ ನಿನಗೇಕೆ? ಲೋಕದ ಇತರ ವ್ಯಾಪಾರಗಳನ್ನು ನೀನು ಅಣಕವಾಡಿ ಬದುಕಬಹುದು. ಆದರೆ ಯೋಗಮಾರ್ಗದ ಸುದ್ದಿಗೆ ಬಂದೀಯೆ! ಆಚೆಈಚೆಯ ಅಲ್ಪರನ್ನು ಆಡಿಸಿದಂತೆ ನನ್ನನ್ನು ಜರೆದೆಯಾದರೆ ಹಣೆಯ ಕಣ್ಣಿನ ಕಿಡಿಯ ಕೆದರುವೆನು'' ಎಂದ.

ಆದರೂ ಅಲ್ಲಮನ ನಸುನಗೆ ನಿಲ್ಲದು. ''ಲೇಸು! ಲೇಸು! ಹಣೆಗಣ್ಣಿನ ಬೇಗೆಯಲ್ಲಿ ಇದಕ್ಕೆ ಮೊದಲು ಎಷ್ಟು ಕೊಂದಿರುವೆಯೊ! ಹೌದು. ನೀನು ಯೋಗಿಯೇ ! ಹಿಂಸಾ ಧರ್ಮ ಕರ್ಮದಲ್ಲಿ ನೀನು ಯೋಗಿಯೇ ! ರಾಗದಿಂದ ಉರಿದು ಏಳುತ್ತಿರುವ ಭವರೋಗಿ, ನಮಗೆ ನಿನ್ನೊಡನೆ ಮಾತನಾಡಲು ಆಗದು'' ಎಂದ.

ಸಿದ್ಧರಾಮನಿಗೆ ಏನು ಮಾಡಲೂ ತೋಚಲಿಲ್ಲ. ''ಏನೇನು ಹೇಳಿದರೂ ಇವನು ಹಳಿದು ಹಂಗಿಸುವುದನ್ನು ಬಿಡನಲ್ಲಾ !'' ಎಂದು ಕಾಯ್ದು ಕೆಂಡವಾಗಿ. ಗುಡುಗುಡಿಸುತ್ತ ತನ್ನ ಹಣೆಗಣ್ಣನ್ನು ತೆರೆದ. ಸಿಡಿಲ ಕಿಡಿಗಳು ಹೊರಹೊಮ್ಮಿದುವಾದರೂ ಅವು ಅಲ್ಲಮನ ಕಾಲನ್ನೂ ಸೋಕಲಾರದೆ ಹೋದುವು. ಸುತ್ತಿನ ಜೀವಿಗಳು ಮಾತ್ರ ಆ ವಿಸ್ಫುಲಿಂಗಕ್ಕೆ ಸಿಕ್ಕಿ ಸೀದುಹೋಗತೊಡಗಿದುವು.

ಹೀಗೆ ಸಿದ್ಧರಾಮಯ್ಯನ ಮೂರ್ಖತನದಿಂದ ಕೋಟಲೆಗೆ ಒಳಗಾದವರು ''ಸಿದ್ಧರಾಮನು ಮೂಢನಾಗಿ, ತನ್ನ ಅಳತೆ ತನಗೇ ತಿಳಿಯದೆ, ಈ ಪರಮಪುರುಷನೊಡನೆ ವೃಥಾ ಕಾಳಗಕ್ಕೆ ನಿಂತನಲ್ಲ ! ಬಡವನ ಕೋಪ ದವಡೆಗೆ ಕೇಡು ತರುವುದೆಂಬಂತೆ ಇವನ ಕಿಚ್ಚುಗಣ್ಣು ಇವನ ಊರನ್ನೇ ಸುಡುತ್ತಿದೆಯಲ್ಲ!'' ಎಂದು ಒದರುತ್ತಿರುವುದನ್ನು ಕೇಳಿ ಕೃಪಾಶಾಲಿಯಾದ ಅಲ್ಲಮ ತನ್ನ ಕಾಲಿನಿಂದ ಸಿದ್ಧರಾಮನ ನೊಸಲಕಣ್ಣಿನ ಕಿಡಿಯನ್ನು ಒರಸಿ, ಎಲ್ಲರನ್ನೂ ಉಳಿಸಿದನು. ಒಂದು ನಿಮಿಷದಲ್ಲಿ ನಡೆದು ಆ ದೃಶ್ಯ, ಹಿಂದೆ ಸಮುದ್ರಮಥನ ಮಾಡಿದ ಕಾಲದಲ್ಲಿ ಸುಡುತ್ತ ಬಂದ ಹಾಲಾಹಲಾಗ್ನಿಯನ್ನು ಶಿವನು ಶಮನಮಾಡಿ ಲೋಕಗಳನ್ನು ಕಾಪಾಡಿದ ದೃಶ್ಯದಂತಿತ್ತು.

ಸಿದ್ಧರಾಮಯ್ಯ ಆ ಅದ್ಭುತವನ್ನು ಕಂಡು ಶಾಂತನಾದ. ಆಗ ಅವನಿಗೆ 'ಈತನೇ ನನ್ನ ಪರಮ ಗುರುವಾದ ಕಪಿಲಸಿದ್ಧ ಮಲ್ಲೇಶ!' ಎಂದೆನಿಸಿತು. ''ಅಯ್ಯೋ, ನನಗಿಂತ ಕುರಿಗಳಾದರೂ ವಾಸಿ; ಕಾಪಾಡಿದವನನ್ನು ಕಂಡುಕೊಂಡು ಅವನ ಬೆನ್ನಿಗೇ ಇರುತ್ತವೆ. ಶಿವಶಿವಾ! ಆ ಕುರಿಗಳಿಗಿಂತ ಕೇಡಾದೆನಲ್ಲಾ ! ನನ್ನನ್ನು ಕಾಪಾಡುವ ನನ್ನ ಸ್ವಾಮಿ ಮನೆಯ ಬಾಗಿಲಿಗೆ ಬಂದರೆ, ನನ್ನ ಮದದಲ್ಲಿ ನಾನು ಮರೆತೆನಲ್ಲಾ'' ಎಂದು ಒಳಗೊಳಗೇ ಮರುಗುತ್ತಾ ಸಿದ್ಧರಾಮಯ್ಯನು ಅಲ್ಲಮನ ಬಳಿಬಂದು. ''ಕಾಪಾಡು, ಕಾಪಾಡು, ಕರುಣಾ ಕರನೆ. ಸರ್ವ ದ್ರೋಹವೂ ನನ್ನದು. ನಿನ್ನನ್ನು ಅರಿಯದೆ, ಮೋಹ ಮಾಯಾಡಂಬರಕ್ಕೆ ಇದುವರೆಗೆ ಮರುಳಾದೆ. ನನ್ನ ಕೇಡಿಗತನ ಊಹೆಗೂ ಮೀರಿದ್ದು. ನನ್ನ ಎಣಿಕೆಯಿಲ್ಲದ ಅವಗುಣಗಳನ್ನು ನೀನು ಮರೆತು, ಕರುಣಿಸಬೇಕು'' ಎನ್ನುತ್ತ ಆತನ ಕಾಲಿಗೆ ಬಿದ್ದನು.

ಏನು ಮಾಡಬೇಕು ಅಲ್ಲಮ? ಮನಸ್ಸಿನಲ್ಲಿಯೇ ನಸುನಗುತ್ತ. ''ಈ ಮೂರ್ಖನ ಗುಣಗಳನ್ನು ಏನು ಮಾಡಲಿ!'' ಎಂದು. ಸರ್ವಜೀವಗಳಲ್ಲಿಯೂ ದಯೆ ತೋರುವವನಾದ ಆ ಅಲ್ಲಮ. ''ಮಗನೆ, ಸಾಕು, ಏಳು, ನಿನ್ನ ಕೋಪದ ಜ್ಞಾಪಕ ಕೂಡ ನಮಗಿಲ್ಲ.'' ಎನ್ನುತ್ತ ವಿನಯದಿಂದ ಆ ರಾಮನನ್ನು ಮೇಲೆತ್ತಿದನು.

ಗುರುವಿನ ಕರುಣೆಯನ್ನು ಕಂಡು, ಸಿದ್ಧರಾಮನಿಗೆ ಹೋದ ಜೀವ ಮರಳಿ ಬಂದಂತಾಯಿತು. ''ದೇವ, ನೀನು ಈ ರೀತಿಯಾಗಿ ಸಾಮಾನ್ಯ ಜಂಗಮನಂತೆ ಬಂದರೆ! ಗಾವಿಲರಾದ ನಾವು ನಿನ್ನ ಮಹಿಮೆಯನ್ನು ಹೇಗೆ ತಿಳಿಯಬಲ್ಲೆವು? ನಿನ್ನನ್ನು ಸಾಮಾನ್ಯ ಮನುಷ್ಯನೆಂದು ಎಣಿಸಿ ಇಷ್ಟು ಬಳಸಿದೆವು. ನಮ್ಮನ್ನು ಕರುಣಿಸಿ ಕಾಪಾಡಬೇಕು'' ಎಂದು ಬೇಡಿದನು.

ಅದಕ್ಕೂ ಅಲ್ಲಮ ನಗುತ್ತ ''ಚರಾಚರಗಳಿಗೆ ಒಳ್ಳೆಯದಾಗಲಿ, ಎಂದು ಸರ್ವರಿಗಾಗಿ ಹರಸುವ ಬದಲು, ಕೆಲವರು ಪಕ್ಷಪಾತದಿಂದ 'ಗೋಬ್ರಾಹ್ಮಣರಿಗೆ ಶಾಂತಿಗಳಾಗಲಿ' ಎಂಬಂತೆ ಹಿರಿಯರನ್ನು ಮಾತ್ರ ಸತ್ಕರಿಸಿ ಮಿಕ್ಕದವರನ್ನು ಧಿಕ್ಕರಿಸುವುದು ಯೋಗೀಶ್ವರರಿಗೆ ಅನುಚಿತ ರಾಮಯ್ಯ'' ಎಂದ.

ಸಿದ್ಧರಾಮ ತನ್ನ ತಪ್ಪನ್ನು ಒಪ್ಪಿಕೊಳ್ಳಬೇಕಾಯಿತು. ''ಹೌದು, ಗುರುವೆ. ನಮ್ಮ ಚಿತ್ತದಲ್ಲಿ ಇನ್ನೂ ಉತ್ತಮ, ಅಧಮ ಎಂಬ ಪಕ್ಷಪಾತ ಭ್ರಮೆಗಳು ತುಂಬಿವೆ. ಸರ್ವರನ್ನೂ ಸಮಚಿತ್ತದಿಂದ ಕಾಣುವ ರೀತಿಯನ್ನು ನಾವೆಲ್ಲಿ ಬಲ್ಲೆವು? ನೀನು ಒಲಿದು ಕೊಟ್ಟರೆ ಆ ಜ್ಞಾನ ನಮಗುಂಟು'' ಎಂದ.

ಹೀಗೆ ಅವನ ಅಹಂಕಾರದ ಅಸ್ತಮಯವನ್ನು ಕಂಡು, ಅಲ್ಲಮನು ಪ್ರಸನ್ನನಾಗಿ, ''ಇದು ಒಂದೇಬಾರಿಗೆ ಆಗತಕ್ಕದಲ್ಲ. ಸ್ವಲ್ಪಸ್ವಲ್ಪವಾಗಿ ಅಭ್ಯಾಸ ಮಾಡಿದರೆ, ಸಮತ್ವವೂ ಸಮಾಧಿಯೂ ಸಿದ್ಧಿಸುತ್ತದೆ'' ಎಂದನು.

ಅದಕ್ಕೆ ರಾಮಯ್ಯನು ''ನಿನ್ನ ದರ್ಶನ ಸ್ಪರ್ಶಗಳೆ ನನಗೆ ಸರ್ವ ಸಮಾಧಿ'' ಎಂದು ನಿವೇದಿಸಿ. ''ನೀನಿನ್ನು ಮಲ್ಲಿಕಾರ್ಜುನನ ದರ್ಶನಕ್ಕಾಗಿ ನನ್ನ ಮಠಕ್ಕೆ ಬರಬೇಕು'' ಎಂದು ಕರೆದನು.

ಅಲ್ಲಿಯೂ ಅವನ ಮರುಳುತನವನ್ನು ಕಂಡು ನಕ್ಕು, ''ಬಿಡು ಮರುಳೆ. ಮನೆಯೇನು, ಮಠವೇನು? ಅಡವಿಯೇನು, ಊರೇನು? ಸರ್ವಗತನಾದ ಮಹಾತ್ಮನಿಗೆ ಬೇರೊಂದು ಎಡೆಯುಂಟೆ? ಎಂದು ಅಲ್ಲಮನೆಂದ.

ಆ ಮಾತು ಕೇಳಿ ಸಿದ್ಧರಾಮನ ಮದ ನಿಶ್ಶೇಷವಾಯಿತು. ಪುನಃ ಅಲ್ಲಮನ ಕಾಲಿಗೆ ಮೈಯಿಕ್ಕಿ, ''ದೇವ, ಬಹಳ ಬಿನ್ನಹ ಮಾಡಲು ಅಂಜುವೆನು. ಈ ಖಂಡಜ್ಞಾನ ಮಾರ್ಗದ ಕೋಟಲೆಯನ್ನು ನಾನು ತಾಳಲಾರೆ. ಈ ಕರ್ಮದ ಕಳವಳಕ್ಕೆ ನಾನು ಬೇಸತ್ತೆ. ನನಗೆ ದಾರಿ ತೋಚದಾಗಿದೆ. ನಿನ್ನ ಪಾದವೊಂದೇ ನನಗೆ ಶರಣು. ನೀನೆ ನನ್ನನ್ನು ಕಾಪಾಡಬೇಕು'' ಎಂದು ಬೇಡಿದನು.

ಆಗ, ಅವನನ್ನು ಪುನಃ ತನ್ನ ಕೈಗಳಿಂದಲೇ ಮೇಲೆತ್ತಿ, ಹತ್ತಿರಕ್ಕೆ ಕರೆದು ಕುಳ್ಳಿರಿಸಿಕೊಂಡು, ಹೆತ್ತ ತಂದೆ ಯಾವ ರೀತಿ ಮಗನಿಗೆ ಬುದ್ಧಿ ತಿಳಿಸುವನೋ ಹಾಗೆ, ಜೀವಾತ್ಮ ಪರಮಾತ್ಮರನ್ನು ಒಂದು ಮಾಡುವ ರಹಸ್ಯವನ್ನು ಪರಮ ಕರುಣಾಕರನಾದ, ಸದಾಸಮ್ಮತನಾದ ಅಲ್ಲಮನು ಸಿದ್ಧರಾಮನಿಗೆ ಉಪದೇಶ ಮಾಡಿದನು.

## ಶಬ್ದಗಳ ಅರ್ಥ:

ಪುನೀತ – ಪವಿತ್ರ, ಕೃತಾರ್ಥ – ಧನ್ಯ, ಸಂಕಲೆ – ಬೇಡಿ (ದ್ಭ) ಶೃಂಖಲಾ (ಸಂ.) ಕೀಲಿಸಿಕೊಂಡ, ತಗಲುಸಿಕೊಂಡ (ಕಟ್ಟಿಕೊಂಡ), ಮತಿ – ಬುದ್ಧಿ ಬೋಳುಮಡೆ – ಬೋಳಿಸಿದ ತಲೆ, ಕೀರುತಿ (ದ್ಭ) ಕೀರ್ತಿ ಗೊಡ್ಡು – ಸಾರವಿಲ್ಲದ (ಫಲವಿಲ್ಲದ), ಹಾಯ್ದು – ಮೇಲೆ ಬಿದ್ದು, ನಿರ್ಲೇಪ – ಅಂಟಿದ, ಸಂಬಂಧವಿಲ್ಲದ). ವಿಷಮ – ಭಯಂಕರ (ಭೀಕರ). ಹೀಯಾಳಿಸು – ತಿರಸ್ಕರಿಸು. ಕೋಪ+ಆಟೋಪ – ಕೋಪಾಟೋಪ (ಸ.ದೀ.ಸಂ) ಭವರೋಗಿ – ಜನನ–ಮರಣವೆಂಬ ಬೇನೆಯುಳ್ಳವನು. ತೋಚಲಿಲ್ಲ – ಹೊಳೆಯಲಿಲ್ಲ. ಕೋಟಲೆ – ತೊಂದರೆ. ಕಾಳಗ – ಯುದ್ಧ. ಮರುಳ – ಹುಚ್ಚ. ಗಾವಿಲ – ಗ್ರಾಮೀಣ

(ಸಂ.) ಹೆಡ್ಡ. ಅನುಚಿತ - ಯೋಗ್ಯವಾದುದಲ್ಲ. ಚರ+ಅಚರ=ಚರಾಚರ (ಸ.ದೀ.ಸಂ.) ಹರಸು - ಆಶೀರ್ವದಿಸು. ಒಲಿದು - ಪ್ರೀತಿಸಿ. ಅಸ್ತ-ಮುಳುಗು. (ನಾಶವಾಗು) ಸಮಾಧಿ - ಯೋಗದಲ್ಲಿ ಮೈಮರೆಯುವಿಕೆ. ಎಡೆ - ಸ್ಥಳ. ಮದ - ಅಹಂಕಾರ. ನಿಶ್ಶೇಷ - ಉಳಿಯದಿರುವುದು. ಮೈಯನ್ನು ಇಕ್ಕು (ಕ್ರಿ.ಸ.) ಬಿನ್ನಹ (ದ(ದ್ಭ) ವಿಜ್ಞಾಪನೆ ()ಸಂ.) ಖಂಡ - ಭಾಗ. ಬೇಸತ್ತೆ - ದಣಿದೆ ಸದಾಸ್ಮಿತ - ಯಾವಾಗಲೂ ಮುಗುಳ್ನಗೆಯುಳ್ಳವನು.

**ಕೃತಿ 1)** **ಕೆಳಗಿನ ಜಾಲಾಕೃತಿ ತುಂಬಿರಿ.**

I) ದೇಗುಲ ಕಟ್ಟಿಸುವ ಸಿದ್ಧರಾಮನ ಶಿಷ್ಯರು

II) ತ್ರಿಮೂರ್ತಿಗಳು

III) ಸಿದ್ಧರಾಮ ಕೋಪಗೊಂಡಾಗ ಅಲ್ಲಮನನ್ನು ಹೇಳಿದ ಮಾತುಗಳು

**ಕೃತಿ 2)** I) ಸಿದ್ಧರಾಮ ಅಲ್ಲಮರ ಸಂವಾದವನ್ನು ತಿಳಿಸಿರಿ.

II) ಸಿದ್ಧರಾಮನ ಚರಿತ್ರೆಯನ್ನು ಓದಿ ಅವನ ಬಾಲ್ಯಜೀವನದ ಕುರಿತು ಒಂದು ಲೇಖನ ತಯಾರಿಸಿರಿ.

III) ಸಿದ್ಧರಾಮ ಅಲ್ಲಮನಲ್ಲಿ ಬೇಡಿದ ಕ್ಷಮೆ ಏನು?

**ಕೃತಿ 3)** I) ಅಲ್ಲಮ ಪ್ರಭುವಿನ ವಚನವೊಂದು ಬರೆದು ಅದರ ಅರ್ಥವನ್ನು ಬರೆಯಿರಿ.

II) ಬಸವಣ್ಣ ಅಕ್ಕಮಹಾದೇವಿ, ದಾಸಿಮಯ್ಯನವರ ಕಿರು ಪರಿಚಯ ಬರೆಯಿರಿ.

**ಕೃತಿ 4)** I) ಕೆಳಗಿನ ಶಬ್ದಗಳು ತತ್ಸಮ-ತದ್ಭವ ಬರೆಯಿರಿ.

| ಶರ್ಕರ | ವಿಜ್ಞಾಪನೆ | ಲಕ್ಷ | ಕಾರ್ಯ |
|---|---|---|---|
| | | | |

II) ಈ ಗದ್ಯಪಾಠದಲ್ಲಿ ಬಂದಿರುವ ದ್ವಿರುಕ್ತಿ ಪದಗಳನ್ನು ಬರೆಯಿರಿ.

III) ''ಬಡವನ ಕೋಪ ದವಡೆಗೆ ಮೂಲ'' ಈ ಗಾದೆಯ ಅರ್ಥವನ್ನು ಸವಿಸ್ತಾರವಾಗಿ ಬರೆಯಿರಿ.

GCGI2Y

# 3. ಅಮರಗಂಗಾನದಿ

ಭರತಖಂಡದ ಸಂಸ್ಕೃತಿ ಸಂವರ್ಧನೆಗೂ ಸಂಪತ್ಸಮೃದ್ಧಿಗೂ ಎರಡು ಮುಖ್ಯವಾದ ಪ್ರಕೃತಿದತ್ತ ವರಗಳೇ ಹಿಮಾಲಯ ಪರ್ವತ ಶ್ರೇಣಿ ಮತ್ತು ಅಮರಗಂಗಾನದಿ. ಹಿಮಾಲಯ ಪರ್ವತ ಶ್ರೇಣಿಯು ಉತ್ತರದಲ್ಲಿ ಭಾರತದುದ್ದಕ್ಕೂ ಹಬ್ಬಿರದಿದ್ದರೆ ಭಾರತದ ಸಂಸ್ಕೃತಿ ಇಷ್ಟೊಂದು ಶ್ರೇಷ್ಠ ಮಟ್ಟದಲ್ಲಿರುತ್ತಿರಲಿಲ್ಲ. ಅದು ನೈಋತ್ಯ ಮಾನ್ಸೂನು ಗಾಳಿಗಳನ್ನು ತಡೆದು ಸಮಗ್ರ ಭಾರತಕ್ಕೆ ಸಮೃದ್ಧವಾದ ಮಳೆಯನ್ನು ಸುರಿಸುವಂತೆ ಮಾಡುವಲ್ಲಿ, ಮಧ್ಯ ಏಷ್ಯಾದಿಂದ ಬೀಸುವ ಒಣಗಾಳಿಗಳನ್ನು ತಡೆದು ನಿಲ್ಲಿಸುವಲ್ಲಿ ಪ್ರಧಾನ ಪಾತ್ರವನ್ನುವಹಿಸುತ್ತದೆ. ಅಲ್ಲದೆ ಉತ್ತರದಿಂದ ಬರಬಹುದಾದ ಬೇರೆ ರಾಷ್ಟ್ರಗಳ ಧಾಳಿಯನ್ನು ತಡೆಯುತ್ತದೆ. ತನ್ನಲ್ಲಿ ಬಿದ್ದ ಅಪಾರವಾದ ಮಳೆನೀರನ್ನು ಹಿಮದ ಗಡ್ಡೆಗಳ ರೂಪದಲ್ಲಿ ಹಿಡಿದಿಟ್ಟು ತನ್ನಲ್ಲಿ ಹುಟ್ಟಿ ಹರಿಯುವ ನದಿಗಳಿಗೆ ಬೇಸಿಗೆಯಲ್ಲಿ ಸಮೃದ್ಧವಾಗಿ ನೀರನ್ನು ದೊರಕಿಸಿ ಉತ್ತರ ಭಾರತದಲ್ಲಿ ಸದಾಕಾಲ ಜಲ ಸಂಪತ್ತನ್ನು ಒದಗಿಸಿ ಸಂರಕ್ಷಿಸುತ್ತದೆ. ಆದುದರಿಂದಲೇ ಹಿಮಾಲಯವು ಭಾರತವನ್ನು ಸಂರಕ್ಷಿಸುವ ಪ್ರಕೃತಿದತ್ತ ವರವೆನಿಸಿದೆ. ಹಿಮಾಲಯದ ಈ ಉಪಕಾರದ ಫಲವಾಗಿ ಜಗತ್ತಿನಲ್ಲೆಲ್ಲಾ ಫಲವತ್ತಾದ ಪ್ರದೇಶಗಳಲ್ಲಿ ಒಂದೆನಿಸಿದ ಗಂಗಾ ಸಿಂಧೂ ಬಯಲು ಪ್ರದೇಶವು ಜನ್ಮತಾಳಿತು. ಸಾವಿರಾರು ವರ್ಷಗಳಿಂದ ಹಿಮಾಲಯದಿಂದ ಹರಿದು ಬರುತ್ತಿರುವ ಗಂಗಾನದಿ ಪರ್ವತ ಪ್ರಾಂತದ ರೇವೆ ಮಣ್ಣನ್ನು ತನ್ನಲ್ಲಿ ಕರಗಿಸಿಕೊಂಡು ಬಂದು ತನ್ನ ಸುತ್ತು ಮುತ್ತಲಿನ ಪ್ರದೇಶದಲ್ಲಿ ಹರಡಿ ಆ ಭೂಭಾಗವನ್ನು ಫಲವತ್ತಾಗಿ ಮಾಡಿರುತ್ತದೆ. ಆದುದರಿಂದ ಗಂಗಾ ನದಿಗೂ ಭಾರತೀಯರ ಜೀವನ, ಸಂಸ್ಕೃತಿಗಳಿಗೂ ನಿಕಟವಾದ ಬಾಂಧವ್ಯವೇರ್ಪಟ್ಟಿರುತ್ತದೆ.



ಗಂಗಾ ನದಿಯನ್ನು ವೇದಪುರಾಣಾದಿ ಪ್ರಾಚೀನ ಗ್ರಂಥಗಳು ಪೂಜ್ಯಭಾವದಿಂದ ಕೊಂಡಾಡಿವೆ. ಅದರ ಹುಟ್ಟಿನ ಬಗೆಗೆ ಪುರಾಣಗಳಲ್ಲಿ ಸ್ವರ್ಗ ಮರ್ತ್ಯ ಪಾತಾಳಲೋಕಗಳ ಸಂಬಂಧದ ಕಥೆ ಹೆಣೆದುಕೊಂಡಿದೆ. ಅದನ್ನು ಗಂಗಾಮಾತೆಯೆಂದು ಸಂಕಲ್ಪಿಸಿ ವ್ಯಕ್ತಿತ್ವಕೊಟ್ಟು ಶಿವನ ಹೆಂಡತಿಯೆಂಬುದಾಗಿ ಪರಿಗಣಿಸಿ ಕಥೆಯನ್ನು ಕಟ್ಟಿದೆ. ಆ ಕಥೆ ಹೀಗಿದೆ.

ಗಂಗೆ ಹಿಮವಂತನ ಪುತ್ರಿ. ಸುರಲೋಕದವರ ಅಮೃತ. ಭೂಲೋಕದಲ್ಲಿ ನದಿಯಾಗಿ ಹರಿಯುವಂತೆ ಮಾಡಿದವನು, ಭಗೀರಥನೆಂಬ ಇಕ್ಷ್ವಾಕು ದೊರೆ. ಸಗರನೆಂಬ ಚಕ್ರವರ್ತಿಯ 60 ಸಾವಿರ ಮಕ್ಕಳು ಕಪಿಲನೆಂಬ ಮುನಿಯ ಕೋಪಾಗ್ನಿಗೆ ಆಹುತಿಯಾಗಿ ಸುಟ್ಟುಹೋದರು. ಅವರು ಸುಟ್ಟುಹೋದ ಬೂದಿಯನ್ನು ಗಂಗೆಗೆ ಕೂಡಿಸದೆ ಅವರಿಗೆ ಸದ್ಗತಿಯಿಲ್ಲವೆಂದು ಗೊತ್ತಾಯಿತು. ಆಗ ಅವರ ಮರಿಮಗನಾದ ಭಗೀರಥನೆಂಬವನು ತಮ್ಮ ಮುತ್ತಜ್ಜಂದಿರಿಗೆ ಸದ್ಗತಿಯುಂಟುಮಾಡಬೇಕೆಂಬ ಹಟದಿಂದ ಗಂಗೆಯನ್ನು ಭೂಲೋಕಕ್ಕೆ ತರಲು ಶಪಥಮಾಡಿ ಘೋರತಪಸ್ಸನ್ನು ಮಾಡಿದನು. ಗಂಗಾದೇವಿ ಪ್ರತ್ಯಕ್ಷಳಾಗಿ ''ಮಗನೇ ನಿನ್ನ ಅಭೀಷ್ಟವೇನು?'' ಎಂದು ಕೇಳಿದಳು. ಭಗೀರಥನು ನಡೆದ ವೃತ್ತಾಂತವನ್ನೆಲ್ಲ ತಿಳಿಸಿ ''ನನ್ನ ಮುತ್ತಾತಂದಿರಿಗೆ ಸದ್ಗತಿಯುಂಟಾಗಲು ನೀನು ಭೂಲೋಕಕ್ಕೆ ಹರಿದು ಬರಬೇಕು'' ಎಂದು ಕೇಳಿಕೊಂಡನು. ಗಂಗೆ ಒಪ್ಪಿದಳಾದರೂ ಭಗೀರಥನನ್ನು ಕುರಿತು ''ಮಗನೇ ನಿನ್ನ ಇಷ್ಟಾರ್ಥವನ್ನು ಕೈಗೂಡಿಸುವೆನು. ಆದರೆ ನಾನು ಆಕಾಶದಿಂದ ಭೂಮಿಗೆ ಧುಮುಕುವ ರಭಸವನ್ನು ತಡೆಯುವವರು ಯಾರು? ಎನ್ನಲು ಭಗೀರಥನು ಶಿವನನ್ನು ಕುರಿತು ತಪಸ್ಸು ಮಾಡಿ ಗಂಗೆಯ ರಭಸವನ್ನು ತಡೆಯಲು ಅವನನ್ನು ಒಪ್ಪಿಸಿದನು. ಗಂಗೆ ಶಿವನ ಮಸ್ತಕದ ಮೇಲೆ ಬಿದ್ದು ಅಲ್ಲಿಂದ ಭಗೀರಥನು ಕರೆದುಕೊಂಡು ಹೋದ ದಾರಿಯಲ್ಲಿ ಅತ್ಯಂತ ವೇಗದಿಂದ ಹರಿಯತೊಡಗಿದಳು. ದಾರಿಯಲ್ಲಿ 'ಜಹ್ನು' ಎಂಬ ಋಷಿಯ ಆಶ್ರಮವಿತ್ತು. ಗಂಗೆಯ ರಭಸಕ್ಕೆ ಆ ಋಷಿಯ ಆಶ್ರಮ ಕೊಚ್ಚಿಕೊಂಡು ಹೋಯಿತು. ಆಗ ಜಹ್ನುವು ಕೋಪದಿಂದ ಗಂಗೆಯ ಅಪಾರ ಜಲರಾಶಿಯನ್ನು ಒಂದೇ ಗುಟುಕಿಗೆ ಕುಡಿದನು. ಆಗ ಭಗೀರಥನು ಜಹ್ನು ಋಷಿಯನ್ನು ಪ್ರಾರ್ಥಿಸಿ ಪುನಃ ಆ ಮಹರ್ಷಿಯ ಕಿವಿಯ ಮೂಲಕ ಗಂಗೆಯನ್ನು ಹರಿದುಬರುವಂತೆ ಮಾಡಿದನು. ಈ ಕಾರಣದಿಂದಲೇ ಗಂಗೆಗೆ ಜಾಹ್ನವಿಯೆಂದು ಹೆಸರುಬಂತು. ಆನಂತರ ಭಗೀರಥನು ಗಂಗೆಯನ್ನು ಕರೆದೊಯ್ದು ತನ್ನ ಮುತ್ತಾತಂದಿರ ಚಿತಾಭಸ್ಮದ ಮೇಲೆ ಹರಿಸಿ ಅದು ಕೊಚ್ಚಿಕೊಂಡು ಹೋಗುವಂತೆ ಮಾಡಿ ಅವರಿಗೆ ಸದ್ಗತಿಯನ್ನುಂಟುಮಾಡಿದನು. ಈ ಕಾರಣದಿಂದ ಈಕೆಗೆ 'ಭಾಗೀರಥಿ' ಎಂದು ಹೆಸರಾಯಿತು.

ಇದು ಪೌರಾಣಿಕ ಹಿನ್ನೆಲೆಯ ಕಥೆ. ಕಥೆ ಹೆಣೆದಿರುವ ವಾಲ್ಮೀಕಿ ಋಷಿಗಳ ಅದ್ಭುತ ಕೌಶಲದಿಂದಾಗಿ ನಮಗೆ ಗಂಗೆಯು ಸ್ವರ್ಗ ಮರ್ತ್ಯ ಪಾತಾಳ ಲೋಕಗಳನ್ನು ಪಾವನಗೊಳಿಸುವ ಪುಣ್ಯ ದೇವತೆಯಾಗಿ ಕಂಡಿರುತ್ತಾಳೆ ಆದುದರಿಂದಲೇ ಆಕೆ 'ತ್ರಿಪಥಗಾ ಎಂಬ ಹೆಸರನ್ನು ಹೊಂದಿದಳು ಗಂಗೆಗೆ ಸುರಗಂಗಾ, ದೇವಗಂಗಾ, ಸುರನದಿ, ಮಂದಾಕಿನಿ, ಇತ್ಯಾದಿ ಹೆಸರುಗಳು. ಸಂಸ್ಕೃತದಲ್ಲಿಯೂ, ಬಾಂಬೊಳೆ, ಬಾಂದೊರೆ ಎಂದು ಕನ್ನಡದಲ್ಲಿಯೂ ಬಂದಿರುತ್ತವೆ.

ಗಂಗಾನದಿ ಹುಟ್ಟುವ ಸ್ಥಳ ಗಂಗ್ರೋತ್ರಿಯಿಂದ 29 ಕಿಲೋ ಮೀಟರ್ ದೂರದಲ್ಲಿರುವ ಗೋಮುಖ ಎಂಬ ಹೆಸರಿನ ಸ್ಥಳದ ಹತ್ತಿರ. ಗಂಗೋತ್ರಿಯು ಕೇದಾರನಾಥದಿಂದ ಸುಮಾರು 40 ಕಿಲೋ ಮೀಟರ್ ದೂರದಲ್ಲಿದೆ. ಇಲ್ಲಿ ಹಿಮಾಚ್ಛಾದಿತವಾದ ಪರ್ವತ ಶ್ರೇಣಿಗಳಿಂದ ರುದ್ರ ಮನೋಹರವಾದ ಸನ್ನಿವೇಶವು ಸದಾ ಕಂಗೊಳಿಸುತ್ತದೆ. ಇಲ್ಲಿಂದಲೇ ಹಿಮವು ಸ್ವಲ್ಪ ಸ್ವಲ್ಪವೇ ಜಾರುತ್ತ ಕೆಳಗೆ ನೀರಾಗಿ ಪ್ರವಾಹ ರೂಪದಿಂದ ಹರಿಯತೊಡಗುತ್ತದೆ. ಇಲ್ಲಿಯೇ ಗಂಗಾನದಿ ಭಾಗೀರಥಿ ಎಂದು ಕರೆಯಲ್ಪಡುತ್ತದೆ. ಇದೇ ಪರಮೇಶ್ವರನ ಜಡೆಯಿಂದ ಗಂಗೆ ನಿಧಾನವಾಗಿ ಭೂಮಿಗೆ ಇಳಿಯುತ್ತಾಳೆಂದು ಕಲ್ಪಿಸಿದುದರ ಕಾರಣವಿರಬೇಕು. ಅಲ್ಲಿಂದ ಪ್ರವಾಹವು ಸ್ವಲ್ಪ ದೂರ ಹರಿದು ಗೌರಿ ಕುಂಡದಲ್ಲಿ ಕಣ್ಣಿಗೆ ಕಾಣದಂತಾಗಿ ಮುಂದೆ ಪ್ರವಾಹವು ಹಿಮಾಲಯ ಪರ್ವತ ಪ್ರಾಂತದಲ್ಲಿ ಬಿದ್ದೆದ್ದು ಅರ್ಭಟಿಸಿ ಅನೇಕ ಪ್ರಪಾತಗಳಿಂದ ಆದಮ್ಯ ವೇಗದಿಂದ ಹರಿದು ಬರುತ್ತದೆ. ಅನೇಕ ಘೋರಾರಣ್ಯ ಮತ್ತು ಪರ್ವತ ಪ್ರದೇಶಗಳಲ್ಲಿ ಹರಿದು ಬರುವಾಗ ಗಂಗಾನದಿ ಕಣ್ಣಿಗೆ ಕಾಣಿಸುವುದಿಲ್ಲ. ದೇವಪ್ರಯಾಗದ ಸಮೀಪದಲ್ಲಿ ಈ ಪ್ರವಾಹಕ್ಕೆ 'ಅಲಕನಂದಾ' ಎಂಬ ನದಿಯು ಸೇರುವುದು. ಇಲ್ಲಿಂದ ಮುಂದೆ ಈ ನದಿಯು ಗಂಗಾ ಎಂಬ ಹೆಸರಿನಿಂದಲೇ ಕರೆಯಲ್ಪಡುತ್ತದೆ. ಈ ನದಿಯು

ಹಿಮಾಲಯ ಪರ್ವತ ಪ್ರಾಂತದಲ್ಲಿ ಸುಮಾರು 175 ಕಿಲೋ ಮೀಟರ್ ದೂರ ಹರಿದು ಬಂದು ಹೃಷೀಕೇಶವೆಂಬ ಪುಣ್ಯ ಕ್ಷೇತ್ರವನ್ನು ತಲುಪುತ್ತದೆ. ಹೃಷೀಕೇಶ ಪರ್ವತ ಪ್ರದೇಶವು ಅನೇಕ ಪುಣ್ಯಾಶ್ರಮಗಳಿಗೆ ಪುರಾಣ ಕಾಲದಿಂದಲೂ ಪ್ರಸಿದ್ಧವಾದುದು. ಇದು ಅನೇಕ ಧರ್ಮಾತ್ಮರು ಸ್ವಾಧ್ಯಾಯ ಪ್ರವಚನಗಳಲ್ಲಿ ನಿರತರಾಗಿ ತಪಸ್ಸು ಮಾಡುವ ಸ್ಥಳವೆನಿಸಿದೆ. ಇಲ್ಲಿಂದಲೇ ಮುಂದೆ ಗಂಗಾನದಿ ಮೈದಾನ ಪ್ರದೇಶವನ್ನು ಪ್ರವೇಶಿಸುತ್ತದೆ. ಹರಿದ್ವಾರವು ಬಹು ಪವಿತ್ರವಾದ ಕ್ಷೇತ್ರವೆನಿಸಿದೆ. 12 ವರ್ಷಗಳಿಗೊಮ್ಮೆ ಇಲ್ಲಿ ನೆರವೇರುವ ಕುಂಭಮೇಳಕ್ಕೆ ಭಾರತದ ಎಲ್ಲ ಭಾಗಗಳಿಂದಲೂ ಯಾತ್ರಾರ್ಥಿಗಳು ಲಕ್ಷೋಪಲಕ್ಷ ಸಂಖ್ಯೆಯಲ್ಲಿ ಸೇರಿ ಪುಣ್ಯಸ್ನಾನ ಮಾಡಿ ಪುನೀತರಾದೆವೆಂದು ಭಾವಿಸುತ್ತಾರೆ. ಇಲ್ಲಿನ ಪ್ರಕೃತಿ ಸೌಂದರ್ಯ ಅತ್ಯಂತ ಮನಮೋಹಕವಾಗಿದೆ. ಅಂತೆಯೇ ಇಲ್ಲಿ ಸದಾಕಾಲವೂ ಯಾತ್ರಾರ್ಥಿಗಳು ಇದ್ದೇ ಇರುತ್ತಾರೆ. ಯಾತ್ರಾರ್ಥಿಗಳಿಗಾಗಿ ಅನೇಕ ಧರ್ಮಶಾಲೆಗಳು ಕಟ್ಟಲ್ಪಟ್ಟಿವೆ. ಈ ಹರಿದ್ವಾರದ ಪಕ್ಕದಲ್ಲಿಯೇ ಹಿಂದೆ ದಕ್ಷ ಬ್ರಹ್ಮಯಾಗ ಮಾಡಿದನಂತೆ. ಆ ಯಾಗಕ್ಕೆ ಕರೆಯದೆ ಬಂದ ಶಿವನ ಹೆಂಡತಿ ದಾಕ್ಷಾಯಿಣಿ ದೇವಿ ತಂದೆಯಿಂದ ತನಗೆ ಮನ್ನಣೆ ಸಿಗಲಿಲ್ಲವೆಂದು ಯಜ್ಞಕುಂಡದಲ್ಲಿ ಬಿದ್ದು ಪ್ರಾಣ ನೀಗಿದಳಂತೆ, ಕುಪಿತನಾದ ಶಿವನು ವೀರಭದ್ರನನ್ನು ಕಳಿಸಿ ದಕ್ಷನ ಶಿರಚ್ಛೇದನ ಮಾಡಿಸಿದ ಪುರಾಣ, ಕಥೆಯುಂಟು. ಹರಿದ್ವಾರದ ಹತ್ತಿರ ಗಂಗಾನದಿಯ ಇಕ್ಕಡೆಗಳಲ್ಲಿಯೂ ಅನೇಕ ತೀರ್ಥಕ್ಷೇತ್ರಗಳೂ ಸ್ನಾನಘಟ್ಟಗಳೂ ಪ್ರಾಚೀನ ದೇವಾಲಯಗಳೂ ಇವೆ.

ಹರಿದ್ವಾರದ ಹತ್ತಿರವೇ 'ಗಂಗಾನಹರ' ಎಂಬ ಹೆಸರಿನ ಕಾಲುವೆ ತೋಡಲಾಗಿದೆ. ಅದರಿಂದ ಸುಮಾರು 18 ಲಕ್ಷ ಎಕರೆ ಭೂಮಿಗೆ ನೀರೊದಗಿ ಆ ಭಾಗ ಪೂರ್ಣ ಫಲವತ್ತಾಗಿದೆ. ಈ ಕಾಲುವೆಯು ಖಾನಪುರದವರೆಗೆ ಹರಿದು ಪುನಃ ಗಂಗೆಯನ್ನು ಸೇರುತ್ತದೆ. ಈ ನೀರಾವರಿ ಯೋಜನೆಯಿಂದ ವಿದ್ಯುಚ್ಛಕ್ತಿಯ ಉತ್ಪಾದನೆಯೂ ಆಗುತ್ತದೆ. ಹರಿದ್ವಾರದಿಂದ ಮುಂದೆ ಬಂದರೆ ಗಂಗಾತೀರದಲ್ಲಿ ಸಿಗುವ ಪುರಾಣ ಪ್ರಸಿದ್ಧವಾದ ನಗರವೇ ಹಸ್ತಿನಾವತಿ. ಪ್ರಾಚೀನ ಅವಶೇಷಗಳಿಂದ ಕೂಡಿದ ಈ ನಗರವನ್ನು ನೆನೆದಾಗ ನಮಗೆ ಕೌರವ ಪಾಂಡವರ ಕಾಲದ ಪುರಾಣ ಕಥೆ ನೆನಪಾಗುತ್ತದೆ.

ಗಂಗಾನದಿ ಎಷ್ಟು ಪ್ರಾಚೀನವಾದುದು! ಅದು ನಮ್ಮ ದೇಶದ ಸಮಗ್ರ ಪ್ರಾಚೀನೇತಿಹಾಸವನ್ನೆಲ್ಲ ಬಲ್ಲುದು. ತನ್ನ ತೀರ ಪ್ರಾಂತ್ಯದಲ್ಲಿ ಎಷ್ಟೋ ರಾಜ್ಯಗಳನ್ನು ಕಟ್ಟಿಸಿದೆ; ಉರುಳಿಸಿದೆ. ಅನೇಕ ದೇಶವಿದೇಶಗಳ ಶೂರರ ಕಾದಾಟಗಳನ್ನು ನೋಡಿದೆ. ಅನೇಕ ಧಾರ್ಮಿಕ, ಐತಿಹಾಸಿಕ ಮಹಾಪುರುಷರನ್ನು ಕಂಡಿದೆ. ಅವರಿಂದ ಧರ್ಮೋದ್ಧಾರ ಮಾಡಿಸಿದೆ. ರಾಜಕೀಯ ಸುಧಾರಣೆಗಳು ನಡೆದುದನ್ನು ಕಂಡಿದೆ ಧರ್ಮದ ಹೆಸರಿನಲ್ಲಿ ಜಗಳವಾಡುವುದನ್ನೂ ಕಂಡಿದೆ. ಪೌರಾಣಿಕ, ಐತಿಹಾಸಿಕ ಘಟನಾ ಪರಂಪರೆಗಳನ್ನು ಕಂಡು ನಕ್ಕು ನಲಿದು ಸಂತೋಷಪಟ್ಟು, ಅಸಹ್ಯಪಟ್ಟು ತನ್ನ ಹರಿಯುವ ಕಾರ್ಯವನ್ನು ಮಾತ್ರ ನಿರಂತರವೂ ಮಾಡುತ್ತಲೇ ಬಂದಿದೆ. ಲೋಕದ ಜನರ ಮನದ ಮತ್ತು ಮೈಯ ಕೊಳೆಯನ್ನು ಕಳೆಯುತ್ತಲೇ ಬಂದಿದೆ. ಅವರ ಉದರಕ್ಕೆ ತುತ್ತು ಕೂಳನ್ನು ಹಾಕುತ್ತಲೇ ಬಂದಿದೆ. ಪಾಪಿಯಿರಲಿ, ಪುಣ್ಯವಂತನಿರಲಿ, ಅವರೆಲ್ಲರಿಗೂ ಗಂಗೆಯು ಬೇಕಾದವಳಾಗಿದ್ದಾಳೆನ್ನಬಹುದಲ್ಲವೇ?

ಹಸ್ತಿನಾವತಿಯಿಂದ ಮುಂದೆ ಗಂಗಾನದಿಯುದ್ದಕ್ಕೂ ನಾವು ಬಂದಾಗ ನಮ್ಮ ಕಣ್ಣಿಗೆ ಬೀಳುವ ಭಾರತದ ಅತಿದೊಡ್ಡ ಔದ್ಯೋಗಿಕ ನಗರವು ಖಾನಪುರ. ಇಲ್ಲಿ ಚರ್ಮ ಮತ್ತು ಬಟ್ಟೆಗಳ ಅನೇಕ ದೊಡ್ಡ ದೊಡ್ಡ ಕಾರ್ಖಾನೆಗಳಿವೆ. ಈ ಎಲ್ಲ ಕಾರ್ಖಾನೆಗಳಿಗೂ ಗಂಗಾಜಲವೇ ಆಧಾರ. ಗಂಗಾನದಿಯಿಲ್ಲದಿರುತ್ತಿದ್ದರೆ ಖಾನಪುರವು ಇಷ್ಟು ದೊಡ್ಡ ಔದ್ಯೋಗಿಕ ಕ್ಷೇತ್ರವಾಗುತ್ತಿತ್ತೋ ಇಲ್ಲವೋ. ಜಗತ್ತಿನ ದೊಡ್ಡ ದೊಡ್ಡ ಔದ್ಯೋಗಿಕ ಕೇಂದ್ರಗಳು ನದಿ ಅಥವಾ ಸಮುದ್ರದ ದಂಡೆಯಲ್ಲಿ ಹುಟ್ಟಿ ಬೆಳೆಯುತ್ತವೆಯೆಂಬುದನ್ನು ನಾವು ಮರೆಯಲಾಗದು.

ಖಾನಪುರದಿಂದ ಸುಮಾರು 200 ಕಿಮೀ. ದೂರದಲ್ಲಿ ನಮಗೆ ಗಂಗಾತೀರದಲ್ಲಿ ಸಿಗುವ ಇನ್ನೊಂದು ದೊಡ್ಡ ಪಟ್ಟಣವೇ ಪ್ರಯಾಗಕ್ಷೇತ್ರ. ಈಗ ಇದನ್ನು ಅಲಹಾಬಾದ್ ಎಂದು ಕರೆಯಲಾಗುತ್ತದೆ. ಹಿಮಾಲಯದಿಂದ ಹರಿದು ಬರುವ ಯಮುನಾ ನದಿಯು ಗಂಗಾನದಿಯನ್ನು ಇಲ್ಲಿಯೇ ಬಂದು ಸೇರುತ್ತದೆ. ಗಂಗೆ ಯಮುನೆಗಳ ಸಂಗಮದ ಜೊತೆಗೆ ಇಲ್ಲಿ ಗುಪ್ತಗಾಮಿನಿಯಾಗಿ ಸರಸ್ವತೀ ನದಿಯು ಬಂದು ಸೇರುತ್ತದೆಂಬ ಗ್ರಹಿಕೆಯಿದೆ. ಅಂತೆಯೇ ಈ ಸಂಗಮಕ್ಕೆ 'ತ್ರಿವೇಣೀ ಸಂಗಮ' ಎಂಬ ಹೆಸರು ಬಂದಿದೆ. ಇಲ್ಲಿಯೂ ಹನ್ನೆರಡು ವರ್ಷಗಳಿಗೊಮ್ಮೆ ಕುಂಭಮೇಳ ಯಾತ್ರೋತ್ಸವವು ನಡೆದು ಲಕ್ಷೋಪಲಕ್ಷ ಜನರು ಆಗ ಬಂದು ಸ್ನಾನಮಾಡಿ ಶುಚಿರ್ಭೂತರಾಗಿ ಹೋಗುತ್ತಾರೆ.

ರಾಮಾಯಣ ಮಹಾಭಾರತ ಮತ್ತು ಇನ್ನಿತರ ಅನೇಕ ಪುರಾಣಗಳಲ್ಲಿ ಈ ಪ್ರಯಾಗ ಕ್ಷೇತ್ರದ ವರ್ಣನೆಯಿದೆ. ಧರ್ಮರಾಯನು ಜ್ಞಾತಿಗಳ ಹತ್ಯೆ ಮಾಡಿದನೆಂದು ಚಿಂತಾಕ್ರಾಂತನಾಗಿದ್ದಾಗ ಋಷಿಗಳು ಪ್ರಯಾಗ ಕ್ಷೇತ್ರದ ಸಂಗಮದಲ್ಲಿ ಸ್ನಾನಮಾಡಲು ಹೇಳಿದರಂತೆ. ಅದರಂತೆ ಸ್ನಾನಮಾಡಲು ಅವನ ಮನಸ್ಸು ತಿಳಿಯಾಯಿತಂತೆ.

ಪ್ರಯಾಗ ಕ್ಷೇತ್ರದಿಂದ ಗಂಗೆ ಮುಂದೆ ಹರಿದು ಬಂದ ಮೇಲೆ ಸಿಗುವ ಅತ್ಯಂತ ಪ್ರಾಚೀನ ನಗರವೇ ಕಾಶಿ-ಅಥವಾ ವಾರಣಾಸಿ. ಪ್ರಪಂಚದ ಅನೇಕ ರಾಜ್ಯಗಳು, ರಾಜಧಾನಿಗಳು ನಾಶವಾಗಿವೆ. ಹೊಸ ರಾಜಧಾನಿಗಳು ಬೆಳೆದಿವೆ. ಆದರೆ ವೇದ ಪುರಾಣಗಳ ಕಾಲದಿಂದಲೂ ಪ್ರಸಿದ್ಧವಾದ ಕಾಶೀ ನಗರ ಮಾತ್ರ ಯಾವ ಕಾಲಕ್ಕೂ ಸಂಪೂರ್ಣ ನಾಶವಾಗದೆ ಸಾವಿರಾರು ವರ್ಷಗಳ ಐತಿಹ್ಯವನ್ನು ಕಂಡುಂಡು ಇಂದೂ ಉಳಿದಿರುವುದೊಂದು ಅದ್ಭುತವೇ ಸರಿ. ಇದು ಪ್ರಪಂಚದಲ್ಲೆಲ್ಲ. ಅತಿ ಪ್ರಾಚೀನ ನಗರ. ಈ ನಗರದ ಮಧ್ಯದಲ್ಲಿ ಅರ್ಧ ಚಂದ್ರಾಕಾರವಾಗಿ ಹರಿಯುವ ಗಂಗಾನದಿಯ ದೃಶ್ಯ ಅತ್ಯಂತ ಮನೋಹರ, ಈ ನಗರದಲ್ಲಿ ವಿಶ್ವನಾಥನೆಂಬ ಜ್ಯೋತಿರ್ಲಿಂಗವಿರುವ ಪ್ರಸಿದ್ಧ ಕಾಶೀ ದೇವಾಲಯವಿದೆ. ಗಂಗಾಸ್ನಾನಮಾಡಿ ವಿಶ್ವನಾಥನ ದರ್ಶನ ಮಾಡಿದವರಿಗೆ ಪುಣ್ಯ ಬರುತ್ತದೆಂಬ ಭಾವನೆ ಜನರಲ್ಲುಂಟು. ಕಾಶಿಯಲ್ಲಿ ಸತ್ತರೆ ಮೋಕ್ಷವೆಂದು ಎಷ್ಟೋ ಜನರ ನಂಬಿಕೆ. ಆದುದರಿಂದ ವೃದ್ಧಾಪ್ಯದಲ್ಲಿ ಎಷ್ಟೋ ಜನರು ಕಾಶಿಗೆ ಹೋಗುವುದುಂಟು. ಇಲ್ಲಿ ಗಂಗಾತೀರದಲ್ಲಿ ಅನೇಕ ಸ್ನಾನ ಘಟ್ಟಗಳೂ, ದೇವಾಲಯಗಳೂ ಇವೆ. ಇಲ್ಲಿನ ಹರಿಶ್ಚಂದ್ರ ಘಾಟ್ ಎಂಬ ಸ್ಥಳವು ಪುರಾಣೋಕ್ತವಾದ ಹರಿಶ್ಚಂದ್ರನ ಕಥೆಯನ್ನು ಸ್ಮೃತಿಪಥಕ್ಕೆ ತರುತ್ತದೆ. ಗೌತಮನು ಬುದ್ಧನೆನಿಸಿದ ಮೇಲೆ ಅಹಿಂಸಾ ತತ್ವದ ಪ್ರಥಮ ಬೋಧೆಯನ್ನು ಇಲ್ಲಿಯೇ ಮಾಡಿದನು. ವಾರಣಾಸಿಯ ಸಮೀಪದಲ್ಲಿಯೇ ಬೌದ್ಧರ ಯಾತ್ರಾಸ್ಥಳವಾದ 'ಸಾರನಾಥ' ಇದೆ.

ವಾರಣಾಸಿಯಿಂದ ಸ್ವಲ್ಪ ದೂರ ಮುಂದಕ್ಕೆ ಹರಿದು ಗಂಗೆ ಬಿಹಾರ ರಾಜ್ಯವನ್ನು ಪ್ರವೇಶಿಸುತ್ತದೆ. ಇಲ್ಲಿ ಈ ಗಂಗಾನದಿಗೆ ಹಿಮಾಲಯದಿಂದ ಹರಿದು ಬಂದ ಗೋಗ್ರಾ,ಗಂಡಕಿ, ಕೋಸಿ ಮೊದಲಾದ ನದಿಗಳು ಬಂದು ಸೇರುತ್ತವೆ. ಈ ನದಿಯ ದಂಡೆಯ ಮೇಲೆ, ಪ್ರಾಚೀನ ಪಾಟಲೀಪುತ್ರ ಅಥವಾ ಕುಸುಮಪುರವಿದೆ. ಅದೇ ಈಗಿನ ಪಾಟ್ನಾ . ಪಾಟ್ನಾ ನಗರ ಬಿಹಾರದ ರಾಜಧಾನಿ. ಪಾಟಲೀಪುತ್ರವೆಂದೊಡನೆಯೇ ನಮ್ಮ ಕಣ್ಣಿಗೆ ಚಂದ್ರಗುಪ್ತ ಮೌರ್ಯ ಮತ್ತು ನವನಂದರ ಭವ್ಯ ಇತಿಹಾಸ ಕಾಣಬರುತ್ತದೆ. ಈ ಪಾಟ್ನಾ ನಗರದ ಸಮೀಪದಲ್ಲಿಯೇ ಸೋನಾನನದಿಯು ತನ್ನ ಹಳದಿ ಛಾಯೆಯ ನೀರನ್ನು ಗಂಗೆಯಲ್ಲಿ ಸೇರಿಸುತ್ತದೆ.ಇಲ್ಲಿ ಗಂಗಾನದಿ ಬಹಳ ವಿಶಾಲವಾಗಿ ಕಾಣಿಸುತ್ತದೆ. ಅನೇಕ ನದಿಗಳ ನೀರನ್ನು ತನ್ನಲ್ಲಿ ಅಂತರ್ಗತಗೊಳಿಸಿಕೊಂಡು ಅವನ್ನೆಲ್ಲ ತನ್ನ ಬಣ್ಣಕ್ಕೆ ತಿರುಗಿಸಿ ಕೊಂಡುಬಿಡುತ್ತದೆ. ಪಾಟ್ನಾದಿಂದ ಮುಂದೆ ಗಂಗಾಪ್ರವಾಹವು ಪ್ರಶಾಂತ ಗಂಭೀರವಾಗಿ ಸಾಗಿ, ಬಾಗಲಪುರ ಮಾರ್ಗವಾಗಿ ಬಿಹಾರದ ಪೂರ್ವ ಬೆಟ್ಟ ಪ್ರದೇಶಗಳನ್ನು ದಾಟಿ ಬಂಗ ಪ್ರಾಂತವನ್ನು ಪ್ರವೇಶಿಸಿ 'ದೂಲಿಯಾನಾ'ದ ಮುಂದೆ ಎರಡು ಕವಲುಗಳಾಗಿ ಒಡೆದು ಒಂದು ಭಾಗವು ಬಾಂಗ್ಲಾ ರಾಜ್ಯವನ್ನು ಪ್ರವೇಶಿಸುತ್ತದೆ. ಆ ಭಾಗಕ್ಕೆ ಪದ್ಮಾ ಎಂದು ಹೆಸರಾಗಿ ಮತ್ತೊಂದು ಭಾಗವು ಹೂಗ್ಲೀ ಎಂದು ಹೆಸರುಗೊಂಡ ಕಲ್ಕತ್ತೆಯ ಹತ್ತಿರ ಹರಿದು ಬಂಗಾಳಕೊಲ್ಲಿಯನ್ನು ಸೇರುತ್ತದೆ. ಕಲಕತ್ತೆಯು ಭಾರತದ ಸುಪ್ರಸಿದ್ಧ ನಗರ ಕಲಕತ್ತೆಯನ್ನು ನೆನೆದಾಗ ನಮ್ಮ ಸ್ಮೃತಿ ಪಟಲದಲ್ಲಿ ಎದ್ದು ನಿಲ್ಲುವವರು ಇತ್ತೀಚೇಗಿನ ಮಹಾಪ್ರವಾದಿಗಳಿಬ್ಬರು. ಅವರೇ ಶ್ರೀ ರಾಮಕೃಷ್ಣ ಪರಮಹಂಸರು ಮತ್ತು ವಿವೇಕಾನಂದರು. ನಡೆಯುತ್ತ ಇರು; ಎಲ್ಲರಿಗೂ ಉಪಕಾರಿಯಾಗು; ಇದೇ ಗಂಗೆಯ ಸಂದೇಶ.

**ಶಬ್ದಗಳ ಅರ್ಥ:**

ಸುರಲೋಕ – ದೇವಲೋಕ; ಇಷ್ಟಾರ್ಥ – ಮನಸ್ಸಿನ ಬಯಕೆ; ಜಾಹ್ನವಿ – ಸೀತಾಮಾತಾ; ಮನ್ನಣೆ – ಮಾನ; ಜ್ಞಾತಿ – ಬ್ರಾಹ್ಮಣ; ಪ್ರಾಚೀನ – ಪುರಾತನ.

**ಪಾಠವನ್ನು ಓದಿಕೊಂಡು ಕೆಳಗಿನ ಸೂಚನೆಗೆ ಅನುಗುಣವಾಗಿ ಕೃತಿ ಮಾಡು**

**ಕೃತಿ 1)** ಅ) ಕೆಳಗಿನ ಜಾಲವನ್ನು ಪೂರ್ಣಗೊಳಿಸಿರಿ.

| ಹಿಮಾಲಯ ಪರ್ವತದ ಲಾಭಗಳು |
|---|
| 1) |
| 2) |
| 3) |
| 4) |

ಬ) ಗಂಗೆ ಪಾವನಗೊಳಿಸಿದ ಮೂರು ಲೋಕಗಳು

ಕ) ಪಾಠದಲ್ಲಿ ಬಂದಿರುವ ಋಷಿಗಳು

ಡ) ಗಂಗೆಯ ಕುರಿತು ಇರುವ ಪೌರಾಣಿಕ ಹಿನ್ನೆಲೆಯ ಕಥೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

ಇ) ನಿಮಗೆ ಗೊತ್ತಿರುವ ಯಾವುದಾದರೊಂದು ನದಿಯ ಕುರಿತು ಬರೆಯಿರಿ.

**ಕೃತಿ 2)** ಅ) ಗಂಗೆಗೆ ಈ ಹೆಸರು ಬರಲು ಕಾರಣ

ಜಾಹ್ನವಿ →

ಭಾಗೀರಥಿ →

ತ್ರಿಪಥಗಾ →

ಗಂಗೆ →

ಬ) ಗಂಗೆಗೆ ಇರುವ ಇತರ ನಾಮಧೇಯಗಳು.

**ಕ) ಕೆಳಗಿನ ಪದಬಂಧವನ್ನು ಪೂರ್ಣಗೊಳಿಸಿರಿ.**

**ಮೇಲಿನಿಂದ ಕೆಳಕ್ಕೆ**


1) ಗಂಗೆ ಹರಿದು ಬಂದಿರುವ ಪರ್ವತ (4)

2) ದೇವ ಪ್ರಯಾಗದ ಸಮೀಪದ ಪ್ರವಾಹಕ್ಕೆ ಸೇರುವ ನದಿ (5)

**ಎಡದಿಂದ ಬಲಕ್ಕೆ**


3) ಪುಣ್ಯ ಸ್ನಾನಕ್ಕೆ ಸೇರುವ ಯಾತ್ರಾರ್ಥಿಗಳ ಸಂಖ್ಯೆ (5)

4) ದಕ್ಷಬ್ರಹ್ಮನ ಮಗಳು (4)




**ಕೃತಿ. 3) ಭಾರತದ ಇತಿಹಾಸ ಪುಟದಲ್ಲಿ ಗಂಗೆ ಕಂಡು ಕೊಂಡದ್ದು ಏನು?**

**II) ತ್ರಿವೇಣಿ ಸಂಗಮ ಕ್ಷೇತ್ರದಲ್ಲಿ ಕೂಡುವ ನದಿಗಳ ಹೆಸರುಗಳನ್ನು ಕೆಳಗಿನ ಜಾಲದಲ್ಲಿ ಬರೆಯಿರಿ.**



**III) ವಾರಾಣಾಸಿಯ ವಿವರಣೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.**

**IV) ನೀವು ಭೇಟಿಕೊಟ್ಟಿರುವ ಯಾವುದಾದರೂ ಪುಣ್ಯ ಕ್ಷೇತ್ರದ ವರ್ಣನೆಯನ್ನು ಏಳೆಂಟು ವಾಕ್ಯಗಳಲ್ಲಿ ಬರೆಯಿರಿ.**

**ಕೃತಿ. 4) ಅ) ಕೆಳಗಿನ ವಾಕ್ಯದ ಪ್ರಕಾರ ಗುರುತಿಸಿ ಬರೆಯಿರಿ.**

1) ಹರಿದ್ವಾರವು ಬಹು ಪವಿತ್ರವಾದ ಕ್ಷೇತ್ರವೆನಿಸಿದೆ.

2) ಪ್ರಯಾಗ ಕ್ಷೇತ್ರದಿಂದ ಗಂಗೆ ಮುಂದೆ ಹರಿದು ಬಂದ ಮೇಲೆ ಸಿಗುವ ಅತ್ಯಂತ ಪ್ರಾಚೀನ ನಗರವೇ ಕಾಶಿ ಅಥವಾ ವಾರಣಾಸಿ.

**ಬ) ಕೆಳಗಿನ ವಾಕ್ಯದ ಪ್ರಯೋಗವನ್ನು ಬದಲಿಸಿರಿ.**

1) ದಕ್ಷ ಬ್ರಹ್ಮಯಾಗವನ್ನು ಮಾಡಿದನು.

2) ಭಗೀರಥನಿಂದ ಶಿವನ ತಪಸ್ಸು ಮಾಡಲ್ಪಟ್ಟಿತು.

**ಕ) ಉಪಸರ್ಗಯುಕ್ತ ಪದ ಬರೆಯಿರಿ.**

ಲೋಕ, ಪಾತ್ರ, ಯೋಗ, ಬಲ

# ವ್ಯಾಕರಣ ವಿಭಾಗ



## ವಿಭಕ್ತಿ ಪ್ರತ್ಯಯಗಳು

ನಾಮಪ್ರಕೃತಿಗಳ ಮುಂದೆ ಸೇರಿಕೊಂಡು ಬೇರೆ ಬೇರೆ ಅರ್ಥ ಉಂಟುಮಾಡುವ ಪ್ರತ್ಯಯಗಳಿಗೆ ವಿಭಕ್ತಿ ಪ್ರತ್ಯಯ ಎಂದು ಹೆಸರು. ಪ್ರಕೃತಿಗೆ ಸ್ವತಂತ್ರವಾದ ಅರ್ಥವಿದೆ. ಆದರೆ ಪ್ರತ್ಯಯಕ್ಕೆ ಸಾಮಾನ್ಯವಾಗಿ ಸ್ವತಂತ್ರವಾದ ಅರ್ಥವಿರುವದಿಲ್ಲ. ಅದು ಪ್ರಕೃತಿಯ ಜೊತೆಗೆ ಸೇರಿದಾಗ ಮಾತ್ರ ಅರ್ಥವನ್ನು ಪಡೆದುಕೊಳ್ಳುತ್ತದೆ.

| | ವಿಭಕ್ತಿಯ ಹೆಸರು | ವಿಭಕ್ತಿ ಪ್ರತ್ಯಯ | ಉದಾ : |
|---|---|---|---|
| 1. | ಪ್ರಥಮಾ | ಉ | ಮರ + ಉ = ಮರವು |
| 2. | ದ್ವಿತೀಯಾ | ಅನ್ನು | ಮರ + ಅನ್ನು = ಮರವನ್ನು |
| 3. | ತೃತೀಯಾ | ಇಂದ | ಮರ + ಇಂದ = ಮರದಿಂದ |
| 4. | ಚತುರ್ಥೀ | ಗೆ, ಇಗೆ, ಕೆ | ಮರ + ಕ್ಕೆ = ಮರಕ್ಕೆ |
| 5. | ಪಂಚಮೀ | ದೆಸೆಯಿಂದ | ಮರ + ದೆಸೆಯಿಂದ = ಮರದ ದೆಸೆಯಿಂದ |
| 6. | ಷಷ್ಠೀ | ಅ | ಮರ + ಅ = ಮರದ |
| 7. | ಸಪ್ತಮೀ | ಅಲ್ಲಿ | ಮರ + ಅಲ್ಲಿ = ಮರದಲ್ಲಿ |
| 8. | ಸಂಬೋಧನಾ | ಏ, ಇರ | ಹುಡುಗನ + ಏ = ಹುಡುಗನೇ |

## ವಾಕ್ಯ ಪ್ರಕಾರಗಳು

**ವಾಕ್ಯರಚನಾ ವಿವರ :-** ಪದಗಳ ಕ್ರಮವರಿತ, ಪೂರ್ಣ ಅರ್ಥಕೊಡುವ ಸಂಯೋಜಿತ ರಚನೆಯೇ ವಾಕ್ಯ. ನಿಶ್ಚಿತ, ಸ್ಪಷ್ಟ, ಪೂರ್ಣ ಅರ್ಥಕೊಡುವ ವ್ಯಾಕರಣಾತ್ಮಕ ರಚನೆಯಿದು. ವಾಕ್ಯಗಳನ್ನು ಸರಳ, ಸಂಯುಕ್ತ, ಮಿಶ್ರವಾಕ್ಯ ಎಂಬುದಾಗಿ ವಿಂಗಡಿಸಲಾಗಿದೆ.

### 1) ಸರಳ ವಾಕ್ಯ (ಸಾಮಾನ್ಯ ವಾಕ್ಯ)

ಒಂದು ಪೂರ್ಣ ಕ್ರಿಯಾಪದದೊಡನೆ ಸ್ವತಂತ್ರ ಖಚಿತ ಅರ್ಥ ಕೊಡುವ ವಾಕ್ಯವೇ ಸರಳ ವಾಕ್ಯ.

**ಉದಾ :** 1. ರಾಮನು ಭಾವಗೀತೆಯನ್ನು ಚೆನ್ನಾಗಿ ಹಾಡಿದನು.

2. ಬಲಶಾಲಿಯಾದ ಭೀಮನು ರಾಕ್ಷಸರನ್ನು ಕೊಂದನು.

ಮೇಲಿನ ವಾಕ್ಯಗಳಲ್ಲಿ 'ಹಾಡಿದನು', 'ಕೊಂದನು' ಎಂಬ ಕ್ರಿಯಾಪದಗಳಿವೆ. ವಾಕ್ಯದಲ್ಲಿ ಒಂದೇ ಕ್ರಿಯಾಪದವಿದ್ದರೆ ಸರಳ ವಾಕ್ಯವೆನಿಸುವುದು.

### 2) ಸಂಯುಕ್ತ ವಾಕ್ಯ (ಸಂಯೋಜಿತ ವಾಕ್ಯ)

ಒಂದು ಪ್ರಧಾನ ವಾಕ್ಯದ ಜೊತೆಯಲ್ಲಿ ಸ್ವತಂತ್ರವಾಗಿ ನಿಲ್ಲಬಲ್ಲ ಎರಡು ವಾಕ್ಯಗಳು ಒಂದು ಪೂರ್ಣವಾದ ಅಭಿಪ್ರಾಯವನ್ನು ಕೊಟ್ಟರೆ ಅದು ಸಂಯುಕ್ತ ವಾಕ್ಯವೆನಿಸುತ್ತದೆ.

**ಉದಾ :** 1. ಮಕ್ಕಳು ಹಾಲನ್ನು ಕುಡಿಯುತ್ತಾರೆ, ಆದರೆ ಅವರಿಗೆ ಕುಡಿಯಲು ಸಾಕಷ್ಟು ಹಾಲಿಲ್ಲ.

2. ಕೆಂಪೇಗೌಡರು ಭೈರವಿ ರಾಗವನ್ನು ಚೆನ್ನಾಗಿ ಅಭ್ಯಾಸ ಮಾಡಿದರು; ಆದುದರಿಂದ ಅವರು ಸುಶ್ರಾವ್ಯವಾಗಿ ಹಾಡಿದರು.

ಕೆಂಪೇಗೌಡರು ಭೈರವಿ ರಾಗವನ್ನು ಚೆನ್ನಾಗಿ ಅಭ್ಯಾಸ ಮಾಡಿದರು. ಇದು ಒಂದು ಸ್ವತಂತ್ರವಾಕ್ಯ. ಅವರು ಸುಶ್ರಾವ್ಯವಾಗಿ ಹಾಡಿದರು. ಹೀಗೆ ಈ ಎರಡು ವಾಕ್ಯಗಳಿಗೆ ''ಆದುದರಿಂದ'' ಎಂಬ ಸಂಯೋಜಕ ಒಂದುಗೂಡಿಸಿದೆ. ಎರಡು ಸ್ವತಂತ್ರ ವಾಕ್ಯಗಳು ಒಟ್ಟಾಗಿ ಸೇರಿ ಒಂದು ಪೂರ್ಣವಾದ ಅಭಿಪ್ರಾಯವನ್ನು ಕೊಡುತ್ತವೆ. ಆದುದರಿಂದ ಇದು ಸಂಯುಕ್ತವಾಕ್ಯ.

### 3) ಮಿಶ್ರವಾಕ್ಯ (ಸಂಕೀರ್ಣ ವಾಕ್ಯ)

ಒಂದು ಪ್ರಧಾನ ವಾಕ್ಯದೊಡನೆ ಒಂದು ಅಥವಾ ಅನೇಕ ಉಪವಾಕ್ಯಗಳು ಆಧೀನವಾಗಿದ್ದರೆ ಅಂಥ ವಾಕ್ಯವನ್ನು ಮಿಶ್ರವಾಕ್ಯ ಎನ್ನುವರು.

**ಉದಾ :** 1. ಶಾಲೆಯನ್ನು ಸಂದರ್ಶಿಸಲು ವಿದ್ಯಾಸಚಿವರು ಬರುವರೆಂಬ ಸುದ್ದಿಯಿಂದ ಮುಖ್ಯೋಪಾಧ್ಯಾಯರು ಪ್ರಸನ್ನರಾದರು.

2. ರಾಮನಿಗೆ ಬಹುಮಾನ ದೊರೆಯಿತೆಂಬುದನ್ನು ಅವನಿಂದಲೇ ತಿಳಿದೆನು.

ಇಲ್ಲಿ 'ತಿಳಿದೆನು' ಎಂಬ ಕ್ರಿಯಾಪದವು ಪ್ರಧಾನ ಕ್ರಿಯಾಪದ. ಈ ಕ್ರಿಯಾಪದಕ್ಕೆ 'ರಾಮನಿಗೆ ಬಹುಮಾನ ದೊರೆಯಿತು' ಎಂಬುದು ಕರ್ಮವಾಗಿ ಆಧೀನವಾಕ್ಯ ಎನಿಸುತ್ತದೆ. 'ತಿಳಿದೆನು' ಎಂಬ ಕ್ರಿಯಾಪದದ ಕರ್ತೃ 'ನಾನು' ಎಂಬುದನ್ನು ಅಧ್ಯಾಹಾರ ಮಾಡಿಕೊಳ್ಳಬೇಕು. ಅಂದರೆ 'ನಾನು ತಿಳಿದೆನು' ಎಂದು ತಿಳಿದುಕೊಳ್ಳಬೇಕು.

## ವಾಕ್ಯ ಪ್ರಯೋಗ

ಪ್ರಯೋಗ ಬದಲಾವಣೆ (ಕರ್ತರಿ ಪ್ರಯೋಗ, ಕರ್ಮಣಿ ಪ್ರಯೋಗ)

### ಕರ್ತರಿ ಪ್ರಯೋಗ :-

ಕ್ರಿಯಾಪದವು ಕರ್ತೃಪದದ ಲಿಂಗ, ವಚನಗಳನ್ನು ಅನುಸರಿಸಿ ಪ್ರಯೋಗಗೊಂಡಿದ್ದರೆ ಅದಕ್ಕೆ ಕರ್ತರಿ ಪ್ರಯೋಗವೆನ್ನುವರು.

### ಕರ್ಮಣಿ ಪ್ರಯೋಗ :-

ಕರ್ಮಣಿ ಪ್ರಯೋಗದಲ್ಲಿ ಕರ್ಮಪದವು ಪ್ರಧಾನವಾಗಿರುತ್ತದೆ. ಕರ್ಮಪದವು ಪ್ರಥಮಾ ವಿಭಕ್ತಿಯಲ್ಲಿಯೂ, ಕರ್ತೃಪದವು ತೃತೀಯಾ ವಿಭಕ್ತಿಯಲ್ಲಿದ್ದು, ಕ್ರಿಯಾಪದವು ಕರ್ಮಪದದ ಲಿಂಗ, ವಚನ, ಪುರುಷಗಳನ್ನು ಅನುಸರಿಸಿ ಕ್ರಿಯಾಪದದ ಮೂಲ ಧಾತು ಮತ್ತು ಆಖ್ಯಾತ ಪ್ರತ್ಯಯಗಳ ನಡುವೆ 'ಅಲ್ ಪಡು' ಪ್ರತ್ಯಯ ಸೇರಿರುವುದಕ್ಕೆ ಕರ್ಮಣಿ ಪ್ರಯೋಗವೆನ್ನುವರು.

| ಕರ್ತರಿ ಪ್ರಯೋಗ | | | ಕರ್ಮಣಿ ಪ್ರಯೋಗ | | |
|---|---|---|---|---|---|
| ಕರ್ತೃ | ಕರ್ಮ | ಕ್ರಿಯಾಪದ | ಕರ್ಮ | ಕರ್ತೃ | ಕ್ರಿಯಾಪದ |
| ಹಸುವು | ಹಾಲನ್ನು | ಕೊಡುತ್ತದೆ | ಹಸುವಿನಿಂದ | ಹಾಲು | ಕೊಡಲ್ಪಡುತ್ತದೆ |
| ಆನಂದ | ಹಾಡನ್ನು | ಹಾಡಿದನು | ಆನಂದನಿಂದ | ಹಾಡು | ಹಾಡಲ್ಪಟ್ಟಿತು |
| ಮಳೆಯು | ಇಳೆಯನ್ನು | ತಣಿಸಿತು | ಮಳೆಯಿಂದ | ಇಳೆಯು | ತಣಿಯಲ್ಪಟ್ಟಿತು |
| ಲಲಿತಾ | ನಾಟ್ಯವನ್ನು | ಮಾಡಿದಳು | ಲಲಿತಾಳಿಂದ | ನಾಟ್ಯವು | ಮಾಡಲ್ಪಟ್ಟಿತು |
| ಗಿಳಿಗಳು | ಹಣ್ಣನ್ನು | ತಿಂದವು | ಗಿಳಿಗಳಿಂದ | ಹಣ್ಣು | ತಿನ್ನಲ್ಪಟ್ಟವು |
| ಕವಿಗಳು | ಕಾವ್ಯಗಳನ್ನು | ರಚಿಸಿದರು | ಕವಿಗಳಿಂದ | ಕಾವ್ಯಗಳು | ರಚಿಸಲ್ಪಟ್ಟವು |

# ತತ್ಸಮ - ತದ್ಭವ

ಸಂಸ್ಕೃತದಿಂದ ಕನ್ನಡಕ್ಕೆ ಸಾಕಷ್ಟು ಪದಗಳು ಬಂದಿವೆ. ಹೀಗೆ ಸಂಸ್ಕೃತದಿಂದ ಬಂದ ಪದಗಳಲ್ಲಿ ಕೆಲವು ಅಲ್ಪಸ್ವಲ್ಪ ಬದಲಾವಣೆಗೊಂಡು ಬಂದರೆ ಇನ್ನು ಕೆಲವು ಪೂರ್ತಿ ಬದಲಾವಣೆಗೊಂಡು ಬಂದಿವೆ. ಹೀಗೆ ಸಂಸ್ಕೃತದಿಂದ ಬಂದಿರುವ ಪದಗಳನ್ನು ತತ್ಸಮ – ತದ್ಭವಗಳೆಂದು ಕರೆಯುವ ರೂಢಿಯಿದೆ.

**ತತ್ಸಮಗಳು :** ಸಂಸ್ಕೃತದಿಂದ ಬರುವಾಗ ವಿಕಾರ ಹೊಂದದೆ ಕನ್ನಡದಲ್ಲಿ ಬಳಸಲ್ಪಡುವ ಪದಗಳನ್ನು **'ತತ್ಸಮ'**ಗಳೆಂದು ಕರೆಯುತ್ತಾರೆ. **'ತತ್'** ಎಂದರೆ **'ಅದಕ್ಕೆ'** (ಸಂಸ್ಕೃತಕ್ಕೆ) **'ಸಮ'** ಎಂದರೆ **'ಸಮಾನ'** ಎಂದರ್ಥ. ಅಂದರೆ ಸಂಸ್ಕೃತಕ್ಕೆ ಸಮಾನವಾದದ್ದು ಎಂದರ್ಥ. **ತದ್ಭವಗಳ** ಸಂಸ್ಕೃತ ರೂಪವನ್ನೂ **ತತ್ಸಮ** ಎಂದು ಕರೆಯುತ್ತಾರೆ.

**ಉದಾ :** ರಾಮ, ವಸಂತ, ಸೋಮ, ಚಂದ್ರ, ಗ್ರಹ, ಸ್ತ್ರೀ, ಶ್ರೀ, ಭುವನ, ಶ್ರುತಿ, ಕಾವ್ಯ, ಪಶು – ಇತ್ಯಾದಿ.

**ತದ್ಭವಗಳು :** ಸಂಸ್ಕೃತದಿಂದ ಕನ್ನಡಕ್ಕೆ ಬರುವಾಗ ಅಲ್ಪಸ್ವಲ್ಪ ವಿಕಾರವನ್ನಾಗಲೀ, ಪೂರ್ಣ ವಿಕಾರವನ್ನಾಗಲೀ ಹೊಂದಿ ಬಂದಿರುವ ಪದಗಳನ್ನು **'ತದ್ಭವ'** ಎಂದು ಕರೆಯುತ್ತಾರೆ. **'ತತ್'** ಎಂದರೆ ಅದರಿಂದ, ಎಂದರೆ ಸಂಸ್ಕೃತದಿಂದ **'ಭವ'** ಎಂದರೆ ಹುಟ್ಟಿದ್ದು ಅಂದರೆ ಸಂಸ್ಕೃತದಿಂದ ಹುಟ್ಟಿದ್ದು ಎಂದರ್ಥ.

**ಅಲ್ಪಸ್ವಲ್ಪ ಬದಲಾವಣೆಗೊಂಡ ತದ್ಭವರೂಪಗಳು :** ಶಶಿ–ಸಸಿ, ಶಿರ–ಸಿರ, ಕಲಶ–ಕಳಸ, ಅಂಕುಶ–ಅಂಕುಸ. ವರ್ಷ–ವರುಸ ಇತ್ಯಾದಿ

**ಪೂರ್ಣ ವ್ಯತ್ಯಾಸ ಹೊಂದಿದ ತದ್ಭವರೂಪಗಳು :** ದ್ಯೂತ–ಜೂಜು, ವಂಧ್ಯಾ–ಬಂಜೆ, ವಿದ್ಯಾಧರ–ಬಿಜ್ಜೋದರ, ವೈಶಾಖ–ಬೇಸಗೆ, ಕುಠಾರ–ಕೊಡಲಿ, ಪಾದುಕಾ–ಹಾವುಗೆ, ಅರ್ಕ–ಎಕ್ಕ ಇತ್ಯಾದಿ.

# ಉಪಸರ್ಗಯುಕ್ತ ಪದಗಳು

ಉಪಸರ್ಗಯುಕ್ತ ಪದಗಳು ಹೆಚ್ಚಾಗಿ ಸಂಸ್ಕೃತ ಶಬ್ದಗಳಾಗಿವೆ. ಬೇರೆಯೆ ಅರ್ಥ ಪಡೆಯಲು ಶಬ್ದದ ಮೊದಲು ಸು, ಪರಿ, ಅ, ವಿ, ಅನು, ಸಂ, ದುರ್, ಪ್ರ ಇತ್ಯಾದಿ ವಿಶಿಷ್ಟ ಶಬ್ದರೂಪಗಳು ಸೇರುವುದುಂಟು; ಇಂಥ ರೂಪಗಳಿಗೆ ''ಉಪಸರ್ಗ'' ಎಂದು ಕರೆಯುವರು.

ಈ ಉಪಸರ್ಗಗಳು ಸೇರಿ ಆದ ಶಬ್ದಗಳು ಉಪಸರ್ಗಯುಕ್ತ ಶಬ್ದಗಳು ಎಂದು ಕರೆಯುವರು.

**ಉದಾ :-**

| | | |
|---|---|---|
| ಸು | + | ವ್ಯವಸ್ಥೆ, ಚಿತ್ರ, ಯೋಗ, ಮತಿ, ಫಲ |
| ಪರಿ | + | ಶೋಧನೆ |
| ಪರ | + | ಧರ್ಮ |
| ಸಹ | + | ಚರ |
| ಸ್ವ | + | ದೇಶ, ಧರ್ಮ |
| ಅ | + | ಪ್ರಿಯ, ಸಾಧ್ಯ, ನಾಥ, ಸಂಖ್ಯೆ, ಮರ, ಚಲ |
| ವಿ | + | ವಾದ, ಭಕ್ತಿ, ಚಲ, ಜ್ಞಾನ, ಭೂತಿ, ನಮ್ರ, ದೇಶ, ರೂಪ, ಲಕ್ಷಣ, ಚಿತ್ರ |
| ಅನು | + | ವಾದ |
| ಅಭಿ | + | ವೃದ್ಧಿ |
| ನಿ | + | ದರ್ಶನ |
| ಪ್ರ | + | ಯತ್ನ |
| ಸತ್ | + | ಭಕ್ಕಿ (ಸತ್ + ಭಕ್ತಿ = ಸದ್ಭಕ್ತಿ) ಮಾನ (ಸತ್ + ಮಾನ = ಸನ್ಮಾನ) ನಿವೇಶ (ಸತ್ + ನಿವೇಶ = ಸನ್ನಿವೇಶ) |
| ದುರ್ | + | ಗುಣ (ದುರ್ + ಗುಣ = ದುರ್ಗುಣ ಮತಿ (ದುರ್ + ಮತಿ = ದುರ್ಮತಿ) |
| ನಿರ್ | + | ಅಂಕುಶ (ನಿರ್ + ಉತ್ಸಾಹ = ನಿರುತ್ಸಾಹ) ವಿಕಾರ (ನಿರ್ + ವಿಕಾರ = ನಿರ್ವಿಕಾರ |

# ಪಡೆನುಡಿಗಳು

ಹಲವು ವಾಕ್ಯಾಂಶಗಳು ತಮ್ಮ ಸಾಮಾನ್ಯ ಅರ್ಥವನ್ನು ಬಿಟ್ಟು ವಿಶೇಷ ಅರ್ಥವನ್ನು ಪ್ರಕಟಿಸುತ್ತವೆ. ಇಂತಹ ವಾಕ್ಯಾಂಶಗಳಿಗೆ 'ಪಡೆನುಡಿ' ಎನ್ನುವರು. ಪಡೆನುಡಿಗಳು ಭಾಷೆಗೆ ಪ್ರೌಢತೆಯನ್ನು ಕೊಡುತ್ತವೆ. ಪಡೆನುಡಿಗಳನ್ನು ಬಳಸುವುದರಿಂದ ಭಾಷಾಜ್ಞಾನ, ಶಬ್ದಸಂಪತ್ತು ಹೆಚ್ಚುವುದಲ್ಲದೆ ರಂಜಕತೆಯೂ ಕೂಡ ವೃದ್ಧಿಸುತ್ತದೆ.

ಪಡೆನುಡಿಗಳು, ಅವುಗಳ ಅರ್ಥ ಹಾಗೂ ವಾಕ್ಯಗಳಲ್ಲಿ ಅವುಗಳ ಪ್ರಯೋಗ.

1. ಕಾಲಿಗೆ ಬುದ್ಧಿ ಹೇಳು = ಓಡಿ ಹೋಗು.
   ಪೋಲೀಸರನ್ನು ಕಂಡ ಕೂಡಲೇ ಕಳ್ಳರು ಕಾಲಿಗೆ ಬುದ್ಧಿ ಹೇಳುವರು.

2. ಕೈಕಟ್ಟಿ ಕೂಡು = ಚಿಂತಿಸು, ವ್ಯರ್ಥ ಕೂಡು
   ಪರೀಕ್ಷೆಯಲ್ಲಿ ಫೇಲಾದ ಬಸವನು ಕೈಕಟ್ಟಿ ಕುಳಿತುಕೊಂಡಿದ್ದನು.

3. ಬೆಕ್ಕಸಬೆರಗಾಗು = ಗಾಬರಿಯಾಗು, ಆಶ್ಚರ್ಯಚಕಿತನಾಗು.
ಸಿಡಿಮದ್ದಿನ ಭೀಕರ ಸದ್ದು ಕೇಳಿ ಗೌರಿಯು ಬೆಕ್ಕಸಬೆರಗಾದಳು.

4. ಟೊಪ್ಪಿಗೆ ಹಾಕು = ಮೋಸ ಮಾಡು
ಇಂದಿನ ಸಮಾಜದಲ್ಲಿ ಟೊಪ್ಪಿಗೆ ಹಾಕುವವರು ಹೆಚ್ಚುತ್ತಿದ್ದಾರೆ.

5. ಹುಬ್ಬುಗಂಟಿಕ್ಕು = ಸಿಟ್ಟಿಗೆ ಬರು
ಮನೆಗೆಲಸವನ್ನು ಮಾಡಿಕೊಂಡು ಬರದಿದ್ದರೆ ಶಿಕ್ಷಕರು ಹುಬ್ಬುಗಂಟಿಕ್ಕುತ್ತಾರೆ.

# ಸಮಾಸಗಳು

ಎರಡು ಅಥವಾ ಹಲವು ಪದಗಳು ಅರ್ಥಾನುಸಾರವಾಗಿ ಸೇರಿ ಒಂದು ಪದವಾಗುವದಕ್ಕೆ **ಸಮಾಸ** ಎಂದು ಹೆಸರು. ಸಮಾಸ ಪದವನ್ನು ಬಿಡಿಸಿ ಹೇಳುವದಕ್ಕೆ **ವಿಗ್ರಹವಾಕ್ಯ** ಎನ್ನುವರು.

**ಉದಾ :-**

**ಅರಮನೆ :-** ಅರಸನ + ಮನೆ = ಅರಮನೆ

ವಿಗ್ರಹವಾಕ್ಯದ ಮೊದಲನೆಯ ಪದವನ್ನು ಪೂರ್ವಪದವೆಂದೂ, ಎರಡನೆಯ ಪದವನ್ನು ಉತ್ತರಪದವೆಂದು ಕರೆಯುವರು.

ಸಮಾಸದಲ್ಲಿ ಎಂಟು ವಿಧಗಳನ್ನಾಗಿ ವಿಂಗಡಿಸಲಾಗಿದೆ.

1. ತತ್ಪುರುಷ ಸಮಾಸ, 2. ಕರ್ಮಧಾರಯ ಸಮಾಸ, 3. ದ್ವಿಗು ಸಮಾಸ, 4. ಕ್ರಿಯಾ ಸಮಾಸ, 5. ಗಮಕ ಸಮಾಸ, 6. ಅಂಶಿ ಸಮಾಸ, 7. ದ್ವಂದ್ವ ಸಮಾಸ, 8. ಬಹುವ್ರೀಹಿ ಸಮಾಸ

## 1) ಕರ್ಮಧಾರಯ ಸಮಾಸ :-

ಪೂರ್ವೋತ್ತರ ಪದಗಳು ಲಿಂಗ, ವಚನ, ವಿಭಕ್ತಿಗಳಿಂದ ಸಮಾಸವಾಗಿದ್ದು ಪೂರ್ವಪದವು, ವಿಶೇಷಣ ವಿಶೇಷ್ಯ ಸಂಬಂಧದಿಂದ ಕೂಡಿದ್ದು ಉತ್ತರ ಪದದ ಅರ್ಥವು ಪ್ರಧಾನವಾಗಿದ್ದರೆ ಅದನ್ನು ಕರ್ಮಧಾರಯ ಸಮಾಸವೆನ್ನುವರು.

**ಉದಾ :-**

| | | | | |
|---|---|---|---|---|
| ಇನಿದಾದ | + | ಸರ | = | ಇಂಚರ |
| ಹಿರಿದಾದ | + | ಮರ | = | ಹೆಮ್ಮರ |
| ಬಿಳಿದಾದ | + | ಕೊಡೆ | = | ಬೆಳ್ಗೊಡೆ |
| ಎಳೆಯದಾದ | + | ಕರು | = | ಎಳೆಗರು |

## 2) ಕ್ರಿಯಾ ಸಮಾನ :-

ಪೂರ್ವಪದದಲ್ಲಿ ದ್ವಿತೀಯಾ ವಿಭಕ್ತಿಯ ನಾಮಪದವಿದ್ದು, ಉತ್ತರ ಪದದಲ್ಲಿ ಕ್ರಿಯಾಪದ ಸಮಾಸವಾದರೆ ಅದನ್ನು ಕ್ರಿಯಾಸಮಾಸವೆನ್ನುತ್ತೇವೆ.

**ಉದಾ :-**

| | | | | |
|---|---|---|---|---|
| ಕೈಯನ್ನು | + | ಮುಗಿ | = | ಕೈಮುಗಿ |
| ತಲೆಯನ್ನು | + | ಬಾಗು | = | ತಲೆಬಾಗು |
| ಕನಸನ್ನು | + | ಕಾಣು | = | ಕನಸುಕಾಣು |
| ಮಾತನ್ನು | + | ಆಡು | = | ಮಾತಾಡು |

### 3) ಗಮಕ ಸಮಾಸ :-

ಪೂರ್ವಪದವು ಸರ್ವನಾಮ ಕೃದಂತಗಳಲ್ಲಿ ಒಂದಾಗಿದ್ದು ಉತ್ತರ ಪದದಲ್ಲಿರುವ ನಾಮಪದದೊಡನೆ ಕೂಡಿ ಆಗುವ ಸಮಾಸವನ್ನು ಗಮಕ ಸಮಾಸ ಎಂದು ಕರೆಯುವರು.

**ಪೂರ್ವಸರ್ವನಾಮಕ್ಕೆ**

ಉದಾ :-

| | | | | |
|---|---|---|---|---|
| ಅವನು | + | ಹುಡುಗ | = | ಆ ಹುಡುಗ |
| ಅವಳು | + | ಹೆಂಗಸು | = | ಆ ಹೆಂಗಸು |
| ಅದು | + | ಕಲ್ಲು | = | ಆ ಕಲ್ಲು |
| ಇದು | + | ಶಾಲೆ | = | ಈ ಶಾಲೆ |
| ಇವಳು | + | ಮುದುಕಿ | = | ಈ ಮುದುಕಿ |

**ಪೂರ್ವಪದ ಕೃದಂತಕ್ಕೆ**

ಉದಾ :-

| | | | | |
|---|---|---|---|---|
| ಹುರಿದುದು | + | ಕಡಲೆ | = | ಹುರಿಗಡಲೆ |
| ಸುಡುವುದು | + | ಕಾಡು | = | ಸುಡುಗಾಡು |
| ಉಡುವುದು | + | ದಾರ | = | ಉಡುದಾರ |
| ಕಡೆವುದು | + | ಕೋಲು | = | ಕಡೆಗೋಲು |

### 4) ಬಹುವ್ರೀಹಿ ಸಮಾಸ :-

ಎರಡು ಅಥವಾ ಅನೇಕ ನಾಮಪದಗಳು ಸೇರಿ ಸಮಾಸವಾದಾಗ ಬೇರೊಂದು ಪದದ ಅರ್ಥವು ಪ್ರಧಾನವಾಗಿ ಬರುವ ಸಮಾಸಕ್ಕೆ ''ಬಹುವ್ರೀಹಿ ಸಮಾಸ'' ಎನ್ನುವರು.

ಉದಾ :- 1) ಚಕ್ರವು ಪಾಣಿಯಲ್ಲಿ ಯಾರಿಗುಂಟೋ ಅವನು = ಚಕ್ರಪಾಣಿ.

2) ಹಣೆಯಲ್ಲಿ ಕಣ್ಣು ಯಾರಿಗುಂಟೋ ಅವನು = ಹಣೆಗಣ್ಣ

3) ಚಂದ್ರನಂತೆ ಯಾವಳು ಮುಖವುಳ್ಳವಳೋ ಅವಳು = ಚಂದ್ರಮುಖಿ

4) ಖಡ್ಗವು ಪಾಣಿಯಲ್ಲಿ ಯಾರಿಗುಂಟೋ ಅವನು = ಖಡ್ಗಪಾಣಿ

(ಉಳಿದ ಸಮಾಸಗಳು ಹಿಂದಿನ ತರಗತಿಯಲ್ಲಿ ಅಭ್ಯಸಿಸಲಾಗಿದೆ)

## ಅಲಂಕಾರಗಳು

**'ಅಲಂಕಾರ'** ಎಂದರೆ ಸೌಂದರ್ಯವನ್ನು ಹೆಚ್ಚಿಸುವ ಸಾಧನ. ಮಾನವ ತನ್ನ ದೇಹದ ಸೌಂದರ್ಯವನ್ನು ಹೆಚ್ಚಿಸಲು ಅಲಂಕಾರ ಮಾಡಿಕೊಳ್ಳುವಂತೆ ತಾನು ಆಡುವ ಮಾತಿಗೂ, ರಚಿಸುವ ಸಾಹಿತ್ಯಕ್ಕೂ ಅಲಂಕಾರ ಮಾಡುತ್ತಾನೆ.

**ಉದಾ : 'ಪೂರ್ವ ದಿಕ್ಕಿನಲ್ಲಿ ಸೂರ್ಯ ಮೂಡಿದನು'** ಎಂದು ಹೇಳುವ ಬದಲಿಗೆ 'ಪೂರ್ವ ದಿಕ್ಕಿನಲ್ಲಿ ಮೂಡಿದ ಸೂರ್ಯನು ಮುತ್ತೈದೆಯ ಹಣೆಯಲ್ಲಿರುವ ಕುಂಕುಮದಂತೆ ಕಂಡನು'. ಎಂದು ಹೇಳಿದಾಗ ಮಾತಿನ ಸೌಂದರ್ಯ ಹೆಚ್ಚುತ್ತದೆ.

ಅಲಂಕಾರದಲ್ಲಿ **'ಶಬ್ದಾಲಂಕಾರ'**, ಮತ್ತು **'ಅರ್ಥಾಲಂಕಾರ'** ಎಂದು ಎರಡು ವಿಭಾಗಗಳಿವೆ. ಶಬ್ದ ಅಥವಾ ಪದಗಳ ಜೋಡಣೆಯ ಮೂಲಕ ಕಾವ್ಯ ಅಥವಾ ಮಾತಿನ ಸೌಂದರ್ಯ ಹೆಚ್ಚಿದರೆ ಅದನ್ನು 'ಶಬ್ದಾಲಂಕಾರ' ಎಂತಲೂ, ಪದಗಳ ಅರ್ಥ ಚಮತ್ಕಾರದಿಂದ ಕಾವ್ಯದ ಅಥವಾ ಅರ್ಥದ ಸೌಂದರ್ಯ ಹೆಚ್ಚಿದರೆ ಅದನ್ನು **ಅರ್ಥಾಲಂಕಾರ** ಎಂತಲೂ ಕರೆಯುತ್ತಾರೆ.

**I) ಶಬ್ದಾಲಂಕಾರ :** ಅಕ್ಷರಗಳ ಪುನರಾವರ್ತನೆಯಿಂದ ನಾದ ವೈಚಿತ್ರ್ಯವನ್ನುಂಟು ಮಾಡುವ ಅಲಂಕಾರಗಳು. ಇದರಲ್ಲಿ **ಅನುಪ್ರಾಸ, ಯಮಕ** ಮತ್ತು **ಚಿತ್ರಕವಿತ್ವ** ಎಂದು ಮೂರು ವಿಭಾಗಗಳಿವೆ.

**1) ಅನುಪ್ರಾಸ :-** ಅಕ್ಷರಗಳ ಆವೃತ್ತಿಯೇ ಅನುಪ್ರಾಸ ಅಲಂಕಾರವಾಗುವದು. ಆವೃತ್ತಿಯೆಂದರೆ ಅಕ್ಷರಗಳು ಮತ್ತೆ ಮತ್ತೆ ಬರುವುದು. ಅನುಪ್ರಾಸವನ್ನು **ವೃತ್ತ್ಯನುಪ್ರಾಸ** ಮತ್ತು **ಛೇಕಾನುಪ್ರಾಸ** ಎಂಬುದಾಗಿ ಮತ್ತೆ ವಿಭಾಗಿಸಲಾಗಿದೆ.

**1) ವೃತ್ತ್ಯನುಪ್ರಾಸ :** ಒಂದು ಅಥವಾ ಎರಡು ವ್ಯಂಜನಾಕ್ಷರಗಳು ಪದ್ಯದ ಸಾಲುಗಳಲ್ಲಿ ಮತ್ತೆ ಮತ್ತೆ ಬಂದರೆ ಅಂದರೆ ಪುನರಾವರ್ತನೆಗೊಂಡರೆ ಅದನ್ನು **ವೃತ್ತ್ಯನುಪ್ರಾಸ** ಎಂದು ಕರೆಯುತ್ತಾರೆ.

**ಉದಾ :-**

1 ''ಎಳಗಿಳಿಗಳ ಬಳಗಗಳು ನಳನಳಿಸಿ ಬೆಳೆದ ಕಳವೆಯ ಎಳೆಯ ಕಾಳಿಗೆ ಎಳಸಿ ಬಂದವು''

2) ''ಬಲ್ಲವನೇ ಬಲ್ಲ ಬೆಲ್ಲದ ರುಚಿಯ''

ಇಲ್ಲಿ 'ಲ' ಕಾರ 'ಬ' ಕಾರಗಳು ಪುನರಾವರ್ತಿತಗೊಂಡಿವೆ. ಆದ್ದರಿಂದ ಇದು ವೃತ್ತ್ಯನುಪ್ರಾಸಾಲಂಕಾರ ಎನಿಸುವುದು.

**2) ಛೇಕಾನುಪ್ರಾಸ :-** ಎರಡೆರಡು ವ್ಯಂಜನಗಳಿಂದ ಕೂಡಿದ ಜೋಡಿ ಪದಗಳು ಪುನರಾವರ್ತಿತವಾದರೆ ಅದನ್ನು ಛೇಕಾನುಪ್ರಾಸಾಲಂಕಾರ ಎನ್ನುವರು.

**ಉದಾ :-**

ಮಾಡಿ ಮಾಡಿ ಕೆಟ್ಟರೊ ಮನವಿಲ್ಲದೆ

ನೀಡಿ ನೀಡಿ ಕೆಟ್ಟರೊ ನಿಜವಿಲ್ಲದೆ

**2) ಯಮಕಾಲಂಕಾರ :-** ಮೂರು ಅಥವಾ ಅದಕ್ಕಿಂತ ಹೆಚ್ಚು ಅಕ್ಷರಗಳುಳ್ಳ ಪದವಾಗಲಿ, ಒಂದು ಪದ್ಯದ ಆದಿ, ಮಧ್ಯ, ಅಥವಾ ಅಂತ್ಯದಲ್ಲಿ ನಿಯಮಿತವಾಗಿ ಪುನಃ ಪುನಃ ಬಂದರೆ ಅದು **ಯಮಕಾಲಂಕಾರ**ವೆನಿಸುವುದು.

**ಉದಾ 1 :-**

**ಅಮಳ್ಗಳ್** ನಯವಿಕ್ರಮಗುಣ ।

**ದಮಳ್ಗಳ್** ನೃಪಶಾಸ್ತ್ರ ಪರಿಣತರವರಂ ।।

**ಸಮರದೊಳ**ಗಗ್ರ ಶೌರ್ಯಂ ।

**ಸಮರಸ** ಸಂಪನ್ನನಾವನುದಾರನಪ್ಪನ್ ।।

**ಉದಾ 2 :-**

ನುಡಿದರೆ ಮುತ್ತಿನ ಹಾರದಂತಿರಬೇಕು

ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು

ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು

ಈ ವಚನದಲ್ಲಿ ಪ್ರತಿಪಾದದ ಆದಿಯಲ್ಲಿ 'ನುಡಿದರೆ' ಎಂಬ ಪದ ನಿಯಮಿತವಾಗಿ ಪುನರಾವರ್ತಿತಗೊಂಡಿದೆ. ಅದರಂತೆ 'ಅಂತಿರಬೇಕು' ಎಂಬ ಪದ ಪದ್ಯಾಂತ್ಯಗಳಲ್ಲಿ ನಿಯಮಿತವಾಗಿ ಪುನರಾವರ್ತಿತಗೊಂಡಿದೆ.

**3) ಚಿತ್ರಕವಿತ್ವ :-** ಪ್ರೌಢಪಂಡಿತ ಕವಿಗಳು ತಮ್ಮ ಬುದ್ಧಿಕೌಶಲದಿಂದ ವೈಚಿತ್ರ್ಯಪೂರ್ಣವಾಗಿ ಅಕ್ಷರಗಳನ್ನೂ, ಪದಗಳನ್ನೂ ಜೋಡಿಸಿ ಪದ್ಯರಚಿಸುತ್ತಾರೆ. ಇದಕ್ಕೆ ಚಿತ್ರಕವಿತ್ವ ಅಥವಾ ಬಂಧ ಎಂದು ಹೆಸರು. ಇದರಲ್ಲಿ ನಿರೋಷ್ಠ್ಯ, ತಾಲವ್ಯ, ಏಕಾಕ್ಷರ, ದ್ವ್ಯಕ್ಷರ, ತ್ರ್ಯಕ್ಷರ, ಹಾರಬಂಧ, ಮುರಜಬಂಧ ಇತ್ಯಾದಿ ಪ್ರಕಾರಗಳಿವೆ.

## II) ಅರ್ಥಾಲಂಕಾರ :-

ಅರ್ಥಾಲಂಕಾರದಲ್ಲಿ ಸುಮಾರು ನೂರಕ್ಕೂ ಮಿಕ್ಕಿದ ಅಲಂಕಾರಗಳಿವೆ. ಅವುಗಳಲ್ಲಿ ಆರು ಅಲಂಕಾರಗಳನ್ನು ಪ್ರೌಢಶಿಕ್ಷಣ ಹಂತದಲ್ಲಿ ತಿಳಿದುಕೊಂಡರೆ ಸಾಕು. ಈಗಾಗಲೇ ಎಂಟು ಮತ್ತು ಒಂಬತ್ತನೆಯ ತರಗತಿಗಳಲ್ಲಿ ಉಪಮಾ, ರೂಪಕ ಮತ್ತು ದೃಷ್ಟಾಂತಾಲಂಕಾರಗಳನ್ನು ತಿಳಿದುಕೊಳ್ಳಲಾಗಿದೆ. ಇವುಗಳ ಪುನರಾವರ್ತನೆಯೊಂದಿಗೆ ಉಳಿದ ಮೂರು ಅಲಂಕಾರಗಳನ್ನು ಈ ತರಗತಿಯಲ್ಲಿ ತಿಳಿದುಕೊಳ್ಳೋಣ.

**1) ಅಪಹ್ನುತಿ ಅಲಂಕಾರ :-** ವರ್ಣ ವಿಷಯದ ವಸ್ತುಸ್ಥಿತಿಯನ್ನು ಅಲ್ಲಗಳೆದು ಅದರ ನಿಜ ಸ್ವರೂಪ ಮರೆಮಾಚಿ ಬೇರೆಯೊಂದನ್ನಾಗಿ ವರ್ಣಿಸುವುದೆ ಅಪಹ್ನುತಿ ಅಲಂಕಾರ.

**ಉದಾ :-**

''ನೀರಲ್ಲ ಇದು ತೀರ್ಥ''

ಈ ವರ್ಣ ವಿಷಯದ ವಸ್ತುಸ್ಥಿತಿ 'ನೀರು' ಎಂಬುದನ್ನು ಅದರ ನಿಜ ಸ್ವರೂಪ ಮರೆಮಾಚಿ 'ತೀರ್ಥ' ಹೀಗೆ ಬೇರೆಯೊಂದನ್ನಾಗಿ ವರ್ಣಿಸಿದೆ. ಆದ್ದರಿಂದ ಇದು ಅಪಹ್ನುತಿ ಅಲಂಕಾರ.

**2) ಅರ್ಥಾಂತರನ್ಯಾಸ ಅಲಂಕಾರ :-** ಸಾಮಾನ್ಯಾರ್ಥವನ್ನು ವಿಶೇಷ ಅರ್ಥದಿಂದ ಅಥವಾ ವಿಶೇಷ ಅರ್ಥವನ್ನು ಸಾಮಾನ್ಯ ಅರ್ಥದಿಂದ ಸಮರ್ಥಿಸಿ ವರ್ಣಿಸಿದರೆ ಅದು ಅರ್ಥಂತರನ್ಯಾಸ ಅಲಂಕಾರವೆನಿಸುವದು.

**ಉದಾ :-**

''ಪರಮಾತ್ಮನು ತನ್ನ ಭಕ್ತರನ್ನು ಸದಾ ಕಾಪಾಡುತ್ತಾನೆ. ಭಕ್ತನಾದ ಪ್ರಹ್ಲಾದನಿಗೆ ತಂದೆಯಿಂದ ಗಂಡಾಂತರ ಬಂದಾಗ ಪರಮಾತ್ಮನು ಕಾಪಾಡಿದನು''.

ಪರಮಾತ್ಮನು ತನ್ನ ಭಕ್ತರನ್ನು ಸದಾ ಕಾಪಾಡುತ್ತಾನೆ ಇದು ಸಾಮಾನ್ಯ ವಾಕ್ಯ.

ಭಕ್ತನಾದ ಪ್ರಹ್ಲಾದನಿಗೆ ತಂದೆಯಿಂದ ಗಂಡಾಂತರ ಬಂದಾಗ ಪರಮಾತ್ಮನು ಕಾಪಾಡಿದನು - ಇದು ವಿಶೇಷ ವಾಕ್ಯ. ಸಾಮಾನ್ಯ ವಾಕ್ಯವು ವಿಶೇಷವಾಕ್ಯದಿಂದ ಸಮರ್ಥನೆ ಮಾಡಲಾಗಿದೆ.

# ಛಂದಸ್ಸು

ಶುದ್ಧ ಹಾಗೂ ಅರ್ಥಪೂರ್ಣವಾಗಿ ಮಾತನಾಡಲು, ಬರೆಯಲು ವ್ಯಾಕರಣ ಶಾಸ್ತ್ರವು ಹೇಗೆ ಅಗತ್ಯವೋ ಹಾಗೆಯೇ ಪದ್ಯರಚನೆ ಮಾಡಲೂ ಕೆಲವು ನಿಯಮಗಳಿರುತ್ತವೆ. ಇಂತಹ **ಪದ್ಯರಚನಾ ನಿಯಮವನ್ನು ಛಂದಸ್ಸು** ಎಂದು ಕರೆಯಲಾಗಿದೆ. ಸುಮಾರು ಕ್ರಿ.ಶ. 990ರಲ್ಲಿ ಇದ್ದ **ಒಂದನೆಯ ನಾಗವರ್ಮ** ಎಂಬವನು **ಛಂದೋಂಬುಧಿ** ಎಂಬ ಗ್ರಂಥದ ಮೂಲಕ ಈ ಶಾಸ್ತ್ರವನ್ನು ನೀಡಿದ್ದಾನೆ. ಹಳಗನ್ನಡದ ಮತ್ತು ನಡುಗನ್ನಡದ ಪದ್ಯಕಾವ್ಯಗಳು ಈ ಶಾಸ್ತ್ರವನ್ನು ಅನುಸರಿಸಿಯೇ ಬರೆಯಲ್ಪಟ್ಟವು.

ಛಂದಶಾಸ್ತ್ರವನ್ನು ಮೂರು ವಿಭಾಗಗಾಗಿ ವಿಂಗಡಿಸಲಾಗಿದೆ ಅವುಗಳನ್ನು **ಪ್ರಾಸ, ಯತಿ,** ಗಣಗಳೆಂದು ಕರೆಯಲಾಗಿದೆ.

**ಪ್ರಾಸ :** ಪದ್ಯದ ಪ್ರತಿ ಸಾಲಿನ ಒಂದು ಮತ್ತು ಎರಡನೆಯ ಸ್ವರಗಳ ಮಧ್ಯದಲ್ಲಿ ಒಂದೇ ಜಾತಿಯ ವ್ಯಂಜನವಿದ್ದರೆ ಅದನ್ನು **ಆದಿಪ್ರಾಸ**ವೆಂತಲೂ ಪ್ರತಿ ಪಾದದ ಕೊನೆಯಲ್ಲಿ ಒಂದೇ ಜಾತಿಯ ವ್ಯಂಜನವಿದ್ದರೆ ಅದನ್ನು **ಅಂತ್ಯಪ್ರಾಸ**ವೆಂತಲೂ ಕರೆಯುತ್ತಾರೆ. ಕೆಲವೊಮ್ಮೆ ಅಪರೂಪಕ್ಕೆ ಸಾಲಿನ ಮಧ್ಯದಲ್ಲಿ ಪ್ರಾಸಾಕ್ಷರಗಳು ಬರುವುದುಂಟು ಅದನ್ನು **ಒಳಪ್ರಾಸ** ಅಥವಾ **ಮಧ್ಯಪ್ರಾಸ** ಎಂದು ಕರೆಯಲಾಗಿದೆ.

ಪ್ರಾಸಾಕ್ಷರದ ಹಿಂದಿನ ಸ್ವರವು **ಹ್ರಸ್ವ**ವಾಗಿದ್ದರೆ ಅದನ್ನು **ಸಿಂಹಪ್ರಾಸ** ಎಂತಲೂ ಹಿಂದಿನ ಸ್ವರವು **ದೀರ್ಘ**ವಾಗಿದ್ದರೆ ಅದನ್ನು **ಗಜಪ್ರಾಸ** ಎಂತಲೂ ಹಿಂದೆ **ಅನುಸ್ವಾರ**ವಿದ್ದರೆ **ವೃಷಭಪ್ರಾಸ** ಎಂತಲೂ ಹಿಂದೆ **ವಿಸರ್ಗ**ವಿದ್ದರೆ **ಅಜಪ್ರಾಸ** ಎಂತಲೂ ಬೇರೆ ಬೇರೆ ಜಾತಿಯ ಎರಡು ಮೂರು ವ್ಯಂಜನಗಳು ಪ್ರಾಸಾಕ್ಷರಗಳಾಗಿದ್ದರೆ **ಶರಭಪ್ರಾಸ** ಎಂತಲೂ ಒಂದೇ ಜಾತಿಯ ಎರಡು ವ್ಯಂಜನಗಳು ಪ್ರಾಸಾಕ್ಷರಗಳಾಗಿದ್ದರೆ **ಹಯಪ್ರಾಸ** ಎಂತಲೂ ಕರೆಯಲ್ಪಡುವ ಆರು ವಿಧದ ಪ್ರಾಸಗಳನ್ನು ಕಾಣಬಹುದು.

**ಯತಿ :** ಕಾವ್ಯವನ್ನು ಓದುವಾಗ ಉಸಿರು ತೆಗೆದುಕೊಳ್ಳುವ ಸಲುವಾಗಿ ನಿಲ್ಲಿಸುವ ಸ್ಥಳವನ್ನು **ಯತಿ** ಎಂದು ಕರೆಯಲಾಗಿದೆ. ಹಾಗೆಂದ ಮಾತ್ರಕ್ಕೆ ನಮಗೆ ಇಷ್ಟ ಬಂದಲ್ಲಿ ನಿಲ್ಲಿಸುವ ಸ್ವಾತಂತ್ರ್ಯವಿಲ್ಲ. ಓದುವಾಗ ಅಥವಾ ಹಾಡುವಾಗ ಅರ್ಥಕ್ಕೆ ಲೋಪ ಬಾರದಂತೆ ನಿಲ್ಲಿಸಬೇಕಾದ ಅನಿವಾರ್ಯತೆಯಿದೆ. ಹೀಗೆ –

**ಕಾವ್ಯವನ್ನು ಓದುವಾಗ ಅಥವಾ ಹಾಡುವಾಗ ಅರ್ಥಕ್ಕೆ ಲೋಪಬಾರದಂತೆ ನಿಲ್ಲಿಸುವ ಸ್ಥಳವನ್ನು 'ಯತಿ' ಎಂದು ಗುರುತಿಸಲಾಗಿದೆ.** ಕೆಲವು ಕವಿಗಳು ಯತಿಯ ಸ್ಥಾನವನ್ನು ಕೆಲವು ಸಂಕೇತಗಳೊಂದಿಗೆ ತಮ್ಮ ಕಾವ್ಯಗಳಲ್ಲಿ ಗುರುತಿಸಿದ್ದು ಕಂಡುಬರುತ್ತದೆ. ಕನ್ನಡ ಕಾವ್ಯಗಳಲ್ಲಿ ಯತಿಯ ಬಳಕೆ ಅತ್ಯಂತ ಕಡಿಮೆಯಾಗಿದ್ದು ಸಂಸ್ಕೃತ ಕಾವ್ಯಗಳಲ್ಲಿ ಬಹಳಷ್ಟು ಇರುವುದನ್ನು ಗಮನಿಸಬಹುದು.

**ಗಣ :** **'ಗಣ'** ಎಂದರು **'ಗುಂಪು'** ಅಥವಾ **'ಸಮೂಹ'** ಎಂದರ್ಥ. ಛಂದಶ್ಯಾಸ್ತ್ರದಲ್ಲಿ **'ಗಣ'** ಎಂದರೆ ಪದ್ಯದ ಪ್ರತಿ ಸಾಲಿನಲ್ಲೂ ವಿಭಾಗಿಸಲ್ಪಡುವ **ಮಾತ್ರೆ** ಅಥವಾ **ಅಕ್ಷರ** ಅಥವಾ **ಅಂಶಗಳ** ಗುಂಪು ಎಂದರ್ಥ.

ಮಾತ್ರೆಗಳ ಲೆಕ್ಕಾಚಾರದೊಂದಿಗೆ ವಿಭಾಗಿಸಲ್ಪಡುವ ಗಣವನ್ನು **ಮಾತ್ರಾಗಣ** ಎಂತಲೂ, ಅಕ್ಷರಗಳ ಲೆಕ್ಕಾಚಾರಗಳೊಂದಿಗೆ ವಿಭಾಗಿಸಲ್ಪಡುವ ಗಣವನ್ನು **ಅಕ್ಷರಗಣ** ಎಂತಲೂ, ಅಂಶಗಳ ಆಧಾರದಿಂದ ವಿಭಾಗಿಸಲ್ಪಡುವ ಗಣವನ್ನು **ಅಂಶಗಣ** ಎಂತಲೂ ಕರೆಯಲಾಗಿದೆ.

## ಮಾತ್ರೆ :-

ಛಂದಶ್ಯಾಸ್ತ್ರದಲ್ಲಿ ಮಾತ್ರೆ, ಎಂದರೆ ಕಾಲವನ್ನು ಅಳೆಯುವ ಮಾನ. ಒಂದು ಹ್ರಸ್ವ ಅಕ್ಷರವನ್ನು ಉಚ್ಚರಿಸಲು ಬೇಕಾಗುವ ಕಾಲವೇ ಒಂದು ಮಾತ್ರಾಕಾಲ. ಮಾತ್ರೆಗಳಲ್ಲಿ ಲಘು ಮತ್ತು ಗುರು ಎಂಬ ಎರಡು ವಿಧಗಳಿವೆ ಲಘುವನ್ನು ''U'' ಎಂತಲೂ ಗುರುವನ್ನು ''—'' ಎಂತಲೂ ಗುರುತಿಸಲಾಗುವುದು.

### ಲಘು ಎಂದರೇನು?

ಒಂದು ಮಾತ್ರಾಕಾಲದಲ್ಲಿ ಉಚ್ಚರಿಸಬಹುದಾದ ಅಕ್ಷರವೇ ಲಘು.

### ಲಘುಗಳಾಗುವ ಅಕ್ಷರಗಳು :-

1) ಹ್ರಸ್ವ ಸ್ವರಗಳಿಗೆ ಲಘು ಹಾಕಬೇಕು

| ಉದಾ : | U | U | U | U | U | U |
|---|---|---|---|---|---|---|
| | ಅ | ಇ | ಉ | ಋ | ಎ | ಒ |

2) ಹ್ರಸ್ವ ಸ್ವರಗಳಿಂದ ಕೂಡಿದ ಅಕ್ಷರಗಳಿಗೆ ಲಘು ಹಾಕಬೇಕು.

| ಉದಾ : | U | U | U | U | U |
|---|---|---|---|---|---|
| | ಕ | ಕಿ | ಕು | ಕೆ | ಕೊ |

### ಗುರು ಎಂದರೇನು?

ಎರಡು ಅಥವಾ ಎರಡಕ್ಕಿಂತ ಹೆಚ್ಚು ಮಾತ್ರಾ ಕಾಲದಲ್ಲಿ ಉಚ್ಚರಿಸಬಹುದಾದ ಅಕ್ಷರವೇ ಗುರು.

### ಗುರುಗಳಾಗುವ ಅಕ್ಷರಗಳು :-

1) ದೀರ್ಘ ಸ್ವರಗಳಿಗೆ ಗುರು ಹಾಕಬೇಕು

| ಉದಾ : | — | — | — | — | — | — | — |
|---|---|---|---|---|---|---|---|
| | ಆ | ಈ | ಊ | ಏ | ಐ | ಔ | ಓ |

2) ದೀರ್ಘ ಸ್ವರಗಳಿಂದ ಕೂಡಿದ ಗುಣಿತಾಕ್ಷರಗಳಿಗೆ ಗುರು ಹಾಕಬೇಕು.

| ಉದಾ : | — | — | — | — | — | — | — |
|---|---|---|---|---|---|---|---|
| | ಕಾ | ಕೀ | ಕೂ | ಕೇ | ಕೈ | ಕೋ | ಕೌ |

3) ಅನುಸ್ವಾರ ಮತ್ತು ವಿಸರ್ಗದಿಂದ ಕೂಡಿದ ಅಕ್ಷರಗಳಿಗೆ ಗುರು ಹಾಕಬೇಕು.

| ಉದಾ : | — | — | — | — | — | — |
|---|---|---|---|---|---|---|
| | ಕಂ | ಸಂ | ದುಃ | ಮಃ | ಅಂ | ಅಃ |

4) ಒತ್ತಾಕ್ಷರದ ಹಿಂದಿನ ಅಕ್ಷರಗಳಿಗೆ ಗುರು ಹಾಕಬೇಕು.

| ಉದಾ - | — U | — U | — U | — U | — U | — U |
|---|---|---|---|---|---|---|
| | ಅಕ್ಕ | ಅಪ್ಪ | ಅಣ್ಣ | ರತ್ನ | ಕತ್ತು | ಕರ್ಣ |

5) ವ್ಯಂಜನಾಕ್ಷರದ ಹಿಂದಿನ ಅಕ್ಷರಕ್ಕೆ ಗುರು ಹಾಕಬೇಕು.

| ಉದಾ - | — | — | — | — | U — |
|---|---|---|---|---|---|
| | ಕಾಲ್ | ವೋಲ್ | ಆನ್ | ಬೆನ್ | ಪ್ರಸನ್ |

6) ಹಲವಾರು ಕಾರಣವಿದ್ದರೂ ಒಂದೇ ಗುರು ಹಾಕಬೇಕು.

| ಉದಾ - | — U | — U | — U | — — U | — U U |
|---|---|---|---|---|---|
| | ಕಾಂತಿ | ಚಂದ್ರ | ಶಾಸ್ತ್ರ | ಸಂಕ್ಷಿಪ್ತ | ಬುರ್ರನೆ |

7) ಷಟ್ಪದಿಯ ಮೂರು ಮತ್ತು ಆರನೆಯ ಸಾಲಿನ ಕೊನೆಯ ಅಕ್ಷರ ಲಘುವಾಗಿದ್ದರೂ ಗುರು ಹಾಕಬೇಕು.

ಕನ್ನಡದಲ್ಲಿ ಮಾತ್ರಾಗಣ, ಅಕ್ಷರ ಗಣ ಮತ್ತು ಅಂಶಗಣ ಎಂಬ ಮೂರು ರೀತಿಯ ಗಣಗಳನ್ನು ಉಪಯೋಗಿಸಿ ಪದ್ಯ ರಚನೆ ಮಾಡಲಾಗಿದೆ.

# ಮಾತ್ರಾಗಣ

**ಕಂದಪದ್ಯ :**

ಕನ್ನಡ ಚಂಪೂಕೃತಿಗಳಲ್ಲಿ ಕಂದಪದ್ಯದ ಬಳಕೆಯನ್ನು ಕಾಣಬಹುದು. ಕಂದಪದ್ಯವೂ ಮಾತ್ರಾಗಣಕ್ಕೆ ಸಂಬಂಧಪಟ್ಟ ಪದ್ಯಜಾತಿ.

**ಲಕ್ಷಣ :**

1. ಕಂದ ಮಾತ್ರಾಗಣಗಳಿಂದ ಕೂಡಿದ ಪದ್ಯ.
2. ಪ್ರತಿ ಪದ್ಯದಲ್ಲಿ ನಾಲ್ಕು ಪಾದಗಳಿವೆ.
3. ಮೊದಲಿನ ಎರಡು ಪಾದಗಳು ನಂತರದ ಎರಡು ಪಾದಗಳಿಗೆ ಸಮಾನ (ಅರ್ಧ ಸಮವೃತ).
4. ಒಂದು ಮತ್ತು ಮೂರನೆಯ ಪಾದಗಳು ಸಮಾನವಾಗಿದ್ದು ನಾಲ್ಕು ಮಾತ್ರೆಗಳ ಮೂರು ಗಣಗಳಿಂದ ಕೂಡಿರುವುದು.
5. ಎರಡನೆಯ ಮತ್ತು ನಾಲ್ಕನೆಯ ಪಾದಗಳು ಸಮಾನವಾಗಿದ್ದು ನಾಲ್ಕು ಮಾತ್ರೆಗಳ ಐದು ಗಣಗಳಿಂದ ಕೂಡಿರುವುದು.

**ಉದಾ -**

| | | |
|---|---|---|
| — — | U — U | — — |
| ಕಾ ವೇ | ರಿ ಯಿಂದ | ಮಾ ಗೋ |

| | | | | |
|---|---|---|---|---|
| — U U | U U — | U — U | — — | U U — |
| ದಾ ವ ರಿ | ವ ರ ಮಿ | ರ್ಪ ನಾ ಡ | ದಾ ಕ | ನ್ನ ಡ ದೊಳ್ |

| | | |
|---|---|---|
| — U U | U U U U | — U U |
| ಭಾ ವಿ ಸ | ದ ಜ ನ ಪ | ದಂ ವ ಸು |

| | | | | |
|---|---|---|---|---|
| — U U | U U — | U U U U | U U U U | — — |
| ಧಾ ವ ಲ | ಯ ವಿ ಲೀ | ನ ವಿ ಶ ದ | ವಿ ಷ ಯ ವಿ | ಶೇ ಷಂ |

**ವಿ. ಸೂ :** ಇದೇ ರೀತಿ ಕಂದ ಪದ್ಯಗಳನ್ನು ಬರೆದು ಪ್ರಸ್ತಾರ ಹಾಕಿರಿ.

**ಷಟ್ಪದಿಗಳು :**

**'ಷಟ್ಪದಿ'** ಎಂದರೆ ಆರು ಪಾದಗಳುಳ್ಳ ಕಾವ್ಯ ಪ್ರಕಾರವೇ ಷಟ್ಪದಿ. ಇದು ಮಾತ್ರಾಗಣಗಳಿಂದ ಕೂಡಿದ ಛಂದೋಬಂಧ. ಷಟ್ಪದಿಯಲ್ಲಿ ಆರು ವಿಧಗಳಿವೆ.

1. ಶರ ಷಟ್ಪದಿ
2. ಕುಸುಮ ಷಟ್ಪದಿ
3. ಭೋಗ ಷಟ್ಪದಿ
4. ಭಾಮಿನಿ ಷಟ್ಪದಿ
5. ಪರಿವರ್ಧಿನಿ ಷಟ್ಪದಿ
6. ವಾರ್ಧಕ ಷಟ್ಪದಿ

(ಮೊದಲಿನ ನಾಲ್ಕು ಷಟ್ಪದಿಗಳು ಹಿಂದಿನ ತರಗತಿಯಲ್ಲಿ ಅಭ್ಯಸಿಸಲಾಗಿದೆ.

# ಪರಿವರ್ಧಿನಿಷಟ್ಪದಿ

**ಲಕ್ಷಣಗಳು :**

1. ಇದರಲ್ಲಿ ಆರು ಸಾಲುಗಳಿದ್ದು, ಮಾತ್ರಾ ಗಣಗಳಿಂದ ಕೂಡಿದ ಪದ್ಯ.
2. ಮೊದಲಿನ ಮೂರು ಪಾದಗಳು ನಂತರದ ಮೂರು ಪಾದಗಳಿಗೆ ಸಮ.
3. ಒಂದು, ಎರಡು, ನಾಲ್ಕು ಐದನೆಯ ಸಾಲುಗಳು ಸಮನಾಗಿದ್ದು ನಾಲ್ಕು ಮಾತ್ರೆಯ ನಾಲ್ಕು ಗಣಗಳಿಂದ ಕೂಡಿರುತ್ತವೆ.
4. ಮೂರು ಮತ್ತು ಆರನೆಯ ಸಾಲುಗಳು ಸಮನಾಗಿದ್ದು ನಾಲ್ಕು ಮಾತ್ರೆಯ ಆರು ಗಣಗಳಿಂದ ಕೂಡಿದ್ದು ಮೇಲೊಂದು ಗುರುವಿನಿಂದ ಕೂಡಿರುತ್ತದೆ.
5. ಆದಿ ಪ್ರಾಸವಿರುತ್ತದೆ.

ಪರಿವರ್ಧಿನಿ ಷಟ್ಪದಿಯ ಲಕ್ಷಣ ಕುರಿತು ವೀರಭದ್ರ ಕವಿಯ ‘ನಂದಿ ಛಂದೋರ್ಣವ’ದಲ್ಲಿ ಪದ್ಯವೊಂದು ಹೀಗಿದೆ.

**ಉದಾ -**

— U U | — U U | — U U | — U U |
ಕಾ ಮಿ ನಿ | ಕೇಳ್ ಪ ರಿ | ವ ರ್ಧಿ ನಿ | ಷ ಟ್ಪ ದಿ |

— U U | U U U U | U U U U | U U U U |
ಗಾ ಮ ಹ | ಮೊ ದ ಲಿ ನ | ಚ ರ ಣ ಗ | ಳೆ ರ ಡ ಕೆ |

— U U | U U U U | U U U U | — U U | — U U | — U U | — |
ಭೂ ಮಿ ಪ | ಲ ಘು ಗ ಳ | ವಿ ರು ತಿ ರೆ | ಮೂ ರ ನೆ | ಪಾ ದ ಕೆ | ಮಾ ತ್ರೆ ಗ | ಳು |

— U U | — — | — U U | — U U |
ನೇ ಮ ದಿ | ಇ ಪ್ಪ | ತ್ತಾ ರಿ ದ | ರ ರ್ಧ ವು |

— U U | — U U | — U U | — U U |
ರಾ ಮ ಣಿ | ಮುಂ ದಿ ದ | ರಂ ದ ದಿ | ಪೇ ಳಿ ದ |

— U U | — U U | U U U U | U U — | — U U | U U U U | — |
ರೀ ಮ ಹಿ | ಯೊಳ್ ಬು ಧ | ರ ವ ರಿ ಗೆ | ಸ ಮ ತ | ಪ್ರೇ ಮ ದಿ | ತಿ ಳಿ ಸ | ಖಿ ಯೇ |

ಗಣ ವಿನ್ಯಾಸ

4 4 4 4

4 4 4 4

4 4 4 4 4 4 ಗುರು

# ವಾರ್ಧಕ ಷಟ್ಪದಿ

**ಲಕ್ಷಣಗಳು :**

1. ಇದರಲ್ಲಿ ಆರು ಸಾಲುಗಳಿದ್ದು, ಮಾತ್ರಾ ಗಣಗಳಿಂದ ಕೂಡಿದ ಪದ್ಯ.
2. ಮೊದಲಿನ ಮೂರು ಪಾದಗಳು ನಂತರದ ಮೂರು ಪಾದಗಳಿಗೆ ಸಮ.

3. ಒಂದು, ಎರಡು, ನಾಲ್ಕು ಐದನೆಯ ಸಾಲುಗಳು ಸಮನಾಗಿದ್ದು ಐದು ಮಾತ್ರೆಯ ನಾಲ್ಕು ಗಣಗಳಿಂದ ಕೂಡಿರುತ್ತವೆ.

4. ಮೂರು ಮತ್ತು ಆರನೆಯ ಸಾಲುಗಳು ಸಮನಾಗಿದ್ದು ಐದು ಮಾತ್ರೆಯ ಆರು ಗಣಗಳು ಒಂದು ಮೇಲೊಂದು ಗುರುವಿನಿಂದ ಕೂಡಿರುತ್ತದೆ.

5. ಆದಿ ಪ್ರಾಸವಿರುತ್ತದೆ.

**ಉದಾ -**

| | | | | | | |
|---|---|---|---|---|---|---|
| — U — | — — U | U U U U U | — — U | | | |
| ಉರ್ವಿಯೋಳ್ | ಕೌಸಲ್ಯೆ | ಪಡೆದ ಕುವ | ರಂ ರಾಮ | | | |
| — U — | — U — | U U — U | U U U U U | | | |
| ನೋರ್ವನೇ | ವೀರನಾ | ತನ ಯಜ್ಞ | ತುರಗಮಿದು | | | |
| — U U U | — U — | — U — | U U U — | — U — | U U U — | — |
| ನಿರ್ವಹಿಸ | ಲಾರ್ಪ ರಾ | ರಾದೊಡಂ | ತಡೆಯ ತಿಂ | ದರ್ದಲೇ | ಖನವನೋ | ದಿ |
| — U — | U U U — | U U — U | — U — | | | |
| ಗರ್ವಮಂ | ಬಿಡಿಸದಿ | ರ್ದೊಡೆ ತನ್ನ | ಮಾತೆಯಂ | | | |
| — U U U | — — U | — U — | U U U U U | | | |
| ಸರ್ವ ಜನ | ಮುಂ ಬಂಜೆ | ಯೆನ್ನದಿ | ರ್ದಪುದೆ ತನ | | | |
| — U — | U U — U | — U U U | — U — | — U U U | U U — U | — |
| ಗುರ್ವ ತೋ | ಳ್ಗಳಿವೇತ | ಕೆಂದು ಸಲೆ | ವಾಸಿಯಂ | ತೊಟ್ಟು ಲವ | ನುರಿದೆದ್ದ | ನು |

ಗಣ ವಿನ್ಯಾಸ

| | | | | | | |
|---|---|---|---|---|---|---|
| 5 | 5 | 5 | 5 | | | |
| 5 | 5 | 5 | 5 | | | |
| 5 | 5 | 5 | 5 | 5 | 5 | ಗುರು |

## ರಗಳೆಗಳು

ಇದು ಮಾತ್ರಾಗಣಕ್ಕೆ ಸೇರಿದ ಪದ್ಯಜಾತಿ. ಸಂಸ್ಕೃತದ ರಘಟಾ ಎಂಬ ಶಬ್ದದ ರೂಪ ರಗಳೆ ಎನಿಸುವುದು. ರಗಳೆಯ ಛಂದಸ್ಸಿಗೆ ಹೊಸತನ ತುಂಬಿ ಇದನ್ನು ವೈವಿಧ್ಯಮಯವಾಗಿ ಬೆಳೆಸಿದವನು ಕವಿ ಹರಿಹರ. ಇವನನ್ನು ರಗಳೆಯ ಕವಿ ಎಂದೇ ಕರೆಯಲಾಗುತ್ತಿದೆ. ಹೊಸಗನ್ನಡ ಕವಿತೆಗಳ ಛಂದಸ್ಸಿಗೆ ರಗಳೆ, ಷಟ್ಪದಿಗಳೇ ಮೂಲ ಎಂಬುದನ್ನು ಇಲ್ಲಿ ಗಮನಿಸಬೇಕು. ರಗಳೆಯ ಪ್ರಕಾರದ ಛಂದಸ್ಸು ಕಥಾನಿರೂಪಣೆ, ದೀರ್ಘವಾದ ಸಂಭಾಷಣೆ ವರ್ಣನೆಗಳಿಗೆ ಉಪಯುಕ್ತವಾಗಿವೆ. ಹರಿಹರ ಕವಿಯು ಶಿವಭಕ್ತಿಯ, ಶಿವಶರಣರ ಕಥೆಗಳಿಗಾಗಿ ರಗಳೆಗಳನ್ನು ಬಳಸಿದ್ದಾನೆ. ರಗಳೆಗಳಲ್ಲಿ ಮೂರು ಪ್ರಭೇದಗಳಿವೆ.

1. **ಮಂದಾನಿಲ ರಗಳೆ**
2. **ಉತ್ಸಾಹ ರಗಳೆ**
3. **ಲಲಿತ ರಗಳೆ**

ಈ ಛಂದಸ್ಸಿನಲ್ಲಿ ಪಾದಗಳು ಇಂತಿಷ್ಟೇ ಇರಬೇಕೆಂಬ ನಿಯಮವಿಲ್ಲ. ಆದರೆ ಮಾತ್ರೆಗಳು ಪ್ರತಿ ಪಾದದಲ್ಲಿಯೂ ಸಮಾನವಾಗಿರಬೇಕು. ಪ್ರತಿ ಎರಡು ಪಾದಗಳಿಗೆ ಪ್ರಾಸ ನಿಯಮಿತವಿರುವುದು. ಕೆಲವು ಕಡೆ ಅಂತ್ಯಪ್ರಾಸವೂ ಕಂಡು ಬರುವುದು. ಎಲ್ಲ ರಗಳೆಗಳು ಲಕ್ಷಣಗಳಲ್ಲಿ ಸಮಾನವಾಗಿದ್ದು, ಮಾತ್ರಾ ಗಣದಲ್ಲಿ ವ್ಯತ್ಯಾಸ ಕಂಡು ಬರುತ್ತದೆ.

# ಉತ್ಸಾಹ ರಗಳೆ

**ಲಕ್ಷಣ :**

1) ಮಾತ್ರಾ ಗಣಗಳಿಂದ ಕೂಡಿದ ಪದ್ಯವಾಗಿರುತ್ತದೆ.
2) ಇಂತಿಷ್ಟೇ ಪಾದಗಳಿರಬೇಕೆಂಬ ನಿಯಮವಿಲ್ಲ.
3) ಪ್ರತಿ ಎರಡು ಪಾದಗಳಲ್ಲಿ ಪ್ರಾಸ ನಿಯಮವಿರುತ್ತದೆ.
4) ಪ್ರತಿ ಪಾದದ ಮಾತ್ರಾ ಗಣಗಳು ಸಮಾನವಾಗಿರುತ್ತವೆ.
5) ಪ್ರತಿ ಪಾದದಲ್ಲಿ ಮೂರು ಮಾತ್ರೆಗಳ ನಾಲ್ಕು ಗಣಗಳಿರುತ್ತವೆ.

**ಉದಾ –**

| | | | |
|---|---|---|---|
| — U<br>ತುಂಬಿ | — U<br>ಏಂಡಿ | — U<br>ನಂತೆ | — U<br>ಪಾಡಿ |
| — U<br>ಜಕ್ಕ | — U<br>ವಕ್ಕಿ | — U<br>ಯಂತೆ | — U<br>ಕೂಡಿ |

ಉತ್ಸಾಹ ರಗಳೆಯು ಇನ್ನೂ ಒಂದು ಬಗೆಯಲ್ಲಿದೆ. ಮೂರು ಮಾತ್ರೆಯ ಮೂರು ಗಣ ಹಾಗೂ ಮೇಲೊಂದು ಗುರುವು ಬರುವುದು.

# ಮಂದಾನಿಲ ರಗಳೆ

**ಲಕ್ಷಣ :**

1) ಮಾತ್ರಾ ಗಣಗಳಿಂದ ಕೂಡಿದ ಪದ್ಯವಾಗಿರುತ್ತದೆ.
2) ಇಂತಿಷ್ಟೆ ಪಾದಗಳಿರಬೇಕೆಂಬ ನಿಯಮವಿಲ್ಲ.
3) ಪ್ರತಿ ಎರಡು ಪಾದಗಳಲ್ಲಿ ಪ್ರಾಸ ನಿಯಮವಿರುತ್ತದೆ.
4) ಪ್ರತಿ ಪಾದದ ಗಣಗಳು ಸಮಾನವಾಗಿರುತ್ತವೆ.
5) ಪ್ರತಿ ಪಾದದಲ್ಲಿ ನಾಲ್ಕು ಮಾತ್ರೆಗಳ ನಾಲ್ಕು ಗಣಗಳು ಇರುತ್ತವೆ.

**ಉದಾ –**

| | | | |
|---|---|---|---|
| — —<br>ಆವೇ | U U U U<br>ಳೆ ಯೊಳತಿ | — U U<br>ಸಂಭ್ರಮ | U U U U<br>ಮೆಸೆದಿರೆ |
| — U U<br>ಪೂವಳೆ | U U —<br>ಪುರವೀ | U U U U<br>ಥಿಗಳೊಳು | U U U U<br>ನೆರೆದಿರೆ |
| U U U U<br>ಪವಳದ | — U U<br>ರನ್ನದ | U U U U<br>ಗುದಿಗಳ | U U —<br>ಗುಡಿಗಳ್ |
| U U —<br>ನವಮೌ | U U —<br>ಕ್ತಿಕರಂಗ | U U —<br>ದದಾಂ | U U —<br>ಗುಡಿಗಳ್ |

ಮಂದಾನಿಲ ರಗಳೆಯು ಇನ್ನೂ ಒಂದು ಬಗೆಯಲ್ಲಿದೆ. ಅವುಗಳನ್ನು 3 I 5 I 3 I 5 ರ ಗಣಗಳಾಗಿ ವಿಂಗಡಿಸಬಹುದು.

# ಲಲಿತ ರಗಳೆ

**ಲಕ್ಷಣ :**

1) ಮಾತ್ರಾ ಗಣಗಳಿಂದ ಕೂಡಿದ ಪದ್ಯ.
2) ಇಂತಿಷ್ಟೇ ಪಾದಗಳಿರಬೇಕೆಂಬ ನಿಯಮವಿಲ್ಲ.
3) ಪ್ರತಿ ಎರಡು ಪಾದಗಳಲ್ಲಿ ಪ್ರಾಸ ನಿಯಮವಿರುತ್ತದೆ.
4) ಪ್ರತಿ ಪಾದದ ಮಾತ್ರಾ ಗಣಗಳು ಸಮಾನವಾಗಿರುತ್ತವೆ.
5) ಪ್ರತಿ ಪಾದದಲ್ಲಿ ಐದು ಮಾತ್ರೆಯ ನಾಲ್ಕು ಗಣಗಳು ಕಂಡು ಬರುತ್ತವೆ.

**ಉದಾ –**

| | | | |
|---|---|---|---|
| — U — | U U — U | U — — | U U — U |
| ಅಲ್ಲಿ ಮಾ | ಮರದಲ್ಲಿ | ಮಲ್ಲಿಕಾ | ಲತೆಯಲ್ಲಿ |
| U U U U U | U U — U | U U U — | U U — U |
| ಎಳೆಯಸುಗೆ | ಮರದಲ್ಲಿ | ಜಳುಕುಹಾ | ಕರದಲ್ಲಿ |
| — U U U | U U U — | — U U U | U U U — |
| ಸಂಪಗೆಯ | ತರುಗಳೊಳ್ | ಸೊಂಪಿಡಿದ | ಸುರಯಿಯೊಳ್ |
| — U U U | U U — U | — U U U | U U — U |
| ಪಾದರಿಯ | ಮರದಲ್ಲಿ | ಮಾಧವಿಯ | ಲತೆಯಲ್ಲಿ |

# ಅಕ್ಷರ ಗಣಗಳು

ಇದರ ಹೆಸರೇ ಹೇಳುವಂತೆ ಈ ಗಣದಲ್ಲಿ ಅಕ್ಷರಗಳ ಸಂಖ್ಯೇ ಪ್ರಧಾನವಾಗಿದೆ. ಮಾತ್ರೆಗಳು ಇಂತಿಷ್ಟೇ ಇರಬೇಕು ಎಂಬ ನಿಯಮವಿಲ್ಲ. ಮೂರು ಮೂರು ಅಕ್ಷರಗಳಿಗೆ ಒಂದರಂತೆ ಗಣ ವಿಭಾಗ ಮಾಡುವ ಕ್ರಮವೇ ಅಕ್ಷರಗಣದ ಪದ್ಧತಿ. ಹೀಗೆ ಪದ್ಯದ ಸಾಲಿನಲ್ಲಿ ಬರುವ ಅಕ್ಷರಗಳನ್ನು ಮೂರು ಅಕ್ಷರಗಳಿಗೆ ಒಂದರಂತೆ ಗಣವನ್ನು ವಿಭಾಗಿಸಿದ ಬಳಿಕ ಆ ಸಾಲಿನಲ್ಲಿ ಒಂದು ಅಥವಾ ಎರಡು ಅಕ್ಷರಗಳು ಉಳಿಯಬಹುದು. ಅಂತಹ ಅಕ್ಷರಗಳನ್ನು **'ಲ', 'ಗು'** ಎಂದು ಗುರುತಿಸಲಾಗುತ್ತದೆ. ಉಳಿದಂತೆ ಗಣಗಳಾಗಿ ವಿಂಗಡಿಸಲ್ಪಟ್ಟ ಅಕ್ಷರಗಳ ಮಾತ್ರಾ ಕ್ರಮಕ್ಕನುಗುಣವಾಗಿ ಆ ಗಣಗಳಿಗೆ ಬೇರೆ ಬೇರೆ ಹೆಸರುಗಳಿರುತ್ತವೆ. ಈ ರೀತಿಯ ಗಣಗಳನ್ನು ಒಂದು ಸೂತ್ರವಾಕ್ಯದಿಂದ ಹೀಗೆ ಹೇಳಬಹುದು.

**ಯಮಾತಾರಾಜಭಾನಸಲಗಂ** ಎಂಬುದೇ ಆ ಸೂತ್ರವಾಕ್ಯ.

ಈ ಸೂತ್ರವಾಕ್ಯದ ಎಂಟು ಅಕ್ಷರಗಳು ಗಣಗಳ ಹೆಸರನ್ನು ಸೂಚಿಸುತ್ತವೆ. ಅವು' ಇಂತಿವೆ –

| ಗಣಗಳು | ಅಕ್ಷರಗಳು | ಮಾತ್ರಾವಿನ್ಯಾಸ |
|---|---|---|
| ಯಗಣ | ಯಮಾತಾ | U — — |
| ಮಗಣ | ಮಾತಾರಾ | — — — |
| ತಗಣ | ತಾರಾಜ | — — U |
| ರಗಣ | ರಾಜಭಾ | — U — |

| | | |
|---|---|---|
| ಜಗಣ | ಜಭಾನ | U — U |
| ಭಗಣ | ಭಾನಸ | — U U |
| ನಗಣ | ನಸಲ | U U U |
| ಸಗಣ | ಸಲಗಂ | U U — |

ಈ ಎಂಟು ಗಣಗಳನ್ನು ಈ ಪದ್ಯದ ಆಧಾರದಿಂದಲೂ ಗುರುತಿಸಿಕೊಳ್ಳಲು ಸಾಧ್ಯವಿದೆ.

ಗುರು ಲಘು ಮೂರಿರೆ ಮ - ನ - ಗಣ ।

ಗುರು ಲಘು ಮೊದಲಲ್ಲಿ ಬರಲು ಭ - ಯ - ಗಣಮೆಂಬರ್ ॥

ಗುರು ಲಘು ನಡುವಿರೆ ಜ - ರ - ಗಣ ।

ಗುರು ಲಘು ಕೊನೆಯಲ್ಲಿ ಬರಲು ಸ - ತ - ಗಣ ಮಕ್ಕುಂ ॥

ಹೀಗೆ ಅಕ್ಷರ ಗಣಗಳಲ್ಲಿ ಎಂಟು ವಿಧದ ಗಣಗಳನ್ನು ಕಾಣಬಹುದು.

## ವೃತ್ತಗಳು

ಅಕ್ಷರಗಣಗಳ ಶಾಸ್ತ್ರಕ್ಕನುಗುಣವಾಗಿ ರಚಿಸಲ್ಪಟ್ಟ ಪದ್ಯಗಳನ್ನು **ವೃತ್ತಗಳು** ಎಂದು ಕರೆಯುತ್ತಾರೆ. ಸಂಸ್ಕೃತ ಕಾವ್ಯಗಳಲ್ಲಿ ಹಲವಾರು ವೃತ್ತಗಳು ಬಳಕೆಯಾಗಿದ್ದರೂ ಕನ್ನಡದ ಪ್ರಾಚೀನ ಕವಿಗಳು ಬಹಳವಾಗಿ ಬಳಸಿರುವುದು ಆರು ವೃತ್ತಗಳನ್ನು ಮಾತ್ರ ಅವುಗಳನ್ನು **ಖ್ಯಾತಕರ್ಣಾಟಕಂ** ಎಂದು ಕರೆಯಲಾಗಿದೆ. ಅವು ಇಂತಿವೆ -

1) ಉತ್ಪಲ ಮಾಲಾವೃತ್ತ
2) ಶಾರ್ದೂಲ ವಿಕ್ರೀಡಿತ ವೃತ್ತ
3) ಸ್ರಗ್ಧರಾ ವೃತ್ತ
4) ಮತ್ತೇಭ ವಿಕ್ರೀಡಿತ ವೃತ್ತ
5) ಮಹಾಸ್ರಗ್ಧರಾ ವೃತ್ತ
6) ಚಂಪಕಮಾಲಾ ವೃತ್ತ

## ಮತ್ತೇಭ ವಿಕ್ರೀಡಿತ ವೃತ್ತ

**ಲಕ್ಷಣಗಳು :**

1) ನಾಲ್ಕು ಪಾದಗಳು ಸಮನಾಗಿರುತ್ತವೆ.
2) ಪ್ರತಿ ಪಾದದಲ್ಲಿ 20 ಅಕ್ಷರಗಳಿದ್ದು 30 ಮಾತ್ರೆಗಳಿರುತ್ತವೆ.
3) ಪ್ರತಿ ಪಾದದಲ್ಲಿ ಸ, ಭ, ರ, ನ, ಮ, ಯ ಗಣಗಳು ಬಂದು ಕೊನೆಯಲ್ಲಿ ಒಂದು ಲಘು ಮತ್ತು ಒಂದು ಗುರು ಬರುತ್ತದೆ.
4) ಆದಿಪ್ರಾಸವಿರುತ್ತದೆ.

**ಸೂತ್ರ :** ''ಸಭರಂನಂ ಮಯಲಂಗಮಂ ಬಗೆಗೊಳಲ್ ಮತ್ತೇಭವಿಕ್ರೀಡಿತಂ

**ಉದಾ -**

| ಸ | ಭ | ರ | ನ | ಮ | ಯ | |
|---|---|---|---|---|---|---|
| U U — | — U U | — U — | U U U | — — — | U — — | U — |
| ಇದು ಪಾ | ತಾಳ ಬಿ | ಲಕ್ಕೆ ಬಾ | ಗಿಲಿದು | ದಲ್ ಘೋರಾಂ | ಧಕಾರ | ಕ್ಕೆ ಮಾ |
| U U — | — U U | — U — | U U U | — — — | U — — | U — |
| ಡಿದ ಕೂ | ಪಂ ಪೆಱ | ತಲ್ತಿದು | ಗ್ರಲಯ | ಕಾಳಾಂಬೋ | ಧರಚ್ಛಾ | ಯೆ ತಾ |
| U U — | — U U | — U — | U U U | — — — | U — — | U — |
| ನೆ ದಲೆಂ | ಬಂತಿರೆ | ಕಾಚ ಮೇ | ಚಕಚ | ಯಚ್ಛಾಯಾಂ | ಬುವಿಂ ಗು | ಣ್ಪಿನಿಂ |
| U U — | — U U | — U — | U U U | — — — | U — — | U — |
| ಪುದಿದಿ | ರ್ದತ್ತುಸ | ರೋವರಂ | ಬಕ | ಬಳಾಕಾನೀ | ಕ ರಾವಾ | ಕು ಳಂ |

## ಸ್ರಗ್ಧರಾ ವೃತ್ತ

**ಲಕ್ಷಣಗಳು :**

1) ನಾಲ್ಕು ಪಾದಗಳು ಸಮನಾಗಿರುತ್ತವೆ.

2) ಪ್ರತಿ ಪಾದದಲ್ಲಿ 21 ಅಕ್ಷರಗಳಿದ್ದು 30 ಮಾತ್ರೆಗಳಿರುತ್ತವೆ.

3) ಪ್ರತಿ ಪಾದದಲ್ಲಿ ಮ, ರ, ಭ, ನ, ಯ, ಯ, ಯ, ಎಂಬ ಗಣಗಳಿರುತ್ತದೆ.

4) ಆದಿಪ್ರಾಸವಿರುತ್ತದೆ.

**ಸೂತ್ರ :** ''ತೋರಲ್ ಮಂರಂಭನಂ ಮೂಯಗಣಮು ಮದೆ ತಾಂ ಸ್ರಗ್ಧರಾವೃತ್ತಮಕ್ಕುಂ

**ಉದಾ -**

| ಮ | ರ | ಭ | ನ | ಯ | ಯ | ಯ |
|---|---|---|---|---|---|---|
| — — — | — U — | — U U | U U U | U — — | U — — | U — — |
| ಶ್ರೀ ಮತ್ಕ | ಲ್ಯಾಣರೂ | ಪಂ ಶರ | ಭವನ | ಗಜೋತ್ಸಂ | ಗನಭ್ರಾಂ | ತಯೋಗಾ |
| — — — | — U — | — U U | U U U | U — — | U — — | U — — |
| ರಾಮಾಂಚ | ತ್ಪಾದಪ | ದ್ಮಂಸುರು | ಚಿಗಣ | ಪವಿಭ್ರಾ | ಜಿತಂಸಾ | ರಸತ್ವ |
| — — — | — U — | — U U | U U U | U — — | U — — | U — — |
| ವ್ಯಾಮಿಶ್ರಾ | ಹೀನಚಂ | ಚತ್ಕಟ | ಕನಧಿ | ಕದಿವ್ಯಾ | ಗಮಂಪ್ಪ | ಸ್ಥಿಲೋಕ |
| — — — | — U — | — U U | U U U | U — — | U — — | U — |
| ಸ್ತೋಮಂಭ್ರಾ | ಜಿಷ್ಣುವೆ | ಮ್ಮಂಪೊರೆ | ಗೆವಿತ | ತ ಭಾಸ್ವ | ತ್ಪ್ರಕಾಶಂ | ಗಿರೀಶಂ |

## ಮಹಾಸ್ರಗ್ಧರಾ ವೃತ್ತ

**ಲಕ್ಷಣಗಳು :**

1) ನಾಲ್ಕು ಪಾದಗಳು ಸಮನಾಗಿರುತ್ತವೆ.

2) ಪ್ರತಿ ಪಾದದಲ್ಲಿ 22 ಅಕ್ಷರಗಳಿದ್ದು 33 ಮಾತ್ರೆಗಳಿರುತ್ತವೆ.

3) ಪ್ರತಿ ಪಾದದಲ್ಲಿ ಸ, ತ, ತ, ನ, ಸ, ರ, ರ ಗಣಗಳು ಬಂದು ಕೊನೆಯಲ್ಲಿ ಒಂದು ಗುರು ಬರುತ್ತದೆ.

4) ಆದಿಪ್ರಾಸವಿರುತ್ತದೆ.

**ಸೂತ್ರ :** ''ಸತತಂ ನಂಸಂರರಂಗಂ ನೆರೆದೆಸೆಯೆ ಮಹಾಸ್ರಗ್ಧರಾವೃತ್ತ ಮಕ್ಕುಂ

**ಉದಾ –**

| ಸ | ತ | ತ | ನ | ಸ | ರ | ರ | |
|---|---|---|---|---|---|---|---|
| U U — | — — U | — — U | U U U | U U — | — U — | — U — | — |
| ಸುರರಾ | ಜಂತಾನೆ | ರಾಜ್ಯಾಭಿ | ಷವಣ | ವಿಧಿಯಂ | ಮಾಡಿದಂ | ಸ್ವರ್ಗದಿಂ | ದಂ |
| U U — | — — U | — — U | U U U | U U — | — U — | — U — | — |
| ಪುರದೇ | ವಂಬಂದ | ಪಂನಂದ | ನನೆನ | ಗೆನಿಸ | ಲ್ಕಾನೆಸಂ | ಸಾರಸೌ | ಖ್ಯಾ |
| U U — | — — U | — — U | U U U | U U — | — U — | — U — | — |
| ಕರನಾ | ಗಿರ್ದಪ್ಪೆ | ನೆಂಬುತ್ಸ | ವದೊಳೆ | ಸುಖದಿಂ | ದಿರ್ದನೊ | ಪ್ಪಿರ್ದಯೋ | ಧ್ಯಾ |
| U U — | — — U | — — U | U U U | U U — | — U — | — U — | — |
| ಪುರದೊಳ್ | ಶ್ರೀನಾಭಿ | ರಾಜಂಸು | ಕವಿಜ | ನಮನೋ | ಮಾನಸೋ | ತ್ಸಂಸಹಂ | ಸಂ |

ಈ ಆರೂ ವೃತ್ತಗಳನ್ನು ಸುಲಭವಾಗಿ ಗುರುತಿಸಲು ಪದ್ಯ

ಗುರುವೊಂದಾದಿಯೊಳುತ್ಪಲಂ ಗುರುಮೊದಲ್ ಮೂರಾಗೆ ಶಾರ್ದೂಲಮಾ ।
ಗುರುನಾಲ್ಕಾಗಿರಲಂತು ಸ್ರಗ್ಧರೆ ಲಘು ದ್ವಂದ್ವಂ ಗುರುದ್ವಂದ್ವಮಾ ।
ಗಿರೆ ಮತ್ತೇಭ ಲಘುದ್ವಯ ತ್ರಿಗುರುವಿಂದಕ್ಕುಂ ಮಹಾಸ್ರಗ್ಧರಾ ।
ಹರಿಣಾಕ್ಷೀ, ಲಘು ನಾಲ್ಕು ಚಂಪಕಮಿವಾಱುಂ ಖ್ಯಾತಕರ್ಣಾಟಕಂ ।।

(ಉಳಿದ ವೃತ್ತಗಳು ಹಿಂದಿನ ತರಗತಿಯಲ್ಲಿ ಅಭ್ಯಾಸಿಸಲಾಗಿದೆ)

## ಅಂಶಗಣ

ಈ ಹಿಂದಿನ ವರ್ಗಗಳಲ್ಲಿ ಮಾತ್ರಾಗಣ, ಅಕ್ಷರಗಣಗಳ ವಿಚಾರ ಬಂದಿದೆ. ಕೆಲವೆಡೆ ಮಾತ್ರಾವೃತ್ತ ಮತ್ತು ಅಕ್ಷರ ವೃತ್ತಗಳನ್ನು ತಿಳಿಸಿದೆ. ಮಾತ್ರಾಗಣಗಳಲ್ಲಿ ಮಾತ್ರೆಗಳ ಸಂಖ್ಯೆ, ಅಕ್ಷರ ಗಣಗಳಲ್ಲಿ ಅಕ್ಷರಗಳ ಸಂಖ್ಯೆಗಣ ನಿಯಮಕ್ಕೆ ಕಾರಣ. ಇದೇ ಮೇರೆಗೆ ಇನ್ನೊಂದು ಸೂತ್ರವು ಕನ್ನಡ ಛಂದೋಬಂಧಗಳಲ್ಲಿ ಉಂಟು. ಇದರ ನೆಲಸಿಗೆ 'ಅಂಶ' ಎಂದು ಹೆಸರು. ಅಂಶ ಸಂಖ್ಯೆ ಗಣ ನಿಯಮವಾದ ಇಂಥ ಗಣಗಳಿಂದ ರಚಿತವಾದ ಪದ್ಯರೂಪಕ್ಕೆ 'ಅಂಶವೃತ್ತ'ವೆಂದೂ, ಗಣಗಳಿಗೆ 'ಅಂಶಗಣ' ವೆಂದೂ ಹೆಸರು. ಇದು ಶುದ್ಧ ದೇಶಿಯ ಬಗೆ; ಜನಪದದ ಹಾಡುಗಳಲ್ಲಿ ವಿಶೇಷವಾಗಿ ಕಾಣದೊರೆಯುವುದು. ಕೆಲವು ಗ್ರಂಥಗಳಲ್ಲಿ ಹಾಗೂ ಶಿಲಾಶಾಸನಗಳಲ್ಲಿಯೂ ಇದರ ಬಳಕೆಯುಂಟು.

ಇಂಥ ಅಂಶ ವೃತ್ತಗಳಲ್ಲಿ ರಾಗ, ತಾಲ ಬೆರೆತಿರುತ್ತವೆ. ಅಂಶ ಇಲ್ಲವೆ ಅಂಶ ಗಣಗಳು ಲಯದ ಕಾಲಮಾನಕ್ಕೆ ಅಧೀನವಾಗಿರುತ್ತವೆ. ಅಂದರೆ, ಒಮ್ಮೊಮ್ಮೆ ಒಂದು ಲಘು ತನ್ನ ಲಯದಿಂದ 'ಗುರು' ವಿನ ಕಾಲಮಾನ ಪಡೆಯಬಹುದು; ಇಲ್ಲವೆ 'ಗುರು' ಅವಶ್ಯವಿದ್ದಲ್ಲಿ ಹ್ರಸ್ವ ಉಚ್ಚಾರ ಪಡೆದು 'ಲಘು'ವಿನ ಮೌಲ್ಯ ಪಡೆಯಬಹುದು. ಇಂಥದೆಲ್ಲ ಹಾಡುವಾಗಷ್ಟೇ ಸಾಧ್ಯವಿರುವುದರಿಂದ ಹಾಡುಗಬ್ಬಗಳಲ್ಲಿ ಈ ವೃತ್ತಗಳು ವಿಶೇಷವಾಗಿ ಬಳಕೆಯಾಗಿವೆ.

ಅಂಶ ಛಂದಸ್ಸಿನಲ್ಲಿ 'ಗುರು'ವನ್ನು ಮೂಲಾಂಶ ಎಂದು ಗ್ರಹಿಸುವರು. ಗಣದ ಆದಿಯಲ್ಲಿ – (ಗುರು), ಇಲ್ಲವೆ (ಎರಡು ಲಘು) ವುಳ್ಳ ಅಂಶವಿರಬಲ್ಲುದು.

(ಗಣದ ಆದಿಯಲ್ಲಿ ಈ ಬಗೆಯ ರಚನೆ ಇರುವಂತಿಲ್ಲ).

ಇನ್ನುಳಿದ ಸ್ಥಾನಗಳಲ್ಲಿ ಗುರುವಿಗೆ ಪರ್ಯಾಯವಾಗಿ ಲಘುವಿರಬಲ್ಲುದು. ಇವೆರಡೂ ಒಂದೊಂದೇ ಅಂಶಗಳು. ಇಂಥ ಎರಡು ಅಂಶಗಳುಳ್ಳ ಗಣಕ್ಕೆ 'ಬ್ರಹ್ಮಗಣ' ಎಂದು ಹೆಸರು. ಇಂಥ ಮೂರು ಅಂಶಗಳುಳ್ಳ ಗಣಕ್ಕೆ 'ವಿಷ್ಣುಗಣ' ವೆಂಬ ಹೆಸರು. ಹಾಗೆಯೇ ಇಂಥ ನಾಲ್ಕು ಅಂಶಗಳುಳ್ಳ ಗಣವನ್ನು 'ರುದ್ರಗಣ' ಎಂದು ಹೆಸರು ಕೊಡಲಾಗಿದೆ. ಈ ವಿಧಾನದಂತೆ ಲೆಕ್ಕ ಹಾಕಿದಾಗ ನಾಲ್ಕು ಬ್ರಹ್ಮಗಣಗಳು, ಎಂಟು ವಿಷ್ಣುಗಣಗಳು, ಹದಿನಾರು ರುದ್ರಗಳು ದೊರೆಯುವುವು. ಸಾಂಕೇತಿಕವಾಗಿ ಹಾಗೂ ಸಂಕ್ಷಿಪ್ತವಾಗಿ ಬ್ರಹ್ಮ, ವಿಷ್ಣು, ರುದ್ರಗಣಗಳನ್ನು ಹೀಗೆ ಗುರುತಿಸಬಹುದು :

### ಅಂಶಗಣಗಳ ಸಾಂಕೇತಿಕ ಪಟ್ಟಿ

**ನಾಲ್ಕು ಬ್ರಹ್ಮಗಣಗಳು**

| | | | |
|---|---|---|---|
| — | . | — | . |
| UU | . | — | . |
| — | . | U | . |
| UU | . | U | . |

**ಎಂಟು ವಿಷ್ಣುಗಣಗಳು**

| | | | | | |
|---|---|---|---|---|---|
| — | . | — | . | — | . |
| UU | . | — | . | — | . |
| — | . | — | . | U | . |
| UU | . | — | . | U | . |
| — | . | U | . | — | . |
| UU | . | U | . | — | . |
| — | . | U | . | U | . |
| UU | . | U | . | U | . |

**ಹದಿನಾರು ರುದ್ರಗಣಗಳು**

| | | | | | | | |
|---|---|---|---|---|---|---|---|
| — | . | — | . | — | . | — | |
| UU | . | — | . | — | . | — | . |
| — | . | U | . | — | . | — | . |
| UU | . | U | . | — | . | — | |
| — | . | — | . | U | . | — | . |
| UU | . | — | . | U | . | — | . |
| — | . | U | . | U | . | — | . |
| UU | . | U | . | U | . | — | . |
| — | . | — | . | — | . | U | . |
| UU | . | — | . | — | . | U | . |
| — | . | U | . | — | . | U | . |
| UU | . | U | . | — | . | U | . |
| — | . | — | . | U | . | U | . |
| UU | . | — | . | U | . | U | . |
| — | . | U | . | U | . | U | . |
| UU | . | U | . | U | . | U | . |

**ಟಿಪ್ಪಣಿ :**

1) ಮೇಲಿನ ಗಣಗಳಲ್ಲಿ '.' ಚಿಹ್ನೆಯು ಅಂಶಗಳನ್ನು ವಿಂಗಡಿಸಿ ತೋರುತ್ತದೆ.

2) ಇಲ್ಲಿ ಮಾತ್ರೆಗಳನ್ನೆಣಿಸಿ ಗಣ ಮಾಡಬಾರದು.

3) ಎಲ್ಲ ಅಂಶಗಣಗಳಲ್ಲಿ ಮೊದಲನೆಯ ಅಂಶಕ್ಕೆ ಮಾತ್ರ ಗುರುವಿಗೆ ಬದಲಾಗಿ ಎರಡು ಲಘು ಇರಬೇಕಾಗುತ್ತದೆ. ಎರಡನೆಯ, ಮೂರನೆಯ, ನಾಲ್ಕನೆಯ ಗಣಗಳಲ್ಲಿ ಗುರುವಿನ ಬದಲಾಗಿ ಲಘುವಾಗಿಯೂ ಇರಬಹುದು.

ತ್ರಿಪದಿ ಹಾಗೂ ಸಾಂಗತ್ಯಗಳು ಅಂಶಗಳಿಂದ ಕೂಡಿದ ಛಂದೋಬಂಧಗಳಾಗಿವೆ. ಅಂಶಗಳನ್ನು ಮೂರು ಬಗೆಗಳಿಂದ ಗುರುತಿಸಲಾಗುತ್ತದೆ.

**ತ್ರಿಪದಿ :** ಇದು ಬಹು ಜನಪ್ರಿಯವಾದ ಅಂಶ ವೃತ್ತವಾಗಿದೆ.

**ಲಕ್ಷಣ**

1) ಅಂಶ ಗಣಗಳಿಂದ ಕೂಡಿದ ಪದ್ಯ.

2) ಪ್ರತೀ ನುಡಿಯಲ್ಲಿ ಮೂರು ಪಾದಗಳಿವೆ.

3) ಪ್ರತೀ ನುಡಿಯಲ್ಲಿ ಒಟ್ಟು ಹನ್ನೊಂದು ಗಣಗಳಿವೆ.

4) ಆರು ಮತ್ತು ಹತ್ತನೆಯ ಗಣಗಳು ಬ್ರಹ್ಮಗಣಗಳಾಗಿದ್ದು ಉಳಿದ ಗಣಗಳು ವಿಷ್ಣು ಗಣಗಳಾಗಿರುತ್ತವೆ.

**ಉದಾ -**

| | | | |
|---|---|---|---|
| ವಿ<br>U U U —<br>ಬಿಸರು ಹೋ | ವಿ<br>U U U —<br>ದ್ಭವ ಗಣಂ | ವಿ<br>U U U —<br>ರಸದಶ | ವಿ<br>— U —<br>ಸ್ಥಾನದೊಳ್ |
| ವಿ<br>U U U U<br>ಬಿಸರುಹ | ಬ್ರ<br>— U<br>ನೇತ್ರ | ವಿ<br>U U U —<br>ಗಣಮೆ ಬ | ವಿ<br>U U U U<br>ರ್ಕುಳಿದವು |
| ವಿ<br>U U U U<br>ಬಿಸರುಹ | ಬ್ರ<br>— U<br>ನೇತ್ರ | ವಿ<br>U U U U<br>ತ್ರಿಪದಿಗೆ | |

ಇದರಲ್ಲಿ ಲಕ್ಷಣಗಳನ್ನು ಲಕ್ಷ್ಯ ಪದ್ಯದಲ್ಲಿ ಹೇಳಿದೆ. ಎಂದರೆ ಆರನೆಯ ಹಾಗೂ ಹತ್ತನೆಯ ಸ್ಥಾನಗಳಲ್ಲಿ (ಗಣಗಳಲ್ಲಿ) ಬ್ರಹ್ಮಗಣಗಳಿದ್ದು ಉಳಿದೆಲ್ಲ ಗಣಗಳು ವಿಷ್ಣು ಗಣಗಳಾಗಿವೆ. ಪ್ರಥಮ ಪಾದದಲ್ಲಿ ನಾಲ್ಕು ಗಣಗಳು, ದ್ವಿತಿಯ ಪಾದದಲ್ಲಿ ನಾಲ್ಕು ಗಣಗಳು ಹಾಗೂ ತೃತೀಯ ಪಾದದಲ್ಲಿ ಮೂರು ಗಣಗಳಿವೆ. ಮೇಲೆ ತೋರಿಸಿದಂತೆ ಗಣಯೋಜನೆ ಇರುತ್ತದೆ. ಒಟ್ಟು ಹನ್ನೊಂದು ಅಂಶಗಣಗಳು ತ್ರಿಪದಿಯಲ್ಲಿರುತ್ತವೆ.

**ಟಿಪ್ಪಣಿ :**

1) ಹಾಡುವಾಗ ಪ್ರತಿಯೊಂದು ವಿಷ್ಣುಗಣವು ನಿರ್ದಿಷ್ಟ ಕಾಲಮಾನವನ್ನು ಪಾಲಿಸುವುದು. ಬ್ರಹ್ಮಗಣಗಳೂ ಅಷ್ಟೇ. ಹಾಡುವ ಬಗೆಯಲ್ಲಿ ತ್ರಿಪದಿಯ ಎರಡನೆಯ ಪಾದದ ಮೂರನೆಯ ಗಣ ಮುಗಿದಾಗ ನಿಲ್ಲಿಸಿ, ಮತ್ತೆ ಮತ್ತೆ ಇದೇ ಪಾದವನ್ನು ಮರಳಿ ಹಾಡುತ್ತ ನಾಲ್ಕನೆಯ ಗಣವನ್ನು ಸೇರಿಸಿಕೊಳ್ಳುವ ಪರಿಪಾಠವಿದೆ. ಅಂದರೆ ಮೂರು ಪಾದಗಳನ್ನು ನಾಲ್ಕು ಪಾದಗಳಾಗಿ ಕೇಳುವಂತೆ ಹಾಡುವುದು.

2) ತ್ರಿಪದಿಯಲ್ಲಿ ಮೇಲಿನ ಲಕ್ಷಣಗಳಿದ್ದು ಕೇವಲ ಮೊದಲ ಪಾದದ ಮೊದಲ ಗಣ ವಿಷ್ಣುಗಣದ ಬದಲಾಗಿ 'ರುದ್ರ' ಗಣವಾಗಿದ್ದು ಅದನ್ನು ಚಿತ್ರ ಎಂದು ಕರೆಯಬಹುದು. ತ್ರಿಪದಿಯ ಮೊದಲ ವಿಷ್ಣುಗಣ ಹಾಗೂ ಕೊನೆಯ ವಿಷ್ಣುಗಣದ ಬದಲಾಗಿ 'ರುದ್ರ' ಗಣ ಬಂದರೆ ಅದನ್ನು ಚಿತ್ರಲತಿಕೆ ಎಂದು ಕರೆಯಬಹುದು.

3) ತ್ರಿಪದಿಯಲ್ಲಿ ವಿಷ್ಣುಗಣದ ಬದಲು ಐದು ಮಾತ್ರೆಯ ಗಣಗಳು, ಬ್ರಹ್ಮಗಣದ ಬದಲು ಮೂರು ಇಲ್ಲವೆ ನಾಲ್ಕು ಮಾತ್ರೆಯ ಗಣಗಳು ಏರ್ಪಟ್ಟು ಮಾತ್ರಾ ತ್ರಿಪದಿ ಬಳಕೆಯಲ್ಲಿ ಬಂದದ್ದು ಉಂಟು.

4) ಮೊದಮೊದಲು ತ್ರಿಪದಿಯಲ್ಲಿ ವಿಷ್ಣುಗಣಗಳಿಗೆ ಬದಲಾಗಿ ಬ್ರಹ್ಮ ಅಥವಾ ರುದ್ರಗಣಗಳು ಬರಬಹುದಾಗಿದ್ದಿತೆಂದು ತೋರುತ್ತದೆ.

# ಸಾಂಗತ್ಯ

ಅಂಶ ಲಯವನ್ನು ಕಳೆದುಕೊಳ್ಳದ ಹಾಡಿನ ಚೆಲುವನ್ನು ಉಳಿಸಿಕೊಂಡು ಬಂದ ಛಂದೋಬಂಧವೇ ಸಾಂಗತ್ಯ.

**ಲಕ್ಷಣ :**

1) ಅಂಶ ಗಣಗಳಿಂದ ಕೂಡಿದ ಪದ್ಯ.

2) ಪ್ರತೀ ನುಡಿಯಲ್ಲಿ ನಾಲ್ಕು ಪಾದಗಳಿವೆ.

3) ಮೊದಲಿನ ಎರಡು ಪಾದಗಳು ನಂತರದ ಎರಡು ಪಾದಗಳಿಗೆ ಸಮಾನ (ಅರ್ಧ ಸಮವೃತ್ತ)

4) ಒಂದು ಮತ್ತು ಮೂರನೆಯ ಪಾದಗಳು ಸಮಾನವಾಗಿದ್ದು ಪ್ರತಿಯೊಂದು ಪಾದದಲ್ಲಿ ನಾಲ್ಕು ವಿಷ್ಣು ಗಣಗಳು ಬರುತ್ತವೆ.

5) ಎರಡು ಮತ್ತು ನಾಲ್ಕನೆಯ ಪಾದಗಳು ಸಮಾನವಾಗಿದ್ದು ಪ್ರತಿಯೊಂದು ಪಾದದಲ್ಲಿ ಮೊದಲು ಎರಡು ವಿಷ್ಣು ಗಣಗಳೂ ಬಳಿಕ ಒಂದು ಬ್ರಹ್ಮಗಣವೂ ಬರುತ್ತದೆ.

**ಉದಾ -**

| | | | |
|---|---|---|---|
| ವಿ | ವಿ | ವಿ | ವಿ |
| — U — | U U U — | U U U — | U U — U |
| ಪಚ್ಚೆಗ | ಪ್ಪುರವನೆ | ಚ್ಚುವನು ಗಂ | ಧದ ಮೈಗೆ |
| ವಿ | ವಿ | ಬ್ರ | |
| — U U | U U U U | — U | |
| ಬಚ್ಚಿಸು | ವನು ಚಕ್ರ | ನಾಥ | |
| ವಿ | ವಿ | ವಿ | ವಿ |
| — U — | U U U U | — U U | U U U U |
| ಮೆಚ್ಚಿ ಬೀ | ಸಣಿಗೆಯ | ಬೀಸುವ | ರಡಿಗಳ |
| ವಿ | ವಿ | ಬ್ರ | |
| — U — | U U U — | U U U | |
| ನೊಚ್ಚನೊ | ತ್ತುವರು ರಾ | ಣಿಯರು | |

# ಲೇಖನ ಕೌಶಲ್ಯ

# ಪತ್ರಲೇಖನ

ಪತ್ರಲೇಖನವು ಒಂದು ಕಲೆಯಾಗಿದೆ. ನಮ್ಮ ಮನದಲ್ಲಿಯ ಭಾವನೆ/ವಿಚಾರಗಳು ಇನ್ನೊಬ್ಬರಿಗೆ ತಲುಪಿಸಲು ಅದರಂತೆ ತಮ್ಮ ಭಾವನೆ/ವಿಚಾರಗಳನ್ನು ಉತ್ತಮ ಭಾಷೆಯಲ್ಲಿ ಸಂಕ್ರಮಣಗೊಳಿಸಲು ಪತ್ರ ಒಂದು ಉತ್ತಮ ಲಿಖಿತ ಸಾಧನವಾಗಿದೆ.

ಹಿಂದಿನ ವರುಷ ನೀವು 'ಪತ್ರ ಲೇಖನ' ಈ ಘಟಕದ ಅಭ್ಯಾಸ ಮಾಡಿರುವಿರಿ. ಅಲ್ಲಿ ನೀವು ಪಾರಂಪಾರಿಕ ಪದ್ಧತಿಯಿಂದ ಪತ್ರ ಬರೆಯುತ್ತಿದ್ದಿರಿ. ಈಗ ನಿಮ್ಮದು ತಂತ್ರಜ್ಞಾನದ ಯುಗವಾಗಿದೆ. ಸಂಗಣಕ, ದೂರಧ್ವನಿ, ಇಂಟರನೆಟ್ ಮೇಲೆ ಇವುಗಳ ಸಹಾಯದಿಂದ ನೀವು ತಂತ್ರಜ್ಞಾನಕ್ಕೆ ಅಂಟಿಕೊಂಡಿದ್ದೀರಿ.

'ಫೋನ್' ಬಳಕೆಯಿಂದಾಗಿ ಪತ್ರ ಲೇಖನದ ಅವಶ್ಯಕತೆ ಕಡಿಮೆಯಾದರೂ ತಮ್ಮ ಆತ್ಮೀಯರಿಗೆ ತಮ್ಮ ಭಾವನೆಗಳನ್ನು ಪ್ರಭಾವಿಯಾಗಿ ವ್ಯಕ್ತಪಡಿಸುವುದು ಒಂದು (ಅನೌಪಚಾರಿಕ ಪತ್ರ) ಕೌಶಲ್ಯವಾಗಿದೆ. ತಮ್ಮ ವಿಚಾರಗಳನ್ನು ಭಾವನೆಗಳನ್ನು (ಬೇಡಿಕೆ/ತಕರಾರು/ವಿನಂತಿ) ಯೋಗ್ಯ ರೀತಿಯಲ್ಲಿ ಅತ್ಯಂತ ಕಡಿಮೆ ಶಬ್ದಗಳಲ್ಲಿ ಸಂಬಂಧಿತ ವ್ಯಕ್ತಿಗಳಿಗೆ ತಲುಪಿಸುವುದು (ಔಪಚಾರಿಕ ಪತ್ರ ಬರೆಯುವಾಗ) ಒಂದು ಕಲೆಯಾಗಿದೆ.

ಪತ್ರಲೇಖನದಲ್ಲಿ ತಂತ್ರಜ್ಞಾನದ ಬಳಕೆ ಇಂದು ಅತ್ಯಂತ ಅವಶ್ಯವಾಗಿದೆ. ಮುಂದಿನ ದಿನಗಳಲ್ಲಿ ನಿಮಗೆ 'ಮೇಲ್' ಕಳುಹಿಸುವ ತಂತ್ರ ಅವಗತ ಮಾಡಿಕೊಳ್ಳಬೇಕಾಗುವುದು. ಅದಕ್ಕಾಗಿಯೇ ಈ ವರ್ಷ ನಾವು ಪತ್ರದ ಸ್ವರೂಪವನ್ನು ನವೀನ ತಂತ್ರಜ್ಞಾನದಂತೆ 'ಮೇಲ್' ಕಳುಹಿಸುವ ಪದ್ಧತಿಯಿಂತೆ ಮಾಡುವವರಿದ್ದೇವೆ.

ಈ ವರ್ಷ ನಾವು ಕೆಳಗಿನ ಪತ್ರ ಪ್ರಕಾರಗಳ ಅಭ್ಯಾಸ ಮಾಡುವವರಿದ್ದೇವೆ.

**ಪತ್ರಲೇಖನ**

**ಅನೌಪಚಾರಿಕ** → ಕೌಟುಂಬಿಕ ಸಮೀಪದ ಆತ್ಮೀಯ ವ್ಯಕ್ತಿಗಳಿಗೆ ಬರೆಯುವ ಪತ್ರ

**ಔಪಚಾರಿಕ** → ಬೇಡಿಕೆ, ವಿನಂತಿ, ಕಾರ್ಯಾಲಯದ ಮತ್ತು ವ್ಯವಸಾಯಿಕ ಪತ್ರ.

**ಔಪಚಾರಿಕ**

1) ಇವರಿಗೆ ಬರೆದ ನಂತರ ವ್ಯಕ್ತಿಯ ಹುದ್ದೆಯನ್ನು ಸಮರ್ಪಕವಾಗಿ ಬರೆಯಬೇಕು.
2) ಪತ್ರದ ವಿಷಯ ಬರೆಯಬೇಕು.
3) ತಪ್ಪಾಗದಂತೆ ಮುಖ್ಯ ಅಂಶಗಳನ್ನು ಮಂಡಿಸುವುದು.
4) ಪತ್ರದ ಕೊನೆಗೆ ಎಡಗಡೆ ಪತ್ರ ಬರೆಯುವವರ ವಿಳಾಸ ಬರೆಯಬೇಕು.

**ಅನೌಪಚಾರಿಕ**

1) ವ್ಯಕ್ತಿಯ ಉಲ್ಲೇಖವನ್ನು ಯೋಗ್ಯ/ ಸಂಬಂಧಗಳಿಗನುಸಾರವಾಗಿ / ಸನ್ಮಾನಪೂರ್ವ ಮಾಡುವುದು.
2) ವ್ಯಕ್ತಿಯ ಕ್ಷೇಮ ಕುಶಲತೆಗಳನ್ನು ಕೇಳುವುದು.
3) ಭಾವನೆಗಳನ್ನು ಪ್ರಭಾವಿಯಾಗಿ ಮಂಡಿಸುವುದು.
4) ಸಂಬಂಧಗಳಲ್ಲಿಯ ಪ್ರೀತಿ, ವಾತ್ಸಲ್ಯಗಳನ್ನುರಿತು ವಿಸ್ತೃತಲೇಖನ ಮಾಡುವುದು.
5) ಪತ್ರಕ್ಕೆ ವಿಷಯ ಬರೆಯುವ ಅವಶ್ಯಕತೆ ಇಲ್ಲ.
6) ಪತ್ರದ ಕೊನೆಗೆ ಎಡಗಡೆಗೆ ಪತ್ರ ಬರೆಯುವವರ ವಿಳಾಸ ಅವಶ್ಯವಾಗಿ ಬರೆಯಬೇಕು.

[**ಟಿಪ್ಪಣಿ** – ಪತ್ರಕ್ಕೆ ಉತ್ತರ ಪಡೆಯಲು ಪತ್ರ ಕುಳುಹಿಸುವವರ ವಿಳಾಸ ಬರೆಯುವುದು ಅವಶ್ಯವಾಗಿದೆ. ಪಾಕೀಟು ತೆಗೆದು ವಿಳಾಸ ಬರೆಯುವ ಅವಶ್ಯಕತೆ ಇಲ್ಲ. ('ಇ-ಮೇಲ್' ಕ್ಕಾಗಿ ಪಾಕೀಟು ಇರುವುದಿಲ್ಲ.]

## ಪತ್ರ ನಮೂನೆ - 1

ದಿನಾಂಕ

ಇವರಿಗೆ,

ತೀರ್ಥರೂಪ ತಂದೆಯವರಿಗೆ ತಮ್ಮ ಮುದ್ದು ಮಗನಾದ ನವೀನಕುಮಾರನು ಮಾಡುವ ದೀರ್ಘದಂಡ ನಮಸ್ಕಾರಗಳು. ಮನೆಯಲ್ಲಿ ದೇವರ ದಯೆಯಿಂದ ತಾವೆಲ್ಲರೂ ಸೌಖ್ಯದಿಂದ ಇರುವಿರೆಂದು ಭಾವಿಸುವೆ. ನಾನೂ ಕೂಡಾ ನನ್ನ ಅಭ್ಯಾಸದೊಂದಿಗೆ ಆರಾಮದಿಂದಿರುವೆ.

ಈಗ ನಮ್ಮ ಶಾಲೆಯಲ್ಲಿ ಪ್ರೇಕ್ಷಣೀಯ ಸ್ಥಳಗಳನ್ನು ನೋಡಲು ಶೈಕ್ಷಣಿಕ ಪ್ರವಾಸವನ್ನು ಹಮ್ಮಿಕೊಂಡಿದ್ದಾರೆ. ಮಹತ್ವದ ಸ್ಥಳಗಳನ್ನು ನೋಡಲು ನಾನು ಬಾಲ್ಯದಿಂದಲೂ ಕನಸನ್ನು ಕಾಣುತ್ತಿದ್ದೆ. ಮತ್ತು ವರ್ಗದ ಗುರುಗಳು ಕೂಡಾ ಇಂತಹ ಸದಾವಕಾಶವನ್ನು ತಪ್ಪಿಸಬೇಡಿರಿ ಎಂದು ನನಗೆ ಆಗ್ರಹ ಪಡಿಸುತ್ತಿದ್ದಾರೆ. ಕಾರಣ ತಾವು ನನ್ನೀ ಶೈಕ್ಷಣಿಕ ಪ್ರವಾಸಕ್ಕಾಗಿ 5,000/- ರೂಪಾಯಿಗಳನ್ನು ಕಳುಹಿಸಿ ಕೊಡುವಿರೆಂದು ಕೇಳುವೆ.

ಮನೆಯಲ್ಲಿ ಮಾತೋಶ್ರೀಯವರಿಗೆ ನನ್ನ ಸಾಷ್ಟಾಂಗ ಪ್ರಣಾಮಗಳನ್ನು ತಿಳಿಸಿರಿ. ತಮ್ಮೆಲ್ಲರ ಯೋಗಕ್ಷೇಮದ ಬಗ್ಗೆ ಪತ್ರ ಬರೆಯಿರಿ.

ಇತಿ ತಮ್ಮ ಪ್ರೀತಿಯ ಮಗ
(ನವೀನಕುಮಾರ)

ವಿಳಾಸ : ನೂತನ ಕನ್ನಡ ವಿದ್ಯಾಲಯ
ನವರಸಪುರ
ತಾಲೂಕ ಮತ್ತು ಜಿಲ್ಲೆ - ವಿಜಯಪುರ

## ಪತ್ರ ನಮೂನೆ - 2

ದಿನಾಂಕ

ಇವರಿಗೆ,

ಮಾ. ಪ್ರಧಾನ ಗುರುಗಳು,

ಮಧುಕೇಶ್ವರ ಕನ್ನಡ ವಿದ್ಯಾಲಯ

ಕೊಪ್ಪಿಕರ ಬೀದಿ. ಹುಬ್ಬಳ್ಳಿ

ವಿಷಯ : ಮೂಲ ವರ್ಗಾವಣೆ ಪ್ರಮಾಣ ಪತ್ರ (T.C.) ಕೊಡುವ ಕುರಿತು,

ಮಹನಿಯರೇ,

ಮೇಲೆ ನಮೂದಿಸಿದ ವಿಷಯಾನ್ವಯ ನಾನು ಮಂಜುನಾಥ ತಮ್ಮ ವಿದ್ಯಾಲಯದ ವಿದ್ಯಾರ್ಥಿಯಾಗಿದ್ದು ಇದೇ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ 10ನೇ ತರಗತಿ ಉತ್ತೀರ್ಣನಾಗಿರುತ್ತೇನೆ. ಆದ್ದರಿಂದ ಮುಂದಿನ ನನ್ನ ಶಿಕ್ಷಣಕ್ಕಾಗಿ ಮೂಲ ವರ್ಗಾವಣೆ ಪ್ರಮಾಣಪತ್ರ ನೀಡಬೇಕೆಂದು ಕೋರುತ್ತೇನೆ.

ಧನ್ಯವಾದಗಳು

ತಮ್ಮ ವಿಶ್ವಾಸಿ

ಮಂಜುನಾಥ

ವಿಳಾಸ : ಮಧುಕೇಶ್ವರ ಬಡಾವಣೆ
ಮಾರುತಿ ಮಂದಿರ ಬಳಿ, ಹುಬ್ಬಳ್ಳಿ

# ಕಥಾ ಲೇಖನ

ಕಥಾ ಲೇಖನವು ವಿದ್ಯಾರ್ಥಿಯ ಕಲ್ಪನಾ ಶಕ್ತಿ ಹಾಗೂ ಸೃಜನ ಶೀಲತೆಗೆ ಪ್ರೇರಣೆ ಕೊಡುವ ವಿಷಯವಾಗಿದೆ. ಕಥೆಯಲ್ಲಿ 'ಕಥಾವಸ್ತು' ಇದು ಕಥೆಯ ಪ್ರಾಣವಾಗಿರುವುದು. ಕಥಾ ವಸ್ತುವಿಗೆ ಸಂಬಂಧಿಸಿದ ಪಾತ್ರ. ಘಟನೆ, ತರ್ಕಸಂಗತಿಗಳನ್ನು ಹೆಣೆಯುವುದು ಒಂದು ಲೇಖನ ಕೌಶಲವಾಗಿದೆ. ಈ ತರಹದ ಕೌಶಲ್ಯ ವಿಕಾಸವು ಕಥಾ ಲೇಖನದ ಉದ್ದೇಶವಾಗಿದೆ.

ಉತ್ತಮ ಕಥಾ ಲೇಖನಕ್ಕಾಗಿ ಕೆಳಗಿನ ಅಂಶಗಳನ್ನು ಗಮನದಲ್ಲಿಡಿರಿ.

1) ಕಥೆಗೆ ಯೋಗ್ಯ ತಲೆಬರಹ ಕೊಡಿರಿ.
2) ತಲೆಬರಹದಿಂದ ಮುಖ್ಯ ಕಥಾವಸ್ತುವಿನ ಕಲ್ಪನೆ ಬರುವಂತಿರಬೇಕು.
3) ಕಥೆಯನ್ನು ಭೂತಕಾಲದಲ್ಲಿ ಬರೆಯಬೇಕು.
4) ಲೇಖನದಲ್ಲಿಯ ಘಟನೆ, ಪ್ರಸಂಗಗಳಿಗನುಸಾರವಾಗಿ 'ಕಾಲ'ದ ಯೋಗ್ಯ ಬಳಕೆ ಮಾಡಬೆಕು.
5) ಕಥೆಯಲ್ಲಿ ಪರಿಸರದಲ್ಲಿ ಬಳಸುವ ಭಾಷೆಯ ಬಳಕೆ ಮಾಡಬಹುದಾಗಿದೆ.
6) ಕಥೆಯ ಪ್ರಾರಂಭ, ಅಂತ್ಯ ಇವುಗಳ ಸಂಬಂಧವನ್ನು ಸಮರ್ಪಕವಾಗಿ ವ್ಯಕ್ತಿಪಡಿಸುವುದು ಅವಶ್ಯವಾಗಿದೆ.
7) ಕಥೆಯ ವಿಶ್ಲೇಷಣೆ ಕಾಲಾನುಕ್ರಮವಾಗಿರುವುದು ಅವಶ್ಯವಾಗಿದೆ.

- ಕಥಾ ಲೇಖನ ಮೂಲ್ಯಮಾಪನದ ನಿಯೋಜಿತ ಕೃತಿ

1) ಕಥಾ ವಸ್ತುವಿನ ಮೇಲಿಂದ ಕಥಾ ಲೇಖನ
2) ಶಿರ್ಷಕದ ಮೇಲಿಂದ ಕಥಾ ಲೇಖನ
3) ಕೊಟ್ಟ ಶಬ್ದಗಳಿಂದ ಕಥಾ ಲೇಖನ
4) ಅಪೂರ್ಣ ಕಥೆ ಪೂರ್ಣಗೊಳಿಸುವುದು.
   ಅ) ಕಥೆಯ ಪೂರ್ವಾರ್ಧಕೊಟ್ಟು ಉತ್ತರಾರ್ಧ ಬರೆಯುವುದು.
   ಬ) ಕಥೆಯ ಉತ್ತರಾರ್ಧಕೊಟ್ಟು ಪೂರ್ವಾರ್ಧ ಬರೆಯುವುದು.
5) ಮುಖ್ಯಾಂಶಗಳ ಆಧಾರದಿಂದ ಕಥೆ ಬರೆಯುವುದು.

# ಮಾದರಿ ಕಥಾ ಲೇಖನ

**1) ಕೆಳಗೆ ಕೊಟ್ಟಿರುವ ಅಂಶಗಳ ಸಹಾಯದಿಂದ ಕಥೆ ಪೂರ್ಣಗೊಳಿಸಿ ಯೋಗ್ಯ ತಲೆಬರಹ ಕೊಡಿರಿ.**

ಹಸಿವಿನಿಂದ ನರಳುತ್ತಿದ್ದ ನರಿ ............................ ಮರದ ಮೇಲೆ ಕುಳಿತಿದ್ದ ಕಾಗೆಯ ಬಾಯಲ್ಲಿ ಮಾಂಸದ ತುಂಡು ............................ ನಿನ್ನ ರೂಪು ಅಂದ, ನಿನ್ನ ಧ್ವನಿ ಚಂದ ಎಂದು ನರಿ ............................ ಯನ್ನು ಹೊಗಳಿದ್ದು ............................ ಕಾಗೆ ಹಾಡಲು ಬಾಯ್ತೆರೆದದ್ದು ............................ ಕೆಳಗೆ ಬಿದ್ದ ಮಾಂಸದ ತುಂಡು ............................ ನರಿಯ ಸಂತೋಷ ............................ ಕತೆಯಲ್ಲಿ ಆಡಗಿರುವ ನೀತಿ.

**2) ಕೊಟ್ಟ ಕಥೆಯ ಮುಂದಿನ ಭಾಗವನ್ನು ಮಾತ್ರ ಬರೆಯಿರಿ.**

ನಾಲ್ಕು ಜನ ಕಳ್ಳರು – ಕೂಡಿಕೊಂಡು ಒಬ್ಬ ಶ್ರೀಮಂತನ ಮನೆಗೆ ಕನ್ನ ಹಾಕಿ ಅಪಾರ ಬಂಗಾರ, ಬೆಳ್ಳಿ, ಹಣ ದೋಚಿಕೊಂಡು ಹೋಗುವಾಗ ನಾಲ್ವರು ಹಸಿವಿನಿಂದ ಬಳಲಿದರು. ಆದರಲ್ಲಿ ಇಬ್ಬರು ಸಮೀಪದ ಊರಿಗೆ ............................ .......
......................................................................................................................................................
......................................................................................................................................................

# ಸಾರಾಂಶ ಲೇಖನ

''ನಿಮ್ಮ ಮಾತುಗಳನ್ನು ಸ್ವಲ್ಪದರಲ್ಲಿ ಹೇಳಿರಿ'' ಎಂಬುದು ಇಂದಿನ ಯಾಂತ್ರಿಕ ಯುಗದಲ್ಲಿ ಸಮರ್ಪಕವೆನಿಸುವದು. ಯಾವದೊಂದು ವಿಸ್ತೃತವಾದ ಲೇಖನಕ್ಕೆ ಅದರ ಸಂಪೂರ್ಣ ಆಶಯ ತಿಳಿಯುವಂತೆ ಸಂಕ್ಷಿಪ್ತರೂಪ ಕೊಡುವದು ಮಹತ್ವದ ಕೌಶಲವಾಗಿದೆ. ಈ ಕೌಶಲ ವಿಕಸಿತಗೊಳಿಸುವದು ಈ ಉದ್ದೇಶದಿಂದ 'ಸಾರಾಂಶ ಲೇಖನ ಈ ಘಟಕವನ್ನು ಅಭ್ಯಾಸಕ್ರಮದಲ್ಲಿ ಸಮಾವೇಶ ಮಾಡಲಾಗಿದೆ.

**ಸಾರಂಶ ಲೇಖನದ ಹಂತಗಳು :**

1) ಸಾರಾಂಶ ಲೇಖನವೆಂದರೆ ಕೊಟ್ಟ ಪರಿಚ್ಛೇದ ಓದುವದು.
2) ಪರಿಚ್ಛೇದದಲ್ಲಿಯ ಆಶಯದ ಆಕಲನವಾಗುವದು.
3) ಮಧ್ಯವರ್ತಿ ವಿಚಾರ ತಿಳಿದುಕೊಳ್ಳುವದು.
4) ತಿಳಿದಿರುವ ವಿಚಾರಗಳನ್ನು ಸ್ವಂತದ ಶಬ್ದಗಳಲ್ಲಿ ಸ್ವಲ್ಪದರಲ್ಲಿ ಹೇಳುವುದು.
5) ಕಡಿಮೆ ಶಬ್ದಗಳಲ್ಲಿ ಆದರೆ ಪರಿಚ್ಛೇದದಲ್ಲಿಯ ಆಶಯದ ಪೂರ್ಣ ಅರ್ಥವಾಗುವದು.

ಕೊಟ್ಟ ಪರಿಚ್ಛೇದದಲ್ಲಿಯ, ಪರಿಚ್ಛೇದದ ಅರ್ಥ ಅತಿ ಕಡಿಮೆ ಶಬ್ದಗಳಲ್ಲಿ ಸಾರಾಂಶ ಬರೆಯುವದು ಅಪೇಕ್ಷಿತವಾಗಿದೆ.

**ಕೃತಿಪತ್ರಿಕೆಗಾಗಿ :**

ಸಾರಾಂಶ ಲೇಖನದ ಪರಿಚ್ಛೇದ 100ರಿಂದ 120 ಶಬ್ದಗಳದಾಗಿರಬೇಕು. ಕೊಟ್ಟ ಪರಿಚ್ಛೇದದ ಸಾರಾಂಶ ಸ್ವಲ್ಪದರಲ್ಲಿ, ಅತಿ ಕಡಿಮೆ ಶಬ್ದಗಳಲ್ಲಿ ಬರೆಯುವದು ಅಪೇಕ್ಷಿತವಿದೆ. ಸಾರಾಂಶದಿಂದ ಸಂಪೂರ್ಣ ಪರಿಚ್ಛೇದದ ಆಕಲನವಾಗುವದು ಅಪೇಕ್ಷಿತವಿದೆ. ಸಾರಾಂಶ ಲೇಖನದ ಮುಖ್ಯ ವಿಚಾರ (ಮಧ್ಯವರ್ತಿ ಕಲ್ಪನೆ) ಸ್ವಂತದ ಶಬ್ದಗಳಲ್ಲಿ ಮಂಡಿಸುವದು ಅಪೇಕ್ಷಿತವಾಗಿದೆ. ಪರಿಚ್ಛೇದದ ಅಥವಾ ಸಾರಾಂಶದ ಶಬ್ದಗಳನ್ನು ಎಣಿಸುವದು ಅಥವಾ ನೋಂದಾಯಿಸುವದು ಅವಶ್ಯಕವಿಲ್ಲ.

# ಸಾರಾಂಶ ಲೇಖನದ ಮಾದರಿ

ಕೆಳಗಿನ ಪರಿಚ್ಛೇದವನ್ನು ಓದಿ 1/3 ಸಾರ ಸಂಗ್ರಹಿಸಿ

''ಇವರು ನನ್ನನ್ನು ಕರೆದೊಯ್ಯುವುದರಲ್ಲಿ ಮೋಸವೇನೂ ಇಲ್ಲವಷ್ಟೆ ? ಬೇಡ ಬೇಡವೆಂದರೂ, ಪೊಲೀಸರು ನಮ್ಮ ಮನೆಯ ಕಳವನ್ನು ಶೋಧಿಸುವ ಕೆಲಸ ಕೈಕೊಂಡಿದ್ದಾರೆ. ನನ್ನ ಒಡವೆ ವಸ್ತುಗಳೊಂದಿಗೆ ನನ್ನನ್ನೂ ಇಲ್ಲದಂತೆ ಮಾಡಬೇಕೆಂದು ಇವರ ವಿಚಾರವಿದೆಯೋ ಏನೋ! ಹಾಗಾದರೆ, ರತ್ನಳ ಗತಿಯೇನು?.... ''

''ಓ, ನಾಗರಹಾವು!'' ಎಂದು ಒಬ್ಬ ಕೂಗಿದಾಗ, ವೈದ್ಯರು ಎಚ್ಚರಗೊಂಡವರಾಗಿ ನೋಡಿದರು. ಎರಡು ಮೊಳ ಅಂತರದಲ್ಲಿಯೇ ಒಂದು ನಾಗರಹಾವು-ಎರಡು ಮಾರು ಉದ್ದದ ತನ್ನ ದೇಹವನ್ನು ಸರಿಸುತ್ತಾ ಮುಂದುವರಿಯುತ್ತಲಿದೆ. ಮೂವರೂ ನಿಂತು ನೋಡಿದರು. ಹಾವು ತನ್ನ ಪಾಡಿಗೆ ತಾನು ಹರಿದುಹೋಯಿತು. ಮೂವರು ಮತ್ತೆ ಮುಂದೆ ಸಾಗಿದರು. ಮತ್ತೆ ವೈದ್ಯರ ತಲೆಯಲ್ಲಿ ಯೋಚನೆಯೆದ್ದಿತು.'' ಹಾವಿನಂತಹ ದುಷ್ಟಜಂತುವೂ ಕೆಣಕದೆ ಯಾರನ್ನೂ ಹಿಂಸಿಸದು; ಮನುಷ್ಯ? ಮನುಷ್ಯ ಸುಮ್ಮಗೆ ಬಿಡುವನೇ? ಅವನ ಆಶೆಯ ಹಾವು ಯಾರೂ ಕೆಣಕದಿದ್ದರೂ-ಎಲ್ಲರನ್ನೂ ಕಡಿಯುವುದು! ಕಳ್ಳನನ್ನು ಮೊದಲು ಮಾಡಿ ಸಾಮ್ರಾಟನವರೆಗೆ-ಎಲ್ಲರಿಗೂ ಆಶೆ ಸ್ವಾರ್ಥ ಲೋಭ. ನಮ್ಮ ರತ್ನಳಿಗೆ ಏಕೆ ಇರಬಾರದು- ತನ್ನ ಒಡವೆ ವಸ್ತುಗಳ ಲೋಭ? ಅವಳೂ ಲೋಕದ ಮನುಷ್ಯರಲ್ಲಿ ಒಬ್ಬಳಲ್ಲವೇ?........... ಇನ್ನು ನನ್ನ ರತ್ನಳಿಗೆ ನಾನಾದರೂ ಮರಳಿ ದೊರೆಯುತ್ತೇನೋ ಇಲ್ಲವೋ!........''

1/3 ಸಾರ ಸಂಗ್ರಹಿಸಿ ಬರೆಯುವುದು

ಇವರು ನನ್ನನ್ನು ಕರೆದೊಯ್ಯುವುದರಲ್ಲಿ ಮೋಸ ಇಲ್ಲವೆಂದು ಅನಿಸುತ್ತದೆ. ಪೋಲಿಸರು ನಮ್ಮ ಮನೆಯ ಕಳವನ್ನು ಶೋಧಿಸುತ್ತಿದ್ದಾರೆ. ನನ್ನ ಒಡವೆ ವಸ್ತುಗಳ ಜೊತೆಗೆ ನನ್ನನ್ನೂ ಇಲ್ಲದಂತೆ ಮಾಡಿದರೆ ರತ್ನಳ ಗತಿಯೇನು? ''ಓ ನಾಗರಹಾವು!''

ಎಂದು ಒಬ್ಬ ಕೂಗಿದಾಗ ವೈದ್ಯರು ನೋಡಿದರು. ಹಾವು ತನ್ನ ಪಾಡಿಗೆ ತಾನು ಹರಿದುಹೋಯಿತು. ''ಹಾವಿನಂತಹ ದುಷ್ಟಜಂತುವೂ ಕೆಣಕದೆ ಯಾರನ್ನೂ ಹಿಂಸಿಸದು; ಮನುಷ್ಯ? ಮನುಷ್ಯ ಸುಮ್ಮನೇ ಬಿಡುವನೇ? ಎಲ್ಲರ ಹಾಗೆ ನನ್ನ ರತ್ನಾಳಿಗೆ ಒಡವೆ ವಸ್ತುಗಳ ಲೋಭ? ಇನ್ನು ನನ್ನ ರತ್ನಾಳಿಗೆ ನಾನಾದರೂ ಮರಳಿ ದೊರೆಯುತ್ತೇನೋ ಇಲ್ಲವೋ!.......

## ಜಾಹೀರಾತು ಲೇಖನ

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ 'ಜಾಹೀರಾತು' ಒಂದು ಸರ್ವಾಧಿಕ ಮಹತ್ವದ ಘಟಕವಾಗಿದೆ. ಜಾಹೀರಾತಿನ ಯಶಸ್ವಿತೆ ಮೇಲೆ ಉತ್ಪಾದನೆಗಳ ಮಾರಾಟ ಅವಲಂಬಿಸಿದೆ. ಆದ್ದರಿಂದ ಉತ್ಪಾದನೆಗಳ ಜಾಹೀರಾತು ಮಾಡುವುದು ಒಂದು ಸೃಜನಶೀಲ ಕಲೆಯಾಗಿದೆ. ಅದನ್ನು ಅಳವಡಿಕೊಳ್ಳುವುದು ಒಂದು ವ್ಯವಸಾಯ ಯಶಸ್ಸಿನ ತಂತ್ರವಾಗಿದೆ.

ಜನರ ಮನಸ್ಸಿನಲ್ಲಿ ಉತ್ಪಾದನೆಯ ಕುರಿತಾದ ಆಸಕ್ತಿ ನಿರ್ಮಾಣಗೊಳಿಸುವುದು, ಆ ಕಡೆಗೆ ಜನರ ಲಕ್ಷ್ಯ ಸೆಳೆಯುವುದು ಇವು ಜಾಹೀರಾತು ಲೇಖನದ ಪ್ರಮುಖ ಉದ್ದೇಶಗಳಾಗಿವೆ.

**ಜಾಹೀರಾತು ಲೇಖನದಲ್ಲಿ ಕೆಳಗಿನ ಅಂಶಗಳನ್ನು ಗಮನಿಸಬೇಕು.**

1) ಅತ್ಯಂತ ಕಡಿಮೆ ಶಬ್ದಗಳಲ್ಲಿ ಹೆಚ್ಚು ಆಶಯ ಇದು ಜಾಹೀರಾತಿನ ಸೂತ್ರವಾಗಿದೆ.
2) ಗಮನ ಸೆಳೆಯುವ ಶಬ್ದರಚನೆ ಅವಶ್ಯವಾಗಿದೆ.
3) ಇಲ್ಲಿ ವಿಷಯ ಕುರಿತಾದ ಸ್ಪಷ್ಟತೆ ಹಾಗೂ ಆಕರ್ಷಕತೆ ಮಹತ್ವದ್ದಾಗಿದೆ.
4) ಅಲಂಕಾರಿಕ, ಕಾವ್ಯಮಯ, ಆಕರ್ಷಕ ಶೈಲಿಯ ಬಳಕೆ ಮಾಡುವುದು.
5) ಜಾಹೀರಾತಿನಲ್ಲಿ ಸಂಪರ್ಕ ಸ್ಥಳದ ವಿಳಾಸ, ಸಂಪರ್ಕ ಕ್ರಮಾಂಕಗಳ ಉಲ್ಲೇಖವಿರಬೇಕು.
6) ಜಾಹೀರಾತನ್ನು ಪೆನ್ನಿನಿಂದಲೇ ಬರೆಯಿರಿ. ಪೆನ್ಸಿಲು ಬಳಸಬೇಡಿ. ಚಿತ್ರಗಳ ಅವಶ್ಯಕತೆ ಇಲ್ಲ.

**ಜಾಹೀರಾತಿನ ಪ್ರಕಾರಗಳು**

- ಶಬ್ದಗಳ ಮೇಲಿಂದ ಜಾಹೀರಾತು ಲೇಖನ
- ಜಾಹೀರಾತು ನೀಡಿ ಅದರ ಕುರಿತಾದ ಕೃತಿಗಳನ್ನು ಬಿಡಿಸುವುದು.
- ವಿಷಯಗಳನ್ನು ನೋಡಿ ಜಾಹೀರಾತು ಲೇಖನ
- ಕೊಟ್ಟ ಜಾಹೀರಾತನ್ನು ಅಧಿಕ ಆಕರ್ಷಕ ಪದ್ಧತಿಯಿಂದ ಪುನರ್ ಲೇಖನ ಮಾಡುವುದು.

## ವಾಣಿಜ್ಯ ಜಾಹೀರಾತಿನ ಮಾದರಿ

ನಾಡಿನ ಪ್ರಮುಖ ಸಾಹಿತ್ಯಗಳು, ಪ್ರಶಸ್ತಿ ವಿಜೇತ ಕೃತಿಗಳು ಮತ್ತು ಆಧುನಿಕ ಸಾಹಿತಿಗಳ ಎಲ್ಲ ಮೂಲದ ಪುಸ್ತಕಗಳಿಗಾಗಿ ಒಮ್ಮೆ ಸಂದರ್ಶಿಸಿ. ''ಬಸವೇಶ್ವರ ಮಾರಾಟ ಮಳಿಗೆ'' ಮಹಾತ್ಮಾಗಾಂಧಿ ರಸ್ತೆ ವಿಜಯಪುರ, 'ಮೂಕಜ್ಜಿಯ ಕನಸು', 'ನಾಕುತಂತಿ,' ರಾಮಾಯಣ ದರ್ಶನಂ' ಮತ್ತು ರಾಜ್ಯದ ಪ್ರತಿಭಾನ್ವಿತ ಸಾಹಿತ್ಯಗಳ ಎಲ್ಲ ಪುಸ್ತಕಗಳು ದೊರೆಯುವ ಏಕೈಕ ಸ್ಥಳಕ್ಕೆ ಒಮ್ಮೆ ಭೇಟಿ ನೀಡಿ. ಎಲ್ಲ ಪುಸ್ತಕಗಳು ರಿಯಾಯಿತಿ ದರದಲ್ಲಿ ದೊರೆಯಲಿವೆ.

**ಶಿ.ಸೂ :** ಈ ಜಾಹೀರಾತಿನ ವಿಷಯವನ್ನು ಅಲಂಕಾರಿಕವಾಗಿ ಮಂಡಿಸುವ ರೂಢಿ ಮಾಡಿರಿ.

# ಮಾದರಿ ಸಂಭಾಷಣೆ

# ಸಂವಾದ ಲೇಖನ

ತೆರಿಗೆಯ ಅಧಿಕಾರಿಗಳು ಶಾಲೆಗೆ ಭೇಟಿ ನೀಡಿದಾಗ ವಿದ್ಯಾರ್ಥಿಗಳ ಜೊತೆ ನಡೆದ ಸಂಭಾಷಣೆ

**ಅಕ್ಷತಾ:-** ಸರ್, ತೆರಿಗೆ ಎಂದರೇನು?

**ತೆರಿಗೆಯ ಅಧಿಕಾರಿ:-** ರಾಷ್ಟ್ರದ ಅಭಿವೃದ್ಧಿಗಾಗಿ ಹಣದ ಅವಶ್ಯಕತೆ ಇರುವುದರಿಂದ ಬೇರೆ ಬೇರೆ ವಿಧಾನದಿಂದ ಹಣ ಸಂಗ್ರಹಣೆ ಮಾಡುವುದಕ್ಕೆ ತೆರಿಗೆ ಎನ್ನುವರು.

**ಮೇಘನಾ:-** ತೆರಿಗೆಯ ಉಪಯೋಗ ಹೇಗಾಗುತ್ತದೆ?

**ತೆರಿಗೆಯ ಅಧಿಕಾರಿ:-** ದೇಶದ ಜನತೆಯ ಮೂಲಭೂತ ಅವಶ್ಯಕತೆಗಳನ್ನು ಜನಹಿತ ಯೋಜನೆಗೆ, ನೈಸರ್ಗಿಕ ಆಪತ್ತುಗಳಿಂದ ತೊಂದರೆಗೊಳಗಾದ ಜನರಿಗೆ ಸಹಾಯ, ರಾಷ್ಟ್ರದ ಮತ್ತು ನಾಗರಿಕರ ಸಂರಕ್ಷಣೆ ಮಾಡುವುದು ಇತ್ಯಾದಿ.

**ಶಶಿಧರ:-** ತೆರಿಗೆಯಲ್ಲಿ ಪ್ರಕಾರಗಳಾವುವು?

**ತೆರಿಗೆಯ ಅಧಿಕಾರಿ:-** ಪ್ರತ್ಯಕ್ಷ ತೆರಿಗೆ ಮತ್ತು ಅಪ್ರತ್ಯಕ್ಷ ತೆರಿಗೆ ಎಂದು ಎರಡು ಪ್ರಕಾರಗಳು

**ಆಕಾಶ:-** ಪ್ರತ್ಯಕ್ಷ ತೆರಿಗೆ ಎಂದರೇನು?

**ತೆರಿಗೆಯ ಅಧಿಕಾರಿ:-** ಯಾವ ತೆರಿಗೆಯ ಭಾರ ಪ್ರತ್ಯಕ್ಷವಾಗಿ ತೆರಿಗೆ ತುಂಬುವ ವ್ಯಕ್ತಿಗೆ ಅನ್ವಯಿಸುವುದು ಅಂತಹ ತೆರಿಗೆಯನ್ನು ಪ್ರತ್ಯಕ್ಷ ತೆರಿಗೆ ಎನ್ನುವರು. ಉದಾ:- ಆದಾಯ ತೆರಿಗೆ, ಸಂಪತ್ತಿನ ತೆರಿಗೆ, ವೃತ್ತಿತೆರಿಗೆ

**ನವೀನ:-** ಅಪ್ರತ್ಯಕ್ಷ ತೆರಿಗೆ ಎಂದರೇನು?

**ತೆರಿಗೆಯ ಅಧಿಕಾರಿ:-** ಯಾವ ತೆರಿಗೆಯ ಭಾರ ಪ್ರತ್ಯಕ್ಷವಾಗಿ ತೆರಿಗೆ ತುಂಬುವ ವ್ಯಕ್ತಿಗೆ ಅನ್ವಯಿಸುವುದಿಲ್ಲವೋ ಅಂತಹ ತೆರಿಗೆಗೆ ಅಪ್ರತ್ಯಕ್ಷ ತೆರಿಗೆ ಎನ್ನುವರು.

ಉದಾ:- ಅಬಕಾರಿ ತೆರಿಗೆ, ಸೇವಾ ತೆರಿಗೆ, ವಿಕ್ರಿ ತೆರಿಗೆ ಇತ್ಯಾದಿ.

**ವಿದ್ಯಾರ್ಥಿಗಳು:-** ಸರ್, ತೆರಿಗೆ ಬಗ್ಗೆ ಒಳ್ಳೆಯ ಮಾಹಿತಿ ನೀಡಿದ್ದಕ್ಕಾಗಿ ಧನ್ಯವಾದಗಳು.

# ಭಾಷಣ ತಯಾರಿಕೆ

ಭಾಷಣ ತಯಾರಿಸುವ ಕಲೆಯನ್ನು ವೃದ್ಧಿಗೊಳಿಸಲು ಈ ಕೆಳಗಿನ ಮಾದರಿಯನ್ನು ಗಮನಿಸಿರಿ.

ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಒಂದು ಭಾಷಣವನ್ನು ಸಿದ್ಧಪಡಿಸಿರಿ.

ನಿಮ್ಮ ಭಾಷಣವನ್ನು ಹೀಗೆ ಪ್ರಾರಂಭಿಸಿರಿ.

ಇಂದಿನ ಸಮಾರಂಭದ ಅಧ್ಯಕ್ಷರೆ, ಅತಿಥಿಗಳೆ, ಗುರು ವೃಂದವೆ, ಸಹೋದರ ಸಹೋದರಿಯರೆ...

ಭಾಷಣದ ಮಹತ್ವದ ಅಂಶಗಳು

ಸ್ವಾತಂತ್ರದ ಮಹತ್ವ , ದೇಶ ಸೇವೆ ಈಶ ಸೇವೆ, ದೇಶ ಭಕ್ತಿ, ಸ್ವಾತಂತ್ರ್ಯ ಹೋರಾಟಗಾರರು, ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿ ಅಂಹಿಸೆ, ತ್ಯಾಗ, ನಿಷ್ಠೆಗಳು, ನಿಮ್ಮ ಹಕ್ಕು, ಕರ್ತವ್ಯಗಳು ನೀವು ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆ ಆಚರಿಸುವ ಉದ್ದೇಶ.

ಭಾಷಣದ ಕೊನೆ ಹೀಗೆ ಮಾಡಿರಿ.

ಇಲ್ಲಿಯ ವರೆಗೆ ನಾನು ಆಡಿದ ಹಿತನುಡಿಗಳನ್ನು ಲಕ್ಷ್ಯ ಪೂರ್ವಕ ಕೇಳಿದ್ದಕ್ಕಾಗಿ ನಾನು ತಮಗೆಲ್ಲ ಆಭಾರಿಯಾಗಿರುವೆ.

# ವರದಿ ಲೇಖನ

ಇಂದಿನ ಯುಗವು ಮಾಹಿತಿ ಯುಗವಾಗಿದೆ. ತಂತ್ರಜ್ಞಾನ, ಪ್ರಚಾರ ಮಾಧ್ಯಮಗಳಿಂದ ಜಗತ್ತು ನಿಜವಾಗಿಯೂ ಹತ್ತಿರವಾಗಿದೆ. ಮಾಹಿತಿ ನೀಡುವುದು. ಜ್ಞಾನ ನೀಡುವುದು ಸಮಾಜ ಪ್ರಭೋಧನ ಮಾಡುವುದು. ಪರಿಸ್ಥಿತಿಯ ಗಾಂಭೀರ್ಯವನ್ನು ತಿಳಿಸುವುದು. ವರದಿಯ ಮುಖ್ಯ ಉದ್ದೇಶವಾಗಿದೆ. ವಸ್ತುಸ್ಥಿತಿಯ ಚಿತ್ರಣ, ವರದಿಯ ಮುಖ್ಯ ಉದ್ದೇಶವಾಗಿದೆ. ವಸ್ತುಸ್ಥಿತಿಯ ಚಿತ್ರಣ ಮಾಡುವ ವಾರ್ತೆಗಳನ್ನು ತಯಾರಿಸುವುದು ಮಹತ್ವದ ಕೌಶಲ್ಯವಾಗಿದೆ.

ಚಿಕಿತ್ಸಕ, ತರ್ಕಶುದ್ಧ ವಿಚಾರ, ಮಾಹಿತಿಗಳ ಯೋಗ್ಯ ವರ್ಗೀಕರಣ, ವಿಶ್ಲೇಷಣೆ, ಸೃಜನಶೀಲತೆಗಳನ್ನು ಅಂಗೀಕರಿಸಿವುದು ಉತ್ತಮ ವಾರ್ತಾಪತ್ರದ ತಯಾರಿಸುವ ಲಕ್ಷಣವಾಗಿದೆ.

### ವಾರ್ತಾ ವಿಶ್ಲೇಷಣ - (ವರದಿ ತಯಾರಿಕೆ) ಮಾಡುವಾಗ ಗಮನಿಸಬೇಕಾದ ಅಂಶಗಳು.

1) ಘಟನೆಯ ವಿಶ್ವಾಸಾರ್ಹತೆ
2) ತಟಸ್ಥ ಭೂಮಿಕೆಯಿಂದ ಲೇಖನ
3) ಘಟನೆಯ ನಿರ್ದೋಷ ಹಾಗೂ ಯೋಗ್ಯ ತಪಶೀಲ
4) ಯಾವುದೇ ವ್ಯಕ್ತಿಯ ಮತವನ್ನು ಇಲ್ಲಿ ವ್ಯಕ್ತ ಪಡಿಸದೇ ಇರುವುದು.

### ಉತ್ತಮ ವರದಿಯ ಲಕ್ಷಣಗಳು

1) ಶೀರ್ಷಿಕೆ - ಇದು ಸಂಪೂರ್ಣ ಘಟನೆಗೆ ಹಿಡಿದ ಕನ್ನಡಿಯಾಗಿರಬೇಕು.
2) ದಿನಾಂಕ, ಸ್ಥಳ, ವೇಳೆ ಸಂಬಂಧಿತ ವ್ಯಕ್ತಿಗಳ ನಿರ್ದೋಷ ಉಲ್ಲೇಖ
3) ವಾರ್ತಾವರದಿಯನ್ನು ಭೂತಕಾಲದಲ್ಲಿ ಬರೆಯಬೇಕು.
4) ವರದಿಯಲೇಖನ ಮಾಡುವಾಗ ಮೊದಲು ಪ್ರಮುಖ ಘಟನೆಯನ್ನು ಉಲ್ಲೇಖಿಸಿ ನಂತರ ಆ ಕುರಿತು ವಿವರ ನೀಡಬೇಕು.

### ವರದಿಯ ಕ್ಷೇತ್ರಗಳು

ಸಾಂಸ್ಕೃತಿಕ, ಕ್ರೀಡೆ, ರಾಜಕೀಯ, ಶಾಲೆಯ, ಸಾಮಾಜಿಕ, ವೈದ್ಯಕೀಯ ಕ್ಷೇತ್ರಗಳಲ್ಲಿ ಸಂಬಂಧಿಸುವ ಘಟನೆಗಳ ಕುರಿತು ವಾರ್ತೆಯ ವರದಿ ತಯಾರಿಸಲು ಪ್ರಯತ್ನಿಸಬೇಕು.

### ಒಂದು ವಾರ್ತೆಯ ನಮೂನೆ

ಶಾಲೆಯ ಶತಾಬ್ದಿ ವರ್ಷದ ಮುಕ್ತಾಯ ಸಮಾರಂಭವು ಮಾ. ಶಿಕ್ಷಣ ಮಂತ್ರಿಗಳ ಉಪಸ್ಥಿತಿಯಲ್ಲಿ ಜರುಗಿತು.

- ಮೇಲಿನ ಶೀರ್ಷಿಕೆಯ ಮೇಲಿಂದ ವಾರ್ತಾವರದಿಯನ್ನು (ಪತ್ರಿಕಾ ವರದಿ) ತಯಾರಿಸಿರಿ.

### ವರದಿಯ ಪ್ರಕಾರಗಳು

1) ಕೊಟ್ಟ ವಿಷಯದ ಕುರಿತು ವರದಿ ತಯಾರಿಸುವುದು.
2) ಕೊಟ್ಟ ಘಟನೆಯ ಕುರಿತು ವರದಿ ತಯಾರಿಸುವುದು.
3) ಸೂಚಿಸಿದ ಶಬ್ದಗಳಿಂದ ವರದಿ ತಯಾರಿಸುವುದು.
4) ಕಾರ್ಯಕ್ರಮ ವರದಿ ತಯಾರಿಸುವುದು.

# ಪತ್ರಿಕಾ ವರದಿಯ ಮಾದರಿ

ನಾವು ನೆರವೇರಿಸಿದ ಕಾರ್ಯಕ್ರಮದ ಸಂಕ್ಷಿಪ್ತ ಮಾಹಿತಿಯನ್ನು ಸಾರ್ವಜನಿಕರಿಗೆ ಮುಟ್ಟಿಸುವ ಪ್ರಕಟನೆಯೇ ಪತ್ರಿಕಾ ವರದಿ.

**ಈ ವರದಿಗಾರಿಕೆಯಲ್ಲಿ ಪ್ರಮುಖವಾಗಿ ನಾಲ್ಕು ಪ್ರಕಾರಗಳಿವೆ:**

1) ಸಾಂಸ್ಕೃತಿಕ ವರದಿ

2) ಕಾರ್ಯಕ್ರಮದ ವರದಿ

3) ತನಿಖಾ ವರದಿ

4) ಅಪರಾಧ ವರದಿ

**''ಈ ನಾಡಿನ ಜನಪದ ಕಲೆಗಳು, ಮೌಖಿಕ ಪರಂಪರೆಗೆ ಮಾದರಿ ಡಾ|| ನಾಗೆಗೌಡರು''**

ನವರಸಪುರ: ಅ.11 ದೇಶದಲ್ಲಿ ನಮ್ಮ ನಾಡಿನ ಮೂಲ ಪರಂಪರೆಗಳಾದ ಜನಪದ ಕಲೆಗಳು ಮೌಖಿಕ ಪರಂಪರೆಗೆ ಮೂಲ. ಶ್ರೇಷ್ಠ ಸಾಹಿತಿಗಳಾದ ಡಾ|| ನಾಗೇಗೌಡರು ಪ್ರತಿಪಾದಿಸಿದರು. ಅವರು ನವರಸಪುರದಲ್ಲಿ ಜರುಗಿದ ಜನಪದ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿದರು. ಜನಪದ ಕಲೆಗಳು ಇಂದಿನ ಆಧುನಿಕ ಯುವ ಜನತೆಗೆ ಪರಿಚಯಿಸುವುದರಗೊಸ್ಕರ ದಿನಾಂಕ. ಅ.|| ರಂದು ಜನಪದ ಸಮ್ಮೇಳನವನ್ನು ನೇರವೇರಿಸಲಾಯಿತು.

ನವರಸಪುರದಲ್ಲಿ ಜರುಗಿದ ಜನಪದ ಸಮ್ಮೇಳನದಲ್ಲಿ ಜನಪದ ಕಲೆಗಳಾದ ಡೊಳ್ಳು, ಕುಣಿತ, ರಿವಾಯಿತು, ವೀರಘಾಸೆ, ಚೌಡಕಿ ಪದಗಳು, ಗೊಂದಲಿಗರ ಹಾಡು, ಬಯಲಾಟ, ಪಾರಿಜಾತ, ಯಕ್ಷಗಾನ ಇನ್ನು ಅನೇಕ ಜನಪದ ಕಲೆಗಳ ಸಮಾಗಮ ಕಾರ್ಯಕ್ರಮದ ಕೇಂದ್ರಬಿಂದುವಾಗಿತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜನಪದ ವಿದ್ವಾಂಸರಾದ ಡಾ|| ರಾಮೇಗೌಡರು ವಹಿಸಿದ್ದು ಮುಖ್ಯ ಅತಿಥಿ ಸ್ಥಾನವನ್ನು ಡಾ|| ನಾಗೇಗೌಡರು ವಹಿಸಿದ್ದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದ ಡಾ|| ನಾಗೇಗೌಡರು ನಾಡಿನ ಮೌಖಿಕ ಪರಂಪರೆಗೆ ಜನಪದ ಕಲೆ ಮೂಲವಾಗಿದೆ. ಇದು ವ್ಯಕ್ತಿಯ ಹೃದಯ ಸ್ಪರ್ಶಿ ಪರಿವರ್ತನೆ ಮಾಡುವ ಮೌಖಿಕ ಕಲೆಯಾಗಿರುವುದರಿಂದ ಇದನ್ನು ನಿರ್ಭೀತವಾಗಿ ಜನರಿಗೆ ಮುಟ್ಟಿಸಬಹುದೆಂದು ಮಾತನಾಡಿದರು.

ಈ ಕಾರ್ಯಕ್ರಮದಲ್ಲಿ ರಾಜ್ಯದ ಜನಪದ ಕಲಾವಿದರು, ಸಾಹಿತಿಗಳು, ಶಿಕ್ಷಕರು, ಮಕ್ಕಳು, ಸಾರ್ವಜನಿಕರು ಸಹಭಾಗಿಗಳಾಗಿ ಜನಪದ ಕಲೆಯ ಬಗ್ಗೆ ಸಾಕಷ್ಟು ವಿಷಯಗಳು ಅರಿತರು.

ಗೆ,

ಸಂಪಾದಕರ/ವರದಿಗಾರರು

..........................

ದಿನಪತ್ರಿಕೆ, ವಿಜಯಪುರ.

# ಗಾದೆಮಾತಿನ ವಿಚಾರ ವಿಸ್ತರಣೆ

**ಗಾದೆಯ ಮಾತುಗಳಲ್ಲಿ ವಿಸ್ತರಿಸಿ ಬರೆಯುವಾಗ ವಿದ್ಯಾರ್ಥಿಗಳು ಕೆಲವು ಮುಖ್ಯ ಅಂಶಗಳನ್ನು ಗಮನಿಸಬೇಕಾಗುತ್ತದೆ:**

1) ಗಾದೆಯಲ್ಲಿ ಕೊಟ್ಟಿರುವ ಪದಗಳನ್ನೂ ಒಟ್ಟು ವಾಕ್ಯದ ಸ್ವರೂಪವನ್ನೂ ಚೆನ್ನಾಗಿ ಮನನ ಮಾಡಿಕೊಳ್ಳಿ. ಮೇಲ್ನೋಟಕ್ಕೆ ಗೋಚರಿಸುವ ಅರ್ಥಕ್ಕಿಂತ ವಿಸ್ತಾರವಾದ ಬೇರೊಂದು ಅರ್ಥ ಗಾದೆಗಳಲ್ಲಿ ಇರುತ್ತದೆ. ತೆಂಗಿನಕಾಯಿಯ ಮೇಲಿರುವ ಸಿಪ್ಪೆ ಮತ್ತು ಕರಟಕ್ಕಿಂತ ಒಳಗಿರುವ ಬಿಳಿಯ ತಿರುಳು ಮುಖ್ಯ. ಉದಾಹರಣೆಗೆ 'ಬೆಳ್ಳಗಿರುವುದೆಲ್ಲಾ ಹಾಲಲ್ಲ' ಎಂಬ ಗಾದೆಯಲ್ಲಿರುವುದು ಬೆಳ್ಳಗೆ ಮತ್ತು ಹಾಲು ಈ ಪದಗಳ ಅರ್ಥವಷ್ಟೆ ಮುಖ್ಯವಾಗುವುದಿಲ್ಲ.

2) 'ಗಾದೆಯನ್ನು ಹತ್ತು ವಾಕ್ಯಗಳಷ್ಟು ವಿಸ್ತರಿಸಿ' ಎಂಬ ಪ್ರಶ್ನೆಗೆ ನೀವು ಹತ್ತೇ ವಾಕ್ಯಗಳನ್ನು ಬರೆಯಬೇಕೆಂಬ ಅರ್ಥವಲ್ಲ. ಅದು ಏಳೋ-ಎಂಟೇ ಅಥವಾ ಹತ್ತೋ-ಹನ್ನೆರಡೋ ಅದಕ್ಕೂ ಹೆಚ್ಚಿನ ವಾಕ್ಯಗಳೋ ಆಗಬಹುದು. ಅವುಗಳನ್ನು ಎಣಿಕೆ ಮಾಡುತ್ತಾ ಸಮಯ ವ್ಯರ್ಥಗೊಳಿಸಬಾರದು. ಉತ್ತರ ಪತ್ರಿಕೆ ಓದುವ ಮೌಲ್ಯ ಮಾಪಕರೂ ಹತ್ತು ವಾಕ್ಯಗಳನ್ನು ಎಣಿಸುತ್ತಾ ಕೂರುವುದಿಲ್ಲ. ಒಟ್ಟಿನಲ್ಲಿ ನಿಮ್ಮ ಬರಹ ಅರ್ಥಪೂರ್ಣವಾಗಿರಬೇಕು. ಅತಿ ದೀರ್ಘವಾಗಿ ಅಥವಾ ಸಂಕ್ಷಿಪ್ತವಾಗಿ ಇರದಂತೆ ಎಚ್ಚರವಹಿಸಿ.

3) ಆದಷ್ಟು ಸರಳವಾದ ಚಿಕ್ಕ ಚಿಕ್ಕ ವಾಕ್ಯಗಳನ್ನು ಬರೆಯಿರಿ. ಸಾಧ್ಯವಾದರೆ ಗಾದೆಗೆ ಸಂಬಂಧಿಸಿ ಬೇರೆ ಬೇರೆ ಕವಿಗಳು, ಲೇಖಕರು ಹೇಳಿರುವ ಮಾತುಗಳನ್ನು ಉದ್ಧರಿಸಿ. ಬರವಣಿಗೆ ಬೇಗ ಓದಲು ಅನುಕೂಲವಾಗುವಂತೆ ಸುಂದರವಾಗಿರಲಿ.

ಕೆಳಗೆ ಕೊಟ್ಟಿರುವ ಗಾದೆಮಾತುಗಳನ್ನು ಹತ್ತು ವಾಕ್ಯಗಳಷ್ಟಿರುವಂತೆ ವಿಸ್ತರಿಸಿ ಬರೆಯಿರಿ:

1) ಹನಿಹನಿ ಕೂಡಿದರೆ ಹಳ್ಳ

2) ಮಾತೇ ಮುತ್ತು; ಮಾತೇ ಮೃತ್ಯು

**ವಿಸ್ತರಣೆ:**

**1. ಹನಿಹನಿ ಕೂಡಿದರೆ ಹಳ್ಳ**

ಇದೊಂದು ಗಾದೆಯ ಮಾತು. 'ವೇದ ಸುಳ್ಳಾದರೂ ಗಾದೇ ಸುಳ್ಳಾಗದು' ಎಂಬ ಗಾದೆಯನ್ನು ಹಿರಿಯರು ಹೇಳಿದ್ದಾರೆ. ಯಾವ ವಸ್ತುವನ್ನೂ ನಾವು ಚಿಕ್ಕದೆಂದು ಕಡೆಗಣಿಸಬಾರದು. ಅನೇಕ ಚಿಕ್ಕವುಗಳು ಸೇರಿಯೇ ದೊಡ್ಡದಾಗುವುದು. ಪೈಸೆಗೆ ಪೈಸೆ ಸೇರಿದರೆ ರೂಪಾಯಿಯಾಗುವುದು. ಅಂತಹ ಒಂದೊಂದು ರೂಪಾಯಿಯನ್ನು ಕೂಡಿಸುತ್ತಾ ಹೋದರೆ ಮುಂದೆ ಅದು ನೂರಾಗುತ್ತದೆ, ಸಾವಿರವಾಗುತ್ತದೆ, ಸಾವಿರಗಳು ಸೇರಿ ಲಕ್ಷವಾಗುತ್ತದೆ.

ವಿದ್ಯಾವಂತರಾಗುವುದು ಕೂಡಾ ಸ್ವಲ್ಪ ಸ್ವಲ್ಪವಾಗಿ ಕಲಿತಾಗಲೇ, ಅಕ್ಷರಗಳ ಅಭ್ಯಾಸ, ಪದಗಳ ಅರ್ಥ, ವಾಕ್ಯಗಳ ಓದು ಇವುಗಳಿಂದ ಪ್ರಾರಂಭಿಸಿ ಮುಂದೆ ನಾವು ದೊಡ್ಡ ದೊಡ್ಡ ಗ್ರಂಥಗಳನ್ನು ಓದಿ ವಿದ್ಯಾವಂತರಾಗುತ್ತೇವೆ. ಪ್ರಸ್ತುತ 'ಹನಿಹನಿ ಕೂಡಿದರೆ ಹಳ್ಳ' ಎಂಬ ಗಾದೆ ಕಿರಿದಾಗಿದ್ದರೂ ಹಿರಿದಾದ ಅರ್ಥದಿಂದ ಕೂಡಿದೆ. ಮಳೆಯ ಒಂದೊಂದೇ ಹನಿಗಳು ಸೇರಿ ಹಳ್ಳವಾಗಿ, ಹಲವು ಹಳ್ಳಗಳು ಸೇರಿ ನದಿಯಾಗಿ, ಹಲವು ನದಿಗಳು ಸೇರಿ ಸಮುದ್ರವಾಗುತ್ತದೆ. ಆದ್ದರಿಂದ ವಿದ್ಯಾರ್ಥಿಗಳೂ ಕೂಡಾ ಕ್ಷಣಕ್ಷಣವೂ ವಿದ್ಯೆ ಕಲಿಯುತ್ತಾ ಕಣಕಣವಾಗಿ ಜ್ಞಾನ ಸಂಪತ್ತನ್ನು ಹೆಚ್ಚಿಸಿಕೊಳ್ಳಬೇಕು.'ಸರ್ವಜ್ಞನೆಂಬುವನು ಗರ್ವದಿಂದಾದವನೆ? ಸರ್ವರೊಳು ಒಂದೊಂದು ನುಡಿಗಲಿತು ವಿದ್ಯೆಯಾ ಪರ್ವತವೇ ಆದ' ಸರ್ವಜ್ಞನ ಈ ಮಾತು ನಮ್ಮ ಮನದಲ್ಲಿರಬೇಕು.

**2. ಮಾತೇ ಮುತ್ತು; ಮಾತೇ ಮೃತ್ಯು**

'ಕಿರಿದರಲ್ಲಿ ಪಿರಿದರ್ಥ' ಅಡಗಿಸಿಕೊಂಡಿರುವ ಮಾತುಗಳೇ ಗಾದೆಗಳು. 'ಕರಿಯು ಕನ್ನಡಿಯಲಡಗಿದಂತೆ' ಚಿಕ್ಕ ಗಾದೆಗಳಲ್ಲಿ ಹಿರಿದಾದ ಅನುಭವವಿರುತ್ತದೆ. ನಾವು ಆಡುವ ಮಾತು ಹೇಗಿರಬೇಕು ಎಂಬುದನ್ನು ಈ ಗಾದೆ ಅರ್ಥವತ್ತಾಗಿ ಹೇಳುತ್ತದೆ. ಬಸವಣ್ಣನವರು 'ಮಾತೆಂಬುದು ಜ್ಯೋತಿರ್ಲಿಂಗ' ಎಂದಿದ್ದಾರೆ. 'ನುಡಿದರೆ ಮುತ್ತಿನ ಹಾರದಂತೆ, ಸ್ಫಟಿಕದ ಸಲಾಕೆಯಂತೆ, ಮಾಣಿಕ್ಯದ ದೀಪ್ತಿಯಂತೆ ಲಿಂಗ ಮೆಚ್ಚಿ ಅಹುದಹುದು ಎನುವಂತೆ' ಇರಬೇಕು ಎಂದಿದ್ದಾರೆ. 'ಮಾತುಬಲ್ಲವ ಮಾಣಿಕ್ಯ ತಂದ' ಎಂಬ ಮತ್ತೊಂದು ಗಾದೆಯಿದೆ. ಮಾತು ಮುತ್ತಿನಂತೆ ಮನೋಹರವಾಗಿ ಮೌಲಿಕವಾಗಿ ಇರುತ್ತದೆ. ಸರಿಯಾದ ರೀತಿಯಲ್ಲಿ ಆಡಿದ ಮಾತು ಮಾತ್ರ ಹಾಗಿರುತ್ತದೆ. 'ಮಾತು ಬಲ್ಲವನಿಗೆ ಜಗಳವಿಲ್ಲ, ಊಟಬಲ್ಲವನಿಗೆ ರೋಗವಿಲ್ಲ,' ಒಳ್ಳೆಯ ಮಾತಾಡಿ ಎದುರಾಳಿಗಳನ್ನು ಗೆಲ್ಲಬಹುದು. 'ಅಯ್ಯಾ ಎಂದರೆ ಸ್ವರ್ಗ; ಎಲವೊ ಎಂದರೆ ನರಕ' ಮಾತು ಮಾನವನ ಅಮೂಲ್ಯ ಸಂಪತ್ತು. ಬೇರೆ ಪ್ರಾಣಿವರ್ಗಕ್ಕೆ ದೇವರು ಮಾತುಕೊಟ್ಟಿಲ್ಲ.

ಪರಿಣಾಮವನ್ನು ಯೋಚಿಸದೆ ಆಡಿದ ಮಾತುಗಳಿಂದ ಕಲಹವುಂಟಾಗುತ್ತದೆ. ಅಂಥ ಕಲಹಗಳು ಎಷ್ಟೋ ಸಲ ಮೃತ್ಯುವಿಗೆ ಕಾರಣವಾಗುತ್ತದೆ. ಆದ್ದರಿಂದ 'ಮೃದು ವಚನಂಗಳೇ ಸಕಲ ಜಪ ತಪಂಗಳು' ಎಂದರಿತು ಆಡಬೇಕು. 'ರಸಿಕನಾಡಿದ ಮಾತು ಶಶಿಯುದಿಸಿ ಬಂದಂತೆ. ಅರಸಿಕನ ಮಾತು ಕಿವಿಯಲ್ಲಿ ಕೂರ್ದಸಿಯ ಬಡಿದಂತೆ' ಮಾತಾಡಿ ಮನ ಗೆಲ್ಲುವುದು ಒಂದು ಶ್ರೇಷ್ಠಕಲೆ. ಮಹತ್ವದ ಮಾತಾಡುವುದನ್ನು ಅಭ್ಯಾಸ ಮಾಡಿಕೊಳ್ಳಬೇಕು.

## ಮಾದರಿ ಆಮಂತ್ರಣ ಪತ್ರಿಕೆ

### ''ಅರಿವೇ ಗುರು''

ಮಹಾತ್ಮಾಗಾಂಧಿ ಶಿಕ್ಷಣ ಸಂಸ್ಥೆಯ, ನೂತನ ಕನ್ನಡ ವಿದ್ಯಾಲಯ ಸೈನಿಕ ನಗರ, ಬಾಗಲಕೋಟ

ನೂತನ ಕನ್ನಡ ವಿದ್ಯಾಲಯದ ಸುವರ್ಣ ಮಹೋತ್ಸವ ಆಮಂತ್ರಣ ಪತ್ರಿಕೆ ಸರ್ವರಿಗೂ ಆದರದ ಸ್ವಾಗತ

**ಸ್ಥಳ:-** ಶಾಲೆಯ ಆವರಣ ದಿನಾಂಕ:-02-04-2018 ವೇಳೆ-ಬೆಳಿಗ್ಗೆ-11ಗಂಟೆ

- **ದಿವ್ಯ ಸಾನಿಧ್ಯ:** ಪ.ಪೂ. ಮಹಾದೇವ ಸ್ವಾಮಿಗಳು, ಶಿವಪುರ

- **ಅಧ್ಯಕ್ಷರು:** ಶ್ರೀಮತಿ-ಭಾರತಿ ಅಫಜಲಪುರ (ಮುಖ್ಯಾಧ್ಯಾಪಕರು, ನೂತನ ಕನ್ನಡ ವಿದ್ಯಾಲಯ, ಬಾಗಲಕೋಟ)
- **ಉದ್ಘಾಟನೆ:** ಶ್ರೀ ವಿಜಯಕುಮಾರ (ಅಭಿಯಂತರು, ಚಾಲುಕ್ಯನಗರ, ಬದಾಮಿ)
- **ಮುಖ್ಯ ಅತಿಥಿ:** ಶ್ರೀ ರಾಮಚಂದ್ರ ಬಿರಾದಾರ (ತಹಸೀಲದಾರರು, ಬಾಗಲಕೋಟ)

ಶ್ರೀಗಳ ಹಾಗೂ ಸನ್ಮಾನ್ಯರ ಸಮ್ಮುಖದಲ್ಲಿ ವಿದ್ಯಾರ್ಥಿಗಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ಪಾಲಕರು, ಶಾಲೆಯ ಹಿತೈಷಿಗಳು, ನಾಗರಿಕರು ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿದ್ದು ಮಕ್ಕಳನ್ನು ಪ್ರೋತ್ಸಾಹಿಸಬೇಕೆಂದು ಕೋರುತೇವೆ.

| | | |
|---|---|---|
| ಆಕಾಶ<br>ವಿದ್ಯಾರ್ಥಿ ಪ್ರತಿನಿಧಿ<br>ಲಕ್ಷ್ಮೀ<br>ವಿದ್ಯಾರ್ಥಿನಿ ಪ್ರತಿನಿಧಿ | ಶಿಕ್ಷಕ ವೃಂದ | ಮುಖ್ಯಾದ್ಯಾಪಕಿಯರು<br><br>(ನೂತನ ಕನ್ನಡ ವಿದ್ಯಾಲಯ<br>ಬಾಗಲಕೋಟ) |

## ನಿಬಂಧ ಲೇಖನ

ಲೇಖನ ಕೌಶಲ್ಯ ವಿಕಾಸದಲ್ಲಿಯ ಅತ್ಯಂತ ಮಹತ್ವದ ಘಟಕವೆಂದರೆ ನಿಬಂಧ ಲೇಖನ. ಚಿಕಿತ್ಸಕವಿಚಾರ ಪ್ರಕ್ರಿಯೆ, ನಿರೀಕ್ಷಣ ಶಕ್ತಿ, ಸೃಜನಶೀಲತೆ, ಉಚ್ಚಬೋಧಾತ್ಮಕ ಕ್ಷಮತೆಯ ವಿಕಾಸ ಇವು ನಿಬಂಧ ಲೇಖನದ ಉದ್ದೇಶಗಳಾಗಿವೆ. ನಮ್ಮ ವಿಶಿಷ್ಟ ವಿಷಯದ ಕುರಿತಾದ ಚಿಕಿತ್ಸಕ ವಿಚಾರ ಕಲ್ಪನೆ, ಭಾವನೆ ಮತ್ತು ಸೃಜನಶೀಲತೆಗಳ ಪ್ರಭಾವಿ ಮಂಡನೆ ಎಂದರೆ ನಿಬಂಧ ಲೇಖನವಾಗಿದೆ.

- **ನಿಬಂಧ ಲೇಖನದ ನಿಕಷಗಳು**

1) ಯಾವುದೇ ನಿಬಂಧದ ಪ್ರಾರಂಭವು ಆಕರ್ಷಿತವಾಗಿರಬೇಕು. ನಿಬಂಧ ಮುಂದೆ ಮುಂದೆ ಓದುತ್ತ ಹೋಗುವಂತಿರಬೇಕು. ಇಲ್ಲಿ ಅಲಂಕಾರಿಕ ಭಾಷೆಯನ್ನು ಬಳಸಲು ಪ್ರಯತ್ನಿಸಬೇಕು.
2) ನಿಬಂಧದ ಮಧ್ಯಭಾಗದಲ್ಲಿ ವಿಷಯವನ್ನು ವಿಸ್ತರಿಸಬೇಕು. ಮಧ್ಯದಲ್ಲಿ ಪಡೆನುಡಿ ಗಾದೆ ಸೂಕ್ತವಾಗಿ ಬಳಸಿ ಲೇಖನವನ್ನು ಪ್ರಭಾವಿಗೊಳಿಸಬೇಕು.
3) ನಿಬಂಧದ ಕೊನೆಯು ಓದುಗರನ್ನು ಒಂದು ವಿಶಿಷ್ಟ ವಿಚಾರದತ್ತ ಸೆಳೆಯುವಂತಿರಬೇಕು. ಅದು ಸಮರ್ಪಕವಾಗಿರಬೇಕು.

ಈ ಕೆಳಗಿನ ನಿಬಂಧ ಲೇಖನದ ಪ್ರಕಾರಗಳನ್ನು ತಿಳಿದುಕೊಳ್ಳುವುದು ಅವಶ್ಯವಾಗಿದೆ.
1) ಪ್ರಸಂಗ ಲೇಖನ 2) ಆತ್ಮ ವೃತ್ತ (ಕಥನ) 3) ವೈಚಾರಿಕ ಲೇಖನ

### 1) ಪ್ರಸಂಗ ಲೇಖನ :-

ತಮ್ಮ ಮುಂದೆ ಸಂಭವಿಸಿದ/ಸಂಭವಿಸಿ ಹೋದ ಒಂದು ಪ್ರಸಂಗ ಇಲ್ಲವೆ ಒಂದು ಘಟನೆ ಕುರಿತಾದ ತಮ್ಮ ವಿಚಾರ, ಭಾವನೆಗಳನ್ನು ಶಬ್ದಬದ್ಧ ಗೊಳಿಸುವುದೆಂದರೆ ಪ್ರಸಂಗಲೇಖನ/ ಅನುಭವ ಲೇಖನವಾಗಿದೆ. ಇದರಿಂದ ಸೂಕ್ಷ್ಮ ನಿರೀಕ್ಷಣೆ ಹಾಗೂ ಸಂವೇದಶೀಲತೆಗಳು ವಿಕಾಸಗೊಳ್ಳುವವು. ಪ್ರಸಂಗ ಲೇಖನದಲ್ಲಿ ವರ್ಣನೆಗಿಂತ ಮನಸ್ಸಿನ ಭಾವನೆಗಳನ್ನು ವ್ಯಕ್ತಪಡಿಸುವುದು ಮುಖ್ಯವಾಗಿದೆ.

### 2) ಆತ್ಮ ಕಥನ (ಆತ್ಮ ವೃತ್ತ) :-

1) ಆತ್ಮ ವೃತ್ತವೆಂದರೆ ಒಂದು ಪ್ರಕಾರದ ಪರಕಾಯ ಪ್ರವೇಶಿಸುವುದು.
2) ಇತರರ ಸುಖ ದುಃಖಗಳನ್ನು ಅರ್ಥೈಸಿಕೊಂಡು, ಅವರ ಮನಸ್ಸನ್ನು ತಿಳಿದುಕೊಳ್ಳುವುದು.
3) ಸಜೀವ ನಿರ್ಜೀವಿಗಳ ಭಾವನೆಗಳನ್ನು ಶೋಧಿಸುವುದು.
4) ಆ ವಸ್ತು/ವ್ಯಕ್ತಿಯ ಸ್ಥಳದಲ್ಲಿ ನಾವಿದ್ದೇವೆ ಎಂದು ತಿಳಿದು ಅವುಗಳ/ಅವರ ವಿಚಾರ ಕಲ್ಪನೆ ಭಾವನೆಗಳನ್ನು ವ್ಯಕ್ತಪಡಿಸುವುದು ಇದು ಆತ್ಮ ವೃತ್ತದ ಮರ್ಮವಾಗಿದೆ.

### 3) ವೈಚಾರಿಕ ಲೇಖನ

1) ಈ ಪ್ರಕಾರದ ನಿಬಂಧದಲ್ಲಿ ವಿಷಯಕ್ಕೆ ಹೆಚ್ಚಿನ ಪ್ರಾಧಾನ್ಯವಿದೆ.
2) ಇಲ್ಲಿ ಕಲ್ಪನೆ, ವರ್ಣನೆಗಿಂತ ಸ್ವಂತದ ವಿಚಾರಗಳಿಗೆ ಹೆಚ್ಚಿನ ಆದ್ಯತೆ ಇದೆ.
3) ಸರಾಕಾರತ್ಮಕ ಹಾಗೂ ನಕಾರಾತ್ಮಕ ವಿಚಾರಗಳ ಮಂಡನೆಗೆ ಇಲ್ಲಿ ಅವಕಾಶವಿದೆ.
4) ತಮ್ಮ ವಿಚಾರಗಳನ್ನು ಮನವರಿಕೆ ಮಾಡಿಕೊಡಲು ಪ್ರಯತ್ನಿಸಬೇಕು.

# ಗದ್ಯ ಆಕಲನ (ಪ್ರಶ್ನೆ ನಿರ್ಮಿತಿ)

ಪ್ರಶ್ನೆ ನಿರ್ಮಿತಿಯು ಒಂದು ಪ್ರಮುಖ ಭಾಷಿಕ ಕೌಶಲ್ಯವಾಗಿದೆ. ಈ ಕೌಶಲ ಪ್ರಾಪ್ತಗೊಳಿಸಲು 'ಗದ್ಯ ಆಕಲನ' ಎಂಬ ಘಟಕವನ್ನು ಅಭ್ಯಾಸಕ್ರಮದಲ್ಲಿ ಸಮಾವೇಶಗೊಳಿಸಲಾಗಿದೆ.

ಕೊಟ್ಟ ಪರಿಚ್ಛೇದವನ್ನು ಓದಿ ಅದನ್ನು ಆಧರಿಸಿ ಐದು ಪ್ರಶ್ನೆಗಳನ್ನು ನಿಮಗೆ ತಯಾರಿಸುವುದಿದೆ. ಅವು ಒಂದೇ ವಾಕ್ಯದಲ್ಲಿ ಉತ್ತರ ಬರುವ ಪ್ರಶ್ನೆಗಳಿರುವುದು ಅವಶ್ಯವಾಗಿದೆ.

**ಒಳ್ಳೆಯ ಪ್ರಶ್ನೆ ನಿರ್ಮಿತಿಯ ಲಕ್ಷಣಗಳು**

1) ತಯಾರಿಸಿದ ಪ್ರಶ್ನೆಯು ಅರ್ಥಪೂರ್ಣವಾಗಿರಬೇಕು.
2) ಯಾರು? ಎಲ್ಲಿ? ಯಾವಾಗ? ಏಕೆ ಇತ್ಯಾದಿ ಪ್ರಕಾರಗಳ ಪ್ರಶ್ನೆಗಳನ್ನು ಕೇಳಬೇಕು.
3) ಕೇಳಿದ ಪ್ರಶ್ನೆಯ ಉತ್ತರ ಪರಿಚ್ಛೇದದಲ್ಲಿ ದೊರೆಯುವಂತಿರಬೇಕು.
4) ಪ್ರಶ್ನೆಗಳ ಉತ್ತರ ಬರೆಯಕೂಡದು.
5) ಪ್ರಶ್ನೆಯ ಕೊನೆಗೆ ಪ್ರಶ್ನೆ ಚಿಹ್ನೆ ಕೊಡುವುದು ಅವಶ್ಯವಾಗಿದೆ.

**ಒಂದು ಮಾದರಿ**

**ಕೆಳಗಿನ ಗದ್ಯವನ್ನು ಓದಿ ಐದು ಪ್ರಶ್ನೆಗಳನ್ನು ತಯಾರಿಸಿರಿ.**

ಎಲ್ಲ ಪ್ರಾಣಿಗಳಿಗಿಂತ ಮಾನವ ಬುದ್ಧಿವಂತನಾಗಿರುವನು. ಬುದ್ಧಿಯ ಉಪಯೋಗ ಮಾಡಿ ಅವನು ತನ್ನ ಜೀವನವನ್ನು ಸುಲಭ ಮಾಡಿಕೊಂಡಿರುವನು. ಎಲ್ಲ ಸಜೀವಿಗಳು ಪರಿಸರದ ವಸ್ತುಗಳ ಉಪಯೋಗ ಮಾಡಿಕೊಳ್ಳುವವು. ಆದರೆ ಮಾನವನು ಸೂಕ್ಷ್ಮವಾಗಿ ಪರಿಸರದ ಅಭ್ಯಾಸ ಮಾಡಬಲ್ಲನು. ಪರಿಸರದ ವಸ್ತುಗಳಿಂದ ಹೊಸ ಪದಾರ್ಥಗಳ ನಿರ್ಮಾಣ ಮಾಡುವನು. ಹೇಗೆ ಎಂಬುದನ್ನು ನೋಡಿರಿ !

ಸುಮಾರು ನೂರೈವತ್ತು ವರ್ಷಗಳ ಹಿಂದೆ, ಖನಿಜ ಎಣ್ಣೆಯ ಉಪಯೋಗ ಹೇಗೆ ಮಾಡಬೇಕು ಎಂಬುದನ್ನು ಸಂಶೋಧಕರು ಕಂಡು ಹಿಡಿದರು. ಮಾನವನ ಕೈಗೆ ಒಂದು ಹೊಸ ಉಪಯುಕ್ತವಾದ ಇಂಧನ ಸಿಕ್ಕಿತು. ಅವನು ಆ ಇಂಧನವನ್ನು ಉಪಯೋಗಿಸಿ ನಡೆಸುವಂತಹ ಕೆಲವು ವಾಹನಗಳ ನಿರ್ಮಾಣ ಮಾಡಿದನು. ಅದರಲ್ಲಿ ಮೋಟಾರುಕಾರು, ಬಸ್ಸು, ಟ್ರಕ್ಕು, ಸ್ಕೂಟರ ಮುಂತಾದ ವಾಹನಗಳ ಸಮಾವೇಶವಾಗುವದು. ಕಲ್ಲಿದ್ದಲ್ಲನ್ನು ಉಪಯೋಗಿಸಿ ನಡೆಸುವ ರೈಲು ಬಂಡಿಯ ಸಂಶೋಧನೆ ಮಾಡಿ ಅವುಗಳನ್ನೂ ತಯಾರಿಸಿದನು.

ಹಿಂದಿನ ಕಾಲದಲ್ಲಿ ಜನರು ಊರಿಗೆ ಹೋಗಬೇಕಾದರೆ ನಡೆದು ಇಲ್ಲವೆ ಎತ್ತಿನಬಂಡಿ ಅಥವಾ ಕುದುರೆಗಳ ಮೇಲೆ ಹೋಗುತ್ತಿದ್ದರು. ಭಾರ ಎತ್ತಲು ಬೇರೆ ಬೇರೆ ಪಶುಗಳನ್ನು ಇಲ್ಲವೇ ಪಶುಗಳು ಎಳೆದೊಯ್ಯುವ ಬಂಡಿಗಳನ್ನು ಉಪಯೋಗಿಸಲಾಗುತ್ತಿತ್ತು. ಈಗ ನಾವು ಬಸ್ಸು ಇಲ್ಲವೇ ರೈಲುಗಾಡಿಯಿಂದ ಹೋಗುವೆವು. ಆದ್ದರಿಂದ ತೊಂದರೆಯೂ ಆಗುವುದಿಲ್ಲ ಮತ್ತು ವೇಳೆಯ ಉಳಿತಾಯವೂ ಆಗುತ್ತದೆ.


ಪ್ರಶ್ನೆ 1) ಮಾನವನು ಯಾರಿಗಿಂತ ಬುದ್ಧಿವಂತನಾಗಿರುವನು ?
ಪ್ರಶ್ನೆ 2) ಖನಿಜ ಎಣ್ಣೆಯ ಉಪಯೋಗವನ್ನು ಸಂಶೋಧಕರು ಯಾವಾಗ ಕಂಡು ಹಿಡಿದರು?
ಪ್ರಶ್ನೆ 3) ರೈಲು ಓಡಲು ಯಾವ ಇಂಧನ ಬೇಕು?
ಪ್ರಶ್ನೆ 4) ಹಿಂದಿನ ಕಾಲದಲ್ಲಿ ಜನರು ಊರಿಗೆ ಹೇಗೆ ಹೋಗುತ್ತಿದ್ದರು?
ಪ್ರಶ್ನೆ 5) ಈಗ ನಾವು ಊರಿಗೆ ಹೇಗೆ ಹೋಗುತ್ತೇವೆ?











































- पाठ्यपुस्तक मंडळाची वैशिष्ट्यपूर्ण पाठ्येत्तर प्रकाशने.
- नामवंत लेखक, कवी, विचारवंत यांच्या साहित्याचा समावेश.
- शालेय स्तरावर पूरक वाचनासाठी उपयुक्त.

पुस्तक मागणीसाठी www.ebalbharati.in, www.balbharati.in संकेत स्थळावर भेट द्या.

**साहित्य पाठ्यपुस्तक मंडळाच्या विभागीय भांडारांमध्ये विक्रीसाठी उपलब्ध आहे.**

ebalbharati

विभागीय भांडारे संपर्क क्रमांक : पुणे - ☎ २५६५९४६५, कोल्हापूर- ☎ २४६८५७६, मुंबई (गोरेगाव) - ☎ २८७७१८४२, पनवेल - ☎ २७४६२६४६५, नाशिक - ☎ २३९१५११, औरंगाबाद - ☎ २३३२१७१, नागपूर - ☎ २५४७७१६/२५२३०७८, लातूर - ☎ २२०९३०, अमरावती - ☎ २५३०९६५




ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ.

कन्नड कुमारभारती इयत्ता दहावी (कन्नड माध्यम) ₹ 73.00